ಸಂಪುಟ ೧೨
ಸಂಚಿಕೆ ೪

ಕರ್ನಾಟಕ ಭಾರತಿ

ಅಕ್ಷಯ ತೃತೀಯಾ ಸಂಚಿಕೆ

ತ್ರೈಮಾಸಿಕ ಪತ್ರಿಕೆ
ಮೆ, ೧೯೮೦

ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ

ಲೇಖಕರಿಗೆ ಸೂಚನೆಗಳು

"ಕರ್ನಾಟಕ ಭಾರತಿ" ಯು ಸೃಜನ, ವಿಮರ್ಶನ, ಸಂಶೋಧನ ಸಾಹಿತ್ಯ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನದ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು ವಿಮರ್ಶೆಗಾಗಿ ಪುಸ್ತಕಗಳನ್ನು ಸಂಪಾದಕರು, **"ಕರ್ನಾಟಕ ಭಾರತಿ" ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವದೇ ವಿಷಯಕ್ಕೆ **ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ** ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ
೨. ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ
೪. ಅಕ್ಷಯ ತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮-೦೦ (ಅಂಚೆ ವೆಚ್ಚ ಸಹಿತ)

ಬಿಡಿ ಸಂಚಿಕೆಯ ಬೆಲೆ : ರೂ. ೨-೫೦

(ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ ರೂ. ೪-೦೦ ಮಾತ್ರ)

ಹಣವನ್ನು ಡಿಮಾಂಡ ಡ್ರಾಫ್ಟ ಇಲ್ಲವೆ ಪೋಸ್ಟಲ್ ಆರ್ಡರ ಮೂಲಕ

ಫಾಯನಾನ್ಸ ಆಫೀಸರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಸಂಪುಟ : ೧೨ ಸಂಚಿಕೆ : ೪

ಪ್ರಧಾನ ಸಂಪಾದಕರು

ಡಾ. ಎಂ. ಎಸ್. ಸುಂಕಾಪುರ

ಸಹಾಯಕ ಸಂಪಾದಕರು

ಡಾ. ಕೆ. ಜಿ. ಶಾಸ್ತ್ರಿ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೧೨ ಸಂಚಿಕೆ : ೪

ಮೇ, ೧೯೮೦

ಅಕ್ಷಯ ತೃತೀಯಾ ಸಂಚಿಕೆ

ಪ್ರಕಾಶಕರು :

ಎಸ್. ಬಿ. ನಾಯಕ
ಕಾರ್ಯನಿರ್ವಾಹಕ ನಿರ್ದೇಶಕರು
ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ಸೋಮಶೇಖರ ಆಕಳವಾಡಿ
ಮನೋಹರ ಮುದ್ರಣಾಲಯ, ಮಾರ್ಕೆಟ್, ಧಾರವಾಡ

ಪರಿವಿಡಿ

ಟಿ. ಎಸ್. ಎಲಿಯಟ್‌ನ ವ್ಯಕ್ತಿನಿರಪೇಕ್ಷ ಸಿದ್ಧಾಂತ

ಡಾ. ಎಂ. ಬಿ. ಕೊಟ್ರಶೆಟ್ಟಿ

ಟಿ. ಎಸ್. ಎಲಿಯಟ್ ೨೦ನೆಯ ಶತಮಾನದ ಅತ್ಯಂತ ಪ್ರಭಾವಿಯಾದ ಕವಿ ಹಾಗೂ ವಿಮರ್ಶಕನಾಗಿದ್ದಾನೆ. ಪಾಶ್ಚಾತ್ಯ ಸಾಹಿತ್ಯದಲ್ಲಿ ನವ್ಯ ಸಂಪ್ರದಾಯದ ಪ್ರಾದುರ್ಭಾವಕ್ಕೆ ಕಾರಣನಾದ ಈತನ ಹೆಸರು ಆಧುನಿಕತೆಯ ಯುಗಪ್ರವರ್ತಕರ ಮಾಲಿಕೆಯಲ್ಲಿ ನಿಃಸಂದೇಹವಾಗಿ ಪ್ರಸ್ತಾಪಿಸಲ್ಪಡುತ್ತದೆ. ಅವನ ಕಾವ್ಯ ಹಾಗೂ ವಿಮರ್ಶೆಗಳು ಜಾಗತಿಕ ಭಾಷಾಸಾಹಿತ್ಯಗಳ ಮೇಲೆ ಪ್ರಗಲ್ಭ ಪ್ರಭಾವ ಬೀರಿವೆ. ಸಾಹಿತ್ಯ ನಿರ್ಮಿತಿಗಾಗಿ ೧೯೪೮ ರಲ್ಲಿ ಅವರಿಗೆ ನೊಬೆಲ್ ಪಾರಿತೋಷಕ ದೊರೆತುದು ಗಮನಾರ್ಹ. ಉನ್ನತ ಮಟ್ಟದ ಕಾವ್ಯನಿರ್ಮಿಸುವುದರೊಂದಿಗೆ ವಿಮರ್ಶನಾಗಿ ಕಾವ್ಯ ಸೃಷ್ಟಿ ಪ್ರಕ್ರಿಯೆಯುನ್ನು ಕುರಿತು ಸೂಕ್ಷ್ಮ ಆಲೋಚನೆ ಗೈದವನಾಗಿದ್ದಾನೆ. ಸ್ವತಃ ಕವಿಯಾಗಿದ್ದ ಅವನ ಅನುಭವದ ಆಳದಿಂದ ಹೊರಬಂದ ವಿಮರ್ಶೆಯ ವಿತಾಂಗ ಗಳಿಗೆ ಮೀಮಾಂಸೆಯ ಪ್ರಾಮಾಣ್ಯ ಒದಗಿಬಂದಿದೆ. ಅರಿಸ್ಟಾಟಲನನ್ನು ಹೊರತು ಪಡಿಸಿದರೆ ವಿಮರ್ಶೆಯ ಕ್ಷೇತ್ರದಲ್ಲಿ ಇವನಷ್ಟು ಸಾರ್ವತ್ರಿಕ ಪ್ರಭಾವ ಬೀರಿದ ವ್ಯಕ್ತಿ ಬೇರೊಬ್ಬನಿಲ್ಲ.

ಎಲಿಯಟ್‌ನ ವಿಮರ್ಶೆಯಲ್ಲಿ ಪ್ರಮುಖ ವಿಚಾರವೆಂದರೆ ಕಲೆಯ ವ್ಯಕ್ತಿ ನಿರಪೇಕ್ಷತೆ. ಇದನ್ನು ಅದನು ಕಲೆಯ ವೀತವ್ಯಕ್ತೀಕರಣ ಪ್ರಕ್ರಿಯೆ (Process of Depersonalization) ಎಂದು ಕರೆದಿದ್ದಾನೆ. ಅವನ ಕಾವ್ಯ ನಾಟಕಗಳಲ್ಲಿ ಅಂತೆಯೇ ವಿಮರ್ಶೆಯ ಕೃತಿಗಳಲ್ಲಿ; ಪ್ರಾಮುಖ್ಯ ಪಡೆದ ಇದು ಒಂದರ್ಥದಲ್ಲಿ ಅವನ ಜೀವನ ಸಿದ್ಧಾಂತವೇ ಆಗಿದೆ. ಅವನ ವಿಮರ್ಶೆಯ ಬಿಡಿ ಲೇಖನಗಳಲ್ಲಿ ಸಂಪ್ರದಾಯ, ಐತಿಹಾಸಿಕಪ್ರಜ್ಞೆ, ವಸ್ತು ಪ್ರತಿರೂಪ ಇವೇ ಮೊದಲಾದ ವಿಚಾರ ಗಳು ಈ ವ್ಯಕ್ತಿ ನಿರಪೇಕ್ಷ ಸಿದ್ಧಾಂತವನ್ನೇ ಪುಷ್ಟೀಕರಿಸುತ್ತವೆ.

ರಾಜಕೀಯದಲ್ಲಿ ತಾನು ರಾಯಲಿಸ್ಟನೆಂದೂ, ಧರ್ಮದಲ್ಲಿ ಕ್ಯಾಥಲಿಕನೆಂದೂ, ಸಾಹಿತ್ಯದಲ್ಲಿ ಕ್ಲಾಸಿಸಿಸ್ಟ್ ಎಂದರೆ ಅಭಿಜಾತ ಪರಂಪರೆಯವನೆಂದೂ ೧೯೨೮ ರಲ್ಲಿ ಸ್ಪಷ್ಟವಾಗಿ ಸಾರಿದ್ದಾನೆ. ಈ ಹೇಳಿಕೆ ಒಟ್ಟಂದದಲ್ಲಿ ಅವನ ಜೀವನದೃಷ್ಟಿಯನ್ನು ಅರ್ಥೈಸಲು ಸಹಾಯಕವಾಗಿದೆ. ಪಾಶ್ಚಾತ್ಯ ಜೀವನ ಸಂಘರ್ಷದಲ್ಲಿ ಹಲವು ಆಘಾತ ಹಾಗೂ ವಿರೋಧಗಳನ್ನು ಎದುರಿಸಿದರೂ ಆ ಸಂಸ್ಕೃತಿಯಲ್ಲಿ ಅಂತರ್ವಾಹಿನಿ

ಯಾಗಿ ಪ್ರವಹಿಸುವ ಸನಾತನ ಮೌಲ್ಯಗಳು ರಾಜಕೀಯದಲ್ಲಿ ರಾಯಲಿಸ್ಟ್, ಧರ್ಮ ರಂಗಗಳಲ್ಲಿ ರೋಮನ್ ಕ್ಯಾಥಲಿಕ್ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಅಭಿಜಾತ ಪರಂಪರೆ ಗಳಾಗಿ ಸ್ಥಿರಗೊಂಡುದನ್ನು ಅವನ ಹೇಳಿಕೆ ಧ್ವನಿಸುತ್ತದೆ. ಎಲಿಯಟ್ ಈ ಮೂರು ಸಾಂಸ್ಕೃತಿಕ ಅಂತರ್ವಾಹಿನಿಗಳಿಗೆ ತನ್ನನ್ನು ಸಮರ್ಪಿಸಿಕೊಂಡು ಮುಂದುವರಿದಿದ್ದಾನೆ.

ಪರಂಪರೆ (Tradition) ಯಲ್ಲಿಯ ಸುಪ್ತಮೌಲ್ಯಗಳನ್ನು ಗುರುತಿಸಿ ಸಮರ್ಪಕ ವ್ಯಾಖ್ಯಾನಗೈಯುವದರೊಂದಿಗೆ ಆ ಪದದ ಅರ್ಥ ವೈಶಾಲ್ಯವನ್ನು ವಿಸ್ತರಿಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಹಳೆಯದರೊಂದಿಗೆ ಹೊಸತನ್ನು ತನ್ನ ಒಡಲಲ್ಲಿ ಅಳವಡಿಸಿಕೊಂಡು ಹರಿಯುವ ಒಂದು ಜೀವಂತ ಪ್ರವಾಹವೇ ಈ ಪರಂಪರೆಯೆನ್ನುವದು. ಪರಂಪರೆಯೆಂದರೆ ಗತಕಾಲವು ವರ್ತಮಾನಕ್ಕೆ ವರ್ಗಾಯಿಸುವ ಸಾಮಾಜಿಕ, ಸಾಂಸ್ಕೃತಿಕ ಜೀವನದ ರೀತಿ—ನೀತಿಗಳ ಮೊತ್ತ ಮಾತ್ರವಲ್ಲ; ಭೂತ, ವರ್ತಮಾನ ಹಾಗೂ ಭವಿಷ್ಯತ್‌ಗಳನ್ನು ಒಳಗೊಂಡು ನಿರಂತರವಾಗಿ ಪ್ರವಹಿಸುವ ಸ್ವಯಂಚಾಲಕ ಶಕ್ತಿ ಪರಂಪರೆಗೆ ಇದೆ. ಪರಂಪರೆಯ ಸಾಹಿತ್ಯವನ್ನು ನಿರ್ಧರಿಸುವ ಐತಿಹಾಸಿಕ ಪ್ರಜ್ಞೆ (Historical Sense) ಯು ಅದರ ಜೀವಂತ ಗುಣವಾಗಿದೆ. ಈ ಐತಿಹಾಸಿಕ ಪ್ರಜ್ಞೆಯು ಆನುವಂಶಿಕವಾಗಿ ಬರುವ ಆಸ್ತಿಯಲ್ಲವೆಂದೂ, ಪ್ರತಿಯೊಬ್ಬನೂ ಪರಿಶ್ರಮದಿಂದ ಸಾಧಿಸಿಕೊಳ್ಳಬೇಕಾದ ಜವಾಬ್ದಾರಿಯಿಂದ ಕೂಡಿದ ಅರಿವು ಎಂದೂ ಎಲಿಯಟ್ ವ್ಯಾಖ್ಯಾನಿಸುತ್ತಾನೆ. ಕೃತಿ ನಿರ್ಮಾಣ ಕಾಲದಲ್ಲಿ ಕವಿಯ ಸ್ವಂತ ನಾಡಿನ ಸಾಂಸ್ಕೃತಿಕ ಪ್ರಜ್ಞೆ ಹಾಗೂ ಸಾಮುಷ್ಟಿಕ ಯುರೋಪಿಯನ್ ಪ್ರಜ್ಞೆಗಳು ಏಕಕಾಲಕ್ಕೆ ಜೊತೆ ಜೊತೆಯಾಗಿ ಅವನ ಅಸ್ಥಿಗಳಲ್ಲಿ ಗಟ್ಟಿಗೊಳ್ಳಬೇಕಾಗುತ್ತದೆ. ಕವಿಯ ಸೃಜನ ಪ್ರಜ್ಞೆಯ ಮೇಲೆ ಗತಕಾಲದ ಕಲಾಮೌಲ್ಯಗಳು, ಅಂದೋಲನಗಳು ಗಾಢವಾದ ಪ್ರಭಾವ ಬೀರುತ್ತವೆ. ಹೀಗಾಗಿ ಕವಿಯ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಪರಂಪರೆಯಲ್ಲಿ ಪ್ರಭಾವ ಗಾಢ. ಅಂತೆಯೇ ಬಿಡಿಸಿಕೊಳ್ಳದಂತಹದೂ ಕೂಡ. ಸಂಪ್ರದಾಯದ ಜನಾಂಗಪ್ರಜ್ಞೆ ಹಾಗೂ ಸಮುಷ್ಟಿ ಪ್ರಜ್ಞೆಗಳು ಬದಲಾವಣೆ ಒಳಗಾಗುವ ಕವಿಯ ವೈಯಕ್ತಿಕ ಪ್ರಜ್ಞೆಗಿಂತಲೂ ಪ್ರಮುಖವಾಗುತ್ತವೆ. ಕವಿಯ ವೈಯಕ್ತಿಕ ಪ್ರಜ್ಞೆ ಪ್ರಾಚೀನ ಮ್ಯಾಗ್ಡಾಲೇನಿಯನ್ ರೇಖಾಚಿತ್ರಕಾರನಿಂದ ಮೊದಲುಗೊಂಡು ಹೋಮರ, ಷೇಕ್ಸಪಿಯರರ ವರೆಗಿನ ಕಲಾಮೌಲ್ಯಗಳ ಸಾರವನ್ನು ಒಳಗೊಂಡು ಬೆಳೆಯಬೇಕಾಗುತ್ತದೆ. ಕವಿಯು ಗತಕಾಲದ ಪ್ರಜ್ಞೆಯನ್ನು ಸ್ವೀಕರಿಸುವುದಷ್ಟೇ ಅಲ್ಲ, ಅದನ್ನು ತನ್ನ ಕಾವ್ಯಜೀವನದುದ್ದಕ್ಕೂ ಬೆಳೆಸುತ್ತಲೇ ಹೋಗುವದು ಅನಿವಾರ್ಯವಾಗುತ್ತದೆ. ಕಾವ್ಯದಲ್ಲಿ ಭೂತಕಾಲವು ವರ್ತಮಾನದಲ್ಲಿ ಪುನಃ ಸೃಷ್ಟಿ ಪಡೆದರೆ, ವರ್ತಮಾನದ ಸಮಗ್ರ ದೃಷ್ಟಿಕೋನ ಹಾಗೂ ಮೌಲ್ಯಗಳು ಭವಿಷತ್ತಿನ ಮೇಲೆ ಪ್ರಭಾವ ಬೀರುತ್ತದೆ. ತನಗಿಂತಲೂ ಮೌಲಿಕವಾದ ಸಂಪ್ರದಾಯಕ್ಕೆ ಕವಿಯು ನಿರಂತರ ಶರಣಾಗತನಾಗುತ್ತ ಸಾಗಬೇಕಾಗುತ್ತದೆ. "ಕವಿಯ ಪ್ರಗತಿ

ಯೆಂದರೆ ಸ್ವಂತದ ಬಲಕೊಡುವಿಕೆ, ವ್ಯಕ್ತಿತ್ವದ ದೀಪವನ್ನು ನಿರಂತರ ಆರಿಸುವಿಕೆ"[1] ಎಂಬ ಎಲಿಯಟ್‌ನ ಹೇಳಿಕೆ ಅರ್ಥಪೂರ್ಣವಾಗಿದೆ

ರೋಮ್ಯಾಂಟಿಕ್ ಹಾಗೂ ಅಭಿಜಾತ ಪರಂಪರೆಗಳು

ವ್ಹಿಕ್ಟೋರಿಯನ್ ಯುಗದ ರೋಮ್ಯಾಂಟಿಕ್ ಪರಂಪರೆಯಲ್ಲಿ ಕಾವ್ಯವೆಂದರೆ ಕವಿಯ ವ್ಯಕ್ತಿತ್ವದ ಅಭಿವ್ಯಕ್ತಿ ಎಂಬ ವಿಚಾರಧಾರೆ ಪ್ರಮುಖವಾಗಿ ಪ್ರತಿಪಾದಿತ ವಾಗಿತ್ತು. ಮಾನವನ ವ್ಯಕ್ತಿತ್ವವು ಅನಂತ ಶಕ್ತಿಗಳ ಸಮುಷ್ಟಿಯೆಂದು ಪರಿಭಾವಿಸಿ, ಅದರ ಸ್ವಾತಂತ್ರ್ಯ ಹಾಗೂ ಪ್ರಭುತ್ವಗಳನ್ನು ಎತ್ತಿ ಹಿಡಿಯುವುದೇ ಈ ಧೋರ ಣೆಯ ಪ್ರಧಾನ ಅಂಶ : ಮನುಷ್ಯನು ಜನ್ಮತಃ ಸ್ವತಂಂತ್ರನಾಗಿದ್ದರೂ ಸುತ್ತಲಿನ ಪರಿಸರ ಹಾಗೂ ಕೆಟ್ಟ ಸಂಪ್ರದಾಯಗಳು ಅವನನ್ನು ಬಂಧಿಸಿವೆ—ಎಂದು ಈ ಸಂಪ್ರ ದಾಯಕ ಆದ್ಯ ಪ್ರವರ್ತಕ ರುಸೋನ ಹೇಳಿಕೆ ಉಲ್ಲೇಖನೀಯವಾಗಿದೆ. ಕಲಾವಿದನ ವ್ಯಕ್ತಿತ್ವದ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವ ರೋಮ್ಯಾಂಟಿಕ್ ಧೋರಣೆಯಲ್ಲಿ ಸನಾತನ ಮೌಲ್ಯಗಳಿಗೆ ಒದಗಿದ ಗಂಭೀರ ಸ್ವರೂಪದ ಅಪಾಯವನ್ನು ಎಲಿಯಟ್ ಗುರುತಿಸುತ್ತಾನೆ. ಆದ್ದರಿಂದಲೇ ಅವನು ವ್ಯಕ್ತಿತ್ವದ ಅಹಮಹಮಿಕೆ, ನಿರಂಕುಶ ಕಲ್ಪನಾವೇಗ, ವ್ಯಷ್ಟಿಪ್ರಜ್ಞೆಯ ಅಧಿಕ್ಯಗಳನ್ನು ಪ್ರತಿಪಾದಿಸುವ ಈ ಅನಾರೋಗ್ಯದ ಧೋರಣೆಯನ್ನು ಪ್ರತಿಭಟಿಸಿದ್ದಾನೆ. ಎಲಿಯಟ್‌ನ ಸಮಕಾಲೀನರಲ್ಲಿ ಅನೇಕರು ಈ ಧೋರಣೆಯನ್ನು ಪ್ರತಿಭಟಿಸಿದ್ದಾರೆ. ಎಲಿಯಟ್‌ನ ತಾತ್ವಿಕ ವಿಚಾರಗಳ ಮೇಲೆ ಪ್ರಭಾವ ಬೀರಿದ T. E. ಹ್ಯೂಮನು, "The fundamental error is that of placing perfection in human personality, then giving rise to that bastared thing Perscnality and all that follows from it." ಎಂದು ಮಾನವ ವ್ಯಕ್ತಿತ್ವಕ್ಕೆ ಪರಿಪೂರ್ಣತೆಯನ್ನು ಆರೋಪಿಸುವದು ಒಂದು ಗುರು ತರವಾದ ದೋಷವೆಂದಿದ್ದಾನೆ. that bastard thing personality ಎಂಬ ಅವರ ಮಾತುಗಳಲ್ಲಿ ವ್ಯಕ್ತವಾಗುವ ಪ್ರತಿಭಟನೆಯ ತೀವ್ರತೆ ಗಮನಾರ್ಹ. ಧರ್ಮದ ಸನಾತನ ಮೌಲ್ಯದೆದುರಿಗೆ ಮನುಷ್ಯನ ವ್ಯಕ್ತಿತ್ವ ಸೀಮಿತ ಹಾಗೂ ಅಪೂರ್ಣ ಕ್ರಿಶ್ಚಿ ಯನ್ ಧರ್ಮದೃಷ್ಟಿಯಲ್ಲಿ ಮಾನವ ಜನ್ಮತಃ ಪಾಪದಿಂದ ಪತಿತನಾದವ. ಮೂಲ ಪಾಪ (Original SIN) ವನ್ನು ಬೆನ್ನಿಗೆ ಕಟ್ಟಿಕೊಂಡೇ ಹುಟ್ಟಿದ. ಮಾನವನ ವ್ಯಕ್ತಿತ್ವಕ್ಕೆ ಪೂರ್ಣತೆಯನ್ನು ಕಲ್ಪಿಸುವುದು ಯೋಗ್ಯವಾಗದು. ಕ್ರಿಶ್ಚಿಯನ್ ಧರ್ಮವು ಎಲಿಯಟ್‌ನ ಶ್ರದ್ಧಾಕೇಂದ್ರವಾಗಿದ್ದರಿಂದ ಅದಕ್ಕೆ ವಿರುದ್ಧವಾದ ರೋಮ್ಯಾಂಟಿಕ್ ಸಂಪ್ರದಾಯದ ವ್ಯಕ್ತಿತ್ವ ಪಂಥ (Personality cult) ವನ್ನು ಅವನು ಪ್ರತಿಭಟಿ ಸಿದ್ದು ಸಯುಕ್ತಿಕವಾಗಿದೆ. ಮಾನವ ವ್ಯಕ್ತಿತ್ವದ ಅಪೂರ್ಣತೆಯನ್ನು ಒಪ್ಪಿ,

1. 'The progress of an artist is a continual self Sacrifice, a continual extinction of personality. —Selected Essay, p. 17

ದೇವಕೃಪೆಗೆ ಪಾತ್ರರಾಗಲು ಶಿಸ್ತು ಸಂಯಮಗಳನ್ನು ಬೆಳೆಸಿಕೊಂಡು ಸನಾತನ ಧರ್ಮ ಶಾಸನಗಳಿಗೆ ತಲೆಬಾಗಿ ನಡೆಯುವದು ಅಭಿಜಾತ ಧೋರಣೆಯ ಪ್ರಮುಖ ಲಕ್ಷಣ ವಾಗಿದೆ. ಆದ್ದರಿಂದ ಎಲಿಯಟ್ ಅಭಿಜಾತ ಪರಂಪರೆಯನ್ನು ಒಪ್ಪಿಕೊಂಡು ಪುರ ಸ್ಕರಿಸಿದ್ದಾನೆ. ಸಂಸ್ಕೃತಿಯ ವಿಚಾರದಲ್ಲಿ ಕೂಡ ಅವನು ವೈಯಕ್ತಿಕತೆಗಿಂತ ಸಾಮೂಹಿ ಕತೆಯ ಮೇಲೆ ಒತ್ತುಕೊಟ್ಟು ಅದೊಂದು 'ಸಮಷ್ಟಿ ವಿಚಾರ' ವೆಂದು ಹೇಳಿದ್ದು ಗಮನಾರ್ಹವಾಗಿದೆ. ಹೀಗೆ ಎಲಿಯೆಟ್ ವ್ಯಕ್ತಿತ್ವದ ಎಲ್ಲ ವೈಚಾರಿಕ ಅಂಗಗಳು ವ್ಯಕ್ತಿನಿರಪೇಕ್ಷ ಸಿದ್ಧಾಂತಕ್ಕೆ ಸಮ್ಮತಿಸಿದುದನ್ನು ಕಾಣುತ್ತೇವೆ.

ಕಾವ್ಯಸೃಷ್ಟಿ ಪ್ರಕ್ರಿಯೆಯಲ್ಲಿ ವ್ಯಕ್ತಿ ನಿರಪೇಕ್ಷತೆ :

ಕಾವ್ಯದ ಅಭಿವ್ಯಕ್ತಿಯ ಬಗ್ಗೆ ಎಲಿಯಟ್ ಹೇಳುವ ಸಿದ್ಧಾಂತವೂ ವ್ಯಕ್ತಿನಿರಪೇ ಕ್ಷತೆಯನ್ನೇ ಪ್ರತಿಪಾದಿಸುತ್ತದೆ. ಕಾವ್ಯಸೃಷ್ಟಿಯು ಒಂದು ತೀವ್ರತರವಾದ ಸಂಯೋ ಜನ ಕ್ರಿಯೆಗೆ ಇಂಬುಗೊಡುತ್ತದೆಂದೂ, ಅದರಲ್ಲಿ ಕವಿವ್ಯಕ್ತಿಯ ಸಹಜ ಸ್ಫೂರ್ತ ಭಾವನೆಗಳ ವ್ಯಕ್ತಿತ್ವವು ತಟಸ್ಥವಾಗಿ ನಿಲ್ಲುತ್ತದೆ ಎಂಬುದು ಎಲಿಯಟ್‌ನ ವಿಚಾರ ವಾಗಿದೆ. ಕೃತಿನಿರ್ಮಾಣ ಕಾಲದಲ್ಲಿ ಕವಿಯ ಮನಸ್ಸಿನಲ್ಲಿ ನಡೆಯುವ ಸೃಷ್ಟಿ ಪ್ರಕ್ರಿಯೆಯನ್ನು ಒಂದು ವೈಜ್ಞಾನಿಕ ದೃಷ್ಟಾಂತದಿಂದ ವಿವರಿಸುತ್ತಾನೆ : ' I therefore invite you to consider as a suggestive analogy, the action which takes place when a bit of finely filiated platinum is introduced into a chamber containing oxygen and sulphur dioxide...when the two gasses...are mixed in the presence of a filament of platinum, they form sulphurous acid. This combination takes place if platinum is present, never the less the newly formed acid contains no trace of platinum as platinum is apparently unaffected has remained neutral and unchanged.

ಆಕ್ಸಿಜನ್ ಹಾಗೂ ಸಲ್ಫರ್ ಡಾಯಆಕ್ಸಾಯಿಡ್‌ಗಳಿರುವ ಪಾತ್ರೆಯಲ್ಲಿ ಪ್ಲಾಟ್ ನಮ್ ಆಮ್ಲವು ನಿರ್ಮಾಣವಾಗುತ್ತದೆ. ಈ ರಾಸಾಯನಿಕ ಪ್ರಯೋಗದಿಂದ ನಿರ್ಮಾಣವಾದ ಸಲ್ಫ್ಯೂರಸ್ ಆಮ್ಲದಲ್ಲಿ ಪ್ಲಾಟಿನಮದ ಅಂಶವು ಬೆರೆತಿರುವುದಿಲ್ಲ. ಆದರೆ ರಾಸಾಯನಿಕ ಕ್ರಿಯೆ ನಡೆಯುವದು ಪ್ಲಾಟ್‌ನಮ್ ಧಾತುವಿನ ಸಾನಿಧ್ಯದಲ್ಲಿ. ಸಂಯೋಗ ಕ್ರಿಯೆಯನ್ನು ಪ್ರೇರಿಸುವ ಪ್ಲಾಟನಮ್ ಅಪರಿವರ್ತಿತ ಹಾಗೂ ತಟಸ್ಥ ವಾಗಿ ಉಳಿಯುತ್ತದೆ. ರಾಸಾಯನಿಕ ಕ್ರಿಯೆಯನ್ನು ಹೋಲುವ ಇಂತಹದೇ ಪ್ರಕ್ರಿಯೆ ಕಾವ್ಯಸೃಷ್ಟಿಯ ಸಂದರ್ಭದಲ್ಲಿ ಕವಿಯ ಮನಸ್ಸಿನಲ್ಲಿ ನಡೆಯುತ್ತದೆ :

The mind of the poet is the shred of platinum. It may partly or exclusively operate upon the experience of the man himself. But the more completely separate in him will be the man who suffers and the mind which creates the more perfectly will the mind digest and transmute the passions which are its material." ಕವಿಯ ವ್ಯಕ್ತಿತ್ವವು ಪ್ಲಾಂಟ್‌ನಮದಂತೆ ಒಂದು ಕ್ಯಾಟಲಿಸ್ಟ್ ಎಂಬ ವಿಚಾರವು ಮಾನನೀಯವಾಗಿದೆ. ಸೃಷ್ಟಿ ಪ್ರಕ್ರಿಯೆಯಲ್ಲಿ ಕವಿಯ ಸ್ವಂತ ಭಾವನೆಗಳು (Emotions) ಹಾಗೂ ಸಂವೇದನೆಗಳು (Feelings) ಪಾಲುಗೊಂಡು ವಸ್ತುನಿಷ್ಠತೆ ಪಡೆದು ಶಬ್ದಮಾಧ್ಯಮದಲ್ಲಿ ಜನ್ಮತಳೆಯುತ್ತವೆ. ಹೀಗೆ ರೂಪುಗೊಂಡ ಕಾವ್ಯದಲ್ಲಿ ಕವಿಯ ವ್ಯಕ್ತಿತ್ವದ ಅಭಿವ್ಯಕ್ತಿ ಇರುವದಿಲ್ಲ. ಅದೊಂದು ವ್ಯಕ್ತಿನಿರಪೇಕ್ಷ ರಸಾಯನ. ಈ ಮಾತಿನ ಸಮರ್ಥನೆಗಾಗಿ ಎಲಿಯಟ್ ಕವಿಯ ವ್ಯಕ್ತಿತ್ವದಲ್ಲಿ ಎರಡು ಮನಸ್ಸುಗಳು ಹೇಗೆ ಕಾರ್ಯಮಾಡುತ್ತವೆ ಎಂಬುದನ್ನು ಸ್ಪಷ್ಟೀಕರಿಸುತ್ತಾನೆ. The man who suffers ಮತ್ತು the mind which creates ಎಂದು ವ್ಯಕ್ತಿತ್ವವನ್ನು ಪ್ರಥಃಕರಿಸಿ ಕಲಾಸೃಷ್ಟಿಗೆ ಪ್ರೇರಕವಾಗುವ ಕವಿಯ ಸೃಷ್ಟ್ಯಾತ್ಮಕ ಮನಸ್ಸಿನ ಪಾತ್ರವನ್ನು ಎತ್ತಿ ತೋರಿಸಿದ್ದಾನೆ. ಕವಿಯ ಸ್ವಂತದ ಭಾವನೆ, ಸಂವೇದನೆಗಳು ಸೃಷ್ಟ್ಯಾತ್ಮಕ ಮನಸ್ಸಿಗೆ ಸಮರ್ಪಿತವಾಗಬೇಕು. ಸೃಷ್ಟ್ಯಾತ್ಮಕ ಪ್ರಕ್ರಿಯೆ ಕವಿಯ ಸ್ವಂತದ ಭಾವನೆಗಳನ್ನು ಪರಿವರ್ತಿಸುತ್ತದೆ: "It is not the greatness or the intensity of the emotions, the components but the intensity of the artistic process, the pressure so to speak under which the fusion takes place that counts". ಎಲಿಯಟನ ಅಭಿಪ್ರಾಯದಲ್ಲಿ ಕವಿಯ ಸ್ವಂತ ವ್ಯಕ್ತಿತ್ವದ ಭಾಗವಾದ ಭಾವನೆಗಳ ಮಹತಿ, ತೀವ್ರತೆಗಳಿಗಿಂತ ಕಲಾಪ್ರಕ್ರಿಯೆಯ ತೀವ್ರತೆ, ಅನಿವಾರ್ಯತೆಗಳು ಗಮನಾರ್ಹವಾಗುತ್ತವೆ. ಹೀಗೆ ಕಲಾಪ್ರಕ್ರಿಯೆಯ ಪ್ರಾಮುಖ್ಯವನ್ನು ಒಪ್ಪಿಕೊಂಡರೆ ವಿಮರ್ಶಕನ ದೃಷ್ಟಿ ಕವಿಯ ವ್ಯಕ್ತಿತ್ವಕ್ಕಿಂತಲೂ ಕಲಾಕೃತಿಯ ಮೇಲೆ ಕೇಂದ್ರೀಕೃತವಾಗಬೇಕು ಎಂಬ ಎಲಿಯಟ್‌ನ ವಿಚಾರಗಳ ಅರ್ಥಪೂರ್ಣತೆ ಗಮನಕ್ಕೆ ಬರುತ್ತದೆ.

ಕಲಾಸೃಷ್ಟಿ ಬಳಸಿಕೊಳ್ಳುವ ವ್ಯಕ್ತಿಗಳ ವಸ್ತುಗಳು

ಕಲಾಸೃಷ್ಟಿಯಲ್ಲಿ ಎರಡು ವಿಧವಾದ ವಸ್ತುಗಳು ಭಾಗವಾಗಿರುತ್ತವೆ ಎಂಬುದನ್ನು ಈ ಹಿಂದೆಯೇ ನೋಡಲಾಗಿದೆ. ಭಾವನೆಗಳು ಕವಿಯ ವೈಯಕ್ತಿಕತೆಯ ಅಂಗವಾದರೆ ಸಂವೇದನೆಗಳು ಕಲಾವಸ್ತುವಿನ ಅಂಗವೆಂದು ಎಲಿಯಟನ ಅಭಿಪ್ರಾಯವಾಗಿದೆ. ಹೀಗೆ ವ್ಯಕ್ತಿತ್ವದ ಅಂಶ ಹಾಗೂ ವಸ್ತುವಿನ ಅಂಶಗಳೆರಡೂ ಸಂಯೋಗ

ಗೊಂಡು ಇವುಗಳಿಂದ ಪ್ರತ್ಯೇಕವಾದ ಕಲಾಕೃತಿ ನಿರ್ಮಾಣಗೊಳ್ಳುತ್ತದೆ. "feeling inheriting in particular words or phrases or images" ಎಂಬ ಹೇಳಿಕೆಯಲ್ಲಿ ವ್ಯಕ್ತಿಗಿಂತ ವಸ್ತುವಿನ ಪ್ರಭಾವವೇ ಅಧಿಕವೆಂಬ ಸೂಚನೆಯಿದೆ. ವ್ಯಕ್ತಿ ವಸ್ತುಗಳ ಸಾಮರಸ್ಯ ಕಲಾಸೃಷ್ಟಿಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ :

"Out of the formless stone, when the artist united himself with the stone spring elways new forms of life, from the soul of man that is joined to the soul of stone"

ಕಲ್ಲಿನಲ್ಲಿ ಕಲಾಕೃತಿ ಮೂಡಿಬರಬೇಕಾದರೆ ಕವಿಯ ಆತ್ಮವು ಕಲ್ಲಿನ ಆತ್ಮದೊಂದಿಗೆ ಸಂಪೂರ್ಣವಾಗಿ ಸಮರಸಗೊಳ್ಳಬೇಕು. ಕವಿಯ ಅತ್ಮಕ್ಕಿದ್ದ ಹಿರಿಮೆ ಗೌರವಗಳು ವಸ್ತುವಿನ ಆತ್ಮಕ್ಕೂ ಇರುತ್ತವೆ ಎಂಬ ಅಗಾಧಸತ್ಯವನ್ನು ಶೋಧಿಸಿದುದು ಎಲಿಯಟ್‌ನ ವಿಮರ್ಶಾಪ್ರಜ್ಞೆಯ ಹಿರಿಮೆಯಾಗಿದೆ. ವಸ್ತುನಿಷ್ಠ ಸತ್ಯದ (Objective reality) ಅಸ್ತಿತ್ವವನ್ನು ಮಾನ್ಯ ಮಾಡುವದು ಅಭಿಜಾತ ಧೋರಣೆಯ ಪ್ರಮುಖ ಲಕ್ಷಣ. ಆದರೆ ರೋಮ್ಯಾಂಟಿಕ್ ಧೋರಣೆಯಲ್ಲಿ ಈ ರೀತಿ ವಸ್ತುನಿಷ್ಠ ಸತ್ಯವನ್ನು ಒಪ್ಪಿಕೊಳ್ಳಲಾಗುವುದಿಲ್ಲ. ಕವಿಯ ವ್ಯಕ್ತಿತ್ವವೇ ವಸ್ತುವಿನ ಉದ್ದಗಲಗಳನ್ನು ವ್ಯಾಪಿಸಿಕೊಂಡು ತಾನೇ ಪ್ರಕೃತಿಯ ಕರ್ತಾರನೆಂದೂ ಗಮನದಿಂದ ಬೀಗುತ್ತಾನೆ ರೋಮ್ಯಾಟಿಂಕ್ ಕವಿ.

ಎಲಿಯಟ್‌ನ ವ್ಯಕ್ತಿನಿರಪೇಕ್ಷ ಸಿದ್ಧಾಂತದಲ್ಲಿ Personality ಹಾಗೂ emotions ಎಂಬ ಪದಗಳು ಸಮಾನಾರ್ಥಕ ಪದಗಳಾಗಿ ಪ್ರಯೋಗಗೊಂಡಿವೆ. ಕವಿಯ ವ್ಯಕ್ತಿತ್ವದ ಪ್ರಧಾನ ಅಂಗ ಅವನ ಭಾವನೆಗಳೇ ಆದುದರಿಂದ ಎಲಿಯಟ್ ಅವುಗಳಲ್ಲಿ ವ್ಯತ್ಯಾಸ ಮಾಡಿಲ್ಲ. ಭಾವನೆಗಳು ಕವಿಯ ಮನಸ್ಸಿನಲ್ಲಿ ಹರಕುಮುರುಕಾಗಿ ಅವ್ಯವಸ್ಥಿತ ಹಾಗೂ ಗೊಂದಲದಾಯಕ ಸ್ಥಿತಿಯಲ್ಲಿರುತ್ತವೆ. ಕವಿಯ ವ್ಯಕ್ತಿತ್ವದ ಈ ಅವ್ಯವಸ್ಥೆಯ ಮಾಲೆಯು ಕಲಾಪ್ರಕ್ರಿಯೆಯಲ್ಲಿ ವ್ಯವಸ್ಥೆಗೆ ಏರ್ಪಟ್ಟು ಕಲಾಕೃತಿಯು ನಿರ್ಮಾಣವಾಗುತ್ತದೆ. ಆದ್ದರಿಂದಲೇ ಅವನು ಕಾವ್ಯವೆಂದರೆ ಶಿಥಿಲಭಾವನೆಗಳನ್ನು ಹರಿಬಿಡುವುದಲ್ಲ. ಇವುಗಳಿಂದ ದೂರವಾಗುವದು; ಕಾವ್ಯವು ವ್ಯಕ್ತಿತ್ವದ ಅಭಿವ್ಯಕ್ತಿಯಲ್ಲಿ; ಅದರಿಂದ ಬಿಡುಗಡೆ ಹೊಂದುವದು ಎಂದು ಸಾರಿದ್ದಾನೆ.

Personality ಯ ವಿರೋಧವು ಎಲಿಯಟ್‌ನ ವಿಚಾರಗಳಿಗೆ ಒಂದು ಐಕ್ಯತೆಯನ್ನು ಒದಗಿಸಿಕೊಟ್ಟಿದೆ. ಇದರಂತೆಯೇ Originality (ಸ್ವೋಪಜ್ಞತೆ) Individuality (ವೈಯಕ್ತಿಕತೆ) ಎಂಬ ಪದಗಳು. ಸ್ವಾಭಾವಿಕವಾಗಿ ಅವನ ವಿರೋಧಕ್ಕೆ ತುತ್ತಾಗಿದೆ. ಯಾವ ಕವಿಯೂ ಸಂಪೂರ್ಣ ಅರ್ಥದಲ್ಲಿ ಸ್ವೋಪಜ್ಞನಲ್ಲ. ಪರಂಪರೆಯ ಪ್ರಭಾವಕ್ಕೆ ಒಳಗಾಗುವ ಅವನು ಅದರ ಬೆಳವಣಿಗೆಯ ಕೊಂಡಿಯಾಗುವದರಿಂದ ಅದರಿಂದ ಪ್ರತ್ಯೇಕವಾಗಿ ಉಳಿಯಲಾರ. ಆದ್ದರಿಂದ ಸ್ವೋಪಜ್ಞತೆಗಿಂತಲೂ ಬೆಳವಣಿಗೆ

(development) ಎಂಬ ಪದ ಅರ್ಥಪೂರ್ಣವಾಗಿದೆಯೆಂದು ಪ್ರತಿಪಾದಿಸುತ್ತಾನೆ. ಕಲಾರಚನೆಯಲ್ಲಿ ವ್ಯಕ್ತಿಯ ನಿರಂಕುಶ ವರ್ತನೆಗೆ ಅವಕಾಶ ಮಾಡಿಕೊಟ್ಟರೆ ಕಲೆಯ ಮೂಲಭೂತ ಪ್ರಮಾಣಗಳೇ ನಷ್ಟವಾಗಿ ಅರಾಜಕತೆ ಉಂಟಾಗುತ್ತದೆ ಎಂಬುದನ್ನು ಸ್ಪಷ್ಟಪಡಿಸಿದ್ದಾನೆ.

ವಸ್ತುಪ್ರತಿರೂಪ (Objective correlative)

ಕಲೆಯ 'ವ್ಯಕ್ತಿನಿರಪೇಕ್ಷ' ಪರಿಕಲ್ಪನೆಯ ಬಗೆಗೆ ಎಲಿಯಟ್‌ನ ವಿಚಾರಗಳು ವ್ಯವಸ್ಥಿತ ರೂಪದಲ್ಲಿ ವ್ಯಕ್ತವಾದುದು ಅವರ ಹ್ಯಾಮ್ಲೆಟ್ ಮತ್ತು ಅವರ ಸಮಸ್ಯೆಗಳು' ಎಂಬ ಪ್ರಬಂಧದಲ್ಲಿ. ಕವಿಯ ಭಾವನೆಗಳು ಕಾವ್ಯಮಾಧ್ಯಮದಲ್ಲಿ ವ್ಯಕ್ತಗೊಳ್ಳುವ ಒಂದೇ ಒಂದು ಮಾರ್ಗವೆಂದರೆ ವಸ್ತುರೂಪ (Objective correlative) ವನ್ನು ಹುಡುಕಿಕೊಳ್ಳುವದೇ ಆಗಿದೆ ಎಂದು ಸ್ಪಷ್ಟಪಡಿಸುತ್ತಾನೆ. ಕಲೆಯು ವಸ್ತು ಪ್ರತಿರೂಪವನ್ನು ಬಳಸಿಕೊಳ್ಳುತ್ತದೆಂಬುದು ೨೦ ನೆಯ ಶತಮಾನದ ಒಂದು ಪ್ರಮುಖ ವಿಮರ್ಶಕ ಸತ್ಯವಾಗಿದೆ : "The only way of expressing emotions in the form of art is by finding an objective correlative, in other words, a set of objects, a situation, a chain of events which shall be the formula for that particular emotion, such that when the external facts. which must transmute in sensory experience, are given the emotion is immediately evoked."

ಭಾವನೆ ಕಾವ್ಯವಾಗಿ ಪರಿವರ್ತಿತವಾಗಬೇಕಾದರೆ, ಅದು ವಸ್ತುವಿನ ಮಾಧ್ಯಮದಲ್ಲಿ ರೂಪುಗೊಳ್ಳಬೇಕು. ಕವಿಯ ಭಾವನಾ ಪ್ರಪಂಚವು ಅಮೂರ್ತವಾದದ್ದು ಇದನ್ನು ಮೂರ್ತಗೊಳಿಸಲು ಪರಿಚಿತ ವಸ್ತುಪ್ರಮಾಣದ ಆಶ್ರಯಿಸಬೇಕಾಗುತ್ತದೆ. ವಸ್ತು ಸಮೂಹ, ಒಂದು ಸನ್ನಿವೇಶ ಇಲ್ಲವೆ ಘಟನಾವಳಿಗಳನ್ನು ರೂಪಿಸಿಕೊಂಡು ಅವುಗಳ ಮುಖಾಂತರ ಓಟುಗಳನ್ನು ತಲುಪಬೇಕಾಗುತ್ತದೆ. ಈ ವಸ್ತು, ಸನ್ನಿವೇಶ, ಘಟನಾವಳಿಯು ಕಾವ್ಯ ಭಾವನೆಗಳಿಗೆ ಸಮಾನ ವಸ್ತುಗಳಾಗಿ ನಿಂತುಕೊಂಡು ಅದನ್ನು ಪ್ರತಿಕರಿಸುತ್ತವೆ. ಇಲ್ಲಿಯ ಕವಿಯು ಹೇಳಬೇಕಾದುದು ಒಂದು ವಸ್ತುನಿಷ್ಠರೂಪವನ್ನು ಪಡೆಯುತ್ತದೆ. ಪ್ರಾಮಾಣಿಕ ವಿಮರ್ಶೆ ಕವಿಯ ವ್ಯಕ್ತಿತ್ವಕ್ಕಿಂತಲೂ ಕಲಾವಸ್ತುವಿನ ಮೇಲೆ ಕೇಂದ್ರೀಕೃತವಾಗಬೇಕಾಗುತ್ತದೆ ಎಂದು ಎಲಿಯಟ್ ಹೇಳುವುದು ಈ ಕಾರಣಕ್ಕಾಗಿಯೇ ! ಎಲಿಯಟ್‌ನ ಈ ವಸ್ತುರೂಪ ಸಿದ್ಧಾಂತದ ಮೇಲೆ ಅವರ ಸಮಕಾಲೀನರಾದ ಫ್ರಾನ್ಸದ ಸಿಂಬೊಲಿಷ್ಟ ಕವಿಗಳ ಪ್ರಭಾವವಿದೆ. ಮೆಲಾರ್ಮ ಎಂಬ ಕವಿ ಕಾವ್ಯವು ಶಬ್ದಗಳಿಂದ ಮಾಡಲ್ಪಡುತ್ತದೆ. ವಿಚಾರಗಳಿಂದಲ್ಲ ಎನ್ನುತ್ತಾನೆ. ಎಜ್ರಾಪೌಂಡನ ದೃಷ್ಟಿಯಲ್ಲಿ ಕಾವ್ಯದ ತಿರುಳು ಶಬ್ದರೂಪ : (Metaphor)

ವೆಂದೂ ಅದೊಂದು ರೀತಿಯ ಸ್ಫೂರ್ತ ಗಣಿತವೆಂದೂ (Inspired Mathmatics) ಸಾರಿದ್ದಾನೆ. "Poetry is a sort of inspired mathmatics which gives equations not for abstract figures, spheres and the like, but equations for human emotions."

ವಸ್ತುಪ್ರತಿರೂಪ ಶೋಧನೆ ಕಲಾಭಿವ್ಯಕ್ತಿಯೊಂದಿಗೆ ಆವಿಷ್ಕಾರಗೊಳ್ಳತಕ್ಕುದೇ ಹೊರತು ಪೂರ್ವನಿಯೋಜಿಕ ಕ್ರಿಯೆಯಲ್ಲ. ಕೃತಿ ರಚನೆ ನಡೆಯುತ್ತಿದ್ದಂತೆಯೇ ಭಾವನೆಗಳಿಗೆ ಪ್ರತಿರೂಪಗಳು ರೂಪುಗೊಳ್ಳುತ್ತವೆ. ಎಂದರೆ ಇವು ಸೃಜನಕ್ರಿಯೆಯಲ್ಲಿ ಹೊರಬಂದ ಶೋಧನೆ ಎಂಬ ಎಲಿಯಟ್‌ನ ಹೇಳಿಕೆಯು ಅರ್ಥಪೂರ್ಣವಾಗಿದೆ. ಈ ವಸ್ತುರೂಪದ ಹುಡುಗಾಟವು ಒಂದು ರೀತಿಯಿಂದ ಕಲಾತ್ಮಕ ಅನಿವಾರ್ಯತೆಯೇ ಆಗಿದೆ : "The artistic inevitability lies in this complete adequacy of the external to the emotion.

ಹ್ಯಾಮ್ಲೆಟ್ ನಾಟಕದ ಬಗ್ಗೆ ಬರೆಯುತ್ತ ಅವನು ನಾಟಕದ ಪ್ರಧಾನ ಆಶಯವಾದ 'ತಾಯಿಯ ವ್ಯಭಿಚಾರ' ಕ್ಕೆ ತಕ್ಕ ವಸ್ತುರೂಪವನ್ನು ಹುಡುಕುವುದು ಸಾಧ್ಯವಾಗದ್ದರಿಂದ ನಾಟಕದ ಕ್ರಿಯೆ ಕುಂಠಿತವಾಗಿದೆಯೆಂದೂ, ಹ್ಯಾಮ್ಲೆಟ್‌ನ ವ್ಯಕ್ತಿತ್ವದಲ್ಲಿ ತೋರುವ ಗೊಂದಲವು ಕವಿಯು ನಾಟಕದ ಪ್ರಧಾನ ಆಶಯಕ್ಕೆ ಯೋಗ್ಯವಾದ ವಸ್ತುಪ್ರತಿರೂಪವನ್ನು ಶೋಧಿಸುವುದರಲ್ಲಿ ತೋರಿದ ಗೊಂದಲವಾಗಿ ಅವನಿಗೆ ಒಂದು ಕಲಾತ್ಮಕ ಸಮಸ್ಯೆಯಾಗಿದೆಯೆಂದೂ ಅಭಿಪ್ರಾಯ ಪಟ್ಟಿರುವುದು ಗಮನಾರ್ಹವಾಗಿದೆ.

• •

ಬ್ರೌನಿಂಗ್ ಕವಿಯ ನಾಟಕೀಯಾತ್ಮಗೀತ

(Dramatic Monologue)

ಬಸವರಾಜ ನಾಯ್ಕರ

ಹತ್ತೊಂಭತ್ತನೆಯ ಶತಮಾನದಲ್ಲಿ ಬಾಳಿಬೆಳಗಿದ ಇಂಗ್ಲೀಷ ಕವಿ ಬ್ರೌನಿಂಗ ತನ್ನದೆ ಆದ ವಿಶಿಷ್ಟ ಕಾವ್ಯಪರಿಕರವಾದ 'ನಾಟಕೀಯ ಆತ್ಮ ಗೀತ' ಎಂಬುದನ್ನು ಸಾಕಷ್ಟು ಬೆಳಸಿ ಅದಕ್ಕೊಂದು ಹೊಸ ಜೀಪ ಕೊಟ್ಟವನು. ಈತ ಸ್ವತಃ ಈ ಕಾವ್ಯ ಪರಿಕರವನ್ನು ಶೋಧಿಸಿದವನಾಗಿರದಿದ್ದರೂ ಅದನ್ನು ರಕ್ಷಿಸಿ ಬೆಳಸಿದವರಲ್ಲಿ ಪ್ರಮುಖ ನಾದವನೆಂದು ಹೇಳಬಹುದು. ಈ ನಾಟಕೀಯಾತ್ಮಗೀತ ಸಜಾತೀಯ ಸಾಹಿತ್ಯ ಪ್ರಕಾರಗಳಿಗಿಂತಲೂ ಭಿನ್ನವಾಗಿದೆ. ಉದಾಹರಣೆಗೆ ಇದನ್ನು ಸಾಹಿತ್ಯದಲ್ಲಿ ನಾಟಕಕ್ಕೂ ಮತ್ತು ಸ್ವಗತಕ್ಕೂ ಹೋಲಿಸಬಹುದು. ಹೀಗೆ ಹೋಲಿಸಿದಾಗ ಅವುಗಳ ನಡುವಿರುವ ಪರಸ್ಪರ ಭಿನ್ನತೆಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಉದಾಹರಣೆಗೆ ನಾಟಕಕ್ಕೂ 'ನಾಟ್ಯಕೀಯಾತ್ಮಗೀತ' ಕ್ಕೂ ಸಾಕಷ್ಟು ಹೋಲಿಕೆ ಇದೆ. ಏಕೆಂದರೆ ಇವೆರಡರಲ್ಲಿಯೂ ಒಂದಕ್ಕಿಂತ ಹೆಚ್ಚು ಪಾತ್ರಗಳು ಇರುತ್ತವೆ. ಅಲ್ಲದೆ ಅವೆರಡರ ನಡುವೆ ಒಂದು ಸಂಘರ್ಷ ನಡೆದಿರುತ್ತದೆ. ಹೀಗಿದ್ದರೂ ಇವೆರಡೂ ಪರಿಕರಗಳು ಒಂದೇ ಎಂದು ಹೇಳಲಾಗುವುದಿಲ್ಲ. ಏಕೆಂದರೆ ಅವೆರಡರಲ್ಲಿ ಕೆಲವು ಭಿನ್ನತೆಗಳಿವೆ. ಅದೇನೆಂದರೆ ಎರಡರಲ್ಲಿಯೂ ದ್ವಂದ್ವ ಪಾತ್ರಗಳಿದ್ದರೂ ನಾಟಕದಲ್ಲಿ ಬಾಹ್ಯ ಸಂಘರ್ಷವಿದ್ದುದಾದರೆ ನಾಟಕೀಯಾತ್ಮಗೀತದಲ್ಲಿ ಆಂತರಿಕ ಸಂಘರ್ಷವಿರುತ್ತದೆ. ನಾಟಕದಲ್ಲಿ ಎರಡು ವ್ಯಕ್ತಿಗಳ ನಡುವೆ. ಎರಡು ಶಕ್ತಿಗಳ ನಡುವೆ, ಎರಡು ವಿಚಾರ ಧಾರೆಗಳ ನಡುವೆ ಸಂಘರ್ಷ ನಡೆದರೆ ನಾಟಕೀಯಾತ್ಮ ಗೀತದಲ್ಲಿ ಒಂದೇ ವ್ಯಕ್ತಿಯ ಎರಡು ಮಗ್ಗಲುಗಳ ನಡುವೆ ಘರ್ಷಣೆ ನಡೆದಿರುತ್ತದೆ. ನಾಟಕೀಯಾತ್ಮಗೀತದಲ್ಲಿ ಮಾನವನ ಮನಸ್ಸಿನ ರಂಗದ ಮೇಲೆ ನಡೆಯುವ ನಾಟಕದ ವೃತ್ತಾಂತ ಬರುತ್ತದೆ. ಇನ್ನು ನಾಟಕೀಯಾತ್ಮಗೀತೆಯನ್ನು ಸ್ವಗತಕ್ಕೆ ಹೋಲಿಸಿದಾಗ ಅವೆರಡರಲ್ಲಿಯೂ ಒಬ್ಬನೆ ವ್ಯಕ್ತಿಯ ನಿವೇದನೆ ಇರುವುದರಿಂದ ಎರಡರಲ್ಲಿಯೂ ಸಾಮ್ಯ ಕಾಣಿಸುತ್ತದೆ. ಆದರೂ ಅವೆರಡರಲ್ಲಿ ಮೂಲಭೂತವಾದ ಭಿನ್ನತೆಯಿದೆ. ಉದಾಹರಣೆಗೆ ನಾಟಕದಲ್ಲಿಯ ಸ್ವಗತದಲ್ಲಿ ಒಂದೇ ಪಾತ್ರ ರಂಗದ ಮೇಲೆ ನಿಂತು ಬೇರೆ ಪಾತ್ರಗಳು ಅಲ್ಲಿಯೆ ನಿಂತಿದ್ದರೂ ತನ್ನಷ್ಟಕ್ಕೆ ತಾನೇ ಮಾತನಾಡುತ್ತದೆ. ಅದು ಬೇರೆ ಪಾತ್ರಗಳಿಗೆ ಕೇಳಿಸ ಬಾರದೆಂದಿದ್ದರೂ ಪ್ರೇಕ್ಷಕರಿಗೆ ಸಂಬೋಧಿಸಿದುದಾಗಿರುತ್ತದೆ. ಆತ 'ಖಾಸಗಿ'

ಯಾಗಿ ಮಾತನಾಡಿಕೊಂಡರೂ ಪ್ರೇಕ್ಷಕರಿಗೆಲ್ಲ ತಿಳಿದು 'ಬಹಿರಂಗ'ವಾಗಿರಬೇಕಾಗುತ್ತದೆ. ಆದರೆ ನಾಟಕೀಯಾತ್ಮಗೀತದಲ್ಲಿ ಒಂದು ಪಾತ್ರದ ಆತ್ಮನಿವೇದನೆಯಿದ್ದರೂ ಆ ಪಾತ್ರಕ್ಕೆ ಬೇರೆಯವರು ತನ್ನ ಮಾತುಗಳನ್ನಾಲಿಸುತ್ತಿದ್ದಾರೆಂಬ ಪ್ರಜ್ಞೆ ಇರುವುದಿಲ್ಲ. ಏಕೆಂದರೆ ಇದು ನಾಟಕವಾಗಿರದೆ ಕಾವ್ಯವಾಗಿರುವುದರಿಂದ ಇಲ್ಲಿ ಪ್ರೇಕ್ಷಕರಿರಲು ಸಾಧ್ಯವಿರುವುದಿಲ್ಲ. ಇನ್ನು ಈ ನಾಟಕೀಯಾತ್ಮಗೀತಕ್ಕೆ ತನ್ನದೇ ಆದ ತಂತ್ರವೊಂದಿದೆ. ಇದನ್ನು ಬೆಳಸಿದವನೂ ಬ್ರೌನಿಂಗನೆ. ಬ್ರೌನಿಂಗ ಬರೆದ ಮೂರು ಪ್ರಮುಖ ಗೀತಗಳನ್ನು ನಾವಿಲ್ಲಿ ಪರೀಕ್ಷಿಸಿ ನೋಡಬಹುದು.

ಆ್ಯಂಡ್ರಿಯಾಡೆಲ್ ಸಾರ್ಟೋ — (ಅಥವಾ 'ಕುಂದಿಲ್ಲದ ಚಿತ್ರಕಾರ')

ಇದು ಬ್ರೌನಿಂಗನ ಪ್ರಮುಖ ನಾಟಕೀಯಾತ್ಮಗೀತಗಳಲ್ಲಿ ಒಂದು. ಇದರಲ್ಲಿ ಕವಿ ಚಿತ್ರಕಾರನ ಜೀವನ ಕುರಿತು ಬರೆಯುತ್ತಾನೆ. ಇಂಥ ಚಿತ್ರಕಾರ ಮತ್ತು ಅವನ ಕಲೆಯ ಬಗೆಗಿನ ಕತೆಯನ್ನೇ ತನ್ನ ಕಾವ್ಯವಸ್ತುವಾಗಿ ಆರಿಸಿಕೊಂಡದ್ದು ಬ್ರೌನಿಂಗನ ಕಲಾಪ್ರೇಮಕ್ಕೆ ಸಾಕ್ಷಿ. ಅನೇಕ ಹಿಂದಿನ ಇಂಗ್ಲೀಷ ಕವಿಗಳು ಬರೆಯುವ ಸಾಮಾನ್ಯ ವಸ್ತುಗಳಾದ ಪ್ರೀತಿ, ಸುಖ, ದುಃಖಗಳನ್ನಲ್ಲದೆ ಈವರೆವಿಗೂ ಯಾರೂ ಕೈಯಾಡಿಸದ ಕ್ಷೇತ್ರವಾದ ಕಲೆಯ ಬಗೆಗೆ ಬರೆದುದು ಬ್ರೌನಿಂಗನ ಸ್ವಂತಿಕೆಗೆ ನಿದರ್ಶನ. ಸ್ವತಃ ಈ ಚಿತ್ರಕಲೆಯಲ್ಲಿ ಅಭಿರುಚಿಹೊಂದಿದವನಾದ ಬ್ರೌನಿಂಗ್‌ನಿಗೆ ಇತರ ತನ್ನಂತಹ ಸ್ವಭಾವವಿದ್ದ ಚಿತ್ರಕಾರರನ್ನು ಕುರಿತು ಬರೆಯುವುದೆಂದರೆ ಅತ್ಯಂತ ಪ್ರೀತಿ. ಆ್ಯಂಡ್ರಿಯಾಡೆಲ್ ಸಾರ್ಟೋ' ಕವನದಲ್ಲಿ ಭೌತಿಕ ಸೌಂದರ್ಯವನ್ನು ಆಕಾಶಕ್ಕೇರಿಸಿದ ಚಿತ್ರಕಾರನ ದುಃಖಮಯ ವೈವಾಹಿಕ ಜೀವನದ ಚಿತ್ರವನ್ನು ಕೊಡಲಾಗಿದೆ. ಈ ಚಿತ್ರವನ್ನು ನಾಟಕೀಯಾತ್ಮಗೀತದ ತಂತ್ರಕ್ಕನುಗುಣವಾಗಿ ನಿರೂಪಿಸಲಾಗಿದೆ. ಈ ಕವನ ಒಮ್ಮೆಲೆ ಸಿಂಪಿಗನಾದ ಸಾರ್ಟೋನ ಜೀವನದ ವರ್ತಮಾನದ ಘಟನೆಯ ವರ್ಣನೆಯೊಂದಿಗೆ ಪ್ರಾರಂಭವಾಗುತ್ತದೆ. ಸಾರ್ಟೋನ ಹೆಂಡತಿ ಲುಕ್ರೆಝಿಯಾ ಗಂಡನ ಬಗೆಗೆ ಪ್ರೀತಿ ಮತ್ತು ಅಭಿಮಾನಗಳನ್ನು ತಳೆದವಳಾಗಿಲ್ಲ. ಗಂಡನೊಡನೆ ನಿರಾಶೆಗೊಂಡು ಬೇರೆ ಪ್ರಿಯತಮನ ಬರವಿಗಾಗಿ ಕಾಯುತ್ತ ಕುಳಿತಿದ್ದಾಳೆ. ಸಾಯಂಕಾಲದ ಸಮಯದಲ್ಲಿ ಅನ್ಯಮನಸ್ಕಳಾಗಿ ಕಿಟಕಿಯ ಹತ್ತಿರ ಕುಳಿತಿದ್ದ ಹೆಂಡತಿಯ ಮನವೊಲಿಸಲು ಗಂಡ ಸಾರ್ಟೋ ಸರ್ವಪ್ರಯತ್ನ ಮಾಡುತ್ತಿದ್ದಾನೆ. ಬ್ರೌನಿಂಗ ಈ ಕಲಾಕಾರನ ಬಗೆಗೆ ಯಾವ ತರಹದ ಪರಿಚಯ ಅಥವಾ ಹಿನ್ನೆಲೆಯನ್ನೂ ಕೊಡದೆ ಒಮ್ಮೆಲೆ ಅವನ ಜೀವನದ ಒಂದು ಮಹತ್ವದ ಗಳಿಗೆಯನ್ನು ನಮ್ಮೆದುರಿಗೆ ತೋರಿಸಿ ಕೊಡುತ್ತಾನೆ. ಹೀಗೆ ಒಂದು ವರ್ತಮಾನದ ಘಟನೆಯನ್ನು ವರ್ಣಿಸಿ ಓದುಗರಲ್ಲಿ ಆಸಕ್ತಿ ಕೆರಳಿಸಿ ನಂತರ ಭೂತಕಾಲದ ಜೀವನದ ವಿವರಗಳನ್ನು ಒದಗಿಸುವುದು ಬ್ರೌನಿಂಗನ ಕಾವ್ಯ ಪದ್ಧತಿ. ಈ ಕವನದಲ್ಲಿ ಗಂಡ ತನ್ನ ಹೆಂಡತಿಯಾದ ಲುಕ್ರೆಝಿಯಾಳನ್ನು ಮನ ಒಲಿಸಲು ಪ್ರಯತ್ನಿಸುತ್ತಿದ್ದಾನೆ. "ನನ್ನ ಪ್ರಿಯ ಲುಕ್ರೆಝಿಯಾ ನಾವಿಬ್ಬರೂ

ಇನ್ನು ಮೇಲೆ ಬಡಿದಾಡುವುದನ್ನು ಬಂದು ಮಾಡಿಬಿಡೋಣ. ಪ್ರಿಯೆ, ಒಂದಿಷ್ಟು ತಾಳ್ಮೆಯನ್ನು ಕಲಿತುಕೊ. ಇಲ್ಲಿ ಬಾ ನನ್ನ ಹತ್ತಿರ ಕೂಡ್ರು. ಎಲ್ಲವೂ ನಿನ್ನ ಮನಸ್ಸಿನ ಪ್ರಕಾರವೇ ನಡೆಯುವಂತೆ ನೋಡಿಕೊಳ್ಳುತ್ತೇನೆ. ನನ್ನ ಕಡೆಗೆ ಬರೀ ನಿನ್ನ ಮುಖವನ್ನು ತಿರುಗಿಸಬೇಡ. ನಿನ್ನ ಹೃದಯವನ್ನು ತಿರುಗಿಸು. ಬೇಕೆಂದರೆ ನಿನ್ನ ಗೆಳೆಯನ ಗೆಳೆಯನಾಗಿಯೂ ದುಡಿಯುವುದಕ್ಕೆ ಸಿದ್ಧ. ಆತ ಹೇಳಿದ ವಸ್ತುವನ್ನೆ ತೆಗೆದುಕೊಂಡು ಆತ ಹೇಳಿದ ವೇಳೆಗೆ ಸರಿಯಾಗಿ ಕೆಲಸ ಮಾಡಿ ಆತನ ಅಭಿರುಚಿಯ ಪ್ರಕಾರವೆ ಚಿತ್ರವನ್ನು ಬರೆದು, ಆತ ಕೊಟ್ಟಷ್ಟೆ ಹಣವನ್ನು ಸ್ವೀಕರಿಸಿಕೊಂಡು ಬಂದು ನಿನ್ನ ಉಡಿಯಲ್ಲಿ ಹಾಕುತ್ತೇನೆ. ಸ್ವಲ್ಪ ತಾಳಿಕೊಳ್ಳುತ್ತಿಯಾ ? ನಾನಿದನ್ನೆಲ್ಲ ಮಾಡುವುದು ನಾಳೆ. ಆದರೆ ಇವತ್ತೊಂದು ದಿನ ಮಾತ್ರ ನನ್ನೊಂದಿಗೆ ಪ್ರೇಮದಿಂದ ಮಾತನಾಡು ಪ್ರಿಯೆ. ಕರುಬಬೇಡ. ನೀನು ತಿಳಿದುದಕ್ಕಿಂತ ಹೆಚ್ಚಾಗಿ ನಾನುಜೀವನದ ಬಗೆಗೆ ಜಿಗುಪ್ಸೆಗೊಂಡಿದ್ದೇನೆ. ನನ್ನ ಕೈಗಳನ್ನು ನಿನ್ನ ಮೃದುವಾದ ಕೈಗಳಲ್ಲಿ ಹಿಡಿದುಕೊ. ಇಬ್ಬರೂ ಈ ಕಿಟಕಿಯ ಹತ್ತಿರ ಗಂಡಹೆಂಡಿರಂತೆ ಕುಳಿತು ದೂರದಲ್ಲಿ ಕಾಣುವ ಆ ಫಿಸೊಲಿ ಹಳ್ಳಿಯ ಸೌಂದರ್ಯವನ್ನು ಸವಿಯೋಣ. ಅಂದರೆ ಮುಂಜಾನೆದ್ದು ಹೊಸ ಹುರುಪಿನಿಂದ ಕೆಲಸಮಾಡುತ್ತೇನೆ. ನಿನಗೂ ಮನಸ್ಸು ಹಗುರವಾಗುತ್ತವೆ. ಸ್ವಲ್ಪ ಪ್ರಯತ್ನಮಾಡು. ಹೆಣ್ಣಿನಂತೆ ಮೃದುವಾದ ನಿನ್ನ ಕೈ ವಿಶಾಲವಾದ ಎದೆಯುಳ್ಳ ಗಂಡಸಿನಂತಿದ್ದ ನನ್ನ ಕೈಗಳಲ್ಲಿ ಹುದುಗಿರಲಿ. ಇಷ್ಟು ದಿನ ಆದದ್ದು ಆಗಿಹೋಗಲಿ. ಅದನ್ನೆಲ್ಲ ಮರೆತು ಬಿಡು. ನಾನು ಬರೆಯಬೇಕಾದ ಐದೂ ಚಿತ್ರಗಳಿಗೆ ನೀನೇ 'ಮೂರ್ತಿ'ಯಾಗಿ ಕೂಡ್ರು, ನನ್ನನ್ನು ಹೀಗೇ ದಿಟ್ಟಿಸುತ್ತ ಕೂತು ಬಿಡು. 'ವಕ್ರವಕ್ರಗಳ ಸರ್ಪಸುಂದರಿಯೆ ನಿನ್ನ ಪರಿಪೂರ್ಣವಾದ ಕಿವಿಗಳನ್ನು ಚುಚ್ಚಿ ಮುತ್ತುಗಳನ್ನು ಹಾಕಿಕೊಂಡಾಗ ನಿನಗೆ ವಿಪರೀತ ನೋವಾಗಿರಬೇಕಲ್ಲವೆ ? ಅದನ್ನೆಲ್ಲ ಹೇಗೆ ಸಹಿಸಿಕೊಂಡೆ ಪ್ರಿಯೆ ? ಎನ್ನ ಪ್ರಿಯೆ ನೀನೆ ನನ್ನ ದೇಹದ ಮುಖವಿದ್ದಂತೆ. ಎಲ್ಲರಂತೆ ನಾನು ನಿನ್ನ ಮುಖವನ್ನು ದಿಟ್ಟಿಸುತ್ತಾ ಕುಳಿತರೂ ನೀನು ಮಾತ್ರ ನನ್ನೆಡೆಗೆ ಕಣ್ಣು ತೆಗೆದು ನೋಡುವುದಿಲ್ಲ. ನೀನು ಮುಗುಳು ನಗುತ್ತಿದ್ದಿಯಾ? ಇಗೋ ನೋಡು ಇಲ್ಲಿದೆ ನನ್ನ ಚಿತ್ರಕೃತಿ. ಇದರಲ್ಲಿ ಚಿತ್ರಕಾರರು ಹೇಳುವ ಸಾಮರಸ್ಯ ಕಾಣುತ್ತಿದೆ ನೋಡು. ಜೀವನದಲ್ಲಿಯ ಎಲ್ಲ ವಸ್ತುಗಳ ಸುತ್ತೂ ಒಂದು ಸಾಮಾನ್ಯವಾದ ಸರೆಬಣ್ಣ ಆವರಿಸುತ್ತವೆಂದು ತೋರುತ್ತಿದೆ. ಮೊದಲ ಸಲ ನೀನು ಭೇಟಿಯಾದಾಗ ನಿನಗೆ ನನ್ನ ಬಗ್ಗೆ ಅಭಿಮಾನವಿತ್ತು ನೆನಪಿದೆಯಾ ? ನನ್ನ ಯೌವನ, ನನ್ನ ಆಶೆಆಕಾಂಕ್ಷೆಗಳು, ನನ್ನ ಕಲೆ ಎಲ್ಲವೂ ತಣ್ಣಗಾಗಿ ಕೊನೆಗೊಮ್ಮೆ ನಾನು ಈ ಫಿಸೊಲಿ ಹಳ್ಳಿಯನ್ನು ನೋಡುತ್ತಲೆ ಸಂತೃಪ್ತಿ ಪಡೆಯುವ ಸ್ಥಿತಿಯನ್ನು ಮುಟ್ಟಿದ್ದೇನೆ. ಅಲ್ಲಿ ನೋಡು ಗುಡಿಯ ಗಂಟೆ ಟಂಟಣಿಸುತ್ತಿದೆ. ಗುಡಿಯ ಗೋಡೆಯ ಹಿಂದೆ ನೂರಾರು ಮರಗಳು ಸುಯ್ಯುತ್ತ ನಿಂತಿವೆ. ಗುಡಿಯೊಳಗಿಂದ ಕೊನೆಯ ಪಾದ್ರಿ ಉದ್ಯಾನವನ್ನು ಬಿಟ್ಟು ಮನೆಯ ಕಡೆಗೆ ಹೊರಟಿದ್ದಾರೆ. ದಿನಗಳು

ಸಣ್ಣವಾದಂತೆ ಶರತ್ಕಾಲ ದೊಡ್ಡದಾಗುತ್ತದೆ. ಎಲ್ಲ ವಸ್ತುಗಳಲ್ಲಿಯೂ ಶರತ್
ಕಾಲವೆ ಕಾಣುತ್ತಿವೆ. ಎನಗೆ, ಪ್ರಿಯೆ, ನಾವಿಬ್ಬರೂ ದೇವರ ಅಧೀನದಲ್ಲಿದ್ದುದರಿಂದ
ಅವನು ಹೇಳಿದಂತೆ ನಡೆಯಬೇಕಲ್ಲವೆ ? ಮೇಲುನೋಟಕ್ಕೆ ನಾವಿಬ್ಬರೂ ಸ್ವತಂತ್ರ
ರೆಂದು ಕಂಡರೂ ನಮ್ಮಿಬ್ಬರ ಬೇಡಿಕೆಗಳು ನಮ್ಮಿಬ್ಬರನ್ನೂ ಎಷ್ಟು ಬಿಗಿಯಾಗಿ
ಬಂಧಿಸಿವೆಯಲ್ಲವೆ ? ದೇವನು ನಮಗೆ ಹಾಕಿದ ಬೇಡಿಕೆಗಳು ಹಾಗೆಯೆ ಇರಲಿ. ಎನ್ನ
ಹುಡುಗಿಯೆ ನಿನ್ನ ಮುದ್ದುಮುಖವನ್ನು ತಿರುಗಿಸಿ ಈ ಕೋಣೆಯಲ್ಲಿದ್ದ ಎಲ್ಲ ಚಿತ್ರ
ಗಳನ್ನು ಕಣ್ಣು ತೆಗೆದು ನೋಡು. ಅವುಗಳ ಮಹತ್ವ ನಿನಗಂತೂ ತಿಳಿಯುವುದೂ
ಇಲ್ಲ. ತಿಳಿದುಕೊಳ್ಳಲಿಕ್ಕೆ ನೀನು ಪ್ರಯತ್ನಿಸುವುದೂ ಇಲ್ಲ. ಹೋಗಲಿ, ಕೊನೆಗೆ
ಜನರಾದರೂ ನನ್ನ ಬಗ್ಗೆ ಹೊಗಳುವುದನ್ನು ಲಕ್ಷಗೊಟ್ಟು ಕೇಳು. ಬಾಗಿಲಿನಿಂದ
ಎರಡನೆಯ ವ್ಯಂಗಚಿತ್ರವನ್ನಷ್ಟು ಚೆನ್ನಾಗಿ ನೋಡು. ಇಲ್ಲವೆ ಮೇರಿಮಾತೆಯನ್ನಾ
ದರೂ ನೋಡು. ಕೈಗೆ ಸಿಕ್ಕಿದ ಬಳಪದಿಂದ ನಾನು ನೋಡಿದ, ಕೇಳಿದ, ಬಯಸಿದ,
ಚಿತ್ರಗಳನ್ನು ಸರಳವಾಗಿ ಬರೆಯಬಲ್ಲೆ. ನಾನೇನು ನನ್ನ ಬಗ್ಗೆ ಭಡಾಯಿಕೊಚ್ಚು
ತ್ತಿಲ್ಲ. ಹೋದ ವಾರ ತೀರ್ಪುಗಾರರು ನನ್ನನ್ನು ಹೊಗಳಿದುದಾಗಲಿ ಅಥವಾ ಫ್ರಾನ್ಸ
ದೇಶದಲ್ಲಿಯ ಕಲಾಕಾರರು ನನ್ನ ಕಲೆಯನ್ನು ಮೆಚ್ಚಿಕೊಂಡ ವಿಷಯವನ್ನು ನೀನು
ಕಿವಿಯಾರೆ ಕೇಳಿಲ್ಲವೆ ? ನಾನು ಚಿತ್ರ ಬರೆಯಬೇಕಾದರೆ ಮೊದಲೊಮ್ಮೆ ಕಚ್ಚಾ ಕೆಲಸ
ವನ್ನು ಮಾಡಿ ಕೊನೆಗೆ ಪಕ್ಕಾ ಚಿತ್ರವನ್ನು ತಯಾರಿಸುವುದಿಲ್ಲ. ಬಳಪವನ್ನು
ಕೈಯಲ್ಲಿ ಹಿಡಿದರೆ ಸಾಕು ಒಮ್ಮೆಲೆ ಪಕ್ಕಾಚಿತ್ರವನ್ನು ಬರೆದುಬಿಡುತ್ತೇನೆ. ಬೇರೆ
ಕಲಾಕಾರರೂ ಹಗಲು ರಾತ್ರಿ ಕಷ್ಟಪಟ್ಟರೂ ನನ್ನಷ್ಟು ಸರಳವಾಗಿ ಚಿತ್ರಬರೆಯ
ಲಾರರು. ಇಷ್ಟೆ ಅಲ್ಲ. ನೀನು ಮೊನ್ನೆ ನಿರ್ಲಕ್ಷದಿಂದ ಗೀಚಿದ ಚಿತ್ರದಷ್ಟು ಸುಂದರ
ವಾದ ಚಿತ್ರವನ್ನು ಇತರ ಒಳ್ಳೆಯವರೆಂದೆನಿಸಿಕೊಂಡ ಕಲಾಕಾರರು ಸಹ ಬಿಡಿಸ
ಲಾರರು. ಆದರೂ ನನ್ನ ಪ್ರಿಯೆ ಲುಕ್ರೆಝಿಯಾ ಜನರು ನನ್ನ ಕಲೆಯಲ್ಲಿ ತಪ್ಪು
ಗಳನ್ನು ಕಂಡು ಹಿಡಿದಿದ್ದಾರೆ. ಇತರ ಕಲಾಕಾರರ ಚಿತ್ರಗಳಲ್ಲಿ ನನ್ನ ಚಿತ್ರಗಳಲ್ಲಿ
ರುವುದಕ್ಕಿಂತ ನಿಜವಾದ ದೈವೀಕಿರಣ ಹೊಳೆಯುತ್ತಿರುತ್ತದೆ. ಅವರ ಚಿತ್ರಗಳು
ಭೂಮಿಯ ಕಡೆಗೆ ಬೀಳುತ್ತಿದ್ದರೂ ಅವರು ಮಾತ್ರ ಸ್ವರ್ಗದಲ್ಲಿ ಪ್ರವೇಶಿಸಿ ಅಲ್ಲಿ
ಸ್ವಚ್ಛಂದವಾಗಿ ವಿಹರಿಸುತ್ತಾರೆ. ನನಗಾದರೊ ಸ್ವರ್ಗದ ಬಾಗಿಲು ಮುಚ್ಚಿಯೆ
ಇರುತ್ತದೆ. ಆದರೆ ನನ್ನ ಚಿತ್ರಗಳು ಸ್ವರ್ಗದ ಎತ್ತರಕ್ಕೆ ಏರಿದ್ದರೂ ನಾನು ಮಾತ್ರ
ಭೂಮಿಯ ಮೇಲೆಯೆ ಕುಳಿತುಕೊಂಡಿರಬೇಕು. ಈ ಕಲಾಕಾರರ ರಕ್ತವೆಲ್ಲ ಬಿಸಿ
ಯಾಗಿದೆ. ಯಾರಾದರೂ ಅವರನ್ನು ಹೊಗಳಿದರೂ ಅದು ಕುದಿಯುತ್ತದೆ. ತೆಗಳಿ
ದರೂ ಕುದಿಯುತ್ತದೆ. ನಾನು ಮಾತ್ರ ಪರರ ಸಲುವಾಗಿ ಚಿತ್ರಬರೆಯದೆ ಸ್ವಪ್ರೇರಣೆ
ಯಿಂದ ಆತ್ಮತೃಪ್ತಿಗಾಗಿ ಚಿತ್ರ ಬರೆಯುವುದರಿಂದ ನನಗೆ ಜನಹೊಗಳಿದರೂ ಅಷ್ಟೆ,
ತೆಗಳಿದರೂ ಅಷ್ಟೆ. ಅವೆರಡೂ ನನಗೆ ಸಮಾನ. ನನ್ನ ಚಿತ್ರದಲ್ಲಿಯ ಮೊರೆಲೊ
ಪರ್ವತದ ನಕ್ಷೆ ತಪ್ಪಾಗಿದೆ. ಅಥವಾ ಬಣ್ಣ ಸರಿಯಾಗಿಲ್ಲ ಹಾಗೆ ಹೀಗೆ ಎಂದು

ಖಂಡಿಸಬಹುದು. ಅಥವಾ ರೇಖೆಗಳು ಸರಳವಾಗಿ ಬರೆಯಲ್ಪಟ್ಟಿವೆ ಎಂದು ಹೊಗಳ ಬಹುದು. ಈ ಜನರೆಲ್ಲ ತಮ್ಮ ಮನಸ್ಸಿಗೆ ಬಂದಹಾಗೆ ಮಾತನಾಡಬಹುದು. ಆದರೆ ಇದೆಲ್ಲ ಮೊರೆಲೊ ಪರ್ವತಕ್ಕೆ ಎಂದಾದರೂ ಕೇಳುವುದೆ ? ಹೀಗಿದ್ದರೂ ಪ್ರತಿಯೊಬ್ಬ ಮನುಷ್ಯನು ಎತ್ತರವಾದ ಆದರ್ಶಗಳಿಗಾಗಿ ಹೋರಾಡಬೇಕು. ಇಲ್ಲದಿದ್ದರ ಸ್ವರ್ಗ ವೆಂಬುದಕ್ಕೆ ಅರ್ಥವೆಲ್ಲಿ ? ನನ್ನ ಕಲೆಯಲ್ಲಿಯಂತೂ ಎಲ್ಲವೂ ಬೆಳ್ಳಿ ನರೆಯಂತೆ ಸ್ಪಷ್ಟ ಮತ್ತು ಪರಿಪೂರ್ಣ. ನಾನು ಜೀವನದಲ್ಲಿ ಏತಕ್ಕಾಗಿ ಹಾತೊರೆಯುತ್ತೇನೆ. ಹಾಗೂ ಅದರಲ್ಲಿ ನನಗೆ ದಕ್ಕುವುದೆಷ್ಟು ಎಂಬುದು ನನಗೆಲ್ಲ ಗೊತ್ತಿದೆ. ಹಾಗಿದ್ದರೂ ನನಗೆ ಇಬ್ಬರು ಕಲಾಕಾರರ ಅರ್ಹತೆಯಿದ್ದರೆ ನಾನು ಈ ಜಗತ್ತಿಗೆ ದಾದೇ ಮಾಡುತ್ತಿರಲಿಲ್ಲ. ಹಾಗೆ ಹೀಗೆ ಎಂದು 'ರೆರೆ'ಗಳ ಆಶ್ರಯದಲ್ಲಿದ್ದರೆ ಏನೂ ಲಾಭವಿಲ್ಲ. ಆ ಕಡೆ ಗೋಡೆಯ ಮೇಲೆ ಜಾರ್ಜವಾಸಾರಿ ನನಗೆ ಕಳುಹಿಸಿದ ರಾಫೇಲ್‌ನ ಚಿತ್ರ ತೂಗಾಡು ತ್ತಿದೆ. ರಾಫೇಲ್ ತೀರಿಕೊಂಡು ಐದು ವರುಷ್ಯಗಳಾದುವು. ಆತ ಈ ಚಿತ್ರವನ್ನು ಹೇಗೆ ಬರೆದನೆಂಬುದನ್ನು ಚೆನ್ನಾಗಿ ಊಹಿಸಬಲ್ಲೆ. ಮಹಾರಾಜರ ಮತ್ತು ಧರ್ಮ ಗುರುಗಳ ಸಮ್ಮುಖದಲ್ಲಿ ಆತ ತನ್ನ ಚಿತ್ರಗಳನ್ನು ಮನಸ್ಸುಗೊಟ್ಟು ಬರೆದ, ಸ್ವರ್ಗವೆ ಸಂತೋಷಗೊಳ್ಳುವಂತೆ ಆತ್ಮಸೌಂದರ್ಯವನ್ನು ಚಿತ್ರಿಸಿದ. ಆದರೂ ಆತ ಬರೆದ 'ಕೈ'ಯ ಚಿತ್ರ ತಪ್ಪಾಗಿದೆ. ಅದನ್ನು ನಾನು ಬೇಕಾದ ಹಾಗೆ ತಿದ್ದಬಲ್ಲೆ. ಆದರೆ ಆತನ 'ಆತ್ಮ'ದ ಚಿತ್ರವನ್ನಂತೂ ನನ್ನಿಂದ ತಿದ್ದಲಾಗುವುದಿಲ್ಲ. ಏಕೆಂದರೆ ನನ್ನಲ್ಲಿ ಆತನಲ್ಲಿದ್ದ ಅಂತರ್ದೃಷ್ಟಿಯಾಗಲಿ ಹರವಾಗಲಿ ಇಲ್ಲ. ನನ್ನ ಪ್ರಿಯ ಲುಕ್ರೆಝಿಯಾ ನೀನು ನನಗೆ ಸಾಕಷ್ಟು ಪ್ರೀತಿ ಸೌಖ್ಯವನ್ನು ಕೊಟ್ಟಿದ್ದರೆ ನನ್ನಾತ್ಮವನ್ನು ಉತ್ಥಾನ ಗೊಳಿಸಿದ್ದರೆ ಬಹುತರವಾಗಿ ನಾನು ರಾಫೇಲನ ಎತ್ತರಕೆ ಏರುತ್ತಿದ್ದೆ. ನೀನು ನನಗೆ ಎಷ್ಟೂ ಪ್ರೀತಿಯನ್ನು ಕೊಟ್ಟಿಲ್ಲವೆಂದು ನಾನು ಹೇಳುತ್ತಿಲ್ಲ. ಅನೇಕ ಸಲ ನಾನು ಕೇಳಿದುದನ್ನೆಲ್ಲ ನೀನು ಕೊಟ್ಟೆ. ನಿನ್ನ ಪರಿಪೂರ್ಣವಾದ ಕಣ್ಣು ಹುಬ್ಬುಗಳ ಸೌಂದರ್ಯದಿಂದ ನಿನ್ನ ಮಧುರವಾಣಿಯಿಂದ ನನ್ನನ್ನು ಮರುಳುಗೊಳಿಸಿದೆ. ಪಕ್ಷಿ ಯೊಂದು ಕೋಕಿಲ ಗಾನಕ್ಕೆ ಮರುಳಾದಂತೆ ನಾನು ಮರುಳಾದೆ. ಆದರೆ ನಿನ್ನ ಮುಖ ಸೌಂದರ್ಯದೊಡನೆ ಸುಂದರವಾದ ಮನಸ್ಸನ್ನು ತಂದಿದ್ದರೆ ಎಷ್ಟು ಚೆನ್ನಾ ಗಿರುತಿತ್ತಲ್ಲವೇ ? ಒಂದು ವೇಳೆ ನೀನು ನನಗೆ ಬರೀ ಲಾಭದ ಆಶೆಯನ್ನು ಬಿಟ್ಟು ಕಷ್ಟಪಟ್ಟು ದುಡಿದು ರಾಫೇಲ ಮತ್ತು ಮೈಕೇಲೆಂಜೆಲೊ ಅವರಂತೆ ಕಿರ್ತಿಗಳಿಸೆಂದು ಆದೇಶಪಿತ್ತಿದ್ದರೆ ನಾನದನ್ನು ಶಿರಸಾವಹಿಸಿ ನಿರ್ವಹಿಸುತ್ತಿದ್ದೆ. ಅಥವಾ ಅದನ್ನು ನನ್ನಿಂದ ಮಾಡಲಾಗುತ್ತಿದ್ದಿಲ್ಲವೇನೊ. ಈ ಜಗತ್ತಿನಲ್ಲಿ ಎಲ್ಲವೂ ದೇವರ ಇಚ್ಛೆ ಯಂತೆ ನಡೆಯುತ್ತದೆ. ಅಲ್ಲದೆ ಪ್ರತಿಯೊಬ್ಬನೂ ತನ್ನೊಳಗಿನಾತ್ಮದೊಳಗಿಂದಲೆ ಪ್ರೇರಣೆಯನ್ನು ದೊರಕಿಸಿಕೊಳ್ಳಬೇಕೆಂದು ಕಾಣಿಸುತ್ತದೆ. ಹಾಗಿದ್ದ ಮೇಲೆ ನನಗೆ ನಿನ್ನ ಅವಶ್ಯಕತೆಯೇನಿಸಿದೆ. ? ರಾಫೇಲ ಮತ್ತು ಮೈಕೇಲೆಂಜೆಲೊ ಅವರಿಗೆ ಹೆಂಡಿರು ಗಳಿದ್ದರೆ ? ಈ ಪ್ರಪಂಚದ ವಿಚಿತ್ರವೇನೆಂದರೆ ಕೆಲಸಮಾಡಬೇಕೆಂಬ ಮನಸ್ಸಿದ್ದವ

ನಿಗೆ ಯೋಗ್ಯತೆಯಿರುವುದಿಲ್ಲ. ಯೋಗ್ಯತೆಯಿದ್ದವನಿಗೆ ಮನಸ್ಸಿರುವುದಿಲ್ಲ. ಆದರೂ ಸಹಿತ ಮನುಷ್ಯನ 'ಇಚ್ಛೆ' ಯೆಂಬುದು ಅವನ ಬೆನ್ನು ಬಿಡುವುದಿಲ್ಲ. ಅದರ ಸಲು ವಾಗಿಯಾದರೂ ನಮ್ಮಂಥ ಅರೆ ಮನುಷ್ಯರು ಹೋರಾಡುತ್ತಿರುತ್ತೇವೆ. ಕೊನೆ ಗೊಮ್ಮೆ ದೇವರು ನಮಗೆ ಯೋಗ್ಯವಾದ ಶಿಕ್ಷೆ ಕೊಟ್ಟೆಕೊಡುತ್ತಾನೆ. ಈ ಊರಲ್ಲಿ ನನಗೆ ಪ್ರಮುಖ ಕಲಾಕಾರನೆಂದು ಮನ್ನಣೆ ಸಿಗದೆ ಇದ್ದರೂ ಪರವಾ ಇಲ್ಲ ನಾನು ಇರಬಲ್ಲೆ. ಪ್ಯಾರಿಸಿದ ಜೀವನವನ್ನು ನೆನಸಿಕೊಂಡರಂತೂ ಮೈ ಜುಮ್ಮೆನ್ನುತ್ತದೆ. ಅಲ್ಲಿದ್ದಾಗ ಮನೆಬಿಟ್ಟು ಹೋಗುವುದೆ ಕಠಿಣವಾಗಿತ್ತು. ಏಕೆಂದರೆ ದಾರಿಯಲ್ಲಿ ನಾನು ಹೋಗುತ್ತಿದ್ದಾಗ ಪ್ಯಾರೀಸಿನ ಗಣ್ಯವ್ಯಕ್ತಿಗಳು ನನ್ನನ್ನು ನೋಡಿ ತಮ್ಮ ತಮ್ಮಲ್ಲಿ ಪಿಸುಮಾತುಗಳನ್ನಾಡಿಕೊಂಡು ನಗುತ್ತಿದ್ದರು. ಅದನ್ನೆಲ್ಲ ನೋಡಿ ನನಗೆ ವಿಪರೀತ ನಾಚಿಕೆಯಾಗುತ್ತಿತ್ತು. ಮೊದಲನೆಯ ಬಾರಿ ಫ್ರಾನ್ಸಿಸ್ ಮಹಾರಾಜ ರನ್ನು ಭೆಟ್ಟಿಯಾದುದನ್ನು ಹಾಗೂ ಫೋಟನ್‌ಬ್ಲೊದಲ್ಲಿ ಕಳೆದ ಒಂದು ವರ್ಷದ ದೀರ್ಘಾವಧಿಯನ್ನು ನೆನಸಿಕೊಂಡರೆ ದುಃಖವುಮ್ಮಳಿಸಿ ಬರುತ್ತದೆ. ಆಗ ನಾನು ಕೆಲವು ಸಾರೆಯಾದರೂ ನನ್ನ ಕಲಾಕೃತಿಗಳಲ್ಲಿ ಭೂಮಿಯನ್ನು ಬಿಟ್ಟು ಆಕಾಶದೆತ್ತರಕ್ಕೆ ಏರುವ ಸಾಹಸವನ್ನು ಮಾಡುತ್ತಿದ್ದೆ. ಏಕೆಂದರೆ ಮಹಾರಾಜರು ತಮ್ಮ ಬಂಗಾರ ದೃಷ್ಟಿಯಿಂದ ನನ್ನನ್ನು ನಿರೀಕ್ಷಿಸುತ್ತ ನಿಂತುಕೊಂಡಿರುತ್ತಿದ್ದರು. ಅವರ ಒಂದು ಕೈ ಬೆರಳು ತಮ್ಮ ಗುಂಗುರುಗುಂಗುರಾದ ತಲೆಗೂದಲಲ್ಲಾಗಲಿ ಇಲ್ಲವೆ ಗಡ್ಡದಲ್ಲಾ ಗಲಿ ಆಡುತ್ತಿರುತ್ತಿತ್ತು. ಅವರ ತುಟಿಗಳ ಮೇಲೆ ಮಂದಸ್ಮಿತಲಾಸ್ಯವಾಡುತ್ತಿತ್ತು. ಒಂದು ಕೈಯನ್ನು ನನ್ನ ಹೆಗಲಮೇಲೂರಿ ಅವರು ನಿಂತಾಗ ಅವರ ಕೊರಳಲ್ಲಿಯ ಬಂಗಾರದ ಸರ ನನ್ನ ಕಿವಿಯಲ್ಲಿ ಬಿಂಬಿಸುತ್ತಿತ್ತು. ಅವರ ಉಸಿರು ನನ್ನ ಮುಖಕ್ಕೆ ಬಡಿಯುತ್ತಿತ್ತು. ನಾನಾದರೊ ಆತ್ಮಾಭಿಮಾನದಿಂದ ಚಿತ್ರಗಳನ್ನು ಬರೆಯುತ್ತಿದ್ದೆ. ಮಹಾರಾಜರ ದರಬಾರಿನ ಅಧಿಕಾರಿಗಳೆಲ್ಲ ತುಂಬು ಹೃದಯದಿಂದ ತೆರೆದಕಣ್ಣುಗಳಿಂದ ನನ್ನನ್ನು ಹುರಿದುಂಬಿಸುತ್ತಿದ್ದರು. ಕಣ್ಣೆದುರಿಗಿಷ್ಟೆಲ್ಲ ಜನರಿದ್ದರೂ ನನ್ನ ಮನ ದಾಳದಲ್ಲಿ ನಿನ್ನ ಮುದ್ದು ಮುಖವೇ ಸದಾ ಕಂಗೊಳಿಸುತ್ತಿರುತ್ತಿತ್ತು. ನನ್ನ ಹೋರಾ ಟಕ್ಕೆಲ್ಲ ನಿನ್ನ ಮುದ್ದುಮುಖವೇ ಕೊನೆಯ ಪ್ರಶಸ್ತಿಯೆಂದಂತಿತ್ತು. ಅವು ನನ್ನ ಜೀವನದಲ್ಲಿ ಅತ್ಯಂತ ಸಂತೋಷದ ದಿನಗಳಾಗಿದ್ದವು. ಅಲ್ಲವೆ ? ನೀನು ಗಡಿಬಿಡಿ ಮಾಡಿರದಿದ್ದರೆ... ಆದದ್ದೆಲ್ಲ ಆಗಿಹೋಯಿತು. ಆದದ್ದೆಲ್ಲ ಒಳ್ಳೆಯದೆ ಆಯಿ ತೆಂದು ನನ್ನ ಮನಸ್ಸು ಹೇಳುತ್ತಿದೆ. ನನ್ನ ಜೀವನವೆಲ್ಲ ಸರಿಯಾಗದೆ ಬಂಗಾರದಂತೆ ಜೀವಂತವಾಯಿತು. ನಾಲ್ಕು ಗೋಡೆಗಳಿಂದ ಸುತ್ತುವರಿದ ಈ ಜಗತ್ತೆಂಬ ಕಾಳಿನ ಕಣಜದೊಳಗಿಂದ ಕಣ್ಣುಕಪ್ಪಡಿಯಂತಿದ್ದ ನನ್ನನ್ನು ಯಾವ ಸೂರ್ಯನೂ ಹೊರಗೆ ಹೋಗುವ ಹಾಗೆ ಆಕರ್ಷಿಸಲಾರನು. ನನ್ನ ಜೀವನದಾರಿ ಬದಲಾಯಿಸುವುದಕ್ಕೆ ಹೇಗೆ ಸಾಧ್ಯ ? ನೀನು ಕರದೆ. ನಾನು ಓಡುತ್ತ ಬಂದು ನಿನ್ನ ಹೃದಯದಲ್ಲಿ ಬೆರೆತು ಗೊಂಡೆ. ಒಂದು ವೇಳೆ ನಾನು ಅಲ್ಲಿಯೆ ಉಳಿದಿದ್ದು ಇನ್ನಷ್ಟು ಕೆಲಸ ಮಾಡಿದ್ದರೆ

ವಿಜಯಿಯಾಗುತ್ತಿದ್ದೆನೊ ಏನೊ. ಆದರೆ ಅದೆಲ್ಲವನ್ನೂ ಕಳೆದುಕೊಂಡು ಬಿಟ್ಟೆ. ಪ್ರಿಯ ಲುಕ್ರೆರಿಝಿಯಾ ನಿನ್ನ ಮುದ್ದು ಮುಖವನ್ನಾಲಂಕರಿಸಿದ ಬಂಗಾರದ ಕೂದಲನ್ನು ಸರಿಪಡಿಸಿ ನೋಡಲೆ? "ರಾಫೇಲ್‌ನ ಚಿತ್ರ ನೋಡಿದಾಗ ಜನ ಪ್ರಾರ್ಥನೆಗೈಯ್ಯುವುದಕ್ಕೆಳೆಸುತ್ತಾರೆ. ಆದರೆ ಆ್ಯಂಡ್ರಿಯಾನ ಕುಮಾರಿ ಮೇರಿಯಲ್ಲಿಯೂ ಅವನ ಹೆಂಡತಿಯೆ ಕಾಣಿಸುತ್ತಾಳೆ ಎಂದು ಮುಂತಾಗಿ ಜನ ಆಡಿಕೊಳ್ಳುತ್ತಾರೆ. ನಂತರ ಹೋಗಲಿ ಬಿಡು ಪಾಪ" ಎನ್ನುತ್ತಾರೆ. ನಾನು ನನ್ನ ಸಾನಿಧ್ಯದಲ್ಲಿಯೆ ಎರಡೂ ಚಿತ್ರಗಳ ಮೂಲ್ಯಮಾಪನಮಾಡುತ್ತೇನೆ. ನಾನದಕ್ಕೆ ಸ್ಪಷ್ಟವಾಗಿ ವಿಚಾರಿಸುವ ಪ್ರಯತ್ನಮಾಡುತ್ತೇನೆ. ನನ್ನ ಮುದ್ದು ಲುಕ್ರೆರಿಝಿಯಾ, ಇಲ್ಲಿ ಕೇಳು ದೇವರ ಸಾಕ್ಷಿಯಾಗಿ ಹೇಳುತ್ತೇನೆ. ಒಂದು ದಿನ ಸ್ವತಃ ಮೈಕೇಲ್ಯಾಂಜಿಲೊನೆ ರಾಫೇಲನಿಗೆ ಹೇಳಿದ— ಇಲ್ಲಿ ನೋಡು ರಾಫೇಲ್— ಇದು ನನಗೆ ಇಷ್ಟು ವರುಷಗಳಾದರೂ ಇನ್ನೂ ನೆನಪಿದೆ. (ಆವಾಗ ಅವನಿನ್ನೂ ಅವನ ಹರೆಯದಲ್ಲಿದ್ದು ರೋಮನಗರದ ಕೋಟೆಯ ಗೋಡೆಯ ಮೇಲೆ ಚಿತ್ರಬರೆಯುತ್ತಿದ್ದ. ರೋಮನಗರದ ಜನರೆಲ್ಲರೂ ಬಂದು ಅದನ್ನು ನೋಡಿ ಗುಣಗಾನಗೈಯ್ಯುತಿರಲು ಆತನ ಎದೆಯುಬ್ಬುತ್ತಿತ್ತು.) ಈ ಊರಿನಲ್ಲೊಬ್ಬ ದರಿದ್ರನಾದ ಕಲಾಕಾರನಿದ್ದಾನೆ. ಆತ ಯಾವಾಗಲೂ ಫ್ಲಾರೆನ್ಸ್ ನಗರದಲ್ಲಿ ತಿರುಗಾಡುತ್ತಿರುತ್ತಾನೆ. ಯಾರೂ ಆತನಿಗೆ ದರಕಾರ ಮಾಡುವುದಿಲ್ಲ. ಆದರೂ ಮಹಾರಾಜರುಗಳು ಮತ್ತು ಧರ್ಮಗುರುಗಳ ಒತ್ತಾಯದ ಮೇರೆಗೆ ಆತ ಚಿತ್ರ ಬರೆಯಲು ಆರಂಭಿಸಿದನೆಂದರೆ ಅವನ್ನು ನೋಡುತ್ತ ನಿಂತ ನಿನ್ನಂಥವನಿಗೂ ಹಣೆಯಲ್ಲಿ ಬೆವರು ಸುರಿಯಲಾರಂಭಿಸುತ್ತದೆ. ಎಂದು ಅಂಥ ಸುಪ್ರಸಿದ್ಧ ರಾಫೇಲ್‌ನ ಚಿತ್ರಗಳನ್ನು ನನ್ನ ಚಿತ್ರಗಳೊಂದಿಗೆ ಹೋಲಿಸುತ್ತಾರೆ ಜನ. ಆದರೂ ಅಂಥ ಮಹಾ ಚಿತ್ರಕಾರನ ಕೃತಿಗಳಲ್ಲಿಯೂ ನಾನು ತಪ್ಪುಗಳನ್ನು ತೋರಿಸಬಲ್ಲೆ. ಅಲ್ಲಿ ನೋಡು ಆತ ಬರೆದ ಕೈ ಹೇಗೆ ಡೊಂಕಾಗಿದೆ. ನನಗೆ ಬಣ್ಣವನ್ನಿಲ್ಲಿ ಕೊಡು, ಅದನ್ನು ಹೇಗೆ ತಿದ್ದಬೇಕೆಂಬುದನ್ನು ತೋರಿಸುತ್ತೇನೆ. ಅದರೆ ಅದರಲ್ಲಿಯ ಆತ್ಮಸೌಂದರ್ಯವೂ ರಾಫೇಲನದಾಗಿಯೆ ಉಳಿಯುತ್ತದೆ. ಏಕೆಂದರೆ ಅದನ್ನು ತಿದ್ದುವಷ್ಟು ಶಕ್ತಿ ನನ್ನಲ್ಲಿಲ್ಲ. ಇದನ್ನೆಲ್ಲ ಅಳುಕಿಸಿಬಿಡು. ಆದರೂ ಆತ ಹೇಳಿದ ಮಾತು ನಾನು ಮರೆಯಲಾರೆ (ಅವನ ಹೆಸರು ಮೈಕೇಲೆಂಜೆಲೊ ಎಂದು ಹೇಳಿದೆನಲ್ಲ ಮರೆತೇ ಬಿಟ್ಟೆಯಾ ?) ಅಂಥ ಸುಸಂಧಿ ಸಿಕ್ಕಿದ್ದರೆ ಎಷ್ಟೊಂದು ಚೆನ್ನಾಗಿರುತ್ತಿತ್ತು ? ನೀನು ನಗುತ್ತಿದ್ದಿಯಾ ? ಈಗಾಗಲೆ ಒಂದು ತಾಸು ವೇಳೆ ಕಳೆದುಹೋಗಿದೆ. ಮತ್ತೆ ನಗುತ್ತಿಯಾ ? ಪ್ರತಿದಿನ ರಾತ್ರಿ ನೀನು ಹೀಗೆ ನನ್ನ ಮಗ್ಗುಲಲ್ಲಿ ಕುಳಿತುಕೊಂಡಿದ್ದರೆ ನಾನು ಇನ್ನೂ ಹೆಚ್ಚು ಪರಿಶ್ರಮದಿಂದ ಕೆಲಸಮಾಡಬಲ್ಲೆ ಅಹುದಲ್ಲವೇ ? ಯಾಕೆ ಗೊತ್ತೆ ? ಹೆಚ್ಚು ಹೆಚ್ಚು ಗಳಿಸಿದೆನೆಂದರೆ ಹೆಚ್ಚು ಹೆಚ್ಚು ಹಣ ತಂದು ನಿನ್ನ ಕೈಯಲ್ಲಿ ಇಡಬಲ್ಲೆ. ಅಲ್ಲಿ ನೋಡು ಈಗಾಗಲೆ ಕತ್ತಲಾಗಿದೆ. ಆಕಾಶದಲ್ಲಿ ಚುಕ್ಕಿಗಳು ಮೂಡಿವೆ. ಮೊರೆಲೊ ಪರ್ವತ ಕತ್ತಲಲ್ಲಿ ಕಾಣದಾಗಿದೆ. ದಾರಿಯಲ್ಲಿಯ ದೀಪ

ಗಳಲ್ಲಿ ಗೋಡೆ ಕಾಣುತ್ತಿದೆ. ಗೂಗೆಗಳು ಕೂಜನ ಗೈಯಲಾರಂಭಿಸಿವೆ. ಒಳಗಿನ ಕೋಣೆಯಲ್ಲಿ ಹೋಗಿ ಕೂಡೋಣ. ಬಾ ಪ್ರಿಯೆ. ಸಂತೋಷದಿಂದ ಇರಲೆಂದು ಕಟ್ಟಿಸಿದ ಮನೆಯೆಮಗೆ ದುಃಖದ ಮನೆಯಾಗಿ ಬಿಟ್ಟಿದೆ. ದೇವರು ನ್ಯಾಯವಾದಿಯಾಗಿದ್ದಾನೆಂದೆನಿಸುತ್ತದೆ. ಫ್ರಾನ್ಸಿಸ್ ಮಹಾರಾಜರು ನನ್ನಪರಾಧವನ್ನು ಕ್ಷಮಿಸಿರಬಹುದು. ಆದರೂ ರಾತ್ರಿಯೆಲ್ಲ ಚಿತ್ರಗಳ ಮೇಲೆ ಕಾಣುತ್ತಿರುವ ಬಂಗಾರದ ಗೋಡೆಯನ್ನು ದಣಿದ ಕಣ್ಣುಗಳಿಂದ ನೋಡಿದಾಗ ಇಟ್ಟಂಗಿಗಳು ಸಿಮೆಂಟಿನಿಂದಲ್ಲದೆ ಬಂಗಾರದಿಂದ ಜೋಡಿಸಲ್ಪಟ್ಟಿದ್ದು ಸ್ಪಷ್ಟವಾಗಿ ಕಾಣಿಸುತ್ತದೆ. ಅದೂ ಅವನಿಂದ ನಾನು ಹಾರಿಸಿಕೊಂಡು ತಂದ ಬಂಗಾರದಿಂದಲೆ ಮಾಡಿದ್ದು. ಬಾ ಪ್ರಿಯೆ ನಾವಿಬ್ಬರೂ ಪರಸ್ಪರ ಪ್ರೀತಿಸೋಣ. ನೀನೀಗ ಹೋಗಲೇಬೇಕೆ ? ನಿನ್ನ ಗೆಳೆಯ ಮತ್ತೆ ಬಂದು ಹೊರಗೆ ನಿಂತಿದ್ದಾನೆಯೆ ? ಆತ ನಿನ್ನೊಬ್ಬಳನ್ನೆ ಖಾಸಗಿಯಾಗಿ ನೋಡಲೆಬೇಕೆ. ಸಾಲ ವಸೂಲಿಗಾಗಿ ಬಂದಿದ್ದಾನೆಯೆ ? ನೀನದಕ್ಕಾಗಿಯೆ ಆತನನ್ನು ನೋಡಿ ನಕ್ಕೆಯೇನು ? ಹಾಗಿದ್ದರೆ ನನ್ನನ್ನೂ ನಿನ್ನ ಮುಗುಳ್ನಗೆಯಿಂದಲೆ ಕೊಂಡು ಕೊಂಡು ಬಿಡು. ಇನ್ನೂ ಹೆಚ್ಚು ನಗೆಯನ್ನು ಖರ್ಚುಮಾಡಬಲ್ಲೆಯಾ ? ನನ್ನ ಹತ್ತಿರ ಉಳಿದಿದ್ದ ನನ್ನ ಕೈ ಕಣ್ಣು ಹೃದಯಗಳ ಸಹಾಯದಿಂದ ಬರೆದ ಚಿತ್ರಗಳೆ ನನ್ನ ಸಾಮಗ್ರಿ. ಅದಕ್ಕೇನಾದರೂ ಬೆಲೆಯುಂಟೆ ? ನಾನದಕ್ಕೆ ನನ್ನ ಕಲ್ಪನೆಯ ಹಣ ಕೊಡುತ್ತೇನೆ. ಉಳಿದ ಈ ಸಾಯಂಕಾಲದ ಸಮಯವೆಲ್ಲ ಕುಳಿತು ನಾನು ಫ್ರಾನ್ಸದೇಶಕ್ಕೆ ಮರಳಿಹೋಗಿದ್ದರೆ ಎಷ್ಟೊಂದು ಚಿತ್ರಗಳನ್ನು ಬರೆಯಬಹುದಿತ್ತೆಂದಾಲೋಚಿಸುತ್ತೇನೆ. ನನ್ನನ್ನು ಮೈಗಳ್ಳನೆಂದು ಕರೆಯುತ್ತಿಯಾ ? ಇನ್ನು ಒಂದೇ ಒಂದು ಚಿತ್ರವನ್ನು ಅಂದರೆ ಕುಮಾರಿ ಮೇರಿಯ ಮುಖವನ್ನು ಬರೆಯಬೇಕೆಂದಿದ್ದೇನೆ. ಈ ಸಾರೆ ಅದರಲ್ಲಿ ನಿನ್ನ ಮುಖದ ಹೊಳಪು ಎಷ್ಟೂ ಬರುವ ಹಾಗಿಲ್ಲ. ಆದರೂ ಆ ಚಿತ್ರದ ಬೆಲೆ ಕಟ್ಟುವ ಮೈಕೇಲ್ಯಾಂಜೆಲೊನಂಥ ಮಹಾಕಲಾಕಾರರು ನನ್ನ ಬಗೆಗೆ ಮಾತನಾಡುವಾಗ ನೀನು ನನ್ನ ಮಗ್ಗುಲಿಗೇ ಕುಳಿತು ಕೇಳುತ್ತಿರಬೇಕು. ಕೇಳುತ್ತಿಯಾ ? ನಿನ್ನ ಗೆಳೆಯನನ್ನು ನೀನು ನಾಳೆ ಸಮಾಧಾನಗೊಳಿಸಬಹುದು. ಈಗ ಕೈಯಲ್ಲಿದ್ದ ಕೆಲಸವನ್ನು ಮುಗಿಸಿಕೊಡುವೆ. ಆತ ಅದಕ್ಕೂ ಒಪ್ಪದಿದ್ದರೆ ಅವನ ಮನೆಗೆ ಹೋಗಿ ಇನ್ನೊಂದೆರಡು ಚಿತ್ರಗಳನ್ನು ತೆಗೆದುಕೊಟ್ಟು ಬರುತ್ತೇನೆ. ನಿನ್ನೀ ಗೆಳೆಯನ ಸಾಲವನ್ನು ಮುಟ್ಟಿಸಲು ಇಷ್ಟೆಲ್ಲ ಚಿತ್ರಗಳು ಸಾಕಾಗಬಹುದು. ನಿನ್ನ ಸಲುವಾಗಿ ಈ ಹದಿಮೂರು ಸ್ಕುಡಿ ರೊಕ್ಕವನ್ನು ಗಳಿಸುವುದಕ್ಕಿಂತ ಹೆಚ್ಚಿನ ಸಂತೋಷದ ವಿಷಯ ನನಗಾವುದಿದೆ ಹೇಳು ? ನಾನು ನಿನ್ನ ಸಲುವಾಗಿ ಇಷ್ಟೆಲ್ಲ ಮಾಡುವುದನ್ನು ನೋಡಿದರೆ ನಿನಗೆ ಸಂತೋಷವಾಗುವುದಿಲ್ಲವೆ ? ನಿನ್ನನ್ನು ಸಂತೋಷಗೊಳಿಸುವುದಕ್ಕಾಗಿ ನಿನ್ನ ಗೆಳೆಯನೇನು ಮಾಡುತ್ತಾನೆ ಹೇಳುವೆಯಾ ?.

ಈ ರಾತ್ರಿ ನಾನು ವೃದ್ಧಾಪ್ಯದಂತೆ ಶಾಂತನಾಗಿದ್ದೇನೆ. ನಾನು ನನ್ನ ಮಾಡಿದ ಕಾರ್ಯಗಳ ಬಗ್ಗೆ ಪಶ್ಚಾತ್ತಾಪ ಪಡಬೇಕಾಗುವುದಿಲ್ಲ. ಅದರಂತೆಯೆ ನನ್ನ ಜೀವನದ

ರೀತಿಯನ್ನು ಬದಲಾಯಿಸುವುದೂ ಇಲ್ಲ. ನನ್ನ ಗತಜೀವನವೀಗಾಗಲೆ ಒಂದು ರೂಪವನ್ನು ಧರಿಸಿದ ಮೇಲೆ ಅದನ್ನೇಕೆ ಬದಲಾಯಿಸಬೇಕು? ನಾನು ಫ್ರಾನ್ಸಿಸ್ ಮಹಾರಾಜರಿಗೆ ಮೋಸಮಾಡಿದ್ದೇನೊ ನಿಜ. ಅವರ ಬೊಕ್ಕಸದ ಹಣವನ್ನು ನಾನು ದುರುಪಯೋಗಪಡಿಸಿಕೊಂಡು, ಅಂದರೆ ಅವರಿಗೆ ಹೇಳದೆ ಕೇಳದೆ ಈ ಊರಿಗೆ ಓಡಿ ಬಂದು ಈ ಮನೆಯನ್ನು ಕಟ್ಟಿಸಿಕೊಂಡು ಪಾಪಗೈದೆ. ನನ್ನ ತಂದೆ ತಾಯಿಗಳು ಬಡತನದಿಂದ ಸಾಯುವಂತೆ ನಿರ್ಲಕ್ಷಿಸಿದೆ. ಪ್ರಿಯೆ ಒಂದು ವೇಳೆ ನಾನು ಮೊದಲಿನಿಂದಲೂ ಸ್ವತಃ ಶ್ರೀಮಂತನಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಅಲ್ಲವೆ ? ನೋಡು ಶ್ರೀಮಂತನಾಗಬೇಕೆಂದು ನಾನು ಎಷ್ಟೊಂದು ಹೋರಾಡಬೇಕಾಯಿತು. ನಾವು ನಮ್ಮಿಬ್ಬರ ಕುಂದುಕೊರತೆಗಳನ್ನು ಪರಸ್ಪರ ತಾಳಿಕೊಳ್ಳೋಣ. ನನ್ನ ತಂದೆತಾಯಿಗಳು ಬಡತನದಲ್ಲಿ ಹುಟ್ಟಿ, ಬಡತನದಲ್ಲಿಯೆ ಬೆಳೆದು ಕೊನೆಗೂ ಬಡತನದಲ್ಲಿಯೆ ಸತ್ತು ಹೋದರು. ನಾನಾದರೂ ನನ್ನ ಜೀವನದಲ್ಲಿ ಸಾಕಷ್ಟು ಪರಿಶ್ರಮಪಟ್ಟರೂ ದುಡ್ಡನ್ನುಗಳಿಸಲಾಗಲಿಲ್ಲ. ನನ್ನ ನಂತರ ಯಾರಾದರೊಬ್ಬ ತರುಣ ಮುಂದೆ ಬಂದು ನನ್ನ ಮಾದರಿಯ ನೂರೆರಡುನೂರು ಚಿತ್ರಗಳನ್ನೂ ಬರೆಯುವ ಹಾಗಿದ್ದರೆ ಬರೆಯಲಿ. ಆವಾಗ ನನ್ನ ಕುಂದುಕೊರತೆಗಳೆಲ್ಲ ತುಂಬಿಕೊಂಡು ಸಮತ್ವವೇರ್ಪಡಬಹುದು ಕಲೆಯಲ್ಲಿ. ಅಹುದು ಈ ರಾತ್ರಿ ನನಗನ್ನಿಸುತ್ತಿದೆ ನೀನು ನನ್ನನ್ನು ಸಾಕಷ್ಟು ಚೆನ್ನಾಗಿ ಪ್ರೀತಿಸಿದಿ ಎಂದು. ನನಗಷ್ಟೆ ಸಾಕು. ಇದಕ್ಕಿಂತ ಹೆಚ್ಚಿನದೇನು ಬೇಕು ಮನುಷ್ಯನಿಗೆ ? ಸ್ವರ್ಗದಲ್ಲಿ ನನಗೆ ಇನ್ನೂ ಹೆಚ್ಚು ಹೆಚ್ಚು ಇನ್ನೂ ಹೊಸ ಹೊಸ ಅವಕಾಶಗಳು ದೊರೆತರೂ ದೊರೆಯಬಹುದು. ಹೊಸ ಜೆರೂಸಲೆಮ್‌ದ ನಾಲ್ಕೂ ಗೋಡೆಗಳ ಪಕ್ಕದಲ್ಲಿ ಗಂಧರ್ವ ಕಿಂಪುರುಷರ ಸಮೂಹದ ಮಧ್ಯದಲ್ಲಿ ಲಿಯೊನಾರ್ಡೋ ವಿನ್ಸಿ, ರಾಫೇಲ್ ಮತ್ತು ಮೈಕೇಲೆಂಜೆಲೊ ಅವರ ಸಮಾನ ಕೂತಿರಲು ನನಗೂ ಒಂದು ಸಿಂಹಾಸನ ಸಿಗಬಹುದು. ಆ ಉಳಿದ ಮೂವರಲ್ಲಿ ಯಾರಿಗೂ ಹೆಂಡರಿರಲಿಲ್ಲ. ನನಗೆ ಮಾತ್ರ ನನ್ನ ಹೆಂಡತಿ ಇದ್ದಾಳೆ. ಆದರೂ ಅವರು ಕಲೆಯಲ್ಲಿ ನನ್ನನ್ನು ಮೀರಿಸುತ್ತಾರೆ. ಏಕೆಂದರೆ ನಾನಿನ್ನೂ ಲುಕ್ರೆಝಿಯಾಳ ಮೋಹಪಾಶದಲ್ಲಿರುತ್ತೇನೆ. ಪ್ರಿಯೆ, ಆ ನಿನ್ನ ಗೆಳೆಯ ಅಲ್ಲಿ ನಿಂತುಕೊಂಡು ಇನ್ನೂ ಸಿಳ್ಳು ಹಾಕುತ್ತಲೆ ಇದ್ದಾನೆ. ಹೋಗು ಮಾತನಾಡಿಸಿ ಬಾ "

ಫ್ರಾಲಿಪ್ಪೊ ಲಿಪ್ಪಿ :

ಫ್ರಾಲಿಪ್ಪೊ ಲಿಪ್ಪಿ ಎಂಬುದು ಬ್ರೌನಿಂಗನ ಅತ್ಯಂತ ಪ್ರಸಿದ್ಧವಾದ ನಾಟಕೀಯಾತ್ಮಗೀತಗಳಲ್ಲಿ ಒಂದು. ಇಲ್ಲಿಯೂ ಬ್ರೌನಿಂಗನು ಒಬ್ಬ ಕಲಾಕಾರನನ್ನು ತನ್ನ ಕಾವ್ಯವಸ್ತುವನ್ನಾಗಿ ಬಳಸಿಕೊಂಡಿದ್ದಾನೆ. ಫ್ರಾಲಿಪ್ಪೊ ಲಿಪ್ಪಿ ಎಂಬ ಕಲಾಕಾರನ ಜೀವನ ದೃಷ್ಟಿಗೂ ಕವಿಯ ಜೀವನ ದೃಷ್ಟಿಗೂ ಬಹಳಷ್ಟು ಸಾಮ್ಯವಿದೆ. ಇಲ್ಲಿಯ ನಾಯಕ ಕವಿಯ ವಿಚಾರಗಳನ್ನು ಪ್ರತಿಧ್ವನಿಸುತ್ತಿದ್ದಾನೆಂದು ಹೇಳಬಹುದು, ಎಲ್ಲ

ನಾಟಕೀಯಾತ್ಮಗೀತಗಳಂತೆ ಈ ಕವನವು ಯಾವ ಹಿನ್ನೆಲೆಯನ್ನೂ ಓದುಗರಿಗೆ ಒದಗಿಸದೆ ಒಮ್ಮೆಲೆ ಒಂದು ಸನ್ನಿವೇಷದ ಮಧ್ಯದಲ್ಲಿ ನಮ್ಮನ್ನೊಯ್ದು ನಿಲ್ಲಿಸುತ್ತದೆ. ಕವನ ಪ್ರಾರಂಭವಾದಾಗ ನಾವು ನೋಡುವುದು ಲಿಪ್ಪೊ ಎಂಬ ತರುಣ ಪೋಲಿಸರಿಂದ ಹಿಡಿಯಲ್ಪಟ್ಟಿದ್ದಾನೆ. ಪೋಲಿಸರು ಅವನಿಗೆ ಒಂದೇ ಸವನೆ ಪ್ರಶ್ನೆ ಕೇಳುತ್ತಿದ್ದಾರೆ. ಆಗ ಲಿಪ್ಪೊ ತನ್ನ ಕಥೆಯನ್ನೆಲ್ಲ ಅವರೆದುರಿಗೆ ತೋಡಿಕೊಳ್ಳುತ್ತಾನೆ. ಆತ ಹೇಳುವುದನ್ನು ಕೇಳಿ : "ನಾನೊಬ್ಬ ಬಡವ. ನನ್ನ ಹೆಸರು ಲಿಪ್ಪೊ ಎಂದಾಗಿದೆ. ನೀವು ನಿಮ್ಮ ದೀಪವನ್ನು ನನ್ನ ಮುಖಕ್ಕೆ ಹಿಡಿಯಬೇಡಿರಿ. ದಯಮಾಡಿ ನಿಮಗೇಕಿಷ್ಟು ಆಶ್ಚರ್ಯವಾಗಬೇಕು ? ಸ್ವಾಮಿಯೊಬ್ಬನನ್ನು ನೋಡಿದುದಕ್ಕೆಂದೆ ? ಓ ಈಗಾಗಲೆ ಮಧ್ಯರಾತ್ರಿಯಾಗಿದೆ. ನೀವು ನಿಮ್ಮ ಪಹರೆಯನ್ನು ಮಾಡುತ್ತಿದ್ದೀರಿ. ಈ ದಾರಿಯ ಮೂಲೆಯಲ್ಲಿ ಬಂದು ನನ್ನನ್ನು ಹಿಡಿದಿದ್ದೀರಿ. ಇಲ್ಲಿ ನಗೆಮೊಗದ ಸುಂದರಿಯರು ಬಾಗಿಲನ್ನು ತೆರೆದಿಟ್ಟಿದ್ದಾರೆ. ನಾನು ವಾಸವಾಗಿರುವುದು ಕಾರ್ಮೆನ್ ದೇವಾಲಯದಲ್ಲಿ. ಬೇಕಾದರೆ ನೀವು ಹೋಗಿ ಅದನ್ನು ಹುಡುಕಿರಿ. ನಿಮಗಷ್ಟೊಂದು ಉತ್ಸಾಹವಿದ್ದರೆ ದಾರಿಯಲ್ಲಿ ಯಾವ ಗಂಡಿಲಿ ತನ್ನ ಬಿಲವನ್ನು ಬಿಟ್ಟು ಮತ್ತೊಂದು ಬಿಲದಲ್ಲಿ ಹೊಕ್ಕು ಹೆಣ್ಣಿಲಿಯೊಂದಿಗೆ ಲಲ್ಲೆಗೈಯ್ಯುತ್ತಿದೆ ಎಂಬುದನ್ನು ಪತ್ತೆಹಚ್ಚಿ ಅದನ್ನು ಹೊರಗೆ ಹಾಕಿರಿ. ಅಲ್ಲಿಯ ಹೆಣ್ಣಿಲಿ ಗಂಡಿಲಿಗೆ ಬೇಜಾರು ಕಳೆಯಲು ಜೋಡಿಯಾಗಿ ಬಂದಿದೆ ಅಷ್ಟೆ. ನಿಮಗೆ ನಿಮ್ಮ ಮೇಲಧಿಕಾರಿಗಳೆಂದರೇನೆಂಬುದು ಗೊತ್ತೆ ? ನಿಮ್ಮ ಕೈಗಳನ್ನು ಹಿಂತೆಗೆದುಕೊಳ್ಳಿರಿ. ನಾನು ಯಾರು ಏನು ಎಂತು ಎನ್ನುವುದನ್ನು ತಿಳಿದುಕೊಳ್ಳಿರಿ. ಈ ಮೂರು ಬೀದಿಗಳನ್ನು ದಾಟಿ ಆ ಕಡೆ ಮಾತ್ರ ಮೂಲೆಗೆ ಇರುವ ಮೆಡಿಸಿ ನಗರದ ಕ್ಯಾಸಿಮೊ ಎಂಬವರ ಮನೆಯಲ್ಲಿ ವಾಸವಾಗಿದ್ದೇನೆ. ನನ್ನ ಕುತ್ತಿಗೆಯನ್ನು ಇಷ್ಟು ಬಿಗಿಯಾಗಿ ಹಿಡಿದ ನಿಮ್ಮನ್ನೆಂದು ಗಲ್ಲಿಗೇರಿಸುವುರೆಂಬುದನ್ನು ಬಂದು ನನಗೆ ಹೇಳಿರಿ. ನೋಡಿ ನಿಮ್ಮ ಕೈಕೆಳಗಿನಧಿಕಾರಿಗಳು ನಿಮ್ಮ ಘನತೆಗೆ ತಕ್ಕಂತೆಯೆ ನಡೆದುಕೊಂಡಿದ್ದಾರೆ. ನಾನಾದರೂ ದಾರಿಯಲ್ಲಿ ಬಿದ್ದ ಮೀನಿನಂತಿದ್ದೇನೆ. ದಾರಿಯನ್ನು ಕಸಗೂಡಿಸುವಾಗ ಆಕಸ್ಮಾತ್ತಾಗಿ ಕೈಗೆ ಸಿಕ್ಕ ನನ್ನನ್ನು ನಿನ್ನ ಕೈಕೆಳಗಿನಧಿಕಾರಿಗಳು ಏನೊ ಬಹುಮಾನ ಸಿಕ್ಕಹಾಗೆ ತಿಳಿದುಕೊಂಡಿದ್ದಾರೆ. ಅಲ್ಲಿ ನಿಂತವನಾದರೂ ಸಾಕ್ಷಾತ್ ಜೂಡಾಸ್‌ನಾಗಿದ್ದಾನೆ. ಅವನ ಮುಖವು ಜೂಡಾಸನ ಮುಖದಂತೆಯೆ ಇದೆ. ಯಾಕೆ ಸರ್ ನೀವು ಕೈಗಳನ್ನು ಅಡ್ಡ ಉದ್ದ ಮಾಡುತ್ತೀರಿ. ನನಗೇನು ಸಿಟ್ಟಿಲ್ಲ. ನಿಮ್ಮ ಕೆಳಗಿನಧಿಕಾರಿಗಳಿಗೆ ಈ ಫ್ಲೋರಿನ್ ಸುರೆಯನ್ನು ಕುಡಿದು ನಾನಿದ್ದ ಮನೆಯವರಿಗೆಲ್ಲ ಶುಭವಾಗಲೆಂದು ಹಾರೈಸಲು ಹೇಳಿದ. ಅಂದರೆ ಎಲ್ಲವೂ ಸರಿಹೋಗುತ್ತೆ. ಈ ಕಡೆ ನಿಂತವನ ಮುಖವನ್ನು ಕಂಡರೆ ನನಗೆ ಬಹಳ ಪ್ರೀತಿ. ಈತ ತನ್ನ ಕೈಯಲ್ಲಿ ಕೋಲು ಮತ್ತು ಕಂದೀಲನ್ನು ಹಿಡಿದುಕೊಂಡು ಮಗ್ಗುಲು ನಿಂತವನನ್ನು ಮೊಣಕೈಯಿಂದ ತಿವಿಯುತ್ತಿದ್ದಾನೆ. ಈತನು ಕೋಲು ಮತ್ತು ಕಂದೀಲುಗಳನ್ನು ಹಿಡಿದಿರುವುದರಿಂದ ಅವು

ಜಾನ್ ಬ್ಯಾಪ್ಟಿಸ್ಟನ ರುಂಡ ಮತ್ತು ಇನ್ನೂ ರಕ್ತ ಆರಿರದ ಹತಾರಗಳಂತೆ ಕಾಣು ತ್ತಿವೆ. ಬಳಪದ ತುಂಡೊಂದನ್ನು ಅಥವಾ ಇದ್ದಲಿಯ ಚೂರೊಂದನ್ನು ಹಿಡಿದು ಗೆರೆಗಳನ್ನು ಎಳೆದು ಚಿತ್ರ ಬರೆಯುವಂಥ ಸುಸಂಧಿಯಂತೂ ನಿನಗೆ ಬಂದಹಾಗೆ ಕಾಣವುದಿಲ್ಲ. ಅಂದ ಮೇಲೆ ಬೇರೆಯುವರಾದರೂ ಬರೆದುದನ್ನು ನೋಡಬಯಸು ತ್ತೀಯಾ ? ನಿಜ ಹೇಳಬೇಕೆಂದರೆ ನಾನೊಬ್ಬ ಚಿತ್ರಕಾರ. ಸಹೋದರ ಲಿಸೆಪ್ಪೊ ಬರೆದ ಚಿತ್ರಗಳನ್ನು ಮೇಲೆ ಕೆಳಗೆ ನೋಡಿದಾಗ ನಿಮಗವು ಹಿಡಿಸುವವಲ್ಲವೆ ? ನಿಮ್ಮ ಕಣ್ಣುಗಳಲ್ಲಿ ಸರಿಯಾದ ಮಿಂಚು ಕಂಡೆ. ಏಕೆಂದರೆ ಮೊದಲ ನೋಟದಲ್ಲಿಯೇ ನಾನು ನಿಮ್ಮ ಕಳೆಯನ್ನು ಕಟ್ಟಬಲ್ಲೆ. ಬನ್ನಿ ನಾವಿಬ್ಬರೂ ತುದಿಗುಂಡಿಯ ಮೇಲೆ ಕುಳಿತು ನಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳೋಣ. ಈಗಲಾದರೂ ವಸಂತ ಮಾಸ ಬಂದಿದೆಯಾದ್ದರಿಂದ ರಾತ್ರಿಯಲ್ಲಿ ಜನರಿಗೆಲ್ಲ ವಸಂತಗಾನ ಹಾಡಿ ಕುಣಿದು ತಿರುಗಾಡಬೇಕೆನಿಸುತ್ತದೆ. ನಾನಂತೂ ಕಳೆದ ಮೂರು ವಾರಗಳಿಂದ ನನ್ನ ಕೋಣೆ ಯಲ್ಲಿಯೆ ಕೂತು ಸಾಧುಗಳ, ಸಾಧುಗಳ, ಬರೀ ಸಾಧುಗಳ ಚಿತ್ರ ಬರೆದು ಬರೆದು ವಾಕರಿಕೆ ಬಂದುಬಿಟ್ಟಿದೆ. ರಾತ್ರಿಯೆಲ್ಲ ಚಿತ್ರ ಬರೆಯುವುದು ನನ್ನಿಂದಾಗಲಿಲ್ಲ. ಆದ್ದರಿಂದ ತಂಗಾಳಿಯನ್ನು ಸೇವಿಸಲು ಕಿಟಕಿಯ ಹೊರಗೆ ಹಣಕಿ ಹಾಕಿ ನಿಂತೆ. ಅಷ್ಟರಲ್ಲಿ ಜನರ ಹೆಜ್ಜೆಗಳ ಸದ್ದು, ನಾರಂಗಿಯ ನಾದ, ಜನರು ಹಾಡುವ ಪಲ್ಲವಿ, ನಗೆ, ಇವೆಲ್ಲವೂ ಕೇಳಿಸತೊಡಗಿದವು.

ಪೊರಕೆಯ ಹೂವೆ
ಎನ್ನ ಪ್ರೀತಿಯನ್ನಳಿಸಿಬಿಡು
ಈ ಭೂಮಿಯೆಂಬುದೊಂದು ಸಮಾಧಿ
ಕ್ವಿನ್ಸದ ಹೂವೆ ಲೀಸಾಳನ್ನು ಕಳಿಸಿಬಿಡು.
ಜೀವನದಲ್ಲೇನರ್ಥವಿಹುದು
ಥೈಮ್‌ದ ಹೂವೆ

—ಎಂದು ಹಾಡುವುದು ಕೇಳಿಸಿತು. ಹೀಗೆ ಅವರೆಲ್ಲರೂ ಸುತ್ತು ಹೊರಟರು. ಅವರೆಲ್ಲರೂ ಆ ರಸ್ತೆಯ ಮೂಲೆಗೆ ಹೋಗಿ ಹೊರಳುವಷ್ಟರಲ್ಲಿಯೇ ನನ್ನ ಕಿಟಕಿಯ ಕೆಳಗೆ ಮಂದವಾದ ಬೆಳದಿಂಗಳಿನಲ್ಲಿ ಮೂರು ಮುದ್ದು ಮೊಲಗಳು ನೆಗೆಯುತ್ತ ಬಂದಂತಾಯಿತು. ದಿಟ್ಟಿಸಿ ನೋಡುತ್ತೇನೆ. ಅಲ್ಲಿದ್ದವು ಮೊಲಗಳಲ್ಲ ಆದರೆ ಮೂರು ಬಳಕುವ ಸುಂದರಾಂಗಿಯರು, ಅವಳಲ್ಲೊಬ್ಬಳು ತನ್ನ ಮುಖವನ್ನು ಮೇಲೆತ್ತಿ ನನ್ನ ಕಡೆಗೆ ದಿಟ್ಟಿಸಿನೋಡಿದಳು. ರಕ್ತಮಾಂಸಗಳಿಂದ ಮಾಡಿದ ದೇಹ ವಲ್ಲವೆ ನನ್ನದು ? ನನ್ನ ಮೈಯೆಲ್ಲ ಜುಮ್ಮೆಂದಿತು. ಸರಿ ನನ್ನ ಚಿತ್ರವೆಲ್ಲ ಹಾಳಾಗಿ ಹೋಯಿತು. ಕಿಡಕಿಯ ಪರದೆ, ಹಾಸಿಗೆಯ ಹೊದಿಕೆ ಮೊದಲಾದವ ನ್ನೆಲ್ಲ ಒಂದಕ್ಕೊಂದು ಬಿಗಿದು ಕಿಟಕಿಯಿಂದ ಜೋತಾಡುತ್ತ ಕೆಳಗಿಳಿದೆ. ಆ ಚೆಲುವೆ

ಯರ ಬೆನ್ನು ಹತ್ತಿಹೊರಟೆ. ಸೇಂಟ್‌ಲಾರೆನ್ಸ್‌ನ ಚರ್ಚಿನ ಹತ್ತಿರ ನಾನು ಆ ಕೋಮಲಾಂಗಿಯರ ಜೊತೆ ಸುಖವನ್ನನುಭವಿಸಿದೆ. ಗುಲಾಭಿಯ ಹೂವೆ ಎಷ್ಟು ಸಂತೋಷ ಗೊತ್ತಾದರೇನು ಎಲ್ಲರಿಗೆ ? ಅನಂತರ ನಾನು ಮನೆಗೆ ನುಸುಳಿ ಸ್ವಲ್ಪ ನಿದ್ದೆಮಾಡಬೇಕೆಂದು ಮಾಡಿದ್ದ ಅಂದರೆ ಮುಂಜಾನೆದ್ದು ದೊಡ್ಡ ದುಂಡಾದ ಕಲ್ಲಿನಿಂದ ತನ್ನ ಮುದಿ ಎದೆಯನ್ನು ಜಜ್ಜಿಕೊಳ್ಳುತ್ತಿರುವ ಜೆರೊಮ್‌ನ ಚಿತ್ರವನ್ನು ಬಿಡಿಸಬೇಕೆಂದು ಯೋಚನೆ ಮಾಡುತ್ತಿದ್ದೆ. ಅಷ್ಟರಲ್ಲಿ ನೀವು ಬಂದು ನನ್ನನ್ನೆಳೆದು ನಿಲ್ಲಿಸಿದ್ದೀರಿ ಇಲ್ಲಿ. ನನ್ನ ಬೋಳಿಸಿದ ತಲೆಯನ್ನು ನೋಡಿ ನಾನೊಬ್ಬ ಸಾಧುವೆಂದು ತಿಳಿದು ನಿಮಗೆ ಆಶ್ಚರ್ಯವಾಗಿದೆಯಲ್ಲವೇ ? ಅದೇ ನನಗೂ ಸಮಸ್ಯೆಯಾಗಿದೆ. ಒಂದು ವೇಳೆ ನಮ್ಮ ಕ್ಯಾಸಿಮೊ ಒಡೆಯರು ಇಲ್ಲಿ ಬಂದುಬಿಟ್ಟರೆ ಮುಗಿಯಿತು ನನ್ನ ಬಾಯಿಯೇ ಸತ್ತುಹೋಗುತ್ತದೆ. ಆದರೆ ನಾನೊಬ್ಬ ಸಾಧು ಈಗ. ನಾನು ಹೀಗೇಕೆ ಪಶುವಾದೆ ಎಂಬುದನ್ನು ಕೇಳುತ್ತೀರಾ ? ನಾನಿನ್ನೂ ಸಣ್ಣ ಕೂಸಿದ್ದಾಗಲೇ ನನ್ನ ತಾಯಿ ನನ್ನನ್ನಗಲಿ ಹೋದಳಂತೆ. ನನ್ನ ತಂದೆಯೂ ತೀರಿಹೋದನಂತರ ನಾನು ಬೀದಿ ಪಾಲಾದೆ. ಉಪವಾಸದ ಜೀವನಸಾಗಿಸಿದೆ. ಒಂದೆರಡು ವರುಷ ಅತ್ತಿ–ಹಣ್ಣಿನ ಸಿಪ್ಪೆ, ಕಲ್ಲಂಗಡಿಯಚೂರು ತೊಗಟೆ, ಕೊಪ್ಪಗಳನ್ನೆಲ್ಲ ಬೀದಿಯಿಂದಾರಿಸಿಕೊಂಡು ತಿಂದು ಬದುಕಿದೆ. ಒಂದು ದಿನ ಬರ್ಫ ಬೀಳುತ್ತಿದ್ದಾಗ ನನ್ನ ಹೊಟ್ಟೆ ನಿನ್ನ ಹ್ಯಾಟಿನಂತೆ ಬರಿದಾದಾಗ ಗಾಳಿಗೆ ಹಾರಿ ಧೊಪ್ಪನೆ ಬಿದ್ದುಬಿಟ್ಟೆ. ನನ್ನ ಚಿಕ್ಕಮ್ಮ ಲ್ಯಾಪಾಸಿಯೊ ಒಂದು ಕೈಯಿಂದ ನನ್ನನ್ನು ಹಿಡಿದು ನನ್ನನ್ನು ಗೋಡೆಗುಂಟ ಸೇತುವೆಯ ಮೇಲೆ ಹಾಯಿಸಿ ನೇರವಾದ ದಾರಿಗುಂಟ ಮಠಕ್ಕೆ ಕರೆಯಿಸಿಕೊಂಡು ಹೋದಳು. ಅಲ್ಲಿ ಒಂದು ಆರು ಮಾತುಗಳನ್ನು ಮಾತ್ರ ಆಡಿದಳು. ಆಗ ನಾನು ಆ ತಿಂಗಳು ಸಿಕ್ಕಿದ್ದ ಮೊದಲ ಬ್ರೆಡ್ಡಿನ ಚೂರನ್ನು ತಿನ್ನುತ್ತಿದ್ದೆ. ಅದೇ ಆಗ ಊಟಮಾಡುತ್ತಿದ್ದ ಕೊಬ್ಬಿದ ಪಾದ್ರಿಗಳು ತಮ್ಮ ಬಾಯಿಯನ್ನೊರಸಿಕೊಳ್ಳುತ್ತ 'ಏನಪ್ಪಾ ತಮ್ಮಾ. ನೀನೀ ದುಃಖದಾಯಕ ಸಂಸಾರದ ಜಂಜಡವನ್ನು ತ್ಯಜಿಸಿ ನಮ್ಮಲ್ಲಿ ಬಂದಿರುತ್ತಿಯಾ' ಎಂದು ಕೇಳಿದರು. ತಿನ್ನುತ್ತಿರುವ ಬ್ರೆಡ್ಡನ್ನು ತ್ಯಜಿಸಬೇಕೆ ? ಎಂದು ನಾನು ಹೆದರಿಬಿಟ್ಟೆ. ಸಾಧ್ಯವೇ ಇಲ್ಲಾ; ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಅವರೆಲ್ಲರೂ ಕೂಡಿ ನನ್ನನ್ನೊಬ್ಬ ಸಾಧುವನ್ನಾಗಿ ಮಾಡಿಬಿಟ್ಟರು. ಹೀಗಾಗಿ ನಾನು ಪ್ರಪಂಚದಲ್ಲಿಯ ಮದ, ಮೋಹಗಳನ್ನೂ, ಅರಮನೆ, ಹೊಲ, ಮನೆ, ಅಂಗಡಿ, ಬ್ಯಾಂಕು ಮುಂತಾದ ವಸ್ತುಗಳೆಲ್ಲವನ್ನೂ ಕೆಲಸಕ್ಕೆ ಬಾರದವೆಂದು ತ್ಯಜಿಸಿಬಿಡಬೇಕಾಯಿತು. ಮೆಡಿಸಿ ನಗರದ ಇತರ ಜನರೆಲ್ಲರೂ ಇವೇ ಆದರ್ಶಗಳೆಂದು ಬಗೆದು ತಮ್ಮ ಜೀವನವನ್ನೇ ಇವುಗಳಿಗೆ ಮುಡುಪಾಗಿಟ್ಟಿದ್ದರು. ಆದರೆ ನನಗೆ ಮುಂದೆ ಕೆಲವು ಸೌಲಭ್ಯಗಳು ಸರಳವಾಗಿ ದೊರೆತವು. ನನ್ನ ಹೊಟ್ಟೆತುಂಬ ಊಟ, ಮೈತುಂಬ ಬಟ್ಟೆ, ಟೊಂಕದ ಪಟ್ಟಿ, ಮತ್ತು ಹಗಲೂ ರಾತ್ರಿಯೂ ವಿರಾಮ ಸಿಗಲಿಕ್ಕೆ ಹತ್ತಿತು. ಹೀಗೆ ಕೆಲವು ದಿನಗಳವರೆಗೆ ನಿಶ್ಚಿಂತೆಯಿಂದಿದ್ದ ಮೇಲೊಂದು ದಿನ ಈ

ಅನಾಥ ಹುಡುಗನಿಂದ ಯಾವ ಕೆಲಸವನ್ನು ಮಾಡಿಸೋಣವೆಂದು ನನ್ನ ಅಧಿಕಾರಿಗಳು ಗಂಭೀರವಾಗಿ ವಿಚಾರಿಸಹತ್ತಿದರು. ಕೊನೆಗೆ ನನಗೆ ಅನೇಕ ಹೊತ್ತಗೆಗಳ ಸ್ನೇಹವ ಹಚ್ಚಿದರು. ನನಗೆ ಲ್ಯಾಟಿನ್ ಭಾಷೆಯ ವ್ಯಾಕರಣವನ್ನು ಕಲಿಸಿ ವೃಥಾ ವೇಳೆಯನ್ನು ಹಾಳುಮಾಡಿಕೊಂಡರು. 'ಲವಂಗದ ಹೂವೆ ಪ್ರೀತಿಸುತ್ತೇನೆ.' ಎಂಬುದೊಂದೇ ಒಂದು ಲ್ಯಾಟಿನ್ ಶಬ್ದ ನಾನು ಕಲಿತದ್ದು. ಹೀಗೆ ಬೀದಿಪಾಲಾಗಿ ಉಪವಾಸದ ಜೀವನ ನಡೆಸಿದ ಎಂಟು ವರುಷಗಳವರೆಗೆ ದಾರಿಯಲ್ಲಿ ಹೋಗುವವರ ಮುಖಗಳನ್ನು ಮಿಕಿಮಿಕಿ ನೋಡುತ್ತ ಅವರು ಅರ್ಧತಿಂದ ದ್ರಾಕ್ಷಿಯ ಗೊಂಚಲನ್ನು ಬೀದಿಯಲ್ಲಿ ಒಗೆಯುತ್ತಾರೊ ಹೇಗೆ ಎಂಬುದನ್ನೇ ನಿರೀಕ್ಷಿಸುತ್ತ ಅವರ ಬೆನ್ನುಹತ್ತಿ ತಿರುಗಾಡುತ್ತಿದ್ದೆ. ಕೆಲವೊಮ್ಮೆ ಅವರಿಂದ ಬೈಗುಳ ತಿಂದರೆ ಕೆಲವೊಮ್ಮೆ ಒದೆಗಳನ್ನೂ ತಿಂದಿದ್ದೇನೆ. ಯಾರಾದರೂ ಸಭ್ಯಗೃಹಸ್ಥರು ಮೇಣಬತ್ತಿಯನ್ನು ಹಿಡಿದುಕೊಂಡು ಚರ್ಚಿಗೆ ಹೋದರೆ ಅವರೊಡನೆ ನಾನು ಒಳಗೆ ಹೋಗಿ ನಿಲ್ಲುತ್ತಿದ್ದೆ. ಅವರು ಬೇರೆ ಕಡೆಗೆ ನೋಡುತ್ತಿದ್ದಾಗಲೆ ನಾನು ಕಳ್ಳನ ಹಾಗೆ ಜಪ್ಪಿಸಿಕೊಂಡು ಕುಳಿತಿದ್ದು ಕರಗಿದ ಮೇಣ ನೆಲದ ಮೇಲೆ ಬಿದ್ದಾಗ ಅದನ್ನು ಬಳೆದುಕೊಂಡು ಹೊರಗೆ ಹೋಗಿ ಮಾರಿ ಬಂದ ಅಲ್ಪಸ್ವಲ್ಪ ರೊಕ್ಕದಿಂದಲೇ ಏನಾದರೂ ಬಾಯಾಡಿಸಿ ಸಮಾಧಾನಪಟ್ಟು ಕೊಳ್ಳುತ್ತಿದ್ದೆ. ದಾರಿಯಲ್ಲಿ ಯಾವುದಾದರೂ ನಾಯಿ ಮಾಂಸದ ತುಂಡೊಂದನ್ನು ಕಡಿಯುತ್ತಿದ್ದರೆ ಅದು ಆ ಎಲುಬನ್ನು ಬಿಟ್ಟುಹೋಗುವವರೆಗೆ ಕಾದು ನಂತರ ಅದನ್ನು ಕಸದೊಳಗಿಂದೆತ್ತಿಕೊಂಡು ನೆಕ್ಕಿ ಬಾಯಿ ಚಪ್ಪರಿಸಿಕೊಳ್ಳುತ್ತಿದ್ದೆ. ಇಂಥ ಕಡು ಬಡತನವನ್ನು ಅನುಭವಿಸಿದ ನನ್ನ ಜೀವ, ನನ್ನ ಸಂವೇದನೆ ಅತ್ಯಂತ ಚುರುಕಾಗಿ ಬೆಳೆದವು. ಉಪವಾಸದ ಜೀವನದಿಂದ ಹರಿತಗೊಂಡ ನನ್ನ ದೃಷ್ಟಿ ಜನರ, ವಸ್ತುಗಳ ಆಕಾರವನ್ನು ಚೆನ್ನಾಗಿ ಗುರುತಿಸತೊಡಗಿತು. ಜೀವನದ ಸೂಕ್ಷ್ಮನಿರೀಕ್ಷೆಯಿಂದ ಗಳಿಸಿದ ಈ ಅನುಭವ ಮುಂದೆ ನನ್ನ ಕಲಾಜೀವನಕ್ಕೆ ಚೆನ್ನಾಗಿ ಉಪಯೋಗವಾಯಿತು. ನಾನು ನಕಲು ಪುಸ್ತಕಗಳ ಮೇಲೆ ಜನರ ಮುಖಗಳ ಚಿತ್ರಗಳನ್ನು ತೆಗೆದೆ. ಚರ್ಚಿನ ಕಡತದಲ್ಲಿಯ ಹಾಳೆಗಳ ಮಗ್ಗುಲಗಳಲ್ಲಿಯೂ ಚಿತ್ರಗಳನ್ನು ಗೀಚಿದೆ. ಸಂಗೀತದ ಸ್ವರಗಳನ್ನು ಕೇಳಿದಾಗ ಕೈಕಾಲುಗಳನ್ನು ಕುಣಿಸಿ ತಾಳಹಾಕಿದೆ. ಅ, ಬ, ಕಗಳಿಗೆಲ್ಲ ಕಣ್ಣುಮೂಗು ಗದ್ದಗಳನ್ನು ಕೊಟ್ಟು ಚಿತ್ರ ಬಿಡಿಸಿದೆ. ಗೋಡೆಗಳ ಮೇಲೆ ಖುರ್ಚಿಗಳ ಮೇಲೆ ಮತ್ತು ಬಾಗಿಲುಗಳ ಮೇಲೆ ಎಲ್ಲಿ ಬೇಕೆಂದಲ್ಲಿ ಗೀಚಿ, ನಾಮಪದ ಕ್ರಿಯಾಪದಗಳ ನಡುವೆ ಚಿತ್ರಗಳ ಮಾಲೆಯನ್ನೇ ತಯಾರಿಸಿದೆ. ಇದನ್ನೆಲ್ಲ ಕಂಡು ನಮ್ಮ ಮಠದ ಪಾದ್ರಿಗಳೆಲ್ಲ ಕರುಬಿದರು. ಈ ಹುಡುಗನನ್ನು ಹೊರಗೆ ಹಾಕಿಬಿಡಿರಿ ಎಂದು ಒಬ್ಬ ಪಾದ್ರಿ ಎಂದ. ಕೋಗಿಲೆಯನ್ನು ಹಿಡಿದು ಕಾಗೆಯನ್ನು ಬಿಡಬೇಕಂತೆ. ಈ ಹುಡುಗ ಮುಂದೆ ಒಳ್ಳೆಯ ಪ್ರತಿಭಾಶಾಲಿಯಾಗಿ ಬೆಳೆದರೂ ಬೆಳೆಯಬಹುದು. ಈತನ ಸಹಾಯದಿಂದ ಕಾರ್ಮೆಲೈಟ್‌ರಾದ ನಾವೂ ಕಾಮೊಲ್ಡೊ ಲೇಸ್‌ದವರಂತೆ, ಕೀರ್ತನಕಾರ ಪಾದ್ರಿಗಳಂತೆ, ನಮ್ಮ ಚರ್ಚಿನ ಗೋಡೆಗಳನ್ನು

ಚಿತ್ರಗಳಿಂದಲಂಕರಿಸಬಾರದೇಕೆ ಎಂದು ಹೇಳಿದ ಮತ್ತೊಬ್ಬ ಪಾದ್ರಿ. ಕೊನೆಗೆ ಅವರೆಲ್ಲರೂ ಕೂಡಿ ನನಗೆ ಚಿತ್ರಗಳನ್ನು ಬರೆಯಲು ಅನುಮತಿಕೊಟ್ಟರು. ವಿಚಾರ ಗಳಿಂದ ತುಂಬಿ ಭಾರವಾಗಿದ್ದ ನನ್ನ ತಲೆ ಬರಿದಾದ ಗೋಡೆಗಳ ಮೇಲೆ ಸಾಕಾಗು ವಷ್ಟು ಗೀಚಿದ ಮೇಲೆ ಹಗುರಾಯಿತು. ನನಗೆ ಇಷ್ಟೊಂದು ಹಳಪಾರ ಎಂದೂ ಆಗಿರಲಿಲ್ಲ. ಮೊದಲು ಎಲ್ಲ ತರಹದ ಪಾದ್ರಿಗಳ ಚಿತ್ರವನ್ನು ಬರೆದೆ. ಕಪ್ಪು ಪಾದ್ರಿಗಳು, ಬಿಳಿಯ ಪಾದ್ರಿಗಳು, ಕೊಬ್ಬಿದ ಪಾದ್ರಿಗಳು, ಬಡಕಲಾದ ಪಾದ್ರಿಗಳು ಹೀಗೆ ಎಲ್ಲ ಪಾದ್ರಿಗಳ ಚಿತ್ರ ಬರೆದನಂತರ ಹರಟೆ ಹೊಡೆಯುತ್ತ ಜನಜಂಗುಳಿ ತಮ್ಮ ಪಾಪಗಳನ್ನು 'ಒಪ್ಪಿಕೊಳ್ಳುವ' ಸಲುವಾಗಿ ದಾರಿಕಾಯುತ್ತಿರುವ ದೃಶ್ಯವನ್ನು ಬರೆದೆ. ಅವರ ಪಾಪಗಳನ್ನೆಲ್ಲ 'ಒಪ್ಪಿಸಿಕೊಳ್ಳುವ' ದಿಶೆಯಿಂದ ಅದೇ ಆಗ ಒಂದು ಕೊಲೆಗೈದು ಬಂದು ಗದ್ದುಗೆಯ ಮೇಲೆ ಕುಳಿತು ಏದುಸಿರು ಬಿಡುತ್ತಿರುವಂಥ ಪಾದ್ರಿಯ ಚಿತ್ರವನ್ನೂ ಬರೆದೆ. ಆತನ ಸುತ್ತಲೆಲ್ಲ ನೆರೆದ ಮಕ್ಕಳು ಆತನ ಗಡ್ಡ ವನ್ನು ನೋಡಿ ಬೆರಗುಗಂಡಿರುವದನ್ನು, ಆತ ಕೊಲೆಗೈದ ಮನುಷ್ಯನ ಮಗ ಸಿಟ್ಟಿ ನಿಂದ ಎಡಗೈಯಿಂದ ಹೆದರಿಸುವುದನ್ನೂ ಬಲಗೈಯಿಂದ ಕ್ರಿಸ್ತನನ್ನು ನಮಸ್ಕರಿಸು ವುದನ್ನೂ ನೋಡಿ ಚಕಿತರಾಗಿರುವುದನ್ನೂ ಬರೆದು ಬಿಟ್ಟೆ. ಅನಂತರ ಸಾಯಂಕಾಲ ಒಬ್ಬ ಬಡಹುಡುಗಿಯು ತಲೆಯ ಮೇಲೆ ಸೆರಗು ಹೊದ್ದುಕೊಂಡು ಬಂದು (ಆದರೂ ಅದರೊಳಗಿಂದಲೇ ಅವಳ ಮುಖವನ್ನು ದಿಟ್ಟಿಸಿ ನೋಡಿದೆ) ಒಂದೇ ಒಂದು ಶಬ್ದ ಮಾತನಾಡಿ, ಒಂದು ಬ್ರೆಡ್ಡಿನ ತುಣುಕನ್ನು ಕಿವಿಯೋಲೆಗಳನ್ನೂ ಹಾಗೂ ಹೂ ಗೊಂಚಲೊಂದನ್ನೂ ಕೊಟ್ಟು (ಆ ಪಶು ಗೊಣಗುತ್ತದನ್ನು ಸ್ವೀಕರಿಸಿದ) ಪ್ರಾರ್ಥನೆ ಗೈದು ಹೋಗಿಬಿಟ್ಟಳು. ಹೀಗೆ ಇವೆಲ್ಲ ಚಿತ್ರಗಳನ್ನು ಬರೆದೆ. ಇನ್ನೂ ಬೇಕೆಂದರೆ ಹೇಳಿರಿ. ನಿಮಗೆ ಬೇಕಾದ ಚಿತ್ರಗಳನ್ನು ಬರೆಯುವೆ ಎಂದು ಅಧಿಕಾರಿಗಳಿಗೆ ಹೇಳಿ ನನ್ನ ನಿಚ್ಚಣಿಕೆಯನ್ನು ಕೆಳಕ್ಕಿಳಿಸಿಟ್ಟು ನಾನು ಗೋಡೆಯ ಮೇಲೆ ತೆಗೆದ ಚಿತ್ರಗಳನ್ನೆಲ್ಲ ಅವರಿಗೆ ತೋರಿಸಿದೆ. ಪಾದ್ರಿಗಳೆಲ್ಲರೂ ಸಾಧುಗಳೆಲ್ಲರೂ ಸುತ್ತಲೂ ಬಂದು ನಿಂತು ನನ್ನ ಚಿತ್ರಗಳಲ್ಲಿ ಏನು ನೋಡಬೇಕು ಏನು ನೋಡಬಾರದೆಂದೆಲ್ಲ ವಿವರಿಸಿ ಹೊಗಳಿದರು. ಸರಳ ಮನಸ್ಸಿನವರಾದ ಈ ಸಾಧುಗಳು 'ಈ ಚಿತ್ರ ತದ್ರೂಪ ಮನುಷ್ಯನಂತೆಯೆ ಇದೆ. ನಾಯಿಯನ್ನು ಬೆನ್ನುತಟ್ಟುತ್ತಿರುವ ಈ ಹುಡುಗನನ್ನು ನೋಡಿರಿ. ಈ ಹುಡುಗಿಯೊ ಸಾಕ್ಷಾತ್ ನಮ್ಮ ಧರ್ಮಗುರುಗಳ ದಮ್ಮುರೋಗ ವನ್ನುಪಚರಿಸುವುದಕ್ಕೆ ದಿನವೂ ಬರುವ ಅವರ ಸೊಸೆಯಂತೆಯೆ ಇದ್ದಾಳೆ, ಎಂದು ಮುಂತಾಗಿ ಅಭಿಪ್ರಾಯಪಟ್ಟರು. ಇಲ್ಲಿಗೆ ನನ್ನ ವಿಜಯದ ಒಣಹುಲ್ಲು ಬೆಂಕಿಹತ್ತಿ ಉರಿದು ಹೋಯಿತು. ಉಳಿದೆಲ್ಲ ಅಧಿಕಾರಿಗಳು ಬಂದು ನನ್ನ ಚಿತ್ರಗಳನ್ನು ನೋಡಿ ನೋಡಿ ಹೋದರು. ನಂತರ ಧರ್ಮಗುರುಗಳು ಮತ್ತು ವಿದ್ವಾಂಸರೆಲ್ಲ ಬಂದು ನಾನು ಚಿತ್ರಬರೆಯುವುದನ್ನು ನಿಲ್ಲಿಸಿಬಿಟ್ಟರು. ಇದೇನಿದು ? ಇದು ನಿಜ ವಾದ ಚಿತ್ರಕಲೆಯೆ ಅಲ್ಲ. ಮುಖಗಳು ಕೈಗಳು ಕಾಲುಗಳು, ದೇಹಗಳೆಲ್ಲ ನಿಜ

ವಾದ ವಸ್ತುಗಳಂತೆಯೆ ಕಾಣುತ್ತಿವೆ. ಇದೆಲ್ಲ ಸೈತಾನನ ಆಟ. ಮನುಷ್ಯರ ಬಹಿರಂಗ ಸೌಂದರ್ಯವನ್ನು ಅಂದರೆ ನಾಶವಾಗುವ ಮಣ್ಣಿನ ದೇಹವನ್ನು ತೋರಿಸುವುದು ನಿನ್ನ ಕರ್ತವ್ಯವಲ್ಲ ನೀನದನ್ನೆಲ್ಲ ನಿರ್ಲಕ್ಷಿಸಿ ಅವರನ್ನು ದೈಹಿಕ ಸೌಂದರ್ಯದ ಪಾತಳಿಯಿಂದ ಮೇಲೆತ್ತರಕ್ಕೆಬ್ಬಿಸಿ ದೇಹವೆನ್ನುವ ವಸ್ತುವನ್ನೇ ಅವರು ಮರೆಯುವ ಹಾಗೆ ಮಾಡಬೇಕು. ಮನುಷ್ಯರ ಆತ್ಮಸೌಂದರ್ಯವನ್ನು ಚಿತ್ರಿಸುವುದು ನಿಮ್ಮ ಕರ್ತವ್ಯ. ಮನುಷ್ಯನ ಆತ್ಮವೆಂದರೆ ಬೆಂಕಿ ಇದ್ದಂತೆ, ಅಥವಾ ಹೊಗೆ ಇದ್ದಂತೆ. ಅಲ್ಲಲ್ಲ. ಅದೇ ಹುಟ್ಟಿದ್ದ ಕೂಸಿನ ರೂಪದಲ್ಲಿ ತೀಡಿದ ಮಂಜಿನಂತೆ. ವೃಥಾ ಮಾತನಾಡಿ ಪ್ರಯೋಜನವೇನು ? ಒಟ್ಟಿನಲ್ಲಿ ಹೇಳಬೇಕೆಂದರೆ ಆತ್ಮವೆಂಬುದು ಬಹಳ ಪ್ರಮುಖವಾದದ್ದು. ಆತ್ಮವನ್ನು ತೋರಿಸಲಿಕ್ಕೆ ಆಗುವಷ್ಟು ಮಾತ್ರ ದೇಹವನ್ನು ಚಿತ್ರಿಸಬೇಕೆ ಹೊರತು ಅದಕ್ಕಿಂತ ಹೆಚ್ಚಿನದಲ್ಲ. ಇಲ್ಲಿ ನೋಡು ಜಿಯೊಟೊ ಮಹಾಚಿತ್ರಕಾರನ ಚಿತ್ರ ಹೇಗಿದೆ. ಆತನ ಚಿತ್ರದಲ್ಲಿಯ ಸಾಧು ದೇವರ ಪ್ರಾರ್ಥನೆಗೆಯ್ಯುವುದನ್ನು ನೋಡಿದರೆ ನಮಗೂ ಧ್ಯಾನಗೈಯುವ ಉತ್ಸಾಹ ಉಕ್ಕಿ ಬರುತ್ತದೆ. ನೀನು ಅಷ್ಟನ್ನೇಕೆ ಮಾಡಬಾರದು ? ಇಂಥ ದೈವೀಪ್ರಜ್ಞೆಯನ್ನು ನಮ್ಮ ತಲೆಯೊಳಗಿಂದ ಹೊರಗೆ ಹಾಕಿ ಬರೀ ನಿನ್ನ ರೇಖೆಗಳು ಬಣ್ಣಗಳನ್ನಷ್ಟೆ ನೋಡಿ ಬೆರಗುಗೊಳ್ಳುವಂತೆ ನಮ್ಮ ಲಕ್ಷ್ಯವನ್ನೇಕೆ ಸೆಳೆಯುತ್ತಿ ? ಆತ್ಮವನ್ನು ಮಾತ್ರ ಚಿತ್ರಿಸು. ಕೈಕಾಲುಗಳನ್ನಲ್ಲ. ಇದನ್ನೆಲ್ಲ ಅಳಿಕಿಸಿ ಹಾಕಿ ಮತ್ತೊಮ್ಮೆ ಪ್ರಯತ್ನಿಸು. ಓ ಆ ಮೊಲೆಗಳುಳ್ಳ ಬಿಳಿಯ ಬಣ್ಣದ, ಸಣ್ಣತಲೆಯ ಹುಡುಗಿ ನನ್ನ ಸೊಸೆ ಹಿಲೊಡಿಯಸ್‌ಳಂತೆಯೆ ಕಾಣಿಸುತ್ತಾಳೆ. ಮನೆಯ ಹೊರಗೆಲ್ಲ ಅಡ್ಡಾಡಿ ಕುಣಿದು ಗಂಡಸರ ತಲೆಯನ್ನು ಕೆಡಿಸಿದವಳು ಇವಳೆ ಅಲ್ಲವೆ ? ಇಂಥಭಿಪ್ರಾಯಗಳಿಗೇನಾದರೂ ಅರ್ಥವಿದೆಯೆ ? ಆತ್ಮವನ್ನು ಚೆನ್ನಾಗಿ ಚಿತ್ರಿಸಬೇಕಾದರೆ ದೇಹವನ್ನು ಅಸಹ್ಯವಾಗಿ ಚಿತ್ರಿಸಬೇಕು. ಅಂದರೆ ಮಾತ್ರ ಕಲಾರಾಧಕರ ಲಕ್ಷ್ಯ ದೇಹದ ಸೌಂದರ್ಯದಲ್ಲಿ ತೊಡಕಿಕೊಳ್ಳದೆ ಮೇಲೇರಿ ಆತ್ಮ ಸೌಂದರ್ಯವನ್ನು ಸವಿಯಲು ಸಾಧ್ಯವಾಗುತ್ತದೆ. ಅಂದಮೇಲೆ ಬಿಳಿಯ ಬಣ್ಣದ ಜಾಗೆಯಲ್ಲಿ ಹಳದಿ ಬಣ್ಣವನ್ನುಪಯೋಗಿಸಿದರೂ ನಡೆಯುತ್ತದೆ. ಹಳದಿ ಬಣ್ಣದ ಜಾಗೆಯಲ್ಲಿ ಕಪ್ಪು ಬಣ್ಣವನ್ನುಪಯೋಗಿಸಿದರೂ ನಡೆಯುತ್ತದೆ. ಯಾವ ಬಣ್ಣವನ್ನುಪಯೋಗಿಸಿದರೂ ಆ ಬಣ್ಣ ನೋಡುಗರ ಲಕ್ಷವನ್ನು ತನ್ನ ಕಡೆಗೆ ಸೆಳೆಯದೆ ತನ್ನ ಹಿಂದಿನ ಮೂಲಾರ್ಥದ ಕಡೆಗೆ ನಿರ್ದೇಶಿಸುತ್ತದೆ. ಚಿತ್ರಕಾರನಾದವನು ಮೊದಲು ಎಡಹೆಜ್ಜೆ ನಂತರ ಬಲಹೆಜ್ಜೆಯನ್ನಿಡುತ್ತ ಹೋಗಿ ಎರಡು ಹೆಜ್ಜೆ ಮುಂದುವರಿಯುವಂತೆ ತನ್ನ ಚಿತ್ರದಲ್ಲಿಯ ದೇಹ ಮತ್ತು ಆತ್ಮಗಳೆನ್ನು ಇನ್ನೂ ವಾಸ್ತವಿಕವಾಗಿ ಏಕೆ ಮಾಡಬಾರದು ? ಅವುಗಳಿಗೆ ಸಲ್ಲಬೇಕಾದ ಮನ್ನಣೆಯನ್ನೇಕೆ ತೋರಿಸಬಾರದು ? ಉದಾಹರಣೆಗೆ ನಮ್ಮ ಧರ್ಮಗುರುಗಳ ಸೊಸೆಯ ಮುದ್ದು ಮುಖವನ್ನೆ ತೆಗೆದುಕೊಳ್ಳೋಣ. ಈ ಮುಖ ಅದರ ಹಿಂದಿರುವ ಆಶೆ, ಭಯ, ದುಃಖ ಸಂತೋಷಗಳಾವೊವೂ ಗುರುತಿಸಲಾಗ

ದಷ್ಟು ಸುಂದರವಾಗಿದೆಯೇ ? ಅಂದರೆ ಈ ಗುಣಗಳ ಸಂಗಡವೆ ಸೌಂದರ್ಯವೂ ಕೂಡಿರಲಾರದೆ ? ಮೊದಲು ನಾನವಳ ಕಣ್ಣುಗಳನ್ನು ಚೆನ್ನಾಗಿ ರೇಖೆಗಳಲ್ಲಿ ಬರೆದು ನಂತರ ನೀಲಿಬಣ್ಣ ತುಂಬಿ ಆಮೇಲೆ ಉಸಿರುತೆಗೆದುಕೊಂಡು ಅದಕ್ಕೆ ಜೀವಕಳೆಯನ್ನು ತುಂಬುವ ಪ್ರಯತ್ನಮಾಡಿ ಅನಂತರ ಅದಕ್ಕೆ ಆತ್ಮದ ಮೆರುಗು ಕೊಟ್ಟು ಅದರ ಸೌಂದರ್ಯವನ್ನು ಮುಮ್ಮಡಿಯಾಗಿ ವರ್ಧಿಸಲಾರನೆ ? ಅಥವಾ ಸೌಂದರ್ಯ ವಿದ್ದಲ್ಲೆಲ್ಲ ಆತ್ಮವಿಲ್ಲವೆ ಇಲ್ಲವೆಂದು ಹೇಳಬೇಕೆ ? (ಇಂಥ ಸ್ಥಿತಿಯನ್ನಂತೂ ನಾನೆಲ್ಲೂ ಕಂಡಿಲ್ಲ) ಮತ್ತೇನಿರದಿದ್ದರೂ ಬರಿಯ ಸಾಮಾನ್ಯ ಸೌಂದರ್ಯವನ್ನು ನಾವು ಕಂಡುಕೊಂಡರೆ ಅದು ದೇವನ ಅತ್ಯುತ್ತಮವಾದ ಸೃಷ್ಟಿಯಲ್ಲವೆ ? ಹೀಗೆ ಈ ಸಾಮಾನ್ಯ ಸೌಂದರ್ಯವನ್ನು ಗುರ್ತು ಹಿಡಿಯುವುದೆ ಒಂದು ಸಾಧನೆಯಲ್ಲವೆ ? ಇಂಥ ಸೌಂದರ್ಯವನ್ನು ದಯಪಾಲಿಸಿದ ದೇವನನ್ನು ನೆನೆಸುವುದೆಂದರೆ ಸೌಂದರ್ಯ ದಲ್ಲಿ ಆತ್ಮವನ್ನು ಕಂಡುಕೊಳ್ಳುವುದಿಲ್ಲವೆ ? 'ಎಲ್ಲವನ್ನೂ ಅಳಿಸಿಹಾಕೆ'ಂದರು ನನ್ನ ಅಧಿಕಾರಿಗಳು. ಸರಿ ಹಾಗೆಯೆ ಮಾಡಿದೆ. ಇದು ಇಷ್ಟು ದಿನಗಳವರೆಗೆ ನಡೆದು ಬಂದ ನನ್ನ ಕಥೆ. ಈಗಲಾದರೂ ನಾನು ಬಂಧನಗಳನ್ನೆಲ್ಲ ಕಡಿದೊಗೆದು ಸ್ವತಂತ್ರ ಮನುಷ್ಯನಾಗಿ ಬೆಳೆದಿದ್ದೇನೆ. ಕೇವಲ ಎಂಟು ವರ್ಷದ ಹುಡುಗನನ್ನು ಕರೆದು ಕೊಂಡು ಈ ಜನರೆಲ್ಲ ನನ್ನನ್ನು ಹುಡುಗಿಯರನ್ನು ಚುಂಬಿಸಬಾರದೆಂದು ನಿಯಂತ್ರಣ ದಲ್ಲಿರಿಸಿದರು. ಅದು ಹೇಗೆ ಸಾಧ್ಯವಾಗುತ್ತದೆ ? ಈಗ ನಾನೇ ನನ್ನ ಯಜಮಾನ ನಾಗಿರುವುದರಿಂದ ಮನಸ್ಸಿಗೆ ಬಂದ ಚಿತ್ರಗಳನ್ನೆಲ್ಲ ಬರೆಯುತ್ತೇನೆ. ನಾನಿರುವುದು ಆ ಮನೆಯಲ್ಲಿ. ಮೂಲೆಯ ಆ ಮನೆಯ ಮುಂಭಾಗದಲ್ಲಿರುವ ಕಬ್ಬಿಣದ ಬಳೆಗಳು ಕೇವಲ ಧ್ವಜಸ್ತಂಭಗಳನ್ನಿರಿಸಲಿಕ್ಕೆ ಅಥವಾ ಕುದುರೆಗಳನ್ನು ಕಟ್ಟಲಿಕ್ಕೆ ಬರುವುದಲ್ಲದೆ ನನ್ನನ್ನೂ ಗಟ್ಟಿಯಾಗಿ ಬಂಧಿಸಲು ಪ್ರಯತ್ನಿಸುತ್ತಿವೆ. ನಾನು ಚಿತ್ರಗಳನ್ನು ಬರೆಯುತ್ತಿರುವಾಗ ಗಂಭೀರವಾದ ಕಣ್ಣುಗಳು ನನ್ನ ಬೆನ್ನಹಿಂದೆ ನಿಂತುಕೊಂಡು ನೋಡಿ ತಲೆಯಲ್ಲಾಡಿಸುತ್ತಿರುತ್ತವೆ. 'ಮಗು, ಇದೆಲ್ಲ ಕಲೆಯ ಇಳಿಗಾಲ. ನೀನು ಹಳೆಯ ಮಹಾಚಿತ್ರಕಾರರಂತಾಗುವುದಿಲ್ಲ. ಸಹೋದರ ಆ್ಯಂಜಿಲೊಕೊ, ಸಹೋ ದರ ಲೊಲೆಂರ್ಝೊ ಅವರು ಹೇಗೆ ಅಪ್ರತಿಮರಾಗಿದ್ದಾರೆ ನೋಡು. ಬರಿಯ ಮಾಂಸದ ಸೌಂದರ್ಯವನ್ನೇ ಆರಾಧಿಸುವ ನೀನು ಅವರಂತೆ' ಅಪ್ರತಿಮ ಕಲಾಕಾರ ನಾಗಲಾರೆ' ಎಂದು ಉಪದೇಶಿಸುತ್ತಾರೆ. ಸೂಚಿಪರ್ಣದ ಹೂವೆ, ನಿಮ್ಮ ಯಜಮಾನರನ್ನು ನೀನಾರಾಧಿಸು ನನ್ನವರೊಂದಿಗೆ ನಾನಿರುವೆ. ನಾನು ಮೂರನೆಯ ಅಪ್ರತಿಮ ಕಲಾಕಾರನಲ್ಲವಂತೆ. ಅವರು ಎಷ್ಟೆಂದರೂ ಜ್ಞಾನಿಗಳಲ್ಲವೆ ? ಅಂತೂ ನಾನು ನನ್ನ ಸಿಟ್ಟನ್ನು ನುಂಗಿಕೊಳ್ಳುತ್ತೇನೆ. ಹಲ್ಲುಗಳನ್ನು ಕಚ್ಚಿ ಹಿಡಿದು ತುಟಿ ಗಳನ್ನು ಬಿಗಿಯಾಗಿ ಹಿಚುಕಿ ಹಿಡಿದು ಕೆಲವೊಮ್ಮೆ ಅವರ ಸಂತೋಷಕ್ಕಾಗಿ ಚಿತ್ರಬರೆ ಯುತ್ತೇನೆ. ಕೆಲವೊಮ್ಮೆ ಬರೆಯುವುದಿಲ್ಲ. ಹೀಗೆ ಬಿಡುವಿಲ್ಲದೆ ಕೆಲಸಮಾಡುತ್ತಿರು ವಾಗ ಒಮ್ಮೊಂದು ಸಂಜೆ ಸಂತರ ಚಿತ್ರಗಳನ್ನು ಬರೆಯಬೇಕಾಗುತ್ತದೆ. ಜಗತ್ತಿನ

ವ್ಯವಹಾರದಲ್ಲಿಯ ನಗುವೊಂದನ್ನೊ ಅಳವೊಂದನ್ನೊ ಕೇಳುತ್ತೇನೆ. ಪೀಚ್ ಹೂವೆ ಪ್ರತಿಯೊಬ್ಬರಿಗೂ ತಮ್ಮದೇ ಜೀವ ನಮ್ಮೆಲ್ಲರಿಗೆ ಸಾವು. ನನ್ನ ಹೃದಯದುಂಬಿ ಭಾವನೆಗಳು ತುಳುಕತೊಡಗುತ್ತವೆ. ಈ ಜಗತ್ತು ಮತ್ತು ಇವರಲ್ಲಿಯ ಜೀವನ ಬರಿಯ ಕನಸೆಂದು ಕರೆಯಲಾಗದಷ್ಟು ದೊಡ್ಡದಾಗಿದೆ. ಹತಾಶನಾಗಿ ನಾನು ಈ ಕಾಡುಗೆಲಸಗಳಲ್ಲಿ ತೊಡಗಿದ್ದೇನೆ. ಬರಿಯ ಸಿಟ್ಟಿನಿಂದಲೆ ಈ ರೀತಿಯ ಹುಚ್ಚು ಕೆಲಸಗಳಲ್ಲಿ ತೊಡಗಿ ನಿಮ್ಮ ಕೈಯಲ್ಲಿ ಸಿಕ್ಕಿದ್ದೇನೆ. ಅನೇಕ ವರುಷಗಳ ವರೆಗೆ ದುಡಿದು ದುಡಿದು ಕಂಗಾಲಾದ ಗಾಣದ ಕುದುರೆ ಹುಲ್ಲುಗಾವಲಿಗೆ ಹೋದಾಗ ಕಾಲುಗಳನ್ನು ಜಾಡಿಸಿ ಹುಲ್ಲನ್ನು ಮೇಯಲಾರಂಭಿಸುತ್ತದೆ. ಹುಲ್ಲು ತಿನ್ನುವುದಕ್ಕೋಸ್ಕರವೇ ಇದೆ ಎಂಬುದನ್ನು ಗಾಣದ ಯಜಮಾನ ಕುದುರೆಗೆ ಕಲಿಸಿಕೊಡಬೇಕಾಗಿಲ್ಲ. ಮನುಷ್ಯರಿಗೆ ಬೇಕಾಗಿರುವುದೇನು ? ಅವರಿಗೆ ಹುಲ್ಲು ಹಿಡಿಸುತ್ತದೆಯೊ ಇಲ್ಲವೊ ಎಂಬ ಪ್ರಶ್ನೆ ಕೊನೆಗೊಮ್ಮೆ ಬಗೆಹರಿಯಲೇಬೇಕು ನನಗೆ. ಮನುಷ್ಯರು ನೂರೆಂಟು ಸುಳ್ಳುಗಳನ್ನು ಹೇಳಿಕೊಂಡು ತಮ್ಮನ್ನು ತಾವೆ ನೋಯಿಸಿಕೊಳ್ಳುತ್ತಾರೆ. ತಮಗೆ ನಿಜವಾಗಿಯೂ ಬೇಕಾಗಿದ್ದ ವಸ್ತುವನ್ನು ಬೇಡವೆಂದು ತಿರಸ್ಕರಿಸುತ್ತಾರೆ. ತಮಗೆ ನಿಜವಾಗಿಯೂ ಜುಗುಪ್ಸೆ ತರಿಸುವ ವಸ್ತುವು, ಬೇಕೆಂದು ನಟಿಸುತ್ತಾರೆ. ನಾನು ನನ್ನ ಬಾಲ್ಯದಲ್ಲಿ ಕಲಿತ ಹಾಗೆ ಇದ್ದುದನ್ನು ಇದ್ದಹಾಗೆಯೇ ನುಡಿಯುವವ. ನನ್ನ ಕಣ್ಣೆದುರಿಗೆ ಯಾವಾಗಲೂ ದೇವರು ಈಡನ್ ಉದ್ಯಾನದಲ್ಲಿ ಆ್ಯಡಮ್‌ನ ಎಲುವಿನಿಂದ ಈವ್‌ಳನ್ನು ಸೃಷ್ಟಿಸುವ ದೃಶ್ಯ ಕಾಣುತ್ತಿರುತ್ತದೆ. ಆದ್ದರಿಂದಲೆ ನಾನು ರಕ್ತಮಾಂಸದ ಮೌಲ್ಯ ಮಹತ್ವಗಳನ್ನು ಕಲಿತಿದ್ದು. ಹೀಗೆ ಪಾಠವನ್ನು ನಾನಿಷ್ಟು ಸರಳವಾಗಿ ಮರೆಯಲಾರೆ.

ನಾನೊಂದು ಪಶುವೆಂಬುದು ಗೊತ್ತಿದೆ. ನೀವೂ ನನ್ನನ್ನು ಅರ್ಥಮಾಡಿಕೊಳ್ಳುವಿರೆಂದು ತಿಳಿದಿದ್ದೇನೆ. ಮುಂದೊಂದು ದಿನ ಏನಾಗುವುದೆಂಬುದನ್ನು ನೀವೂ ನೋಡುವಿರಿ. ಅದರಂತೆ ನಾನೂ ಬೆಳ್ಳಿಚುಕ್ಕಿಯಂತೆ ಖಂಡಿತವಾಗಿ ನೋಡುತ್ತೇನೆ. ಇಲ್ಲೊಬ್ಬ ತರುಣನಿದ್ದಾನೆ. ಆತ ದಿನವೂ ನಮ್ಮ ನಿಲಯಕ್ಕೆ ಬರುತ್ತಿರುತ್ತಾನೆ. ಬಂದು ನಾನು ಬರೆದ ಪತ್ರಗಳನ್ನೆಲ್ಲ ಒಂದೂ ಚಾಚೂ ತಪ್ಪದಂತೆ ಬರೆಯುತ್ತಾನೆ. ಆತನ ಹೆಸರು ಗ್ವಿಡಿ ಎಂದು. ಅವನನ್ನೆಲ್ಲರೂ `ಹೊಲಸು ಟಾಮ್`ನೆಂದು ಕರೆದು ಗೇಲಿಮಾಡುತ್ತಾರೆ. ಅದಕ್ಕೆಲ್ಲ ಆತ ಲಕ್ಷಗೊಡುವುದಿಲ್ಲ. ಆತನೆ ನನ್ನ ಮಾದರಿಯನ್ನು ಕಲಿತುಕೊಂಡು ನಾನಿರದಿದ್ದರೂ ಬೆಳೆಸಿಕೊಂಡು ಹೋಗುತ್ತಾನೆ. ನೀವೇ ಎಲ್ಲವನ್ನು ವಿಚಾರಮಾಡಿ ಹೇಳಿ. ನನ್ನಂತೆ ನಿಮಗೂ ಲ್ಯಾಟಿನ್ ಬರುವುದಿಲ್ಲ, ಆದರೂ ನೀವು ನನ್ನವರು, ಜಗತ್ತನ್ನೆಲ್ಲ ನೋಡಿದವರು. ಜೀವನದಲ್ಲಿಯ ಸೌಂದರ್ಯ ಶಕ್ತಿ ಮತ್ತು ಅದ್ಭುತಗಳನ್ನು, ವಸ್ತುಗಳ ರೂಪವರ್ಣಗಳನ್ನು, ನೆರಳು ಬೆಳಕುಗಳನ್ನು ನೋಡಿದವರು. ಇವುಗಳನ್ನೆಲ್ಲ ಸೃಷ್ಟಿಸಿದವರು ದೇವನೆ ಅಲ್ಲವೆ ? ಯಾಕೆ ಎಂದು ಹೇಳುತ್ತೀರಾ ? ಇದಕ್ಕೆಲ್ಲಾ ನಾವು ದೇವನಿಗೆ ಕೃತಜ್ಞತೆಗಳನ್ನು ಅರ್ಪಿಸಬಾರದೆ ? ಈ ಸುಂದರ ನಗರ, ಆಚೆಯಿರುವ ನದಿ, ಅದರ ಸುತ್ತಲೂ ನಿಂತಿದ್ದ ಪರ್ವತ, ಮೇಲಿನ

ಆಕಾಶ, ಇವೆಲ್ಲವುಗಳಿಗಿಂತ ಹೆಚ್ಚಾಗಿ ಗಂಡು ಹೆಣ್ಣುಮಕ್ಕಳುಗಳ ಆಕಾರಗಳೆಲ್ಲವೂ ಚೌಕಟ್ಟಿನಲ್ಲಿಸಿರಿದ ಸೌಂದರ್ಯವೆಲ್ಲವೂ ಸುಳ್ಳೆ ? ಇದನ್ನೆಲ್ಲ ಬರಿ ತಿರಸ್ಕರಿಸಬೇಕೆ ? ಅಥವಾ ಕಣ್ಣು ತೆರೆದು ನೋಡಿ ಆಶ್ಚರ್ಯಪಡಬೇಕೆ ಎಂಬುದನ್ನು ವಿಚಾರಿಸಿ ಹೇಳಿರಿ. ಹಾಗಾದರೆ ಹೇಳಿದಂತೇಕೆ ಮಾಡಬಾರದು ? ಈ ಎಲ್ಲ ವಸ್ತುಗಳೂ ದೇವನಿರ್ಮಿತವೆ ಆಗಿದ್ದುದರಿಂದ ಯಾವ ವಸ್ತುವನ್ನು ಬೇಕಾದರೂ ಚಿತ್ರಿಸಬಹುದು. ಅವುಗಳನ್ನು ಅಂದರೆ ಸತ್ಯವನ್ನು ಕಳೆದುಕೊಳ್ಳುವುದೆಂದರೆ ಅದೊಂದು ಅಪರಾಧವೇ ಸರಿ. ಇದಕ್ಕೆ ನೀವು ತಕರಾರು ಮಾಡಬೇಡಿರಿ. ಅವರು ಹೇಳುವುದೇನೆಂದರೆ ದೇವರು ಸೃಷ್ಟಿಸಿದ ವಸ್ತುಗಳೆಲ್ಲವೂ ನಮ್ಮ ಕಣ್ಣೆದುರಿಗೆ ಇದ್ದು ಪ್ರಕೃತಿಯೆಲ್ಲ ಸಂಪೂರ್ಣವಾಗಿಯೇ ಇದೆ. ಆದ್ದರಿಂದ ಕಲಾಕಾರನೊಬ್ಬ ಆ ಪ್ರಕೃತಿಯನ್ನು ಇದ್ದಕ್ಕಿದ್ದಂತೆ ಚಿತ್ರಿಸಿದರೆ (ಇದು ಅಷ್ಟೊಂದು ಸುಲಭವಾದ ಕೆಲಸವಲ್ಲವೆಂಬುದು ನನಗೆ ಗೊತ್ತು) ಏನು ಲಾಭ ? ಆತ ದೇವರ ಸೃಷ್ಟಿಗಿಂತ ಮೇಲಾಗಿ ಹೆಚ್ಚು ಉತ್ಕೃಷ್ಟವಾಗಿ ಒಂದು ಹೆಜ್ಜೆ ಮುಂದೆ ಹೋಗಬೇಕು, ಎಂದು ಮುಂತಾಗಿ ಮಾತನಾಡುತ್ತಾರೆ. ಆದರೆ ನಮಗೆ ಈ ಸಂಗತಿ ಗೊತ್ತಿದೆಯೆ ? ಮನುಷ್ಯನ ಸ್ವಭಾವ ಹೇಗಿದೆಯೆಂದರೆ ನಾವು ಜೀವನದಲ್ಲಿ ಅನೇಕ ವಸ್ತುಗಳನ್ನು ನೂರಾರು ಸಾರೆ ನೋಡಿದರೂ ನೋಡದವರಂತೆ ನಿರ್ಲಕ್ಷಿಸಿರುತ್ತೇವೆ. ಆದರೆ ಅದೇ ವಸ್ತುಗಳನ್ನು ಚಿತ್ರದಲ್ಲಿ ಸೆರೆ ಹಿಡಿದಾಗ ಅವು ನಮ್ಮ ಲಕ್ಷ್ಯವನ್ನು ಸೆಳೆದು, ಅವುಗಳನ್ನು ನಾವು ಪ್ರೀತಿಸುತ್ತೇವೆ. ಹೀಗಾಗಿ ವಾಸ್ತವ ಜಗತ್ತಿನಲ್ಲಿರುವ ವಸ್ತುಗಳೆ ಚಿತ್ರದಲ್ಲಿ ತೋರಿಸಲ್ಪಟ್ಟಾಗ ಅವು ನಿಜವಾಗಿದ್ದುದಕ್ಕಿಂತ ಹೆಚ್ಚು ಸುಂದರವಾಗಿ ಮೋಹಕವಾಗಿ ಕಾಣುತ್ತವೆ. ಇದೇ ಕಾರಣಕ್ಕಾಗಿಯೆ ದೇವರು ಮನುಷ್ಯನಿಗೆ ಕಲೆಯೆಂಬುದನ್ನು ದಯಪಾಲಿಸಿದ್ದಾನೆ. ನಮ್ಮ ಮನಸ್ಸನ್ನು ಬಹಿರಂಗವಾಗಿ ಅಭಿವ್ಯಕ್ತಿಸಿ ಮನುಷ್ಯರು ಪರಸ್ಪರ ಸಹಾಯಮಾಡಿಕೊಳ್ಳಿರೆಂದು ಹಾರೈಸುತ್ತಾನೆ. ಉದಾಹರಣೆಗೆ ನಿಮ್ಮ ಈ ಬದ್ಮಾಸನ ಜೋಲು ಮುಖವನ್ನು ಕಣ್ಣು ತೆರೆದು ನೋಡಿದ್ದಿರಾ ? ಒಂದಿಷ್ಟು ಬಳಪದ ಚೂರನ್ನು ಕೊಟ್ಟರೆ ಸಾಕು ಅವನ ಮುಖವನ್ನು ಇದ್ದ ಹಾಗೆಯೆ ತೆಗೆದು ತೋರಿಸುತ್ತೇನೆ. ಇದರಂತೆಯೆ ಇನ್ನೂ ಎತ್ತರದ ವಸ್ತುಗಳನ್ನು ನಾನು ಚಿತ್ರಿಸಿದರೆ ಎಷ್ಟು ಚೆನ್ನಾಗಿರುತ್ತದೆ ಅಲ್ಲವೆ ? ಆ ಚಿತ್ರಿಸಿದ ವಸ್ತುಗಳು ನಮ್ಮ ಧರ್ಮಗುರುಗಳ ಸಿಂಹಾಸನವನಲಂಕರಿಸಿ ದೇವರು ಧರ್ಮಗಳ ಬೋಧನೆ ಮಾಡಿದರೆ ಎಷ್ಟೊಂದು ಚೆನ್ನಾಗಿರುತ್ತದೆಯಲ್ಲವೆ? ಅಯ್ಯೊ. ಅಯ್ಯೊ ನಾವೆಲ್ಲ ಸತ್ತು ಕುಣಿಯಲ್ಲಿ ಮಲಗಿದಾಗ ಮುಂದೆ ಬರುವ ಜನ ಏನೇನು ಮಾಡುತ್ತಿರುತ್ತಾರೋ ಏನೋ ಎಂಬುದನ್ನೆಲ್ಲ ವಿಚಾರ ಮಾಡಿದಾಗ ನನ್ನ ಸಿಟ್ಟು ನೆತ್ತಿಗೇರಿ ಹುಚ್ಚು ಹಿಡಿಯುವಂತಾಗುತ್ತದೆ. ಈ ಜಗತ್ತು ಬರಿ ಒಂದು ಕ[illegible] ಅಥವಾ ಶೂನ್ಯವಾಗಿರದೆ ಅತ್ಯಂತ ಅರ್ಥಪೂರ್ಣವಾಗಿದೆ. ಒಳ್ಳೆಯದಾಗಿದೆ. ಅರ್ಥವನ್ನು ಶೋಧಿಸುವುದು ನನ್ನ ಮುಖ್ಯ ಉದ್ದೇಶ. ನನ್ನ ಚಿತ್ರಗಳನ್ನು ನೋಡಿ ನಮ್ಮ ಧರ್ಮಗುರುಗಳೇನನ್ನುತ್ತಾರೆ ಗೊತ್ತೆ ? ನನ್ನ ಚಿತ್ರಗಳು ಅರ್ಥಮಾಡಿಕೊಳ್ಳಲಿಕ್ಕೆ ಸರಳವಾಗಿದ್ದರೂ ಅವು

ಜನರನ್ನು ಪ್ರಾಥಃಕಾಲದ ಪ್ರಾರ್ಥನೆಯನ್ನು ಮಾಡಹಚ್ಚುವುದಿಲ್ಲ; ಪವಿತ್ರವಾದ ಶುಕ್ರವಾರಗಳಂದು ಉಪವಾಸ ವೃತವನ್ನಾಚರಿಸಹಚ್ಚುವುದಿಲ್ಲ ಎಂದು. ನನ್ನ ಪ್ರಶ್ನೆಯೇನೆಂದರೆ ಇಂಥ ಕೆಲಸಗಳನ್ನೆಸಗಲು ಕಲೆ ಏಕೆ ಬೇಕು ಎಂದು ? ಒಂದು ತಲೆಬುರುಡೆಯನ್ನು, ಕೆಲವು ಎಲುವುಗಳನ್ನು ಇಟ್ಟು ಎರಡು ಕಟ್ಟಿಗೆಯ ತುಂಡುಗಳನ್ನು ಕತ್ತರಿಯಾಗಿಟ್ಟು ಮೊಳೆಹೊಡೆದರೆ ನಿಮ್ಮ ಕೆಲಸವಾಗುವುದಿಲ್ಲವೆ ? ಅಥವಾ ಇದಕ್ಕಿಂತ ಹೆಚ್ಚೆಂದರೆ ಒಂದು ನಿನಾದಿಸುವ ಗಂಟೆಯಾದರೆ ಸಾಕಾಗುವುದಿಲ್ಲವೆ ? ಈಗ ಆರು ತಿಂಗಳು ಹಿಂದೆ ಪ್ರೇಟೊನಗರದಲ್ಲಿದ್ದಾಗ ನಾನು ಸಂತ ಲಾರೆನ್ಸನ ಚಿತ್ರವನ್ನು ಅತ್ಯುತ್ತಮವಾದ ಶೈಲಿಯಲ್ಲಿ ಬರೆದೆ. ಬರೆಯುವ ಕೆಲಸವೆಲ್ಲ ಮುಗಿದ ನಂತರ ನಿಚ್ಚಣಿಕೆಯನ್ನು ಕೆಳಗಿಟ್ಟು ನನ್ನ ಚಿತ್ರ ಹೇಗೆ ಕಾಣುತ್ತದೆ, ಎಂದು ಮಗ್ಗುಲದಲ್ಲಿದ್ದ ಸಹೋದರನೊಬ್ಬನನ್ನು ಕೇಳಿದೆ. ಆತ ನನಗೆ ಹೇಳಿದ್ದು ಹೀಗೆ : 'ನಿನ್ನ ಚಿತ್ರವನ್ನು ನೋಡಿ ನಮ್ಮ ಧರ್ಮಗುರುಗಳಿಗೆ ಪವಿತ್ರ ಸುರೆಯನ್ನು ಸುರಿಯುತ್ತಿದ್ದ ಮೂವರೂ ಸೇವಕರು ಪಾಪಪ್ರಜ್ಞೆಯಿಂದ ಕಳವಳಗೊಂಡಿದ್ದಾರೆ. ಚಿತ್ರದ ಹಿಂದಿದ್ದ ಇಟ್ಟಂಗಿಗಳನ್ನು ನೋಡುತ್ತಲೆ ಮೊದಲು ಈ ಚಿತ್ರಗಳನ್ನಳಿಸಿ ಹಾಕಿ ಎಂದು ಸಿಟ್ಟಿನಿಂದ ಬಂದ ಧಾರ್ಮಿಕ ಜನರು ನಿನ್ನ ಚಿತ್ರವನ್ನು ನೋಡಿ ಸಮಾಧಾನ ಹೊಂದಿ ಶಾಂತರಾಗಿ ಹಿಂದಿರುಗಿ ಹೋದರು. ಮುಂದಿನ ವರುಷ ಇದೇ ಸಮಯಕ್ಕೆ ಮತ್ತೆ ಬಾ. ಮತ್ತೆ ನಿನಗೆ ಕೆಲಸ ಕೊಡುತ್ತೇವೆ. ಏಕೆಂದರೆ ದಯೆ ಮತ್ತು ಧರ್ಮಗಳೆರಡೂ ಗುಂಪಿನಲ್ಲಿಯೆ ಬೆಳೆಯುತ್ತವೆ. ನಿನ್ನ ಚಿತ್ರಕಲೆ ಈ ಉದ್ದೇಶವನ್ನು ಸಾಧಿಸುವುದರಿಂದ ನಮಗೆ ಬಹಳ ಉಪಯೋಗವಾಯಿತು'. ಇಂಥ ಮೂರ್ಖರನ್ನು ಗಲ್ಲಿಗೇರಿಸಬೇಕು. ಬಡ ಸಾಧುವಾದ ನಾನು ಸಿಟ್ಟಿನಲ್ಲಿ ಆಡಿದ ಮಾತುಗಳನ್ನು ನೀವು ಅಪಾರ್ಥ ಮಾಡಿಕೊಳ್ಳುವುದಿಲ್ಲವಷ್ಟೇ ? ಇಂದಿನ ಈ ಆಹ್ಲಾದಕರವಾದ ಹವೆಯನ್ನು ನಾನು ಉಸಿರಾಡಿಸಿದಾಗ ಘಮಘಮಿಸುವ ಈ ರಾತ್ರಿ ಶಿಯಾಂಟಿಸುರೆಯಂತೆ ರೂಢಿಯಿಲ್ಲದ ನನ್ನಂಥವನ ತಲೆಯನ್ನು ತಿರುಗಿಸಿಬಿಟ್ಟಿತು. ಇವೆಲ್ಲ ನನ್ನ ಚರ್ಚಿನವರಿಗೆ ಗೊತ್ತಿದೆ. ನನ್ನ ಬಗೆಗೆ ತಪ್ಪು ವರದಿ ಕೊಡಬೇಡಿರಿ ದಯಮಾಡಿ. ಬಂಧನಗಳಿಂದ ಹೊರಬಂದ ಬಡ ಸಾಧುವೊಬ್ಬ ಹೀಗೆ ಮಾತನಾಡುವುದು ಸಹಜ. ನನ್ನ ತಪ್ಪು ಸರಿಮಾಡಿಕೊಳ್ಳಲು ನಾನು ಅನೇಕ ಹಂಚಿಕೆಗಳನ್ನು ಹಾಕುತ್ತಿದ್ದೇನೆ. ಇನ್ನೊಂದು ಆರು ತಿಂಗಳು ಹೋಗಲಿ, ನಿಮಗಾಗಿ ಒಂದು ಚಿತ್ರವನ್ನು ಬರೆಯುತ್ತೇನೆ. ಎಲ್ಲಿ ಗೊತ್ತೆ? ಸಂತ ಅಂಬ್ರೋಜಿಯೊಸ ಚರ್ಚಿನಲ್ಲಿ, ಅಲ್ಲಿಯ ಸನ್ಯಾಸಿನಿಯರೆಲ್ಲರಿಗೆ ಕಲ್ಯಾಣವಾಗಲಿ. ಅವರಿಗೆ ನಮ್ಮ ಚರ್ಚಿನ ಪರಿವಾರದ ಚಿತ್ರವೊಂದು ಬೇಕಂತೆ. ನಾನು ಚಿತ್ರ ಹೇಗೆ ಬರೆಯಬೇಕೆಂದಿದ್ದೇನೆ ಗೊತ್ತೆ ? ಅದು ಹೀಗೆ : ಮಧ್ಯದಲ್ಲಿ ದೇವರು, ಮಾತೆ ಮಾಡೊನ್ನಾ ಮತ್ತು ಅವಳ ಕೂಸು. ಇವರೆಲ್ಲರ ಸುತ್ತಲೂ ಹೂವುಗಳಂತೆ ಚೆಲ್ಲುವರಿದ ಲತಾಮಂಟಪಗಳಂತೆ ಪಸರಿಸಿದ ಯಕ್ಷಯಕ್ಷಿಯರ ವೃಂದ. ಇವರೆಲ್ಲರ ಸುತ್ತಲೂ ಲಿಲಿಹೂವುಗಳು; ಬಿಳಿಯ ವಸ್ತ್ರಗಳು ಹಾಗೂ ನಡುಬೇಸಿಗೆಯಲ್ಲಿ ಚರ್ಚಿಗೆ

ಬಂದು ತುಂಬುವ ಹೆಂಗಳೆಯರು ಸುವಾಸಿತ ಒರಿಸಬೇರಿನ ಪುಡಿಯನ್ನು ಸವರಿಕೊಂಡು ಬಂದ ಮುದ್ದು ಮುಖಗಳು, ಇವರೆಲ್ಲರ ಎದುರಿಗೆ ಒಬ್ಬರು ಅಥವಾ ಇಬ್ಬರು ಸಂತರು. ಅಂದರೆ ಪ್ಲಾಟೆಂಟಾಸ್ ನಗರವನ್ನಾಳಿಸಿದ ಸಂತ ಜಾನ್‌ನೊ ಅಥವಾ ಚರ್ಚಿಗೆ ಸಂಬಂಧಪಟ್ಟ ಗೆಳೆಯರೆಲ್ಲರ ವಿಷಯವಾಗಿ ಕಾಗದಪತ್ರಗಳನ್ನು ತಯಾರಿಸಿ ಸೇವೆ ಸಲ್ಲಿಸುವ ಸಂತ ಅಂಬ್ರೋಜ್ ಹಾಗೂ ಉಝು ನಗರದ ಸಂತ ಜೊಬ್ ಇವರೆಲ್ಲ ಭಕ್ತಿಪೂರ್ವಕವಾಗಿ ಪ್ರಾರ್ಥಿಸುವದು. ಇದೇ ವೇಳೆಯಲ್ಲಿ ಈ ಎಲ್ಲ ಸಂಗೀತ ಮತ್ತು ಮಾತಿನ ಗದ್ದಲದ ಮಧ್ಯದಲ್ಲಿ ಕತ್ತಲೊಳಗಿಂದ ಬೆಳಕಿಗೆ ಬಂದ, ಅನಿರೀಕ್ಷಿತವಾಗಿ ಬಂದು ಆಶ್ಚರ್ಯಚಕಿತನಾಗಿ, ಅಲುಗಾಡದೆ ನಿಂತಿರುವ ವ್ಯಕ್ತಿ ಲಿಪ್ಪೊ ನಾನೆ.— ಇವೆಲ್ಲ ನಾನು ಬರೆಯುವ ಚಿತ್ರದ ವಿವರಗಳು. ನಾನು ಈ ಸಂತರ ಮಧ್ಯದಲ್ಲಿ ತಪ್ಪಿ ಬಂದು ಸಿಲುಕಿಕೊಂಡಿದ್ದೇನೆ. ನನ್ನ ಈ ಹಳೆಯ ದೊಗಲಂಗಿ, ಈ ನಡುಪಟ್ಟಿಯನ್ನು ನೋಡಿರಿ, ನಾನು ಈ ಪರಿಶುದ್ಧಾತ್ಮರ ಮಧ್ಯದಲ್ಲಿ ಹೇಗೆ ಬಂದು ಸಿಲುಕಿಕೊಂಡು ಗೋಳಾಡುತ್ತಿದ್ದೇನೆ. ನೋಡಿರಿ. ನನಗಿಲ್ಲಿಂದ ಪಾರಾಗಿ ಹೋಗುವುದಕ್ಕಾಗಿ ಯಾವುದಾದರೊಂದು ತೂತು ಅಥವಾ ಮೂಲೆ ಸಿಗುತ್ತದೆಯೆ ? ಆ ಮೇಲೆ ಒಂದು ಮುದ್ದು ಮುದ್ದಾದ ಹುಡುಗಿ ಬಂದು ತನ್ನ ಮೆತ್ತನ್ನ ಕೈಯಿಂದ ನನ್ನ ಕೈಯನ್ನು ಹಿಡಿಯುತ್ತದೆ. ನಮ್ಮ ಧರ್ಮಗುರುಗಳು ಬಂದು 'ಇಷ್ಟು ಗಡಿಬಿಡಿ ಮಾಡಬೇಡ. ದೇವರು, ನೀನೆ ಆಗಿರದಿದ್ದರೂ ಆತ ನಿನ್ನನ್ನು ಸೃಷ್ಟಿಸಿದ್ದು ಸುಳ್ಳಲ್ಲ. ಸಂತ ಜಾನ್‌ನು ತನ್ನ ಒಂಟೆಯ ಬಾಲದ ಕುಂಚದಿಂದ ಇಂಥ ಚಿತ್ರಗಳನ್ನು ಬರೆಯಬಲ್ಲನೆ ? ಇಂಥ ಕೆಲಸಗಳಿಗೆಲ್ಲ ನಾವು ಸಹೋದರ ಲಿಪ್ಪೊನನ್ನು ಬಿಟ್ಟು ಮತ್ತೆ ಯಾರ ಹತ್ತಿರ ಹೋಗಬೇಕು ?' ಎಂದು ಹೇಳಿ ಎಲ್ಲರೂ ನಕ್ಕು ಬಿಡುತ್ತಾರೆ. ನಾನು ನಾಚಿಕೊಂಡು ಸಂತೋಷದಿಂದ ಕಾದ ಶಂಖಗಳನ್ನಾಡುವಾಗ ಹರಡಿದ ದೊಗಲಂಗಿಗಳಂತೆ ತೆರೆದ ನೂರಾರು ರೆಕ್ಕೆಗಳ ಹಿಂದೆ ನಾನು ಅಡಗಿಕೊಳ್ಳುತ್ತೇನೆ. ಅಷ್ಟೊತ್ತಿಗೆ ಅನಿರೀಕ್ಷಿತವಾಗಿ ಬಾಗಿಲು ತೆರೆದು ಸಿಟ್ಟಿನ ಸ್ವಭಾವದ ಗಂಡ ಬಂದುಬಿಡುತ್ತಾನೆ. ಹೀಗೆ ನಾನು ಹಿಂದಿನ ಬೆಂಚಿನಲ್ಲಿ ಕುಳಿತುಕೊಳ್ಳುತ್ತೇನೆ. ನನ್ನ ಬಗೆಗೆ ಒಳ್ಳೆಯ ಮಾತುಗಳನ್ನಾಡಿದ ಆ ಹುಡುಗಿಯ ಮೃದುವಾದ ಕೈಗಳನ್ನು ಇನ್ನೂ ಹಿಡಿದುಕೊಂಡಿರುತ್ತೇನೆ. ಅವಳು ನಮ್ಮ ಧರ್ಮಗುರುಗಳ ಸೊಸೆಯಂತೆ ಇಲ್ಲವೆ ಸಂತ ಲೂಸಿಯಂತೆಯೆ. ಹೀಗೆ ಎಲ್ಲವೂ ನನಗಾಗಿ ಕೂಡಿಸಿಟ್ಟಂತಾಯಿತು. ಚರ್ಚಿಗೊಂದು ಚಿತ್ರವೂ ಸಿಕ್ಕಂತಾಯಿತು. ಇದು ಯಾವಾಗ ಗೊತ್ತೆ ? ಇನ್ನಾರು ತಿಂಗಳ ನಂತರ. ಹೋಗಿ ಬರುತ್ತೇನೆ. ನಮಸ್ಕಾರ. ದಯಮಾಡಿ ಮುಖಕ್ಕೆ ಪಂಜು ಹಿಡಿಯಬೇಡಿರಿ. ಬೀದಿಯೆಲ್ಲ ನೀರವವಾಗಿದೆ. ನನ್ನ ಹಾದಿ ನನಗೆ ತಿಳಿಯುತ್ತದೆ. ನನ್ನ ಬಗೆಗೆ ನೀವೇನು ಚಿಂತಿಸಬೇಡಿರಿ ಈಗಾಗಲೆ ಬೆಳಗಾಗುತ್ತಿದೆ. ನಾನು ಬರುತ್ತೇನೆ. ನಮಸ್ಕಾರ...

ಕೊನೆಯ ಜೋಡಿ ಸವಾರಿ : ಈ ನಾಟಕೀಯಾತ್ಮ ಗೀತದಲ್ಲಿ ಇಬ್ಬರೂ ಪ್ರೇಮಿಗಳು ಇಷ್ಟು ದಿನಗಳ ವರೆಗೆ ಪರಸ್ಪರ ಪ್ರೇಮಿಸಿ ಈಗ ಅಗಲಬೇಕಾಗಿಬಂದಿದೆ. ಇದಕ್ಕೆ ಕಾರಣ ಪ್ರಿಯತಮೆ ಮತ್ತೊಬ್ಬನನ್ನು ಪ್ರೀತಿಸಿದುದೆ ಆಗಿದೆ. ಅದರಲ್ಲಿ ಪ್ರಿಯತಮೆ ಅಗಲಿಹೋಗುತ್ತಿದ್ದ ಪ್ರಿಯತಮೆಯನ್ನು ದ್ವೇಷಿಸುವುದದಾಗಲಿ, ಹುಚ್ಚನಂತೆ ತನ್ನ ಮನಸ್ಥೈರ್ಯವನ್ನು ಕಳೆದುಕೊಳ್ಳುವುದಾಗಲಿ ಅಥವಾ ಅವುಗಳನ್ನು ಬಡಿಯುವ ಇಲ್ಲವೆ ಕೊಲ್ಲುವ ಗೋಜಿಗೆ ಹೋಗದೆ ತತ್ವಜ್ಞಾನಿಯಂತೆ ಎಲ್ಲ ನೋವನ್ನು ನುಂಗಿಕೊಂಡು ಅವಳೊಂದಿಗೆ ಕಟ್ಟಕಡೆಯ ಬಾರಿ ಕುದುರೆ ಸವಾರಿಮಾಡಿ, ನಲ್ಮಾತುಗಳನ್ನಾಡಿ, ಕೊನೆಯ ಬಾರಿ ಚುಂಬಿಸಿ ಅವಳಿಗೆ ಶರಣು ಹೇಳಬಯಸು ತ್ತಾನೆ. ಆದ್ದರಿಂದ ಆತ ಅವಳನ್ನು ಕೇಳಿಕೊಂಡಾಗ ಆಕೆ ಅದಕ್ಕೊಪ್ಪಿಕೊಳ್ಳುವ ಕೃಪೆಮಾಡುತ್ತಾಳೆ. ಪದ್ಯದ ಸಾರಾಂಶ ಹೀಗಿದೆ : "ಪ್ರಿಯೆ, ಪರಿಸ್ಥಿತಿ ಹೀಗಾಗಿರು ವುದರಿಂದ ನನ್ನ ಹಣೆಬರಹವೇ ಇಷ್ಟೊಂದು ನನಗೆ ತಿಳಿದುಹೋಗಿರುವುದರಿಂದ ನನ್ನ ಜೀವನಕ್ಕೆ ಅರ್ಥಕೊಡುವ ಪ್ರೀತಿಯೆಂಬುದೇ ತೀರಿಹೋಗಿರುವುದರಿಂದ. ಇದು ಹೀಗೇ ಆಗಬೇಕೆಂಬ ವಿಧಿ ಇರುವುದರಿಂದ, ನಾನೇನೂ ಹೆಚ್ಚಿಗೆ ಮಾಡಲಾಗುವುದಿಲ್ಲ. ನೀನಿಷ್ಟು ದಿನಗಳವರೆಗಾದರೂ ನನ್ನ ಜೀವನಕ್ಕೊಂದು ಆಶೆಯನ್ನು ಕೊಟ್ಟು ನನ್ನನ್ನು ಸಂತೋಷವಾಗಿರಿಸಿದ್ದುದರಿಂದ ನಾನು ಹೃದಯದುಂಬಿದಭಿಮಾನದಿಂದ ನಿನ್ನುಪಕಾರ ವನ್ನು ಸ್ಮರಿಸುತ್ತೇನೆ. ಇನ್ನು ಮೇಲೆ ನೀನು ಕೊಟ್ಟ ಆಸೆಯನ್ನು ಹೊರಳಿ ತೆಗೆದು ಕೊಂಡು ಬಿಡು. ನಾನು ಮಾತ್ರ ಆ ಆಶೆಯ ನೆನಪೊಂದನ್ನೆ ಮರುಕಳಿಸುತ್ತ ಜೀವಿಸು ತ್ತೇನೆ. ಮತ್ತು ನೀನು ಸಿಟ್ಟಿಗೇಳದಿದ್ದರೆ ಒಂದು ಮಾತು ಕೇಳುತ್ತೇನೆ ನಡೆಯಿಸಿ ಕೊಡುತ್ತೀಯಾ ? ಕೊನೆಯ ಬಾರಿ ಒಮ್ಮೆ ಕುದುರೆ ಸವಾರಿ ಮಾಡಿಕೊಂಡು ಬರೋಣ ಬರುತ್ತೀಯಾ ?

ನನ್ನ ಪ್ರಿಯತಮೆ ತನ್ನ ಹುಬ್ಬುಗಳನ್ನು ಕೊಂಕುಗೊಳಿಸಿ ಅಭಿಮಾನ ಹಿಂದೆಗೆ ದುದರಿಂದ ಅವಳು ಕರಿಯ ಕಣ್ಣುಗಳ ಆಳದೊಳಗಿಂದ ಕರುಣೆ ಸೂಸುತ್ತಿರಲು ಅವಳೊಂದು ಕ್ಷಣ ನನ್ನನ್ನೆ ದಿಟ್ಟಿಸಿ ನೋಡಿದಳು. ಆಗ ನನಗೆ ಜೀವನ ಮರಣಗಳ ತಕ್ಕಡಿಯಲ್ಲಿ ತೂಗಾಡಿದಂತನಿಸುತ್ತಿತ್ತು. ನನ್ನ ಮೈಯ್ಯಲ್ಲೆಲ್ಲ ರಕ್ತಸಂಚಾರ ವೇಗ ವಾಗತೊಡಗಿತು. ನನ್ನ ಕೊನೆಯ ವಿನಂತಿ ವ್ಯರ್ಥವಾಗಿ ಹೋಗಲಿಲ್ಲವೆನ್ನುವ ಸಮಾಧಾನವಾಯಿತು. ಕೂಡಿಯೆ ಉಸಿರಾಡಿಸುತ್ತ, ಕೂಡಿಯೆ ಕುದುರೆ ಸವಾರಿ ಮಾಡುತ್ತೇವೆ. ಆದ್ದರಿಂದ ಇದೊಂದು ದಿನ ಹೆಚ್ಚಿಗೆ ನಾನು ಧನ್ಯವಾದೆನೆಂಬ ಭಾವನೆ ನನ್ನಲ್ಲಿ ತುಂಬಿತುಳುಕಿತು. ಯಾರಿಗೆ ಗೊತ್ತು, ಇಡೀ ಜಗತ್ತೇ ಇಂದು ರಾತ್ರಿ ಪ್ರಳಯವಾಗಿ ಹೋಗಬಹುದು ? ಉಶ್ ಸೂರ್ಯ ಚಂದ್ರ ಚುಕ್ಕೆಗಳಿಂದ ಹರ ಸಲ್ಪಟ್ಟ ಪಶ್ಚಿಮ ದಿಕ್ಕನ್ನು ನೊರೆ ನೊರೆಯಾದಂಥ ಮೋಡವನ್ನು ನೋಡಿದಾಗ ನಾನು ಸಂತೋಷದಿಂದ ಉಬ್ಬಿ ಬಿಡುತ್ತೇನೆ. ನನ್ನ ಪ್ರಿಯತಮೆ ನನ್ನ ಹರವಾದ ಎದೆಯ ಮೇಲೆ ತಲೆಯಿಟ್ಟು ಸುತ್ತು ಬಳಸಿದಾಗ ನನಗಾದ ಸಂತೋಷಭಯಗಳು

ತಪ್ಪಿಸ್ವಲ್ಲ. ಅವಳ ಬಗ್ಗೆ ನನ್ನನುರಾಗ ಉಕ್ಕಿಹರಿದು ಸುತ್ತಲಿದ್ದ ಮೋಡಗಳು. ಸೂರ್ಯಾಸ್ತ ಚಂದ್ರೋದಯ ನಕ್ಷತ್ರಗಳ ಕಾಂತಿ ಇವೆಲ್ಲವೂ ನನ್ನ ಹತ್ತಿರ ಬಂದಂತೆ ಅನಿಸಿದಾಗ ಅಲ್ಲಿ ನನ್ನ ದೇಹವೆ ಕರಗಿದಂತಾಗಿ ಎಲ್ಲವೂ ಸ್ವರ್ಗವಾದಂತೆನಿಸಿತ್ತು.

ಆ ಮೇಲೆ ನಮ್ಮ ಸವಾರಿಯನ್ನು ಪ್ರಾರಂಭಿಸಿದೆವು. ಬಹಳ ದಿನಗಳಿಂದ ಮುದ್ದೆಯಾಗಿ ಹೋಗಿದ್ದ ನನ್ನ ಆತ್ಮವೆಂಬ ಘಟವು ಸರಳವಾಗಿ ಬಿಚ್ಚಿಕೊಂಡು ಸ್ವಚ್ಛಂದವಾಗಿ ಗಾಳಿಯಲ್ಲಿ ಹಾರಾಡತೊಡಗಿತು. ಹಳೆಯ ಅಲೆಗಳೆಲ್ಲವೂ ಹಿಂದು ಳಿದು ಹೋದವು. ತಾಳತಪ್ಪಿದ ಬಾಳಿನಲ್ಲಿ ವ್ಯರ್ಥ ಹೋರಾಡಿದರೆ ಉಪಯೋಗ ವೇನು ? ನಾನು ಹಾಗೆ ಮಾಡಿದ್ದರೆ ಚೆನ್ನಾಗಿರುತ್ತಿತ್ತು, ಹೀಗೆ ಮಾಡಿದ್ದರೆ ಚೆನ್ನಾ ಗಿರುತ್ತಿತ್ತೆಂದು ನಾನು ವಿಚಾರಿಸಿದರೆ ಪ್ರಯೋಜನವೇನು ? ನನಗೆ ಲಾಭವೂ ಆಗ ಬಹುದಾಗಿತ್ತು. ಹಾನಿಯೂ ಆಗಬಹುದಿತ್ತು. ಅವಳು ನನ್ನನ್ನು ಪ್ರೀತಿಸಲೂ ಬಹುದಾಗಿತ್ತು. ದ್ವೇಷಿಸಲೂ ಬಹುದಾಗಿತ್ತು. ಅದು ಹೀಗೆs ಎಂದು ನಿಶ್ಚಿತ ವಾಗಿ ಹೇಳುವವರಾರು ? ಅತ್ಯಂತ ಕೆಟ್ಟ ಘಟನೆಯಾಗಿದ್ದರೆ ಇಂದು ನಾನೆಲ್ಲಿರು ತ್ತಿದ್ದೆನೆಂಬುದು ಯಾರಿಗೆ ಗೊತ್ತು ? ಏನೇ ಆಗಲಿ ಈಗ ಮಾತ್ರ ನಾನು ಮತ್ತು ನನ್ನ ಪ್ರಿಯತಮೆ ಕೂಡಿ ಸವಾರಿಮಾಡುತ್ತಿದ್ದೇವೆ. ಅದೊಂದೆ ನನಗೊಂದು ದೊಡ್ಡ ಸಂತೋಷ.

ಈ ಜಗತ್ತಿನಲ್ಲಿ ಮಾತಿನಲ್ಲಾಗಲಿ, ಕೆಲಸದಲ್ಲಾಗಲಿ ಅಪಜಯಹೊಂದಿದವರು ನಾನೊಬ್ಬನೆಯೆ ಇದ್ದೇನೆಯೆ ? ಹಾಗೇನಿಲ್ಲ ಇಲ್ಲಿ ಎಲ್ಲರೂ ಹೋರಾಡುತ್ತಿದ್ದರೂ ಜಯಗಳಿಸುವವರು ಯಾರು ಎಂದು ಹೇಗೆ ಹೇಳುವುದು ? ನಾವಿಬ್ಬರೂ ಸವಾರಿ ಮಾಡುತ್ತಿದ್ದೆವು. ಎರಡೂ ಬದಿಗೆ ಭೂಮಿ ಹಿನ್ನುಗ್ಗಿದಂತೆ ಮುಂದೆ ಮುಂದೆ ನಾನು ಹೊಸ ಹೊಸ ನಗರಗಳನ್ನು ಮತ್ತು ಪ್ರದೇಶಗಳನ್ನು ಕಂಡಾಗ ನನ್ನ ಹೃದಯ ಸಂತೋಷದಿಂದ ತುಂಬಿ ತುಳುಕಿತು. ನಾನು ಉಳಿದೆಲ್ಲ ಜನರ ಬಗ್ಗೆ ವಿಚಾರಮಾಡು ತ್ತಿದ್ದೆ. ಏನೆಂದರೆ, ಈ ಜಗತ್ತಿನಲ್ಲಿ ಪ್ರತಿಯೊಬ್ಬರೂ ಸಾಕಷ್ಟು ಪರಿಶ್ರಮವನ್ನು ಪಟ್ಟು ತಮ್ಮ ಕಾಯಕವನ್ನು ಮಾಡಿದರೂ ಪ್ರತಿಯೊಬ್ಬರೂ ಅಪಜಯದ ಭಾರ ವನ್ನು ಸಹಿಸಿಕೊಳ್ಳಬೇಕಾಗುತ್ತದೆ ಎಂದು. ನಾವು ಯಾವುದೆ ಕೆಲಸವನ್ನು ಮಾಡಿ ದರೂ ಆ ಕೆಲಸದ ಕೊನೆಯನ್ನು ಮನಸ್ಸಿನಲ್ಲಿಟ್ಟುಕೊಂಡಿರಬೇಕು. ಅಲ್ಲದೆ ಆಶಾ ಭರಿತ ಭೂತ ಮತ್ತು ಈಗಿನ ವರ್ತಮಾನಗಳ ನಡುವಿನ ಅಂತರವನ್ನು ತಿಳಿದಿರಬೇಕು. ಅದರಂತೆಯೆ ಸಾಧಿಸಿದ ಸ್ವಲ್ಪ ಕೆಲಸ ಮತ್ತು ಸಾಧಿಸಲಾಗದ ಅಪಾರ ಕೆಲಸಗಳ ನಡುವಿನ ಅಂತರವನ್ನೂ ತಿಳಿದಿರಬೇಕು. ಅವಳು ನನ್ನನ್ನು ಪ್ರೀತಿಸಿಯಾಳೆಂದು ಆಶೆ ಪಟ್ಟಿದ್ದೆ. ಆದರೇನು ಮಾಡುವುದು ? ಈಗಲಂತೂ ನಮ್ಮ ಸವಾರಿ ಸಾಗಿದೆಯಷ್ಟೆ.

ಈ ಪ್ರಪಂಚದಲ್ಲಿ ಮೆದುಳು ಮತ್ತು ಕೈಗಳ ನಡುವೆ ಸಮರಸವೇನಾದರೂ ಉಂಟಾಗಿದೆಯೆ ? ಯಾವುದಾದರೂ ಹೃದಯ ಭಾವಿಸಿದ್ದನ್ನೆಲ್ಲ ಕೃತಿಗಿಳಿಸಿದೆಯೆ ?

ಯಾವುದಾದರೂ ಕೃತಿ ಅದರ ಹಿಂದಿರುವ ವಿಚಾರವನ್ನು ಸಂಪೂರ್ಣವಾಗಿ ಅಭಿವ್ಯಕ್ತಿಸಿದೆಯೆ ? ಯಾವುದಾದರೂ ಮನಸ್ಸು ದೇಹದ ಆತಂಕವನ್ನು ಎದುರಿಸಲಾರದೆ ಇದೆಯೆ ? ನಮ್ಮ ಸವಾರಿ ನಡೆದಿದೆ. ನನ್ನ ಪ್ರಿಯತಮೆಯ ಮೇಲೆ ಕೆಳಗಾಗುತ್ತಿರುವ ಎದೆಯನ್ನು ನಿಟ್ಟಿಸಿನೋಡುತ್ತೇನೆ. ಮುಟ್ಟಬಲ್ಲವರಿಗೆ ಒಂದೇ ಏಕೆ ಅನೇಕ ಸಿಂಹಾಸನ ಕಿರೀಟಗಳು ಸಿಕ್ಕೇ ಸಿಗುತ್ತವೆ. ಎಂಥ ಜನಪ್ರಿಯ ರಾಜತಜ್ಞನಿದ್ದರೂ ಆತ ಸತ್ತ ಮೇಲೆ ಆತನ ಜೀವನವನ್ನು ಬರಿ ಹತ್ತು ಸಾಲುಗಳಲ್ಲಿ ಬರೆದಿಡುತ್ತಾರೆ. ಒಬ್ಬ ಶೂರ ಸೈನಿಕ ಸತ್ತಾಗ ಆತನ ಕುಣಿಯ ಮೇಲೆ ಒಂದು ಧ್ವಜವನ್ನು ಮಾತ್ರ ನಿಲ್ಲಿಸುತ್ತಾರೆ ಮುಂದೇನಾಗುವುದು ಗೊತ್ತೆ ? ಕೆಲವು ದಿನಗಳಾದ ನಂತರ ಜನರು ಅವನ ಹೆಸರನ್ನು ಕೆರೆದು ಇಲ್ಲವಾಗಿಸಿ ಬಿಡುತ್ತಾರೆ. ಇವೆಲ್ಲ ಸಾಧನೆಗಳಿಗಿಂತ ನನ್ನ ಕುದುರೆ ಸವಾರಿ ಉತ್ತಮವಾದದ್ದೆಂದು ಹೇಳಬಹುದು.

ಏನು ಕವಿಪುಂಗವನೆ ನಿನ್ನ ಪರಿಶ್ರಮಗಳಿಗೇನಾದರೂ ಅರ್ಥವಿದೆಯೋ ? ನಿನ್ನ ಮೆದುಳಂತೂ ನಾವು ಭಾವಿಸಿದುದನ್ನೆ ವಿವಿಧ ಪ್ರಾಸಲಯಗಳಲ್ಲಿ ಹೊಸೆಯುತ್ತದೆ. ನಾವೆಲ್ಲ ಸುಂದರವಾದದ್ದೆಂದು ಬಗೆದುದನ್ನೆ ನೀನು ಅಭಿವ್ಯಕ್ತಿಸುತ್ತಿ ಪ್ರಾಸಬದ್ಧವಾಗಿ, ಇದೇನು ಅಂಥ ಸಣ್ಣ ಸಾಧನೆಯಲ್ಲ. ಅತೀ ಮಹತ್ವದ್ದೆ ಆಗಿದೆ. ಆದರೇನು, ಮನುಷ್ಯನಿಗೆ ಸಿಗಬೇಕಾಗಿದ್ದ ಅತ್ಯಂತ ಉತ್ಕೃಷ್ಟವಾದ ವಸ್ತುಗಳು ನಿನಗೆ ಸಿಕ್ಕಿವೆಯೇ? ಕಾವ್ಯದ ಒಂದೂ ಸಾಲನ್ನೂ ಬರೆಯದಿದ್ದವರಿಗಿಂತ ಮೊದಲೆ ನೀನು ದರಿದ್ರನಾಗಿ ಬಡವನಾಗಿ ರೋಗಪೀಡಿತನಾಗಿಲ್ಲವೆ ? ಕುದುರೆ ಸವಾರಿ ಮಾಡುವುದೆಂದರೆ ನನಗೆ ಮಹಾ ಸಂತೋಷ. ಆದ್ದರಿಂದಲೇ ನಾನೀಗ ಅದನ್ನನುಭವಿಸುತ್ತಿದ್ದೇನೆ.

ಏನು ಮಹಾಶಿಲ್ಪಿಯೆ, ನಮ್ಮ ಕವಿಪುಂಗವನಂತೆಯೆ ನೀನೂ ಸಹಿತ ನಿನ್ನ ಕಲೆಯ ಸಾಧನೆಗಾಗಿ ಅನೇಕ ವರುಷಗಳ ವರೆಗೆ ಪರಿಶ್ರಮಿಸಿದೆ. ಕಲಾದೇವತೆಯ ದಾಸನಾದೆ. ಅದರ ಪರಿಣಾಮವಾಗಿ ಈ ಸೌಂದರ್ಯಮೂರ್ತಿ ವ್ಹೀನಸ್‌ದೇವತೆಯ ಮೂರ್ತಿಯನ್ನು ಕೆತ್ತಿನಿಲ್ಲಿಸಿದ್ದಿ. ಆದರೆ ನಾವು ಕಣ್ಣು ಹೊರಳಿಸುವದು ಆ ಹೊಳೆಯನ್ನು ದಾಟುತ್ತಿರುವ ಜೀವಂತ ಹುಡುಗಿಯ ಕಡೆಗೆ. ಮತ್ತೇನು ಸಂಗೀತಗಾರನೆ, ನೀನೂ ಜೀವನದಲ್ಲಿ ಮತ್ತೊಂದೇನೂ ಮಾಡದೆ ಬರಿಯ ಸ್ವರಗಳನ್ನೇ ಹಾಡಿಹಾಡಿ ಕಾಲ ಕಳೆದೆ. ನಿನ್ನ ತಲೆಗೂದಲುಗಳೂ ಬೆಳ್ಳಗಾಗಿ ಬಿಟ್ಟಿವೆ. ನಮ್ಮ ಸಂಗೀತಗಾರರು ತಯಾರಿಸಿದ ಸಂಗೀತನಾಟಕ ಅತ್ಯದ್ಭುತವಾಗಿದೆಯೆಂದು ನಿನ್ನ ಗೆಳೆಯರು ನಿನ್ನನ್ನು ಹೊಗಳುತ್ತಾರೆ. ಆದರೆ ಸಂಗೀತ ಕ್ಷೇತ್ರದಲ್ಲಿ ಇಂಥ ಹೊಗಳಿಕೆ ಎಷ್ಟು ದಿನ ನಿಲ್ಲುವುದೆಂಬುದು ನಿನಗೆ ಗೊತ್ತೆ ಇದೆಯಲ್ಲ. ಆದರೆ ನಾನು ಮಾತ್ರ ನನ್ನ ತಾರುಣ್ಯವನ್ನು ಪೂರ್ತಿಯಾಗಿ ಪ್ರೀತಿಸುವುದರಲ್ಲಿಯೆ ಕಳೆದುಬಿಟ್ಟೆ. ನಾವೆಷ್ಟು ಸಂತೋಷದಿಂದ ಸವಾರಿಮಾಡುತ್ತಿದ್ದೇವೆ. ನೋಡು.

ನಮ್ಮ ಜೀವನದಲ್ಲಿ ನಮಗೆ ಯೋಗ್ಯವಾದ ವಸ್ತು ಯಾವುದೆಂದು ಹೇಳು ವವರು ಯಾರು ? ಈ ಭೂಮಿಯ ಮೇಲಿದ್ದ ನನ್ನ ಅಸ್ತಿತ್ವಕ್ಕೊಂದು ಪರಮಾನಂದ ಸ್ಥಿತಿ ಸಿಗುವಹಾಗಿದ್ದರೂ. ಪಣೆಬರಹದ ಇಂಥದೊಂದು ಒಡಂಬಡಿಕೆಗೆ ನಾನು ಸಹಿ ಹಾಕಿದ್ದರೂ, ಪರಮ ಸಂತೋಷದಿಂದ ಸಾಯುತ್ತೇನೆಂದು ಗೊತ್ತಿದ್ದರೂ, ಪರ ಲೋಕದ ಜೀವನವನ್ನೂ ನಾನು ಅನುಭವಿಸಲೇ ಬೇಕು. ಒಮ್ಮೆ ನಾನು ಈ ಭೂಮಿಯ ಮೇಲೆ ಕಾಲಿಟ್ಟ ಮೇಲೆ ಈ ವೈಭವದ ಮಾಲೆ ನನ್ನ ಕೊರಳ ಸುತ್ತಿರಲು ನಾನು ಆ ಪರಮಲೋಕವನ್ನು ಕಾಣಲು ಸಾಧ್ಯವೆ ? ಏನಾದರೂ ಆಗಲಿ ನಾನಂತೂ ಪ್ರಯತ್ನಿಸಿ ಪರೀಕ್ಷಿಸಿ ನೋಡುವೆ ಆದರೂ ಈ ಶೋಧದ ವಿಷಯವಾಗಿ ವಿಚಾ ರಿಸಿದಾಗ ನನ್ನ ಮೈ ತತ್ತರಿಸುತ್ತದೆ. ಭೂಮಿಯೆ ಇಷ್ಟೊಂದು ಒಳ್ಳೆಯದಾಗಿರು ವಾಗ ಸ್ವರ್ಗ ಅತ್ಯುತ್ಕೃಷ್ಟವಾಗಿ ತೋರುತ್ತದೆಯೆ ? ಈಗಲಾದರೂ ಆ ಭೂಮಿ ಆ ಸ್ವರ್ಗವೆರಡೂ ಈ ಸವಾರಿಯಿಂದ ಬಹುದೂರದಲ್ಲಿವೆ.

ಇಷ್ಟೊತ್ತಿನ ವರೆಗೆ ಸವಾರಿ ಮಾಡಿದರೂ ನನ್ನ ಪ್ರಿಯತಮೆ ಒಂದೇ ಒಂದು ಶಬ್ದವನ್ನಾದರೂ ಮಾತನಾಡಿಲ್ಲ. ಮೇಲಿರುವ ಮೊದಲ ಸಾರೆ ಕಾಣಿಸಿದ ಜೀವನದ ಹೂವನ್ನೆ ನಮ್ಮ ಕಣ್ಣುಗಳನ್ನು ಮೇಲೆ ಹೊರಳಿಸಿ ನಿಶ್ಚಲವಾಗಿ ನೋಡುತ್ತಿರುವ ಸ್ಥಿತಿಯೆ ಒಂದು ವೇಳೆ ಸ್ವರ್ಗವಾಗಿದ್ದರೆ ಅದೇ ಏಕೆ ನಿರಂತರವಾಗಿ ಸಾಗಬಾರದು ? ಹೀಗೆಯೆ ನಾವಿಬ್ಬರೂ ನಿರಂತರವಾಗಿ ಸವಾರಿಮಾಡುತ್ತಿದ್ದರೆ ಎಷ್ಟೊಂದು ಚೆನ್ನಾ ಗಿರುತ್ತದಲ್ಲವೇ ? ನಮ್ಮ ಜೀವನ ಚಿರಂತನವಾಗಿ ಹಳೆಯದಾಗಿದ್ದರೂ ಹೊಸ-ದಾಗಿಯೆ ಏಕೆ ಉಳಿಯಬಾರದು ? ವಸ್ತುಗತವಾಗಿ ಬದಲಾಗದೆ ಅಂಶಗತವಾಗಿ ಮಾತ್ರ ಏಕೆ ಬದಲಾಗಬಾರದು ? ಇದೇ ಕ್ಷಣವೆ ಏಕೆ ಅಮರತ್ವವಾಗುಳಿಯಬಾರದು ? ಹಾಗಿದ್ದರೆ ನಾವಿಬ್ಬರೂ ನಿರಂತರವಾಗಿಯೂ ಸವಾರಿಮಾಡುತ್ತ ಸ್ವರ್ಗವನ್ನೈದ ಬಹುದಲ್ಲವೆ ?.

ಈ ಮೇಲಿನ ಮೂರು ಪದ್ಯಗಳನ್ನಾಧರಿಸಿ ಬ್ರೌನಿಂಗ್ ಕವಿಯ 'ನಾಟಕೀಯಾತ್ಮ ಗೀತ'ದ ಕಲ್ಪನೆಯನ್ನು ತಿಳಿದುಕೊಳ್ಳಬಹುದು. ಇವುಗಳನ್ನು ಬೇರೆ ಬೇರೆ ಕವಿಗಳು ವಿಮರ್ಶಕರು ಬೇರೆ ಬೇರೆ ಹೆಸರಿನಿಂದ ಕರೆದಿದ್ದಾರೆ. ಕೆಲವರು ಅಂದರೆ ಲೆಗವಿ ಕೆಝಾಮಿಯಾ ಇವುಗಳನ್ನು 'ಆತ್ಮದ ಕನ್ನಡಿ' ಎಂದು ಕರೆವರೆ ಇನ್ನು ಕೆಲವರು ಇವು ಗಳನ್ನು 'ಆತ್ಮದ ಚರಿತ್ರೆ'. 'ಆತ್ಮದ ವಿಡಂಬನೆ'. 'ಆತ್ಮ ಪ್ರಶಂಸೆ' ಮುಂತಾಗಿ ಬೇರೆ ಬೇರೆ ದೃಷ್ಟಿಕೋನಗಳಿಂದ ಕರೆದಿದ್ದಾರೆ. ಈ ಕಾವ್ಯ ಸಮೂನೆಯ ತಲೆಬರಹದ ಬಗೆಗೆ ಅಭಿಪ್ರಾಯ ವೈವಿಧ್ಯವಷ್ಟೇ ಇದ್ದರೂ ಇದರ ಸಾಮಾನ್ಯ ಗೊತ್ತುಗುರಿಯ ಬಗೆಗಂತೂ ವಿವಾದಕ್ಕೆ ಎಡೆಯಿಲ್ಲ. ಈ ಕಾವ್ಯ ಮಾದರಿಯಲ್ಲಿ ಎರಡು ಮುಖ್ಯಾಂಶ ಗಳು– ಅಂದರೆ ನಾಟಕೀಯ ಹಾಗೂ ಗೀತದ ಅಂಶಗಳಿರುವುದು ವಿವಾದಕ್ಕತೀತ ವಾದುದು. ಬ್ರೌನಿಂಗ್ ಕವಿ ಈ ತರಹದ ಕಾವ್ಯವನ್ನು ಹೊಸತಾಗಿ ಹುಟ್ಟಿಸದಿದ್ದರೂ

ಮೊದಲೇ ಅಸ್ತಿತ್ವದಲ್ಲಿದ್ದ ಅದನ್ನು ಚೆನ್ನಾಗಿ ಬೆಳೆಸಿ ಅದಕ್ಕೊಂದು ಮರ್ಯಾದೆಯ ಸ್ಥಾನಮಾನವನ್ನು ತಂದುಕೊಟ್ಟನು. ಈ ಕಾವ್ಯ ನಮೂನೆಯನ್ನು ಅಭ್ಯಸಿಸುವಾಗ ಮಾನವಶಾಸ್ತ್ರೀಯ ಕೆಲವೊಂದು ವಿವರಣೆಗಳನ್ನೂ ಗಮನದಲ್ಲಿಡಬೇಕಾದದ್ದು ಅವಶ್ಯ. ಬ್ರೌನಿಂಗ ಕವಿಯ ಕಾವ್ಯವನ್ನು 'ಅನುಭವ ಕಾವ್ಯ'ವೆಂದೇ ಕರೆಯಲಾಗುತ್ತದೆ. ಅಂದರೆ ಅವನ ಕಾವ್ಯ ಮತ್ತೊಂದು ತರಹದ ಕಾವ್ಯ ಅಂದರೆ 'ಸ್ಮರಣ ಕಾವ್ಯ'ಕ್ಕಿಂತ ಭಿನ್ನವಾಗಿದೆ. 'ಸ್ಮರಣ ಕಾವ್ಯ'ದಲ್ಲಿ ನಮಗೆ ಪ್ರತ್ಯಕ್ಷವಾದ ಅನುಭವಗಳ ನೆನಪುಗಳೂ ಅಥವಾ ಸಾಮಾನ್ಯೀಕರಣಗಳೂ ಅಥವಾ ಸಾರವಂಶಗಳು ಸಂಕ್ಷಿಪ್ತವಾಗಿ ಅಭಿವ್ಯಕ್ತವಾಗಿದ್ದರೆ 'ಅನುಭವ ಕಾವ್ಯ'ದಲ್ಲಿ ನಮಗೆ ಪ್ರತ್ಯಕ್ಷವಾದ ಅನುಭವದ ದರ್ಶನವೇ ಆಗುತ್ತದೆ. ಅಂದರೆ ಇಲ್ಲಿ ಕವಿ ಓದುಗರನ್ನು ಒಂದು ವಿಶಿಷ್ಟವಾದ ಅನುಭವದ ಸನ್ನಿಧಿಯಲ್ಲಿಯೇ ಒಯ್ದು ನಿಲ್ಲಿಸಿ ಅವರಿಗೂ ತನ್ನ ಹಸಿಹಸಿ ಅನುಭವದ ರುಚಿಯನ್ನು ಉಣ್ಣಿಸುತ್ತಾನೆ. ಇಂಥ ಅನುಭವವನ್ನು ಹೊಂದುವ 'ಪರಿಸ್ಥಿತಿ'ಯಲ್ಲಿದ್ದಾಗ ಕವಿಗೂ ಅದರಂತೆಯೇ ಸಂವೇದನಾಶೀಲನಾದ ಓದುಗನಿಗೂ ಕೆಲವು 'ವಿವರಗಳು' ಅನಿವಾರ್ಯವಾಗಿ ಬರುವುದರಿಂದ ಇಲ್ಲಿ ಪ್ರತ್ಯಕ್ಷ ವರ್ಣನೆಗಿದ್ದಷ್ಟು ಮಹತ್ವ ಸಾರಾಂಶಕ್ಕಾಗಲಿ, ಸಾಮಾನ್ಯೀಕರಣಕ್ಕಾಗಲಿ ಇರುವುದಿಲ್ಲ. ಹಾಗಿದ್ದರೆ ಅನುಭವವೆಂದರೇನೆಂದು ಕೆಲವರು ಕೇಳಬಹುದು. ವ್ಯಕ್ತಿ ಹಾಗೂ ವಸ್ತುವಿನ ಸಂಗಮವೇ ಅನುಭವವೆಂದು ಹೇಳುತ್ತೇವೆ. ಅಂದರೆ ಮನುಷ್ಯನ ಚಿತ್ತ ಬಾಹ್ಯಜಗತ್ತಿನ ಮೇಲೆ ಹರಿದಾಗ ಆತನ ಅಂತರಂಗ, ಬಹಿರಂಗ ಜಗತ್ತಿಗೆ ಪ್ರತಿಸ್ಪಂದಿಸಿ ಪಂಚಜ್ಞಾನೇಂದ್ರಿಯಗಳ ಮೂಲಕ ಅನುಭವವನ್ನು ಸಂಚಯಿಸುತ್ತದೆ. ಹೀಗೆ ಸಂಚಯಿಸಿದ ಅನುಭವವನ್ನೇ ಅದರ ಹಸಿಹಸಿ ವಿವರಗಳೊಂದಿಗೆ ಸಹೃದಯರಿಗೆ ಮನಂಬುಗುವಂತೆ ಅಭಿವ್ಯಕ್ತಿಸುವುದೇ ಬ್ರೌನಿಂಗನ ಅನುಭವ ಕಾವ್ಯದ ಮೂಲಗುರಿ. ಹಾಗಿದ್ದರೆ ಆತ ತನ್ನ ಜೀವನದಲ್ಲಿ ತನಗಾದ ಎಲ್ಲ ಅನುಭವಗಳನ್ನು ಇದೇ ರೀತಿ ಚಿತ್ರಿಸಿದ್ದಾನೆಯೇ ಎಂದು ಯಾರಾದರೂ ಕೇಳಬಹುದು. ಆದರೆ ಅದಕ್ಕೆ ಉತ್ತರ ಹೀಗೆ ಹೇಳಬಹುದು. ಕವಿ ತನ್ನೆಲ್ಲ ಅನುಭವಗಳನ್ನೂ ಕಾವ್ಯರೂಪದಲ್ಲಿ ಹೇಳುವುದು ಅಸಾಧ್ಯವಲ್ಲದೆ ಅಸಂಭವನೀಯವೂ ಅಹುದು. ಹಾಗಿದ್ದರೆ ಆತ ತನ್ನ ನಾಟಕೀಯಾತ್ಮ ಗೀತಗಳಲ್ಲಿ ಚಿತ್ರಿಸಿದ ಅನುಭವಗಳ ಪ್ರಕಾರವೆಂಥದು ಎಂಬ ಪ್ರಶ್ನೆ ಏಳುವುದು. ಅದಕ್ಕೆ ಉತ್ತರ ಹೀಗಿದೆ. ಅದೇನೆಂದರೆ ಕವಿ ತನ್ನ ಜೀವನದಲ್ಲಿ ಆಗಿ ಹೋದ ಕೆಲವು 'ಮಹತ್ವದ' ಅಂದರೆ ಮನಸ್ಸಿನಲ್ಲಿ ತುಮುಲವನ್ನೆಬ್ಬಿಸಿದ ದ್ವಂದ್ವ ಪ್ರಸಂಗಗಳನ್ನು ಮಾತ್ರ ಆರಿಸಿಕೊಂಡು ವರ್ಣಿಸುತ್ತಾನೆ. ಈ ಪ್ರಸಂಗಗಳು ಆತನ ಜೀವನದಲ್ಲಿಯ ಮಹತ್ವದ ತಿರುವುಗಳಾಗಿರುತ್ತವೆ. ಇಂಥ ಪ್ರಸಂಗಗಳು ಕಥಾನಾಯಕನ ಮನಸ್ಸಿನಲ್ಲಿ ತುಮುಲಗಳನ್ನೆಬ್ಬಿಸುತ್ತವೆ. ಹೀಗಾಗಿ ಕಥಾನಾಯಕನ ಆತ್ಮದಲ್ಲಿಯೇ ಎರಡು ವಿಚಾರಧಾರೆಗಳು ಉದ್ಭವಿಸಿ ಪರಸ್ಪರ ಪ್ರಶ್ನಿಸಿ ದೂಷಿಸಿ ತಮ್ಮ ಮೇಲ್ಮೆಯನ್ನು ಸ್ಥಾಪಿಸಲಿಕ್ಕೆ ಪ್ರಯತ್ನಿಸುತ್ತವೆ. ಹೀಗೆ ಇಂಥ ಮಹತ್ವದ ಪ್ರಸಂಗಗಳಿಂದ ಪ್ರೇರಿತವಾದ ಕಥಾ

ನಾಯಕನ ಆತ್ಮರಂಗದ ಮೇಲೆ ನಾಟಕ ಅಂದರೆ ಘರ್ಷಣೆ ನಡೆಯುತ್ತದೆಯಾದ್ದರಿಂದ ಈ ಕವನಗಳು 'ನಾಟಕೀಯ'ವಾಗಿರುವುದು ಅವಶ್ಯವಾಗಿದೆ. ಆದರೆ ಈ ಪದ್ಯಗಳ ಇನ್ನೊಂದು ವೈಶಿಷ್ಟ್ಯವೇನೆಂದರೆ ಇಲ್ಲಿ ಕವಿಯಾದವನು ಕಥಾನಾಯಕನಲ್ಲಿ ನಡೆಯುವ 'ನಾಟಕವನ್ನು ವಸ್ತುನಿಷ್ಠವಾಗಿ ನೋಡಿ ಕಥಾನಾಯಕನ ನ್ಯೂನತೆಗಳನ್ನು ವಿಮರ್ಶಿಸದೆ, ಖಂಡಿಸದೆ ಅವನ ಪರವಾಗಿ ನುಡಿಯುವ ಇಲ್ಲವೆ ಮೌನವಾಗಿಯೇ ಅದನ್ನು ಸಹಿಸಿ ಪರೋಕ್ಷವಾಗಿ ಅದನ್ನು ಎತ್ತಿಹಿಡಿಯುವ ಸ್ವಭಾವದವನಾಗಿರುತ್ತಾನೆ. ಹಾಗಾದರೆ ಈ ಪದ್ಯದಲ್ಲಿ ಎಲ್ಲವೂ ನಾಟಕೀಯವಾಗಿರುವಂತಿದ್ದರೆ ಕವಿ ನಾಟಕವನ್ನೇ ಏಕೆ ಬರೆಯಲಿಲ್ಲವೆಂಬ ಪ್ರಶ್ನೆ ಸ್ವಾಭಾವಿಕವಾಗಿ ಏಳುತ್ತದೆ. ನಾಟಕಗಳನ್ನು ಬರೆಯಲು ಹೋಗಿ ಕೈಸುಟ್ಟುಕೊಂಡ ಕವಿ 'ನಾಟಕೀಯಾತ್ಮ ಗೀತ'ಕ್ಕೆ ತಿರುಗಿದುದರಲ್ಲಿ ವಿಶೇಷ ಅರ್ಥವಿದೆ. ಈ ಪದ್ಯಗಳಲ್ಲಿ ನಾಟಕೀಯ ಅಂಶ ಪ್ರಧಾನವಾಗಿರದೆ ಕಥಾನಾಯಕನ ಆತ್ಮಾಭಿವ್ಯಕ್ತಿಗೆ ಅಂದರೆ ಆತನ ಗೀತಕ್ಕೆ ಪ್ರೇರಕಸಾಧನವಾಗಿ ಮಾತ್ರ ಕೆಲಸ ಮಾಡುತ್ತದೆ. ಅದರಿಂದಲೇ ನಾಟಕೀಯಾತ್ಮಗೀತದಲ್ಲಿ ಸಾಮ್ಯವೈಷಮ್ಯಗಳನ್ನು ತೋರಿಸಿ ಗೀತವನ್ನುದ್ದೇಶಿಸುವುದರಲ್ಲಿಯೇ ನಾಟಕೀಯಾಂಶದ ಸಾರ್ಥಕತೆ ಅಡಗಿದೆ. ಈ ಕಾವ್ಯಮಾದರಿಯಲ್ಲಿ ಗೀತದಂಶವೇ ಪ್ರಧಾನವಾಗಿರುವ ಹಾಗಿದ್ದರೆ ಕವಿ ಗೀತಗಳನ್ನೇ (lyrics) ಏಕೆ ಬರೆಯಬಾರದಿತ್ತು ಎಂಬ ಮತ್ತೊಂದು ಪ್ರಶ್ನೆ ಏಳುತ್ತದೆ. ಆದರೆ ವಿಮರ್ಶಕರ ಅಭಿಪ್ರಾಯದಲ್ಲಿ ಹೇಳುವುದಾದರೆ ಕವಿ ಬರಿ ಗೀತಗಳನ್ನು ಬರೆದಿದ್ದರೆ ಅಲ್ಲಿ ವರ್ಣನೆ ಹೆಚ್ಚಾಗಿ, ನಾಟಕೀಯತೆಯಿಂದಾಗುವ ಪ್ರಭಾವದ ತೀವ್ರತೆ ಕಡಿಮೆಯಾಗಿ ಪದ್ಯಗಳು ನೀರಸವಾಗಬಹುದಿತ್ತು. ಇನ್ನೊಂದು ಪ್ರಮುಖ ವೈಶಿಷ್ಟ್ಯವೆಂದರೆ ಈ ಪದ್ಯಗಳನ್ನೋದುವಾಗ ಸಹೃದಯನು ಬೇರೆ ಕವನಗಳನ್ನೋದುವಾಗಿನದಕ್ಕಿಂತ ಭಿನ್ನವಾದ ದೃಷ್ಟಿಯನ್ನು ಹೊಂದಿರಬೇಕಾಗುವುದು. ಇಲ್ಲಿ ಸಹೃದಯರಾದ ನಾವು ಕಥಾನಾಯಕನ ನಿಷೇಧಾತ್ಮಕ ಕೃತಿಗಳನ್ನು ಕೇಳಿದಾಗ ಅವನ ಮೇಲೆ ಸಿಟ್ಟಾದರೆ ಅವನನ್ನು ಖಂಡಿತವಾಗಿಯೂ ಖಂಡಿಸುತ್ತೇವೆ. ಹೀಗಾಗಿ ಕವಿಯ ಆಶಯವನ್ನರಿಯದೆ ಪದ್ಯದ ರಸಾಸ್ವಾದನೆಯಿಂದ ವಂಚಿತರಾಗುತ್ತೇವೆ. ಒಂದು ವೇಳೆ ನಾವು ಕಥಾನಾಯಕನ ಪಕ್ಷಗಟ್ಟಿ ಪದ್ಯವನ್ನೋದಿದರೆ ಕಥಾನಾಯಕನು ಪ್ರತಿನಿಧಿಸುವ ಮೌಲ್ಯಗಳ ವಿರುದ್ಧವಾದ ಸಂಗತಿಗಳು ಮತ್ತು ಮೌಲ್ಯಗಳು ಅಲ್ಲಿರುವುದು ನಮ್ಮ ವಿವೇಕಕ್ಕೆ ಕಂಡುಬರುತ್ತದೆ. ಹೀಗಾಗಿ ಈ ಪದ್ಯಗಳನ್ನು ಆಸ್ವಾದಿಸಬೇಕಾದರೆ ಸಹೃದಯನು ಒಂದು ವಿಶೇಷತರನಾದ ಪದ್ಧತಿಯನ್ನನುಸರಿಸಬೇಕಾಗುವದು. ರಾಬರ್ಟ್‌ಲ್ಯಾಂಗಬಾಮ್‌ನ ಮಾತಿನಲ್ಲಿ ಹೇಳಬೇಕೆಂದರೆ ಇಲ್ಲಿ ಸಹೃದಯನು 'ಅನುಕಂಪ ಮತ್ತು ನಿರ್ಣಯಗಳ ನಡುವೆ ಸಮತ್ವ'ವನ್ನು ಕಾಯ್ದುಕೊಂಡಿರಬೇಕು. ಆದ್ದರಿಂದ ನಾವು ಮೊದಲನೆಯ ಸಾರೆ ಪದ್ಯವನ್ನೋದುವಾಗ ಕಥಾನಾಯಕನಿಗೆ ಅವಶ್ಯವಿದ್ದಷ್ಟು ಅನುಕಂಪವನ್ನೆಲ್ಲ ಅವನಿಗೆ ತೋರಿಸಿ ಅವನ ದೃಷ್ಟಿಕೋನವನ್ನು ಚೆನ್ನಾಗಿ ಅರಿತುಕೊಳ್ಳಬೇಕು. ಇವರ ನಂತರ ನಾವು ಅನುಕಂಪವನ್ನು ಬದಿಗಿರಿಸಿ ನಿರ್ದಾಕ್ಷಿಣ್ಯ

ವಾಗಿ ಅವನ ಜೀವನ ವಿಮರ್ಶೆಮಾಡಿ ಆತ ಒಳ್ಳೆಯವನೋ ಅಥವಾ ಕೆಟ್ಟವನೋ ಎಂಬ ನಿರ್ಣಯಕ್ಕೆ ಬರಬೇಕು. 'ಮೊದಲು ಅನುಕಂಪ ಅನಂತರ ನಿರ್ಣಯ'ವೆಂಬ ಈ ಕ್ರಮವನ್ನು ಉಪರಾಟಿ ಮಾಡಿದರೆ ಪದ್ಯದ ರಸಾಸ್ವಾದನವಾಗದೆ ಶುಷ್ಕವಾಚನ ವಾಗಿ ಕವಿಯ ಬಗೆಗೆಯೂ ತಿರಸ್ಕಾರ ಉಂಟಾಗುವುದು.

ಇನ್ನು ಕೆಲವು 'ನಾಟಕೀಯಾತ್ಮಗೀತ'ಗಳನ್ನು ತೆಗೆದುಕೊಂಡು ಅವುಗಳ ತಾಂತ್ರಿಕ ದೃಷ್ಟಿಕೋನದಿಂದ ಹಾಗೂ ಕಥಾವಸ್ತುವಿನ ದೃಷ್ಟಿಯಿಂದ ವಿಶ್ಲೇಷಿಸಬಹುದು. ಸಾಮಾನ್ಯವಾಗಿ ಈ ನಾಟಕೀಯಾತ್ಮಗೀತಗಳು ಯಾವುದೇ ಪ್ರಸಂಗದ ಪ್ರಾರಂಭ ದಿಂದ ಸುರುವಾಗದೆ ಮಧ್ಯದಿಂದ ಸುರುವಾಗುತ್ತವೆ. 'ಕಾಲಾನುಕ್ರಮ ನಿರೂಪಣೆ' ಯನ್ನು ಅನುಸರಿಸದೆ ಘಟನೆಗಳ ಮಧ್ಯದಲ್ಲಿ ಧುಮುಕುವುದೇ ಬ್ರೌನಿಂಗ ಕವಿಯ ಸ್ವಭಾವ. ಕಥಾನಾಯಕ ತನ್ನ ಜೀವನದಲ್ಲಿ ಮಾನಸಿಕ ತುಮುಲಕ್ಕೆ ಒಳಗಾದ ಗಳಿಗೆ ಯನ್ನು ಹಿಡಿದುಕೊಂಡು ತನ್ನ ಪದ್ಯವನ್ನು ಅಲ್ಲಿಂದಲೇ ಪ್ರಾರಂಭಿಸಿ, ಓದುಗರನ್ನು ಅಚ್ಚರಿಗೊಳಿಸಿ, ಅವರ ಕುತೂಹಲ ಕೆರಳಿಸಿ, ಹಾಗಿದ್ದರೆ ಇದರ ಹಿಂದೆ ಏನೇನಾಗಿ ತ್ತೆಂದು ಅವರು ಕೇಳುವ ಹಾಗೆ ಪ್ರಚೋದಿಸಿ ಅನಂತರ 'ಹಿಂಬೆಳಕಿನ ಮೂಲಕ ಅವರ 'ಇತಿಹಾಸ'ವನ್ನು ಹೊರಗೆಡಹುವುದು ಆತನ ವಿಶಿಷ್ಟ ರೀತಿಯಾಗಿದೆ. ಉದಾಹರ ಣೆಗೆ ಫ್ರಾಲಿಪ್ಪೊಲಿಪ್ಪಿ ಕವನದಲ್ಲಿ ಕವಿಯು ನಮಗೆ ತೋರಿಸುವುದು ಫ್ರಾಲಿಪ್ಪೊ ಮಧ್ಯ ರಾತ್ರಿ ಪೋಲೀಸರ ಕೈಗೆ ಸಿಕ್ಕು ಗೊಂದಲಕ್ಕೀಡಾದ ದೃಶ್ಯವನ್ನು. ಕಥಾನಾಯಕ ನಾದ ಫ್ರಾಲಿಪ್ಪೊ ಇಂಥ ಪರಿಸ್ಥಿತಿಗೆ ಬರಬೇಕಾದರೆ ಕಾರಣಗಳಾವುವು ಎಂಬುದನ್ನು ಕವಿ ಕಥಾನಾಯಕನ ಮತ್ತು ಪೋಲೀಸರ ನಡುವೆ ನಡೆಯುವ ಸಂಭಾಷಣೆಯ ಮೂಲಕ ಹೊರಗೆಡಹುತ್ತಾನೆ. ಅಲ್ಲದೆ 'ಹಿಂಬೆಳಕಿ'ನ ಮೂಲಕ ಆತನ ಚರಿತ್ರೆ ಯನ್ನೆಲ್ಲ ನಿರೂಪಿಸುತ್ತಾನೆ. ಅದೇ ಪ್ರಕಾರ ಕೊನೆಯ ಜೋಡಿ ಸವಾರಿ ಪದ್ಯ ದಲ್ಲಿಯೂ ಕವಿ ನಮಗೆ ಇಬ್ಬರೂ ಪ್ರಣಯಿಗಳು ಒಬ್ಬರಿಂದೊಬ್ಬರು ದೂರ ಹೋಗುವ ಮೊದಲು ಕೊನೆಯ ಬಾರಿ ಕುದುರೆಸವಾರಿ ಮಾಡಿ, ಹೊರಟಿದ್ದಾರೆ ಎಂಬುದನ್ನು ತೋರಿಸುತ್ತಾನೆ ಪ್ರಾರಂಭದಲ್ಲಿ. ಅನಂತರ ಆ ಇಬ್ಬರೂ ಪ್ರಣಯಿ ಗಳ ಪರಸ್ಪರ ವಿನಿಮಯಗಳ ಮೂಲಕ ಅವರ ಹಿಂದಿನ ಚರಿತೆಯನ್ನು ತೋರಿ ಸುತ್ತಾನೆ. ಅದರಿಂದ ನಮಗೆ ತಿಳಿಯುವುದೆನೆಂದರೆ ಆ ಪ್ರಿಯತಮನ ಪ್ರೇಯಸಿ ಮತ್ತೊಬ್ಬ ಅಂದರೆ ಈತನಿಂತಲೂ ಹೆಚ್ಚು ಸುಂದರವಾದ ಪ್ರಿಯತಮನನ್ನು ಹುಡುಕಿಕೊಂಡುದ್ದರಿಂದ ಆತನ ಸಂಗಡ ಇರಬಯಸುತ್ತಾಳೆ. ಅದಕ್ಕಿಂತ ಮೊದಲು ಔಪಚಾರಿಕವಾಗಿ ಮೊದಲನೆಯ ಪ್ರಿಯತಮನೊಂದಿಗೆ ಕುದುರೆಸವಾರಿ ಮಾಡಿ, ಅವ ನಿಂದ ಕೊನೆಯ ಮುತ್ತನ್ನು ಸ್ವೀಕರಿಸಿ ಆತನನ್ನು ಬೀಳ್ಕೊಡಲು ಒಪ್ಪಿಕೊಂಡಿದ್ದಾಳೆ. ಆದ್ದರಿಂದಲೇ ಆತನ ಸಂಗಡ ಕುದುರೆಯ ಮೇಲೆ ಮೌನವಾಗಿ ಕುಳಿತಿದ್ದಾಳೆ. ಆತ ನಾಡುವ ಮಾತುಗಳನ್ನು ಆಲಿಸುತ್ತಿದ್ದಾಳೆ. ಹಾಗೆಯೇ 'ಆ್ಯಂಡ್ರಿಯಾ ಡೆಲಸಾರ್ಟೊ'

ಪದ್ಯ ಪ್ರಾರಂಭವಾಗುವುದು ಚಿತ್ರಕಾರನಾದ ಆ್ಯಂಡ್ರಿಯಾ ತನ್ನ ಧರ್ಮಪತ್ನಿಯೊಂದಿಗೆ ತನ್ನ ಅಪರಾಧಗಳನ್ನೆಲ್ಲ ಸತ್ಕಾರ್ಯಗಳೆಂದು ಘೋಷಿಸಿ ಅವುಗಳನ್ನು ಅವಳ ಸಲುವಾಗಿಯೇ ಮಾಡಿದೆನೆಂದು ಹೇಳಿ ಅವಳ ಮನವೊಲಿಸಲು ಪ್ರಯತ್ನಿಸುವುದರಿಂದ, ಇಲ್ಲಿಯೂ ಅನಂತರ ನಡೆಯುವ ಸಂಭಾಷಣೆಯ ಮೂಲಕ ಆತನ ಅಪರಾಧಗಳ ಕಥೆಯಲ್ಲಿ ನಮಗೆ ತಿಳಿದುಬರುತ್ತದೆ. ಹೀಗೆ ಬ್ರೌನಿಂಗ ಕವಿಯ ನಾಟಕೀಯಾತ್ಮಗೀತಗಳು ಒಮ್ಮೆಲೆ ಕಾರ್ಯಮಧ್ಯದಲ್ಲಿ ಓದುಗರನ್ನು ಧುಮುಕಿಬಿಡುತ್ತವೆ. ಅದರಂತೆಯೇ ಅವು ಪಾತ್ರಗಳ ಮನೋವಿಶ್ಲೇಷಕ ಚಿತ್ರವನ್ನು ಸ್ವಲ್ಪಮಟ್ಟಿಗೆ ಕೊಟ್ಟನಂತರ ಒಮ್ಮೆಲೆ ಕೊನೆಗೊಳ್ಳುತ್ತವೆ. ಏಕೆಂದರೆ ಬ್ರೌನಿಂಗ ಕವಿಯ ನಂಬುಗೆಯ ಪ್ರಕಾರ ಸತ್ಯಕ್ಕೆ ನಿರ್ದಿಷ್ಟವಾದ ಕೊನೆಮೊದಲಿಲ್ಲ. ಪದ್ಯ ಎಲ್ಲಿಯಾದರೂ ಪ್ರಾರಂಭವಾಗಿ ಸತ್ಯದ ಒಂದು ಮಗ್ಗುಲನ್ನೋ ಮೂಲೆಯನ್ನೋ ಚಿತ್ರಿಸಿ, ಎಲ್ಲಿಯೋ ಒಂದು ಕಡೆ ಕೊನೆಗೊಳ್ಳಬಹುದು. ಹೀಗಾಗಿ ಕಥಾನಾಯಕನ ಹೇಳಿಕೊಳ್ಳುವ 'ಆತ್ಮಚರಿತ್ರೆ' ಅಪೂರ್ಣವೆಂದು ಭಾಸವಾಗುತ್ತದೆ. ಬಹುತರವಾಗಿ ಇದು ಜಗತ್ತಿನ ವ್ಯಾಪಾರ ಅವಿರತವಾಗಿ ನಡೆಯುತ್ತಿದ್ದರೂ ಅದನ್ನು ನಿರೀಕ್ಷಿಸುವ ಅಥವಾ ಅದರಲ್ಲಿ ಪಾಲ್ಗೊಳ್ಳುವ ಮನುಷ್ಯನ ಪ್ರಜ್ಞೆ ಸೀಮಿತವಾದದ್ದೆಂಬುದನ್ನು ಸೂಚಿಸುತ್ತದೆ. ಉದಾಹರಣೆಗೆ ಫ್ರಾಲಿಪ್ಪೊ ಲಿಪಿ ಕವನದಲ್ಲಿ ಫ್ರಾಲಿಪ್ಪೊ ತನ್ನ ಕಲಾವೃತ್ತಿಯಲ್ಲಿ ಧರ್ಮಗುರುಗಳ ಮನಸ್ಸಿಗೆ ಬರುವ ರೀತಿಯಲ್ಲಿ ಧಾರ್ಮಿಕ ಚಿತ್ರಗಳನ್ನು ತೆಗೆಯಲಾರೆನೆಂಬ ಅಸಾಮರ್ಥ್ಯವನ್ನು ಉದಾಹರಣೆಗಳ ಮೂಲಕ ಚಿತ್ರಿಸಿ ಇನ್ನೂ ಮುಂದೆ ಏನನ್ನೊ ಹೇಳುವವನಿದ್ದಾನೆ ಎಂದು ಓದುಗರು ನಿರೀಕ್ಷೆಯಲ್ಲಿದ್ದಾಗಲೇ ಆತ ತನ್ನನ್ನು ಅಡ್ಡಗಟ್ಟಿದ್ದ ಆರಕ್ಷಕರ ಕೈಕುಲುಕಿ ಅಲ್ಲಿಂದ ಒಮ್ಮೆಲೆ ಕಾಲುಕೀಳುತ್ತಾನೆ. ಅಪ್ರತ್ಯಕ್ಷವಾಗಿ ಓದುಗರನ್ನೂ ಅನೀರಿಕ್ಷಿತವಾಗಿ ಬೀಳ್ಕೊಡುತ್ತಾನೆ. 'ಆ್ಯಂಡ್ರಿಯಾಡೆಲ್‌ಸಾರ್ಟೊ' ಪದ್ಯದಲ್ಲಿ ಚಿತ್ರಕಲಾಕಾರನಾದ ಆ್ಯಂಡ್ರಿಯಾ ತಾನು ಮೈಕೇಲೆಂಜೆಲೊನಂಥ ಮಹಾನ್ ಆತ್ಮಸೌಂದರ್ಯದ ಚಿತ್ರಕಾರರ ಮಟ್ಟವನ್ನು ಮುಟ್ಟಲಾರೆನೆಂಬ ಅಸಾಮರ್ಥ್ಯವನ್ನು ತನ್ನ-ಹೆಂಡತಿಯ ಮೇಲೆ ಹೇರುತ್ತಾನೆ. ತನ್ನ ಅಪಜಯಗಳಿಗೆಲ್ಲ ತನ್ನ ಹೆಂಡತಿ ತನಗೆ ಪತಿ-ಭಕ್ತಿ, ಪ್ರೀತಿಗಳನ್ನು ತೋರದಿರುವುದೆ ಕಾರಣವೆಂದು ಶಪಿಸುತ್ತಾನೆ. ಹೀಗೆ ಅವಳೊಡನೆ ತನ್ನ ದುಃಖವನ್ನು ತೋಡಿಕೊಳ್ಳುತ್ತಿರುವಾಗ ಹೊರಗೆ ತನ್ನ ಹೆಂಡತಿಯ ಪ್ರಿಯತಮ ಸಿಳ್ಳು ಹಾಕುವುದು ಕೇಳಿಸಿದ ಕೂಡಲೆ ಅವಳಿಗೆ ಆತನನ್ನು ಭೇಟಿಯಾಗಲು ಹೇಳಿ ತನ್ನ ಮಾತುಗಳನ್ನು ಅರ್ಧಕ್ಕೆ ನಿಲ್ಲಿಸಿ ಬಿಡುತ್ತಾನೆ. ಇನ್ನೂ ನಿರೀಕ್ಷೆಯಲ್ಲಿದ್ದ ಓದುಗರು ಅಸಂತೃಪ್ತರಾಗುತ್ತಾರೆ. ಅದರಂತೆಯೆ ಕೊನೆಯ ಜೋಡಿ ಸವಾರಿ ಪದ್ಯದಲ್ಲಿಯೂ ಕಥಾನಾಯಕ ತನ್ನ ಹಳೆಯ ಪ್ರೇಯಸಿ ಮತ್ತೊಬ್ಬ ನಲ್ಲನೊಡನೆ ಇರ ಬಯಸಿದಾಗ ಅದಕ್ಕೆ ಆಕ್ಷೇಪಿಸದೆ ತನ್ನ ಜೀವನದಲ್ಲಿಯ ಸೋಲುಗಳನ್ನು ಅವಳೆದುರಿಗೆ ಹೇಳಿ ಅವುಗಳನ್ನು ವಿವೇಕೀಕರಿಸುತ್ತಾನೆ. ಸವಾರಿ ಮಾಡುತ್ತಲೆ ತನ್ನ ಅಂತರಂಗದ ವಿಚಾರಗಳನ್ನು ಬಹಿರಂಗಗೊಳಿಸುತ್ತ ಆ ಕ್ಷಣವ ನಿರಂತರವಾಗಿರಲೆಂದು ಇಚ್ಛಿಸು

ತ್ತಿವಾಗಲೇ ಅನಿರೀಕ್ಷಿತವಾಗಿ ಪದ್ಯಕೊನೆಗೊಳ್ಳುತ್ತದೆ. ಹೀಗೆ ಮಾನಸಿಕ ತುಮುಲ ವನ್ನುಂಟುಮಾಡುವ ಘಟನೆಯೊಂದನ್ನು ಚಿತ್ರಿಸಿ ಅದನ್ನು ಔಪಚಾರಿಕವಾಗಿ ಮುಕ್ತಾಯಗೊಳಿಸದೆ ಅರ್ಧಕ್ಕೆ ಏನೊ ಎಂಬುವಂತೆ ನಿಲ್ಲಿಸಿ ಬಿಡುವುದು ಬ್ರೌನಿಂಗ್ ಕವಿಯ ಅಭ್ಯಾಸ.

ಅದರಂತೆ ನಾಟಕೀಯಾತ್ಮಗೀತದ ಇನ್ನೊಂದು ಪ್ರಮುಖ ವೈಶಿಷ್ಟವೆಂದರೆ ಕವಿ ತನ್ನ ಮನೋಭಾವಕ್ಕೆ ಹೊಂದುವಂತೆ ಐತಿಹಾಸಿಕ ವ್ಯಕ್ತಿಗಳನ್ನೇ ಆರಿಸಿಕೊಂಡು ಅವರ ಮೂಲಕ ತನ್ನ ಜೀವನದೃಷ್ಟಿಯನ್ನು ನಿರೂಪಿಸುತ್ತಾನೆ. ಆತ ಆಯ್ದುಕೊಂಡ ಕಥಾನಾಯಕರುಗಳು ಹೆಚ್ಚಾಗಿ ಜೀವನದಲ್ಲಿ ತಮ್ಮ ಖಾಸಗಿ ಇಲ್ಲವೆ ವೃತ್ತಿಜೀವನದಲ್ಲಿ ಸೋಲನ್ನನುಭವಿಸಿದವರಾಗಲಿ, ಇಲ್ಲವೆ ಯಾವುದಾದರೂ ಅಪರಾಧಗಳನ್ನು ಮಾಡಿ ಅವುಗಳನ್ನು ವಿವೇಕೀಕರಿಸುವ ಸ್ವಭಾವದವರಾಗಿರುತ್ತಾರೆ. ವಿವೇಕೀಕರಿಸದಿದ್ದರೆ ತಮ್ಮ ತಪ್ಪಿಗೆ ತಮ್ಮ ಸ್ವಂತ ಹೊಣೆಗಾರಿಕೆಯನ್ನು ಒಪ್ಪಿಕೊಳ್ಳದೆ ಅದನ್ನು ಬೇರೆ ಯವರ ಮೇಲೆ ಹೊರಿಸುವವರಾಗಿದ್ದಾರೆ. ಆದರೂ ಕವಿಯಾದ ಬ್ರೌನಿಂಗ್ ತನ್ನ ಕಥಾನಾಯಕರ ನಿಷೇಧಾತ್ಮಕ ಮನೋವೃತ್ತಿ, ಕಾರ್ಯಗಳ ಬಗೆಗೆ ಚಕಾರ ಶಬ್ದ ವೆತ್ತುವುದಿಲ್ಲ. ಅವುಗಳನ್ನು ಖಂಡಿಸುವುದರ ಬದಲು ಅವುಗಳನ್ನು ಅಪ್ರತ್ಯಕ್ಷವಾಗಿ ಎತ್ತಿ ಹಿಡಿಯುತ್ತಾನೆ. ಹೀಗಾಗಿ ಆತನ ನಾಟಕೀಯಾತ್ಮಗೀತಗಳು 'ಇಂಥ ಕಥಾ ನಾಯಕ ಅಥವಾ ಇಂಥವರ ತತ್ವಗಳ 'ಖಂಡನೆ' ಅಥವಾ 'ವಿಡಂಬನೆಗಳಾಗಿರದೆ ಅವರ ಇಲ್ಲವೆ ಅವುಗಳ 'ಮಂಡನೆ' ಗಳಾಗಿವೆಯೆಂದು ಹೇಳಬಹುದು. ಅನೇಕ ಆಂಗ್ಲ ವಿಮರ್ಶಕರು ಈ ಅಭಿಪ್ರಾಯವನ್ನು ಒಪ್ಪಿಕೊಳ್ಳುತ್ತಾರೆ. ಉದಾಹರಣೆಗೆ ಫ್ರಾಲಿಪ್ಪೊ ಒಂದು ಧಾರ್ಮಿಕ ಸಂಸ್ಥೆಯಲ್ಲಿರುವ ಕಲಾಕಾರನಾಗಿರುವುದರಿಂದ ಆತ ಧಾರ್ಮಿಕ ಆಚಾರ ವಿಚಾರಗಳಿಗೆ ವಿರುದ್ಧವಾಗಿರುವ ಕಾರ್ಯಗಳಲ್ಲಿ ತೊಡಗಬಾರ ದೆಂಬುದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿದ್ದ ವಿಷಯ. ಆದರೂ ಈ ಎಲ್ಲ ಕಟ್ಟುನಿಟ್ಟಳೆಗಳನ್ನು ಮುರಿದು ಹಾಕಿ, ಫ್ರಾಲಿಪ್ಪೊ ಮಧ್ಯರಾತ್ರಿ ಕರವೆಣ್ಣುಗಳ ಹಿಂದೆ ಹೋಗಿ ತನ್ನ ಕಾಮದ ಹಸಿವೆಯನ್ನು ಹಿಂಗಿಸಿಕೊಳ್ಳುತ್ತಾನೆ. ಹೀಗಿದ್ದರೂ ಕವಿ ಅವನನ್ನು ಎಲ್ಲಿಯೂ ಖಂಡಿಸುವುದಿಲ್ಲ, ನಿಂದಿಸುವುದಿಲ್ಲ. ಏಕೆಂದರೆ ಕವಿಯೂ ತನ್ನ ಕಥಾನಾಯಕನ ಗುಂಪಿಗೇ ಸೇರಿದವನಾಗಿದ್ದಾನೆ. ಅದರಂತೆಯೆ ಸಿಂಪಿಗನ ಮಗ ನಾದ ಚಿತ್ರಕಾರ ಆ್ಯಂಡ್ರಿಯಾ ತನ್ನ ಚಿತ್ರಕಲಾವೃತ್ತಿಯಲ್ಲಿ ಸೋಲನ್ನನುಭವಿಸಿದ್ದಾನೆ. ತನ್ನ ಹೆಂಡತಿ (ಅಂದರೆ ಆಕೆ ಮತ್ತೊಬ್ಬನ ಹೆಂಡತಿಯಾಗಿದ್ದು ಆತ ಸತ್ತ ನಂತರ ಆ್ಯಂಡ್ರಿಯನನ್ನು ಮಾಡಿಕೊಂಡಾಕೆ) ಯ ಪ್ರೀತಿಯನ್ನು ಸಾಧ್ಯವಾದಷ್ಟು ಕಾಲ ಗಳಿಸಿಕೊಂಡಿರಬೇಕೆಂಬ ಆಸೆಯಿಂದ ಫ್ರಾನ್ಸಿಸ್ ಮಹಾರಾಜನ ದ್ರವ್ಯವನ್ನು ಎತ್ತಿ ಹಾಕಿ, ಬಂಗಾರದ ಗಿಲೀಟಿನಿಂದಲಂಕೃತವಾದ ಮನೆಯನ್ನು ಕಟ್ಟಿಸಿಕೊಳ್ಳುತ್ತಾನೆ. ಈ ಅಪರಾಧವನ್ನು ಮಾಡಿದುದಲ್ಲದೆ, ತನ್ನ ಕಲಾವೃತ್ತಿಯಲ್ಲಿಯ ಸೋಲಿಗೆ ತನ್ನ

ಸುಪ್ರೀತಗೊಳಿಸುವುದರ ಸಲುವಾಗಿ ಫ್ರಾನ್ಸಿಸ್ ಮಹಾರಾಜನ ದ್ರವ್ಯವನ್ನು ಎತ್ತಿ ಹಾಕಿದುದು ತಪ್ಪು. ಒಂದು ವೇಳೆ ಆತನಿಗೆ ಹಣದ ಅವಶ್ಯಕತೆಯಿದ್ದರೆ ಆತ ಮಹಾರಾಜನಲ್ಲಿ ವಿನಂತಿಸಿಕೊಂಡು ಸಹಾಯಪಡೆಯಬಹುದಾಗಿತ್ತು. ಅದರಂತೆ ತನ್ನ ಹೆಂಡತಿಯ ಧರ್ಮಬಾಹಿರ ಪ್ರಣಯಲೀಲೆಗಳು, ಅಸಹಕಾರಗಳಿಂದ ಆತನು ನೊಂದವನಾಗಿದ್ದರೂ ಅದೆ ಸಂಪೂರ್ಣವಾಗಿ ತನ್ನ ಚಿತ್ರಕಲೆಯ ವೃತ್ತಿಯಲ್ಲಿ ಸೋಲಿಗೆ ಕಾರಣವಾಗಿದೆ ಎಂಬುದು ತಪ್ಪು ಎಂಬುದು ನಮಗೆ ಗೊತ್ತಾಗುತ್ತದೆ. ಹೀಗಾಗಿ ಆತ ಅನೇಕ ಕಾರಣಗಳಿಂದಾಗಿ ಜೀವನದಲ್ಲಿ ಸೋಲನ್ನನುಭವಿಸಿದ್ದರೂ ಅದಕ್ಕೆ ಮೂಲಭೂತವಾಗಿ ತಾನೇ ಕಾರಣ ಅಂದರೆ ತನ್ನ ವಯ್ಯಕ್ತಿಕ ಮಿತಿಗಳೆ ಕಾರಣ ಹೊರತು ಬಾಹ್ಯ ವಸ್ತುವ್ಯಕ್ತಿಗಳಲ್ಲವೆಂಬ ನೈತಿಕ ನಿರ್ಣಯವನ್ನು ಓದುಗರು ಕೊಡಬಹುದು.

ಹೀಗೆ 'ನಾಟಕೀಯಾತ್ಮಗೀತ'ಕ್ಕೆ ಬೇಕಾಗುವ ಮಾನಸಿಕ ಶಿಸ್ತನ್ನು ವಿಮರ್ಶಾ ಪದ್ಧತಿಯನ್ನು ನಾವು ಬೆಳೆಸಿಕೊಂಡರೆ ಈ ಸಾಹಿತ್ಯಪ್ರಕಾರದ ನಿಜವಾದ ರಸಾಸ್ವಾದನ ಮಾಡುವ ಅರ್ಹತೆ ನಮಗೆ ಬರುವುದರಲ್ಲಿ ಸಂದೇಹವಿಲ್ಲ.

• •

ಕನ್ನಡ ಜೈನ ಕವಿಗಳು ಬೀರಿದ ಸಂದೇಶ

ಭುಜೇಂದ್ರ ಮಹೀಶವಾಡಿ

ಜೈನಧರ್ಮವು ಜಗತ್ತಿನ ಮಹಾಧರ್ಮಗಳಲ್ಲಿ ಒಂದು. ಜೈನಧರ್ಮದ ಅನುಯಾಯಿಗಳ ಸಂಖ್ಯೆ ಬಹಳ ಕಡಿಮೆಯಿದ್ದರೂ, ಜೈನಧರ್ಮದ ತತ್ವಗಳನ್ನು ಪುರಸ್ಕರಿಸುವವರ ಸಂಖ್ಯೆ ಸಾಕಷ್ಟು ದೊಡ್ಡದಿದೆ. ಅಹಿಂಸೆ-ಶಾಕಾಹಾರಗಳನ್ನು ಪುರಸ್ಕರಿಸುವ ಹಲವಾರು ಹಿರಿಯ ಸಂಸ್ಥೆಗಳು ಮತ್ತು ಅವುಗಳ ಶಾಖೆಗಳು ಜಗತ್ತಿನ ತುಂಬೆಲ್ಲ ಹರಡಿವೆ. ಜೀವದಯಾ ಸಂಘಗಳೂ ವಿಶ್ವದಾದ್ಯಂತ ವ್ಯಾಪಿಸಿ ಪರಿಣಾಮಕಾರಿಯಾಗಿ ಕೆಲಸ ನಡೆಸಿವೆ. ಈ ಸಂಘ–ಸಂಸ್ಥೆಗಳಿಗೆ ಜೈನ-ಧರ್ಮದ ತತ್ವಗಳು ಅಧಿಕ ಪ್ರಿಯವಾದವುಗಳು. ವಿಶ್ವಶಾಂತಿ ಸಾಧಕರಿಗೆ ಜೈನತತ್ವ ಪ್ರೇರಕವೂ ಹೌದು.

ಜೈನಧರ್ಮವು ಪ್ರವೃತ್ತಿಯನ್ನು ಬೋಧಿಸುವುದಿಲ್ಲ; ನಿವೃತ್ತಿ ಮಾರ್ಗವೇ ಅದರ ಸಾರ ಸರ್ವಸ್ವ. ಜೀವರಾಶಿಗಳ ಸಹಜಪ್ರವೃತ್ತಿಯನ್ನು ಅದು ಅಲ್ಲಗಳೆಯುವುದೂ ಇಲ್ಲ; ಅವಹೇಳನ ಮಾಡುವುದೂ ಇಲ್ಲ. ಆದರೆ ಅದು, ತನ್ನ ಅಹಿಂಸಾ ಬೋಧೆಯಿಂದ ಕ್ರಮಬದ್ಧವಾಗಿ ದುಃಖಕ್ಕೆ ಕಾರಣವಾದ ಪ್ರವೃತ್ತಿಯನ್ನು ಸುಖಕ್ಕೆ ಕಾರಣವಾದ ನಿವೃತ್ತಿಯ ಕಡೆಗೆ ತಿರುಗಿಸುತ್ತದೆ. ತನಗೆ ಬದುಕುವ ಅಪೇಕ್ಷೆ ಇರುವಂತೆ ಸಕಲ ಜೀವರಾಶಿಗಳಿಗೂ ಬದುಕುವ ಅಪೇಕ್ಷೆ ಇರುತ್ತದೆ. ಆ ಮೂಲಭೂತ ಹಕ್ಕನ್ನು ಜೈನಧರ್ಮ ಗೌರವಿಸುತ್ತದೆ. ತಾನೂ ಬದುಕಿ ಜಗತ್ತಿನ ಜೀವರಾಶಿಗಳಿಗೂ ಬದುಕಲು ಬೇಕಾದ ಅವಕಾಶಗಳನ್ನು ನಿರ್ಮಿಸುತ್ತದೆ. ಬದುಕುವ ಹಕ್ಕನ್ನು ತ್ಯಾಗಪೂರ್ಣವಾದ ಸರ್ವಶಕ್ತಿಯಿಂದ ಸಂರಕ್ಷಿಸುತ್ತದೆ. ಆದ್ದರಿಂದ ಇದು ವಿಶ್ವಮಾನ್ಯವಾಗಿದೆ.

ಅರಿಹಂತ-ಸಿದ್ಧ-ಆಚಾರ್ಯ-ಉಪಾಧ್ಯಾಯ-ಸಾಧುಗಳೆಂಬ ಪಂಚ ಪರಮೇಷ್ಠಿಗಳ ಆದರ್ಶ ಉಪಸನಾ ಮಾರ್ಗದಲ್ಲಿ ಕ್ರಮವಾಗಿ ಮುಂದುವರಿಯುವ ಜೈನಧರ್ಮದ ಸಾಧನೆ ಮೋಕ್ಷ ಸಿದ್ಧಿಯಲ್ಲಿ ಮುಕ್ತಾಯಗೊಳ್ಳುತ್ತದೆ. ಆ ಸಿದ್ಧಿಯನ್ನು ಸಾಧಿಸಿದ ಜನರೇ ಆಪ್ತರು. ಅವರ ವಾಣಿಯೇ ಆಗಮ.

ದ್ವಾದಶಾಂಗ–ಚತುರ್ದಶ ಪೂರ್ವಗಳ ಸ್ವರೂಪದಲ್ಲಿದ್ದ ಜೈನಾಗಮಗಳನ್ನು ಅಭ್ಯಾಸದ ಅನುಕೂಲತೆಗಾಗಿ ನಾಲ್ಕು ವೇದಗಳಲ್ಲಿ ನಿಬದ್ಧಗೊಳಿಸಲಾಗಿದೆ. ಇವುಗಳನ್ನು ಅನುಯೋಗಗಳೆಂದು ಕರೆಯಲಾಗಿದೆ. (೧) ಪ್ರಥಮಾನುಯೋಗ

(೨) ಕರಣಾನುಯೋಗ (೩) ಚರಣಾನುಯೋಗ (೪) ದ್ರವ್ಯಾನುಯೋಗ—ಇವೇ ಜೈನಧರ್ಮದ ನಾಲ್ಕು ವೇದಗಳು. ಪ್ರಥಮಾನುಯೋಗದಲ್ಲಿ ತೀರ್ಥಂಕರ ಮೊದಲಾದ ತ್ರಿಷಷ್ಟಿ ಶಲಾಕಾ ಪುರುಷರ ಚರಿತ್ರೆ ಇದೆ. ಕರಣಾನುಯೋಗದಲ್ಲಿ ತ್ರಿಲೋಕ ಸ್ವರೂಪ ವಿವರಣೆಯಿದೆ. ಚರಣಾನುಯೋಗದಲ್ಲಿ ಗೃಹಸ್ಥರು ಮತ್ತು ಯತಿಗಳ ನಡತೆಯನ್ನು ಹೇಳಿದೆ. ದ್ರವ್ಯಾನುಯೋಗದಲ್ಲಿ ಷಡ್‌ದ್ರವ್ಯ ಸಪ್ತತತ್ವ ಕರ್ಮ ಸಿದ್ಧಾಂತ ಸ್ಯಾದ್ವಾದ ಸಿದ್ಧಾಂತಗಳ ತತ್ವಾನುಸಂಧಾನವಿದೆ. ಜೈನಧರ್ಮದ ನಾಲ್ಕು ಅನುಯೋಗಿಗಳಲ್ಲಿ ಅಥವಾ ವೇದಗಳಲ್ಲಿ ಪ್ರತಿ ಒಂದರಲ್ಲಿಯೂ ಒಂದೊಂದು ಗ್ರಂಥ ರಾಶಿಯೇ ಸೃಷ್ಟಿಯಾಗಿದೆ. ಅರ್ಧಮಾಗಧಿ, ಮಾಗಧಿ. ಶೌರಸೇನಿ, ಅಪಭ್ರಂಶ. ಜೈನ ಮಹಾರಾಷ್ಟ್ರಿ ಮುಂತಾದ ಪ್ರಾಕೃತ ಭಾಷೆಗಳಲ್ಲಿ ಮೂಲಗ್ರಂಥಗಳು ಸೃಷ್ಟಿಯಾಗಿವೆ. ಅವೆಲ್ಲವೂ ಸಂಸ್ಕೃತಕ್ಕೆ ಅನುವಾದವಾಗಿವೆ. ಅಲ್ಲದೆ ಸಂಸ್ಕೃತದಲ್ಲಿ ಸ್ವತಂತ್ರ ಕೃತಿಗಳೂ ಸೃಷ್ಟಿಯಾಗಿವೆ. ಪ್ರಾಕೃತ ಸಂಸ್ಕೃತಗಳ ನಂತರ ಜೈನಗ್ರಂಥಗಳು ಕನ್ನಡದಲ್ಲಿ ಹೇರಳವಾಗಿ ಸೃಷ್ಟಿಯಾದವು. ಸಂಸ್ಕೃತ ಪ್ರಾಕೃತಗಳ ಅನುವಾದ ಸಟೀಕೆಗಳೆಲ್ಲವೂ ಕನ್ನಡದಲ್ಲಿ ಬಂದಿವೆ. ಕನ್ನಡದ ನಂತರ ಗುಜರಾತಿ ಹಿಂದೀಗಳಲ್ಲಿ ಜೈನ ಗ್ರಂಥಗಳು ರಚನೆಯಾಗಿವೆ.

ಜೈನ ತೀರ್ಥಂಕರರೆಲ್ಲರು ಉತ್ತರ ಭಾರತದಲ್ಲಿಯೇ ಆಗಿ ಹೋದರೂ, ಜೈನ ಶಾಸ್ತ್ರಗ್ರಂಥಗಳನ್ನು ಬರೆದ ಆಚಾರ್ಯರೆಲ್ಲರೂ ಬಹುಶಃ ದಕ್ಷಿಣದವರೇ. ಅಷ್ಟೇ ಅಲ್ಲ, ಅವರಲ್ಲಿ ೧೦೦ಕ್ಕೆ ೬೦ ಕ್ಕಿಂತ ಹೆಚ್ಚು ಜನ ಕನ್ನಡಿಗರೇ ಎಂಬುದು ಹೆಮ್ಮೆಯ ವಿಷಯ. ಆ ಎಲ್ಲ ಆಚಾರ್ಯರು ಸಂಸ್ಕೃತ ಪ್ರಾಕೃತಗಳಲ್ಲಿ ಬರೆದ ಗ್ರಂಥಗಳಿಗೆ ಸ್ವತಃ ಅವರೇ ಅಥವಾ ಅವರ ಶಿಷ್ಯರೇ ಕನ್ನಡ ಟೀಕೆಗಳನ್ನೂ ಸರಳಾನುವಾದಗಳನ್ನೂ ರಚಿಸಿದ್ದಾರೆ. ಆದ್ದರಿಂದ ಇಂದು ಸಮಗ್ರ ಜೈನ ತತ್ವ ಹಾಗೂ ಸಾಹಿತ್ಯದ ಸ್ವರೂಪ ದರ್ಶನ ಕನ್ನಡದಲ್ಲಿಯೇ ಪರಿಶುದ್ಧರೂಪದಲ್ಲಿ ದೊರೆಯುತ್ತದೆ, ಎಂಬುದು ಸತ್ಯ ಸಂಗತಿ.

ಕನ್ನಡದಲ್ಲಿ ಜೈನಾಚಾರ್ಯರಲ್ಲದೆ. ಪಂಪ–ಪೊನ್ನ–ರನ್ನ–ಜನ್ನ–ನಾಗಚಂದ್ರ–ನಾಗವರ್ಮ–ನಯಸೇನ–ನೇಮಿಚಂದ್ರ–ಆಂಡಯ್ಯ–ಅಗ್ಗಳ–ಮಧುರ–ಮಹಾಬಲ–ಮಂಗರಸ– ಪಾರ್ಶ್ವಪಂಡಿತ– ಬಾಹುಬಲಿ ಪಂಡಿತ– ಕುಮುದೇಂದು– ಭಾಸ್ಕರ-ಶಿಶುಮಾಯಣ-ಕಲ್ಯಾಣಕೀರ್ತಿ–ಶಾಂತಿಕೀರ್ತಿ– ರತ್ನಾಕರವರ್ಣಿ–ಪಾಯಣ ವರ್ಣಿ–ಚಂದ್ರಸಾಗರವರ್ಣಿ– ಬ್ರಹ್ಮಕವಿ– ಪದ್ಮಕವಿ– ಸಾಳ್ವಕವಿ– ಚಿಕ್ಕಮಲ್ಲಣ್ಣಕವಿ– ನೇಮಣ್ಣಕವಿ ದ್ವಾರಪಾಲಕವಿ ಮುಂತಾದ ಇನ್ನೂರಕ್ಕಿಂತ ಅಧಿಕ ಸಂಖ್ಯೆಯಲ್ಲಿ ಉತ್ತಮ ಜೈನ ಕವಿಗಳು ಅತ್ಯುತ್ತಮ ಕಾವ್ಯಸೃಷ್ಟಿಯನ್ನೂ ಶಾಸ್ತ್ರಸೃಷ್ಟಿಯನ್ನೂ ಮಾಡಿ ಅಜರಾಮರರಾಗಿದ್ದಾರೆ. ಸಮಗ್ರ ಕನ್ನಡ ಜನಮನದ ಪ್ರೀತಿ ಅಭಿಮಾನ-ಆನಂದ ಉತ್ಸಾಹಗಳಿಗೆ ಆಸ್ಪದರಾಗಿದ್ದಾರೆ.

ಕನ್ನಡ ಜೈನಕವಿಗಳು ವಿಶ್ವದ ಮಾನವ ಜನಾಂಗಕ್ಕೆ ನೀಡಿದ ಸಂದೇಶ ಅಪೂರ್ವ ವಾಗಿದೆ; ಅನುಪಮವಾಗಿದೆ.

(೧) ಈಗ ಪಂಪಮಹಾಕವಿಯ ಅಮರವಾಣಿಯನ್ನು ಆಲಿಸಬಹುದು; ಪರಮಾರ್ಹಂತ್ಯಮನೆಯ್ದಲಿರ್ದುದಱಿಂ ಮೇಲುಂಟೆ ಸತ್ವಂ ? ಚರಾಚರಮಂ ನೆಟ್ಟನೆ ಪರ್ವಲಿರ್ದುದಱಿಂ ಮೇಲುಂಟೆ ವಿಜ್ಞಾನಮಿಂತೆರಡರ್ಕಂ ನೆಲೆಯಾಗಿಯುಂ, ವಸು- ಮತೀ ಸಾಮ್ರಾಜ್ಯದೊಳ್ ನೀನ್ ನಿರಾಧರನಾಗಿರ್ದುದೆ ತತ್ಸುಖಾನುಗುಣಮಂ ಪೇಟ್ಗುಂ ಗುಣಾಂಭೋ ನಿಧೀ.

ಆದಿ ತೀರ್ಥಂಕರನಾದ ವೃಷಭನಾಥನ ವೈರಾಗ್ಯೋದಯದ ಸುಸಂದರ್ಭದಲ್ಲಿ ಆಡಿದ ಅಣಿಮುತ್ತುಗಳಿವು. 'ವಸುಂಧರಾರಾಜ್ಯಮೋಹಮೆಂಬ ವಜ್ರನಿಗಳಮಂ ಪಱಿಯೆ ಪೊಯ್ವು ರಾಜಕುಂಜರಂಗ ನಿನಗೆ ಅಪವರ್ಗಮಾರ್ಗಂ ನಿರರ್ಗಳಮ ವಲಂ' — ಎಂದು ಪರಿನಿಷ್ಕ್ರಮಣ ಕಲ್ಯಾಣ ಪ್ರತೀಕ್ಷಣರೂ ಬ್ರಹ್ಮಕಲ್ಪಾಂತ ನಿವಾಸಿಗಳೂ ಆದ ಎಂಟು ಮಂದಿ ಲೋಕಾಂತಿಕದೇವರು ಬಂದು ಆದಿನಾಥನಿಗೆ ಹೇಳಿದ್ದು ಯಥೋಚವೇ.

'ದೋಷವಿರಹಿತನೆ ಆಪ್ತಂ ಕ್ರಮದಿ ಆಪ್ತನೆ ಪೇಟ್ದುದದು ಆಗಮಂ ಆಗಮದ ಅರ್ಥಮಾವುದು ಅದುವೆ ಪದಾರ್ಥಂ. ಪರವೋಪಶಮಂ, ಧರ್ಮಾನುರಾಗಂ, ಅನು ಕಂಪೆ, ನೆಱೆದ ನಂಬುಗೆ ಎಂಬ ಈ ಪರಮ ಜಿನಗದಿತ ಗುಣ ಪರಿಕರದೊಳ್ ಕೂಡಿ ದುದೆ ನಿರುಪಮಂ ಸಮ್ಯಕ್ತ್ವಂ' ಎಂದು ಆದಿ ಜಿನನಿಗೆ ಆರ್ಯಭವದಲ್ಲಿಯೆ ಪ್ರಿಯಂಕರ ನಿಂದ ಸಮ್ಯಕ್ತ್ವಬೋಧೆ ಲಭಿಸಿದೆ.

'ಪುಸಿಯದುದು, ಪರಾಂಗನೆಗೆ ಅಟಿಸದುದು, ಕೊಲ್ಲದುದು, ಮೋಹವಿಲ್ಲ ದುದು, ಅಟಿವಂ ಪೊಸಯಿಸುವುದು, ವೈರಾಗ್ಯದ ದೆಸೆಗೆ ಎಸಪುದು ಧರ್ಮಂ. ಅದಱ ತಡೆವುದೆ ಅಧರ್ಮಂ ಧರ್ಮಂ ಅಮರೇಂದ್ರಗತಿಯುಂ ಅಧರ್ಮಂ ಅಧೋಗತಿಯಂ ಎಸಗುವ ಎಸಕದೊಳೆ ಈಗುಂ. ಧರ್ಮಾಧರ್ಮಕ್ರಿಯೆಗಳೆ ನೆರ್ಮಂ ಜೀವಕ್ಕೆ ಮನುಜಗತಿಯೊಳೆ ಮಾಟ್ಕುಂ'— ಎಂದು ಶ್ರೀಧರದೇವ ಭವದಲ್ಲಿ ಧರ್ಮಾಧರ್ಮದ ಸೂಕ್ಷ್ಮವನ್ನು ಆದಿಜಿನನ ಆತ್ಮ ಗ್ರಹಿಸಿದೆ. ಪೂರ್ವಜನ್ಮಗಳಲ್ಲಿಯೆ ಸಾಕಷ್ಟು ಪರಿಣತಿ ಯನ್ನು ಪಡೆದು ಬಂದ ಆದಿನಾಥನಿಗೆ ನೀಳಾಂಜನೆಯ ನೃತ್ಯವನ್ನು ನೋಡಿ ವೈರಾಗ್ಯ ಹುಟ್ಟುತ್ತದೆ. ಭರತ ಬಾಹುಬಲಿ ಮುಂತಾದ ಮಕ್ಕಳಿಗೆ ರಾಜ್ಯಭಾರವನ್ನು ವಹಿಸಿ ಸನ್ಯಾಸ ಧಾರಣಮಾಡಿ ದಿಗಂಬರನಾಗಿ ತಪಸಿಗೆ ತೊಡಗುತ್ತಾನೆ. ತಪಸ್ಸು ಸಿದ್ಧಿಸು ತ್ತದೆ. ಆದಿ ಜಿನನಿಗೆ ಕೇವಲಜ್ಞಾನ ಪ್ರಾಪ್ತವಾಗುತ್ತದೆ. ಭರತಚಕ್ರವರ್ತಿಗೆ ಈ ವಿಷಯ ತಿಳಿಯುತ್ತದೆ. ಅದೇ ಸಂದರ್ಭದಲ್ಲಿ ಪುತ್ರರತ್ನ ಜನಿಸಿದ ವಿಷಯವೂ ಚಕ್ರರತ್ನ ಜನಿಸಿದ ವಿಷಯವೂ ತಿಳಿದು ಯಾವುದನ್ನು ಮೊದಲು ಕೈಕೊಳ್ಳಬೇಕೆಂದು ಚಿಂತಿಸುವಷ್ಟರಲ್ಲಿ ಭರತನಿಗೆ ಆದಿಜಿನದರ್ಶನಲಾಭವ ಪ್ರಥಮಕಾರ್ಯವೆಂಬ ಅರಿವು ಹುಟ್ಟುತ್ತದೆ. ಆಗ—

'ಧರ್ಮ–ಅರ್ಥ-ಕಾಮಂ ಎಂಬಿವು ಧರ್ಮಾರ್ಥಿಜನಕ್ಕೆ ನೆಱೆದ ನೆರ್ಮಂ ಅಂತವಱೊಳ್ ಧರ್ಮಂ ಪ್ರಧಾನಂ. ಧರ್ಮಂಘ್ರಿಪ ಫಳಂ– ಅರ್ದಕ್ಕೆ ರಸಮುದು ಕಾಮಂ. ಅದಱಿಂದಂ ಇವಱೊಳ್ ಅರ್ಹತ್ ಪದಪದ್ಮ ಪ್ರಣತಿ ಮುಖ್ಯಂ, ಒಸಗೆಯುಂ. ಎಮಗಿನ್ನಿದಱಿಂದಮಿಲ್ಲ ಪೋಲಾವುದು, ಎಂದು ಬಗೆಬೆದಱಿ ಭಕ್ತಿ ನಿರತಂ ಭರತಂ'—ಆದಿ ತೀರ್ಥಂಕರರಾದ ವೃಷಭನಾಥ ಸ್ವಾಮಿಯಲ್ಲಿಗೆ ಪುರಜನ ಪರಿ ಜನರೊಂದಿಗೆ ಬಂದು, ಮೂರು ಸೂಟ್ ಬಲಗೊಂಡು ಪುರುಪರಮೇಶ್ವರನಾದ ಆದಿಜಿನನ ಸ್ತುತಿಯನ್ನು ಕೈಕೊಂಡನು. ಅನೇಕ ಗುಣಗಳನ್ನು ವರ್ಣಿಸಿ ಕೊನೆಗೆ 'ನಿನ್ನಲ್ಲಿ ಏನು ಬೇಡಿಕೊಳ್ಳಲಿ' ಎಂದು ಚಿಂತಿಸುವ ಪ್ರಸಂಗ ಸ್ವಾರಸ್ಯಪೂರ್ಣ ವಾದುದಾಗಿದೆ :

ಅಮರೇಂದ್ರೋನ್ನತಿ ಖೇಚರೇಂದ್ರ ವಿಭವಂ ಭೋಗೀಂದ್ರಭೋಗಂ ಮಹೇಂ
ದ್ರಮಹೈಶ್ವರ್ಯಮಿವೆಲ್ಲಮಧ್ರುವಮಿವಂ ಬೇಟ್ಪಂತು ಬೆಳ್ಳಲ್ಲೆನು
ತ್ತಮದೀಕ್ಷಾವಿಧಿಯುಂ ಸಮಾಧಿಮರಣಂ ಕರ್ಮಕ್ಷಯಂ ಬೋಧಿ ಲಾ
ಭಮಮೋಘಂ ದೊರೆಕೊಳ್ವುದಕ್ಕೆಮಗೆ ಮುಕ್ತಿ ಶ್ರೀಮನೋವಲ್ಲಭಾ

ಭಾರತದ ಪ್ರಥಮ ಚಕ್ರವರ್ತಿಯಾದ ಭರತನು ಪುರುಪರಮೇಶ್ವರನ ಸಮ್ಮುಖದಲ್ಲಿ ಉನ್ನತಿ–ವೈಭವ–ಭೋಗ–ಐಶ್ವರ್ಯಗಳನ್ನು ಬೇಡಿಕೊಳ್ಳುವುದಿಲ್ಲ. ನಶ್ವರವಾದ ಇವುಗಳನ್ನು ಬೇಡಿಕೊಳ್ಳಲು ನಾನೇನು ಮೂರ್ಖನೆ ? ದೀಕ್ಷಾವಿಧಿ–ಸಮಾಧಿಮರಣ ಕರ್ಮಕ್ಷಯ ಅಮೋಘವಾದ ಬೋಧಿಲಾಭ ನನಗೆ ದೊರೆಯಲಿ, ಎಂದು ಬೇಡಿ ಕೊಳ್ಳುತ್ತಾನೆ. ಇದು ಜಗತ್ತಿನ ಕಣ್ಣು ತೆರೆಯಿಸುವ ಮಹಾ ಆದರ್ಶ, ಇದುವೆ ಪಂಪಕವಿಯು ವಿಶ್ವಕ್ಕೆ ನೀಡಿದ ಮಹಾಸಂದೇಶವಲ್ಲವೆ ?

(೨) ರನ್ನ ಕವಿಯ ರತ್ನವೃಷ್ಟಿ ಇದೋ ಇಲ್ಲಿದೆ :

ಆಳುರದು ಕಿರ್ಚು ಮುಟ್ಟದು ವಿಷಾಹಿ–ಮಹಾಸತಿಯಿರ್ದ ಮಂಡಲಂ
ಬೆಳೆವುದು ಬೇಡಿದಂತೆ ಮಱಕೊಳ್ವುದೆನಿಪ್ಪ ಜನಕ್ಕೆ ನೋಂತ ಭೂ
ತಿಳಕ ಪವಿತ್ರೆಯುಂ ಗುಣಪವಿತ್ರೆಯುಮಾ ಸತಿಯುಂ ಮಹಾಸತೀ
ತಿಳಕೆಯುನ್ ಅತ್ತಿಮಬ್ಬರಸಿಯುಂ ಪೆಸರ್ಗೊಳ್ವುದು ಪುಣ್ಯಕಾರಣಂ

ಆಶ್ರಯದಾತೆಯಾದ ದಾನಚಿಂತಾಮಣಿ ಅತ್ತಿಮಬ್ಬೆಯನ್ನು ಅದೆಷ್ಟು ಹೊಗಳಿದರೂ ರನ್ನ ಕವಿಗೆ ತೃಪ್ತಿಯಿಲ್ಲ. ಆ ಪುಣ್ಯವತಿ ಆ ಹೊಗಳಿಕೆಗೆ ಸತ್ಪಾತ್ರಳು.

ಸುಸೀಮಾನಗರದ ವಿಮಲವಾಹನನಿಗೆ ವೈರಾಗ್ಯ ಉದಿಸುವ ಪ್ರಸಂಗದಲ್ಲಿ ಬರುವ ಈ ಮಾತುಗಳನ್ನು ಗಮನಿಸಬಹುದು. (ಅಜಿತಪುರಾಣದಲ್ಲಿ) :

ಮತಿಗೆಟ್ಟು ಧರ್ಮಾಮೃತಮಂ ಸೇವಿಸದೆ ಅಧರ್ಮಮಂ ಸೇವಿಸಿ ದುರ್ಗತಿ ಗಳಿದು ಈ ಜವನೆಂಬ ಅಜಿಸಿ ತಿಂಬ ದೈವಕ್ಕೆ ಪೋಗಿ ಪಾಲುಂಬಡುವೆ ಎಸಿತಂ ಮಲ್ಮಲ

ಮಱುಗುವೆ ? ಎನಿತು ಸಂಸಾರದೊಳಗೆ ತಿಱ್ರನೆ ತಿರಿವಯ್ ? ಕಡೆಯಿಲ್ಲದ ಸಂಸಾರದ ಕಡೆಗಾಣಲ್ ಬಗೆವೆಯಪ್ಪೊಡೆ ಎನ್ನುಕ್ತಿಗೊಡಂಬಡು ಜೀವ, ನಿನ್ನ ಕಾಲಂ ಪಿಡಿವೆಂ; ಧರ್ಮಮನೆ ಮಗುೞ್ಚಿ ಬಲ್ವಿಡಿವಿಡಿಯಾ. ಅಂಗಜನ ಸುಖದ ಸಾಮ್ರಾಜ್ಯಂಗಳ್ ಶಾರೀರ ಮನಸಾಗಂತುಕ ದುಃಖಗಳನೆ ಮಾೞ್ಪವು, ಅದಱಿಂ ಪಿಂಗುವೆನ್, ಇನ್ನೆನಗೆ ಜಿನನ ಚರಣಂ ಶರಣಂ. — ಇನ್ನೆನಗೆ ಜಿನಪಾದವೇ ಗತಿಯೆಂದು ವಿಮಲವಾಹನನು ನಿರ್ಧರಿಸುವುದು ಅರ್ಥಪೂರ್ಣವಾದುದು. ಅದು ಪರಿಪಕ್ವ ಹೃದಯದ ಸಮ್ಯಗ್ ದೃಷ್ಟಿ.

(೩) ಜನ್ನನ ಯಶೋಧರ ಚರಿತ್ರೆಯಲ್ಲಿ ಚಂಡಕರ್ಮನು ಅಕಂಪನ ಮುನಿಗಳ ಬಳಿಗೆ ಬಂದು ವಾದವಿವಾದ ಮಾಡಿ ಧರ್ಮವನ್ನು ತಿಳಿದುಕೊಳ್ಳುವ ಸನ್ನಿವೇಶ ಯಾರಿಗಾದರೂ ಆತ್ಮಜ್ಞಾನವನ್ನು ಉಂಟು ಮಾಡುವ ಪರಮ ಪವಿತ್ರ ಪ್ರಸಂಗವಾಗಿದೆ :

ಒಂದು ಗಿಡದ ಕೆಳಗೆ ಅಕಂಪನ ಮುನಿಗಳಿದ್ದಾರೆ. ಕುರುಡನು ನಿಧಿಯನ್ನು ಕಾಣುವಂತೆ ಚಂಡಕರ್ಮನು ಅವರನ್ನು ಕಂಡನು. ನಮಸ್ಕರಿಸಿದನು. ಮುನಿಗಳು ಅವನನ್ನು ಆಶೀರ್ವದಿಸಿದರು.

ಚಂಡಕರ್ಮ : ಎಲೆ ದೇವರೆ, "ಪುತ್ತುಂ ಬತ್ತಲೆಯುಂ ಬೞಿದಿಲ್ಲವೆಂಬರು... ಮಿಡುಕದೆ ಮನದಲ್ಲಿ ಏನಂ ನೆನೆಯುತಿರ್ದಿರಿ ?"

ಅಕಂಪನಮುನಿ : ಆತ್ಮನನ್ ಅವಿಕಲ್ಪ ನೆನೆಯುತಿರ್ದೆವು.

ಚಂಡಕರ್ಮ : ಮತ್ತಾತಂ ಆವೆಡೆಯೊಳಿರ್ದಂ, ಆತ್ಮಂಗಾವುದು ಕುರುಪು ?

ಅಕಂಪನಮುನಿ : ಅಂಗಿಯಂಗದೊಳೆಲ್ಲಂ ತೀವಿರ್ಪಂ, ಭೂತಚತುಷ್ಟಾವಯವದಿಂ ಅನ್ಯಂ. ಆತ್ಮನತಿ ಚೈತನ್ಯಂ.

ಚಂಡಕರ್ಮ : ನೀಮೆಂದ ಮಾತು ಪೊಲ್ಲದು. ನೋಡಲ್ಕೆಂದು ಪಲರಂ ವಿಚಾರಿಸಿ ಕೊಂದೆಂ. ತನುವಲ್ಲದಾತ್ಮನಂ ಕಂಡರಿಯೆಂ... ಒಳಗೆಲ್ಲಡಗಿರ್ಪುದು ? ಜೀವ ನಿರ್ಪೊಡೆಲ್ಲಿಗೆ ಪೋದಂ ?

ಅಕಂಪನಮುನಿ : ಕಲ್ಲೊಳ್ ಪೊನ್ ಪಾಲೊಳ್ ಘೃತಂ ಇಲ್ಲೆನವೇಡ, ಉಂಟು. ದೇಹದೊಳಗಾತ್ಮನದೇಕಿಲ್ಲ ? ಕುರುಡಂಗೆ ತೋರದೊಡೆ ಇಲ್ಲಪ್ಪುದೆ ? ವಸ್ತು ಭೇದಿಪಂಗೆ ಆತ್ಮಂ ಒಳಂ ಮಾಡುವನಾತ್ಮಂ. ನೆಟ್ಟನೆ ಮಾಡಿತ ನುಣ್ಪಾತನಾತ್ಮಂ ಅಘಜಲಧಿಯೊಳು ಓಲಾಡುವೊಡಂ ಗುಣಗಣದೊಳ್ ಕೂಡುವೊಡಂ ಜನ್ಮ ಜಲಧಿಯಂ ದಾಂಟುವೊಡಂ ಪರಮಾತ್ಮನು ಎನ್ನಂ (ಎಂಥವನು) ಎಂದೊಡೆ ಚರಮಾಂಗ ಪ್ರಮಿತ್ತಂ ಅಖಿಲ ಲೋಕ ಸಮಾನಂ. ನಿರವಯವಂ. ನಿತ್ಯಂ ನಿರ್ದುರಿತಂ ಅನಂತ ಪ್ರಬೋಧದರ್ಶನ ಸೌಖ್ಯಂ. ಕೇವಲ

> ವಿಬೋಧ ನೇತ್ರನೆ ದೇವನೆ ಪರಮಾತ್ಮಂ ಆಗಮಂ ತದ್ವಚನಂ. ಜೀವದಯೆ ಧರ್ಮಂ, ಎಂಬೀ ಭಾವನೆಯಂ ನೆಱೆಯೆ ನಂಬುವುದು ಸಮ್ಯಕ್ತ್ವಂ. ತನ್ನಂತೆ ಬಗೆವುದು ಪೆರರಂ ಪ್ರಾಣಿ ಹಿಂಸೆಯಂ ಮಾಡಲ್ವೇಡ. ದಯಾಮೂಲಂ ಧರ್ಮಂ.

ಜೈನಧರ್ಮದ ಸಾರಸರ್ವಸ್ವವನ್ನೇ ಇಲ್ಲಿ ಮುನಿಗಳು ಸಾಮಾನ್ಯನಿಗೂ ತಿಳಿಯುವಂತೆ ಹೇಳಿರುವರು.

(೪) ನಾಗಚಂದ್ರನ ಮಲ್ಲಿನಾಥ ಪುರಾಣದಲ್ಲಿ ೧೪ನೆಯ ಆಶ್ವಾಸದಲ್ಲಿ ಕಾಮದೇವನು ಜಿನಮುನಿಯೊಂದಿಗೆ ಯುದ್ಧ ಮಾಡಿ ಸೋತ ಸನ್ನಿವೇಶ ಬಹಳ ಆಕರ್ಷಕವಾಗಿದೆ.

ನಿರ್ಭೀತನಾಗಿ ತಪಸ್ಸು ಮಾಡುವ ಮುನಿಯ ವಿರುದ್ಧ ಕಾಮನಲ್ಲಿ ಕಾಮನ ಸೇವಕರು ದೂರಿಕೊಳ್ಳುತ್ತಾರೆ. ಕಾಮನು ಸಿಟ್ಟಿನಿಂದ ಜಿನಮುನಿಯ ಬಳಿಗೆ ಬಂದು ಯುದ್ಧಕ್ಕೆ ಸಿದ್ಧನಾಗುತ್ತಾನೆ.

> ಪೂವಿನ ಬಿಲ್ಲ ಕೊಪ್ಪನೊದೆದೇಱಿಸಿ ತಾವರೆನೂಲನಾರಿಯಂ
> ಜೇವೊಡೆಗೆಯ್ದು ಪೂಗಣೆಗಳಯ್ದುಮನೊರ್ಮೆಯೆ ಪೂಡಿಕೊಂಡು ಕ
> ರ್ಣಾವಧಿಯಾಗೆ ತೀವಿ ತೆಗೆದುದ್ಧತಸಂತುಮಸಾಧ್ಯಮಪ್ಪುದಂ
> ಭಾವಭವಂ ನಿರೀಕ್ಷಿಸಿದನಾ ಮುನಿಮುಖ್ಯನ ಚಿತ್ತಲಕ್ಷ್ಯಮಂ

ನಡುಹಗಲಿನ ಸೂರ್ಯನನ್ನು ನೋಡಿದಂತೆ ಅನಿಸಿರಬೇಕು. ಜಿನಮುನಿಯ ತೇಜಸ್ಸಿಗೆ ಕಾಮನ ಕಣ್ಣುಗಳು ಕುಕ್ಕಿರಬೇಕು. ಅಧೀರನಾಗದಿರುವ ಮುನಿಯ ಧೈರ್ಯಕ್ಕೆ ಆಶ್ಚರ್ಯ ಉಂಟಾಗಿರಬೇಕು.

> ಚರಮ ಶರೀರಮಂ ನಡುವ ಕೈದುಗಳಿಲ್ಲ ಮನಕ್ಕೆ ವಜ್ರಮಂ
> ಜರ ಮೊಡವುಟ್ಟಿದಂಗಿಸುವೆ ನಾವುದನೆಂದು ಮನೋಭವಂ ಭಯ
> ಜ್ವರವಶವರ್ತಿಯಾಗಿ ನಡುಗುತ್ತಿರೆ ದಕ್ಷಿಣವಾಮಪಾಣಿಗಳ್
> ಪರವಶಮಾಗೆ ಬಿರ್ದುವು ಲತಾಂತ ಶರಂಗಳುಮಿಕ್ಷುಚಾಪಮಂ

ಕಾಮನ ಪಂಚಬಾಣಗಳು ಪ್ರಯೋಗಿಸಲಸಮರ್ಥವಾದವು. ಕಾಮನಿಗೆ ಭಯದ ಜ್ವರವೇರಿತು. ಕೈ ನಡುಗಿದವು. ಅಸ್ತ್ರಗಳು ಉದುರಿ ಕೆಳಗೆ ಜಾರಿ ಬಿದ್ದವು.

> ಬಿದಿರೊಳ್ಪುಟ್ಟಿದ ಕಿಚ್ಚಿನಂತೆ ಸುಡೆ ತನ್ನಂ ತನ್ನ ಕೋಪಾನಳಂ
> ಮದನಂ ಮುನ್ನಮೆ ಬೆಂದು ತನ್ಮುನಿಯ ಬೋಧಾಳೋಕ ಸೌಧಾಂಬುವಾ
> ಹವಯಾವರ್ಷಣದಿಂ ಕ್ಷಣಂ ತಡೆದನೇ ತಣ್ಣೀರ್ಗಳಿಂ ಬೇವಸು
> ಣ್ಣದ ಕಲ್ಲಂತಿರೆ ಬೆಂದನುಗ್ರ ಸುರಪುಷ್ಪಾಸಾರ ಘೋರೀರವಂ

ಬಿದಿರ ಮೆಳೆ ತಿಕ್ಕಾಡಿ ಉಂಟಾದ ಬೆಂಕಿಯಿಂದ. ತನ್ನ ತಾನೆ ಸುಡುವಂತೆ ಕಾಮನು ತನ್ನ ಕೋಪದಿಂದ ತಾನೆ ಸುಟ್ಟುಹೋದನು. ಆ ಮುನಿಯ ಬೋಧಾಮೃತದ ಮಳೆಯ ಹನಿಗೆ ಸ್ವಲ್ಪವಾದರೂ ತಾಳಿದನೆ ? ತಣ್ಣೀರ ಹನಿಗೆ ಸುಡುವ ಸುಣ್ಣದ ಕಲ್ಲಿನಂತೆ ಸುಟ್ಟು ಹೋದನು. ಜಿನಮುನಿಯ ವಿಜಯದ ಸಂಕೇತವಾಗಿ ದೇವತೆಗಳು ಹೂವಿನಮಳೆ ಗರೆದರು. ದುಂದುಭಿ ನಿನಾದಗೈದರು. ಇದೊಂದು ಅಪೂರ್ವ ಸಂದರ್ಭ ಕನ್ನಡ ಸಾಹಿತ್ಯದಲ್ಲಿ ಮರೆಯಲಾಗದಂತೆ ನಾಗಚಂದ್ರನಿಂದ ಚಿತ್ರಿತವಾಗಿದೆ. ಬಹುಶಃ ಇದೇ ಪ್ರಸಂಗದಿಂದ ಆಂಡಯ್ಯ ಕವಿ ತನ್ನ ಕಾವ್ಯಕ್ಕೆ ಹೊಸ ವಸ್ತುವನ್ನೂ ಸ್ಫೂರ್ತಿಯನ್ನೂ ಹೊಂದಿರಬಹುದೆಂದು ತೋರುತ್ತದೆ.

(೫) ರತ್ನಾಕರವರ್ಣಿಯ ಮಹೋನ್ನತ ತತ್ವ ಸಂದೇಶಗಳನ್ನು ಮನನ ಮಾಡಿ ಸಾಧಕ ಜೀವಿಗಳು ಸದಾ ಸಂತೃಪ್ತಿಯನ್ನು ಹೊಂದಬಹುದು. ಭರತೇಶ ವೈಭವದ ಭೋಗವಿಜಯದಲ್ಲಿ ಆತ್ಮಸ್ವರೂಪ ವರ್ಣನೆಯನ್ನು ಮನಂಬುಗುವಂತೆ ಮಾಡಿದ್ದಾನೆ.

ಆರು ಬಲ್ಲರು ಹಂಸ ತತ್ವವ ತಮ್ಮ ಶ । ರೀರ ತುಂಬಿರುತಿಹುದದನು ।
ಹಾರದೆ ಸಾರದೆ ಹೊರ ಹೊರಗಾಡಿ ಸಂ । ಸಾರ ದುಃಖವನುಣುತಿಹರು ॥

ಹೊಳೆವ ಕನ್ನಡಿ ಕೈಯೊಳಿರ್ದು ನೋಡದೆ ನೀರ । ನೆಳಲಲ್ಲಿ ಮೊಗವನೋಳ್ಪಂತೆ ।
ಒಳಗಿದ್ದ ಚಿದ್ರೂಪನೋಡದೆ ಜಗವೆಲ್ಲ । ಬಳಲುತಿಹುದು ಹೊರಗಾಡಿ ॥

ಮನೆಯಲ್ಲಿ ಹೂಳಿದ್ದ ನಿಧಿಯ ಕಾಣದೆ ಹೋಗಿ । ಧನಿಕರಯಾಚಿಸುವಂತೆ ।
ತನುವಿನೊಳಿದ್ದಾತ್ಮರೂಪ ನಿಟ್ಟಿಸದೆ ಮೇ । ದಿನಿಯ ತೊಳಲಿ ನೋಡುತಿಹರು ॥

ತಿಳಿವೆ ಶರೀರ ತಿಳಿವೆ ರೂಪು ಬೆಳಗೆ ಮೈ । ಬೆಳಗೆ ತಾನಾಗಿರುತಿಹುದು ।
ತಿಳುವು ಬೆಳಗುಗಳೆ ಹಂಸನ ಕುರುಹೆಂದು । ತಿಳಿದು ನೆ ೋಳ್ಪವನೀಗಧನ್ಯಾ ॥

ಛಾಯಾ ಪ್ರತಿಮೆಯ ಛಾಯಾ ಪುರುಷನ । ಛಾಯೆಗೆ ಸುಜ್ಞಾನವಿಲ್ಲ
ಆಯೆರಡಕೆ ತಿಳಿವೊಡಗೂಡಲದು ತಾನೆ । ಕಾಯದೊಳಿದ್ದಾತ್ಮ ರೂಪು ॥

ರತ್ನಾಕರವರ್ಣಿಯ ಕಾವ್ಯಕ್ಕೆ ವ್ಯಾಖ್ಯಾನದ ಅವಶ್ಯಕತೆಯೇ ಇಲ್ಲ. ಓದುತ್ತಹೋದಂತೆ ತಂತಾನೆ ಅರ್ಥವಾಗಿ ರಸಾಭಿವ್ಯಕ್ತಿ ದ್ರಾಕ್ಷಾಪಾಕದಂತೆ ಚಿಮ್ಮಿ ಸುರಿಯುವುದು; ಹೊರಹೊಮ್ಮಿ ಹರಿವುದು.

ನಯಸೇನನ ಧರ್ಮಾಮೃತದಲ್ಲಿ, ನಾಗವರ್ಮನ ವರ್ಧಮಾನ ಪುರಾಣದಲ್ಲಿ ನೇಮಿ–ಅರ್ಗಳ–ಆಂಡಯ್ಯ–ಮಹಾಬಲ–ಮಂಗರಸ–ಸಾಳ್ವ–ಚಂದ್ರಸಾಗರ ವರ್ಣಿಗಳ ಧಾರ್ಮಿಕ ಕೃತಿಗಳಲ್ಲಿ ಒಂದೊಂದರಲ್ಲಿ ಒಂದೊಂದು ನೂತನ ಸೊಗಸು ಹೊರ ಹೊಮ್ಮುವಂತೆ ಕಾವ್ಯಸೃಷ್ಟಿಯಾಗಿದೆ.

ಜೈನಕವಿಗಳೆಲ್ಲ ತಮ್ಮ ಕಾವ್ಯಶಕ್ತಿಯನ್ನು ಧಾರ್ಮಿಕ ಲೌಕಿಕ ಎಂದು ಎರಡು ವಿಧಗಳಲ್ಲಿ ಬಳಸಿರುವುದುಂಟು. ಪಂಪನು ಧರ್ಮಕ್ಕಾಗಿ ಆದಿಪುರಾಣವನ್ನು ಬರೆ

ದಂತೆ. ಲೌಕಿಕಕ್ಕಾಗಿ ವಿಕ್ರಮಾರ್ಜುನ ವಿಜಯುವನ್ನೂ (ಪಂಪಭಾರತವನ್ನೂ) ಬರೆದಿದ್ದಾನೆ. ಅದರಂತೆ ರನ್ನನು ಅಜಿತಪುರಾಣ ಗಧಾಯುದ್ಧಗಳನ್ನೂ, ನಾಗಚಂದ್ರನು ಮಲ್ಲಿನಾಥಪುರಾಣ–ರಾಮಾಯಣಗಳನ್ನೂ, ನೇಮಿಚಂದ್ರನು ನೇಮಿನಾಥಪುರಾಣ–ಲೀಲಾವತಿಗಳನ್ನೂ ಬರೆದುದುಂಟು. ಜನರ ಉಪಯೋಗಕ್ಕೆ ಔಷಧಶಾಸ್ತ್ರ, ಜ್ಯೋತಿಷ್‌ಶಾಸ್ತ್ರ, ಗಣಿತಶಾಸ್ತ್ರ, ಶಕುನಶಾಸ್ತ್ರ, ಅಲಂಕಾರಶಾಸ್ತ್ರ, ಛಂದಸ್‌ಶಾಸ್ತ್ರ ಮುಂತಾದ ಗ್ರಂಥಗಳನ್ನು ಬರೆಯುವಲ್ಲಿ ಜೈನಕವಿಗಳ ಲೌಕಿಕ ನಿಷ್ಠೆಯು ಪ್ರಕಟವಾಗಿದೆ. ಪಂಪನ ಕರ್ಣ, ರನ್ನನ ದುರ್ಯೋಧನ, ನಾಗಚಂದ್ರನ ರಾವಣ, ಅಸಾಧಾರಣ ಪಾತ್ರ ಸೃಷ್ಟಿಗಳು ಬೇರೆ ಭಾಷೆಗಳಲ್ಲಿಯೂ, ಸಂಸ್ಕೃತದಲ್ಲಿಯೂ ಇಂಥ ಸೃಷ್ಟಿ ಆಗಿಲ್ಲ. ದೇಶ–ನಾಡು–ನುಡಿಗಳ ಅಭಿಮಾನವನ್ನು ತೋರಿಸುವಲ್ಲಿ ಜೈನ ಕವಿಗಳು ಸದಾ ಮುಂದಿದ್ದಾರೆ. ಆರಂಕುಶವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ— ಎಂದು ಹೇಳುವಲ್ಲಿ ಪಂಪನ ದೇಶಾಭಿಮಾನವನ್ನು ಗುರುತಿಸಬಹುದು ಆಂಡಯ್ಯನ ಕನ್ನಡ ನುಡಿಯ ಭಕ್ತಿ ಅಸಾಮಾನ್ಯವಾದುದು. ಅಚ್ಚಗನ್ನಡದಲ್ಲಿ ಕಾವ್ಯ ಬರೆಯುವುದಾಗಿ ಪ್ರತಿಜ್ಞೆ ತೊಟ್ಟು 'ಕಬ್ಬಿಗರ ಕಾವ' ಎಂಬ ಕೃತಿಯನ್ನು ರಚಿಸಿದುದು ಕನ್ನಡದಲ್ಲಿ ಏಕೈಕ ಸಾಹಸ. ಬೇರೆ ಭಾಷೆಗಳಲ್ಲಿಯೂ ಇಂಥ ಸಾಹಸ ನಡೆದಿರಲಿಕ್ಕಿಲ್ಲ. ಕತೆಗಾರ, ನಗೆಗಾರ, ನಾಣ್ಣುಡಿಕಾರ, ಉಪಮಾಲೋಲ, ಸಮಾಜ ವಿಜ್ಞಾನಿ, ಮತ್ತು ಹಿರಿಯ ಕನ್ನಡಾಭಿಮಾನಿ ಕವಿ ನಯಸೇನ 'ಸಕ್ಕದಮಂ ಪೇಳ್ವೊಡೆ ನೆರೆ ಸಕ್ಕದಮಂ ಪೇಳ್ಗೆ. ಸುದ್ಧಗನ್ನಡದೊಳ್ ತಂದಿಕ್ಕುವುದೆ ಸಕ್ಕದಂಗಳ ? ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ ?—ಎಂದು ಕೇಳುವ ನುಡಿಗೆ ಮೈನವಿರೊಡೆಯದವರಾರು ? 'ಬೆಲೆಯಿಂದಕ್ಕುಮೆ [ಎಲೆ] ಗಾವಿಲ, ಕೃತಿ ಭುವನದ ಭಾಗ್ಯದಿಂದ ಮಕ್ಕುಂ ನೋಳ್ಪಂ ಬೆಲೆಗೊಟ್ಟು ತಾರ ಮಧುವಂ ಮಲಯಾನಿಲನಂ ಮನೋಜನಂ ಕೌಮುದಿಯಂ ?'—ಎಂದು ಕೇಳುವ ನೇಮಿಚಂದ್ರನ ಮಾತಿಗೆ ಬೆರಗಾಗದವರಾರು ?

ಕಾಲಕಾಲಕ್ಕೆ ಪ್ರಕಟವಾಗುವ ನಿತ್ಯನೂತನ ಪ್ರತಿಭೆಯಿಂದಲೂ, ಸಕಲ ಜನಾಂತರ್ಗತ ಸಾಮ್ಯವಾದ ದೃಷ್ಟಿಯಿಂದಲೂ, ಸ್ಯಾದ್ವಾದ ತತ್ವದ ವೈಜ್ಞಾನಿಕ ಸತ್ಯ ದೃಷ್ಟಿಯಿಂದಲೂ, ದೇಶ–ಭಾಷೆಗಳ ಅಭಿಮಾನದಿಂದಲೂ, ಐತಿಹಾಸಿಕ ಧ್ವನಿಯನ್ನು ಶ್ಲೇಷೆಯಿಂದ ಅಭಿವ್ಯಕ್ತ ಮಾಡುವ ದ್ವಿಸಂಧಾನ ಕಾವ್ಯಸೃಷ್ಟಿಯಿಂದಲೂ, ತಾವೂ ಬದುಕಲಿ, ಜಗತ್ತೂ ಬದುಕಲಿ ಎಂಬ ಅಹಿಂಸಾ ಸಿದ್ಧಾಂತದ ಸಮತಾಭಾವದಿಂದಲೂ ಜೈನಕವಿಗಳು ಸಕಾಲಕ್ಕೆ ಹೊಸ ಸಂದೇಶಗಳನ್ನು ನೀಡುತ್ತಲೇ ಬಂದಿದ್ದಾರೆ. ಕನ್ನಡದಲ್ಲಿ ಜೈನಕವಿಗಳು ತಮ್ಮ ಉತ್ತಮ ಸೇವೆಯಿಂದ ಅವಿಸ್ಮರಣೀಯರಾಗಿದ್ದಾರೆ; ಕನ್ನಡ ಭಾಷೆ ಇರುವ ವರೆಗೂ ಸೂರ್ಯಚಂದ್ರ ಚುಕ್ಕೆಗಳಂತೆ ಸದಾ ಬೆಳಕನ್ನು ಬೀರಬಲ್ಲ ಸಾಮರ್ಥ್ಯವನ್ನು ಹೊಂದಿದ್ದಾರೆ.

• •

ಕಣಕದ* ಆರತಿ : ಒಂದು ಸಂಪ್ರದಾಯ

ಎ. ವ್ಹಿ. ಪಾಟೀಲ

ಜನಪದದ ವಿಧಿಕ್ರಿಯಾ (Ritual) ಪ್ರಪಂಚವನ್ನು ಈಕ್ಷಿಸುವಾಗ ಅಲ್ಲಿ ಯಾವುದೊಂದು ಆಶಯ (Motif), ಕೆಲಕಾಲದ ನಂತರ ಬೇರೊಂದು ಆಶಯ ದೊಡನೆ ಸೇರಿಕೊಳ್ಳುವ ತನ್ನ ಮಹತ್ವ ಕಳೆದುಕೊಳ್ಳುವ, ಬೇರೊಂದು ಬಗೆಯ ಅರ್ಥ ಪಡೆಯುವ ಮುಂತಾದ ಸಾಧ್ಯತೆಗಳನ್ನು ಗಮನಿಸಬಹುದು. ಈ ಬಗೆಯ ಅಭ್ಯಾಸದ ವಲಯದಲ್ಲಿ ಕಣಕದ ಆರತಿಯ ಕುರಿತಾದ ಸಂಪ್ರದಾಯವನ್ನು ಇಲ್ಲಿ ಎತ್ತಿ ಕೊಂಡಿದ್ದು, ಅದರ ಮೂಲದ ಗ್ರಹಿಕೆಗೆ ಪ್ರಯತ್ನಿಸಲಾಗಿದೆ.

ಇಂದಿಗೂ ಹಲವಾರು ವಿಧಿಕ್ರಿಯೆಗಳಲ್ಲಿ ಕಣಕದ ಆರತಿಯ ಬಳಕೆ ಕಂಡುಬರು ತ್ತದೆ. ಇಂತಹ ಕೆಲ ಉದಾಹರಣೆಗಳನ್ನು ಮೊದಲಲ್ಲಿಯೇ ನೋಡುವುದು.

೧) ಬಾಣಂತಿಯರು ಎರೆದುಕೊಂಡ ನೀರು ಹೋಗಲು, ಸನಿಹದಲ್ಲಿಯೇ ಮಾಡಲಾದ ಗುಂಡಿಯನ್ನು ೧೧ನೆಯ ದಿನ ಮುಚ್ಚುವಾಗ ದೊಡ್ಡದಾದ ಕಣಕದ ಮುದ್ದೆಯ ಮೇಲೆ ಆರತಿ ಇಟ್ಟು ಅದರ ಮೇಲೆ ಇಡಲಾಗುತ್ತದೆ.

೨) ಮಗುವಿಗೆ ಹೆಸರಿಡುವ ಸಮಯದಲ್ಲಿ ತೊಟ್ಟಿಲಿನ ಕೆಳಗೆ ನಾಲ್ಕು ಮೂಲೆಗೆ ಒಂದೊಂದರಂತೆ, ಮಧ್ಯದಲ್ಲಿ ಒಂದು ಇಂಥ ಆರತಿಗಳನ್ನು ಇಡುವ ವಾಡಿಕೆಯಿದೆ..

೩) ಬ್ರಾಹ್ಮಣರ ಮದುವೆಯಲ್ಲಿ ಮದುಮಗಳ ತಾಯಿ ಹೊರುವ ಸಿಂಧೂ ಪ೧ದ ಮೇಲೆ ಕಣಕದ ಆರತಿಯನ್ನು ಬಳಸುತ್ತಾರೆ. ಇವು ಏಳು ಇಲ್ಲ ಒಂಭತ್ತು

---

* ಕಣಕ : ಗೋದಿಯ ಹಿಟ್ಟನ್ನು ನೀರು ಹಾಕಿ ಕಲಿಸಿದ್ದು.

೧ 'ಸಿಂಧೂಪ' ಸಂಪ್ರದಾಯದ ಮೂಲವೇನೆಂಬುದು ಸ್ಪಷ್ಟವಾಗಿ ತಿಳಿಯದು. ಮದುಮಗಳ ತಾಯಿ ಅಗ್ನಿಯ (ಹೋಮಕುಂಡ) ಸುತ್ತ ಇದನ್ನ ತಲೆಯ ಮೇಲೆ ಹೊತ್ತುಕೊಂಡು ಪ್ರದಕ್ಷಿಣೆ ಹಾಕುತ್ತಾಳೆ. ಪರಾತಪ್ರೊಂದರ ಮೇಲೆ ಡಬ್ಬಾದ ಪರಾತಪ್ರೊಂದನ್ನಿಟ್ಟು ದಾರದಿಂದ ಸುತ್ತಿರ ಲಾಗುತ್ತದೆ. ಅದರ ಮೇಲೆ ಕಣಕದ ಆರತಿಯನ್ನಿಡಲಾಗಿರುತ್ತದೆ. ಹುಡಿಗೆಯ ಸೋದರಮಾವ ನಿಂಬೆಹಣ್ಣು ಸಿಕ್ಕಿಸಿದ ಕತ್ತಿಯನ್ನು ಈ ಉರಿಯ ಮೇಲೆ ಹಿಡಿದುಕೊಂಡು ಹಿಂದೆ ಹಿಂದೆ ಬರು ತ್ತಾನೆ. ಮಾತೃಪ್ರಧಾನ ಕುಟುಂಬ ಪದ್ಧತಿಯ ಒಂದು ಉಳಿಕೆ ಇದಾಗಿರಬಹುದು; ಎಂದು ವಿದ್ವಾಂಸರು ಭಾವಿಸುತ್ತಾರೆ.

ಇರುವುದುಂಟು. ಇವುಗಳಲ್ಲಿಯೇ ಎರಡನ್ನು ಮದುಮಗಳನ್ನು ಮನೆತುಂಬಿಸಿಕೊಳ್ಳುವಾಗ ಬಾಗಿಲಿನ ಎಡಬಲಗಳಲ್ಲಿ ಇಡುತ್ತಾರೆ.

೪) ಎಲ್ಲಮ್ಮನ ಜೋಗಿತಿಯರಿಗೆ ದೀಕ್ಷೆ ಕೊಡುವಾಗ ಆರತಿಯ ತಟ್ಟೆಯಲ್ಲಿ ಇಂಥವನ್ನು ಬಳಸುತ್ತಾರೆ.

೫) 'ಗಂಡಾರತಿ ಗರಿಕಳಸ'[1] ಎನ್ನುವ ಅವ್ಯಾಹತವಾಗಿ ನಡೆದುಬಂದಿರುವ ಸಂಪ್ರದಾಯವೊಂದು ಕಾಣುತ್ತದೆ. ಇದರಲ್ಲಿ ದೇವರಿಗೆ ನಡೆಯುವ ವಿಶೇಷ ಉತ್ಸವಗಳಿಗೆ ಶೀರ ಕಸುವುಳ್ಳವರು ಹೊರಬಹುದಾದ ಭಾರದ ದೊಡ್ಡ ಮುದ್ದೆಯನ್ನು ಪರಾತದಲ್ಲಿಟ್ಟುಕೊಂಡು ಅದರ ಮೇಲೆ ದೀಪ ಹೊತ್ತಿಸಿಕೊಂಡು, ಇದನ್ನು ತಲೆಯ ಮೇಲೆ ಹೊತ್ತುಕೊಂಡು ಹೋಗಲಾಗುತ್ತದೆ. ಹನುಮಂತ ದೇವರ ಕುರಿತಾಗಿ ಇಂಥ ಆಚರಣೆಯಿರುವುದನ್ನು ನಾನು ಕೇಳಿದೆ. ಆದರೆ ಇದು ಯಾವುದೇ ದೇವರ ಕುರಿತಾಗಿಯೂ ನಡೆಯಬಲ್ಲುದಾಗಿ ಹೇಳುತ್ತಾರೆ. ಇಲ್ಲೆಲ್ಲ ನೋಡುವಾಗ ಕಣಕದ ಮುದ್ದೆಗೂ ಆರತಿಗೂ ಇಲ್ಲ ದೀಪಕ್ಕೂ ಒಂದು ಬಗೆಯ ಬಿಡಲಾರದ ಸಂಬಂಧವಿರುವ ಹಾಗೆ ಕಾಣುತ್ತದೆ. 'ಕಣಕದ ಆರತಿ' ಎಂದೇ ಸಂಬೋಧಿಸುವುದನ್ನು ಇಲ್ಲಿ ಗಮನಿಸಬಹುದು.

ಇದೇ ಬಗೆಯಲ್ಲಿ ಇನ್ನೂ ಹಲವಾರು ಉದಾಹರಣೆಗಳು ದೊರೆಯುತ್ತವೆ. ಇವನ್ನು ನೋಡಿದಾಗ ವ್ಯಕ್ತವಾಗುವ ಅಂಶವೊಂದೆಂದರೆ ಕಣಕದ ಆರತಿಯು ನಿರ್ದಿಷ್ಟವಾಗಿ ಒಂದು ವರ್ಗಕ್ಕೆ ಸೇರಿಸಬಹುದಾದ ವಿಧಿಕ್ರಿಯೆಗಳಿಗಷ್ಟೇ ಸಂಬಂಧಿಸಿರದೆ ಸಾಮಾನ್ಯವಾಗಿ ಎಲ್ಲೆಡೆಗೆ ಬಳಕೆಯಾಗುತ್ತಿದ್ದು, ಸ್ವತಂತ್ರವಾಗಿ ವಿವೇಚಿಸಬೇಕಾದುದು.

ಕಣಕದ ಆಶಯ ದೀಪದೊಡನೆಯೇ ಸೇರಿ ಅರ್ಥ ಪಡೆಯುವುದೋ ಇಲ್ಲಾ ಸ್ವತಂತ್ರವಾಗಿದ್ದುದೊ ಎಂಬುದನ್ನೀಗ ವಿವೇಚಿಸಬಹುದು. ದೀಪದೊಂದಿಗೆ ಕಣಕದ ಮುದ್ದೆಯ ಹಾಗೆ ತಂಬಿಟ್ಟು, ಹೂರಣ ಬಳಸುವುದಿದೆ. ಅಲ್ಲದೆ ಸೀಗೆಯ ಹುಣ್ಣಿವೆ ಗೌರಿಯ ಹುಣ್ಣಿವೆಗಳಲ್ಲಿ ಗೌರಿಗೆ ಆರತಿ ಬೆಳಗುವಾಗ ಬಾಳೆಯ ಹಣ್ಣು, ಸೇರಲ ಮುಂತಾದುವನ್ನು ಇದೇ ಬಗೆಯಲ್ಲಿ ಬಳಸುವುದಿದೆ. ಅಲ್ಲದೆ ಹಿಂದಿನ ದಿನಗಳಲ್ಲಿ ಹೀಗೆಯೇ ಬಳಸುತ್ತಿವ್ದ ವಾಡಿಕೆ ಸರ್ವಸಾಮಾನ್ಯವಾಗಿತ್ತು. ನೀಲಾಂಜನದ ಬಳಕೆ ಇತ್ತೀಚಿನದು ಎಂದು ಸಂಪ್ರದಾಯಸ್ಥರು ಹೇಳುತ್ತಾರೆ. ಈ ದೃಷ್ಟಿಯಿಂದ ನೋಡಿದಾಗ ಆರತಿಯೊಡನೆ ಬಳಕೆಯಾಗುವಲ್ಲಿ ಕಣಕವೇ ವಿಶೇಷವಾದುದಲ್ಲವೆನಿಸುತ್ತದೆ. ಇವನ್ನೆಲ್ಲ ಒಟ್ಟು ಆಹಾರದ ಆಶಯವಾಗಿ ಗಣಿಸಬಹುದೆಂದು ಕಾಣುತ್ತದೆ.

---

೧ 'ಗಂಡಾರತಿ' ಎನ್ನುವುದು 'ಕಣಕದ ಆರತಿ'ಯ ಮಾರ್ಪಾಟಿರಬಹುದು. ಗಂಡಸರು ಹೊರುವಂಥ ಭಾರದ್ದಾದ್ದರಿಂದ ಹಾಗಿರಬಹುದು ಎನ್ನುತ್ತಾರೆ ಸಂಪ್ರದಾಯಸ್ಥರು.

ಕಣಕದ ಮುದ್ದೆಯನ್ನು ಸ್ವತಂತ್ರವಾಗಿ ಬಳಸುವ ಕೆಲ ವಿಧಿಕ್ರಿಯೆಗಳು ದೊರೆಯುತ್ತವೆ. ಯಜ್ಞಯಾಗಗಳಲ್ಲಿ ಒಂದಾದ 'ವಾಜಪೇಯಿಯಾಗ'ದಲ್ಲಿ ನಿಲ್ಲಿಸುವ ಯೂಪ ಸ್ತಂಭದ ಮೇಲೆ ಕಣಕದ ಮುದ್ದೆಯನ್ನು ಇಡಲಾಗುತ್ತದೆ. ಇದನ್ನು ಕಳಸವೆಂದೇ ಕರೆಯಲಾಗುತ್ತದೆ. ಕಳಸದ ಸಂಪ್ರದಾಯು ಕೇವಲ 'ಕಲಶ'ದ ಮೂಲ ಹೇಳದೆ, ಕಲಶಕ್ಕಿಂತ ಪೂರ್ವದಲ್ಲಿಯೇ ಬಳಕೆಯಾಗುತ್ತಿದ್ದ 'ಗುಪ್ಪೆ', ನಂತರ ಕಲಶ ಸೇರಿಕೊಂಡ ಮೇಲೆ, ಅದರ ಮೇಲ್ಭಾಗದಲ್ಲಿ ಅದು ಬಳಕೆಯಾಗತೊಡಗಿದ ಗುಪ್ಪೆಗೇ ವಿಶೇಷವಾಗಿ ಅನ್ವಯಿಸುವಂಥದು.[೧] ಇಂದಿಗೂ ಬ್ರಾಹ್ಮಣರಲ್ಲಿ ಸತ್ತಾಗ, ಮಸಣದಲ್ಲಿ ಶವಸಂಸ್ಕಾರಗಳಲ್ಲಿ ಪಿತೃಸಂಕೇತವಾಗಿ ಕಣಕದ ಪಿಂಡಗಳನ್ನೇ ಬಳಸಲಾಗುತ್ತದೆ. ಹರಪ್ಪಾ ಮೊಹೆಂಜೋದಾರೋಗಳಲ್ಲಿ ಶವದ ಉಳಿಕೆಗಳೊಂದಿಗೆ ಕಣಕದ ಇಂಥ ಗುಂಡುಗಳೂ ಕಂಡುಬಂದಿವೆ. ಅಲ್ಲಿ ಆಹಾರಾಶಯವನ್ನು ಸ್ಪಷ್ಟವಾಗಿ ಹೇಳುತ್ತವೆ ಎಂಬುದಾಗಿ ವಿದ್ವಾಂಸರ ಮತ. '... the lumps of carbonised wheat and barly were no doubt the residue of food offerings to the deceased for use in future life. The triangular clay cakes and balls with finger marks were dummy pindas as substitutes to the real ones. This might have been due either to the scarcity of food grains or due to the permanent character of the substitutes which could last longer than the actual victuals ...It becomes clear that the purpose underlying the deposition of these sacrificed jars did not differ much in purpose from the sraddha ceremonies of orthodox Hindu of late.[೨] ಕಣಕದ ಮುದ್ದೆಯ ಹಾಗೆ ಅಕ್ಕಿ, ಬುತ್ತಿಯನ್ನು ಬಳಸುವ ಉದಾಹರಣೆಗಳು ದೊರೆಯುತ್ತವೆ. 'ಕಾಡು ಗೊಲ್ಲರ ಜನಪದ ಗೀತೆಗಳು' ಸಂಗ್ರಹದಲ್ಲಿನ ಪಾತೇಲಿಂಗ ಎಂಬ ಕಥೆಯಲ್ಲಿ 'ಪಾತೇಲಿಂಗ' (ದೈವತ) ತನ್ನನ್ನು ಸ್ಥಾಪಿಸಲಿದ್ದ ಬುಳ್ಳಪ್ಪನಿಗೆ ತನ್ನ ಈಡೇರಿಕೆಗಳನ್ನು ತಿಳಿಸುತ್ತ 'ಹೊಳೆಯಾನೆ ಗಡ್ಯಾಗೆ ಅಂಕುಳ ಕಣವೇ ಮಾಡಿ ಆಳುದ್ದ

೧ ಇಂದಿಗೂ ಮದುವೆಯ ಸಮಯಗಳಲ್ಲಿ ಪೂಜಿಸುವ ಐರಾಣಿ ಕೊಡಗಳಲ್ಲಿಡುವ ದಂಟುಗಳಿಗೆ ತುದಿಯಲ್ಲಿ ಸಗಣಿಯ ಮುದ್ದೆಯನ್ನಿಟ್ಟು ಅದನ್ನು ಕಳಸವೆಂದು ಕರೆಯುತ್ತಾರೆ. ಕಲಶದ ಮೇಲ್ಭಾಗದಲ್ಲಿ ಗುಪ್ಪೆಯನ್ನು ಮಾಡುತ್ತಿದ್ದುದರ ಕುರಿತು ಬೌದ್ಧ ಸಂಪ್ರದಾಯಗಳಲ್ಲಿ ವಿಶೇಷ ಮಾಹಿತಿ ದೊರೆಯುತ್ತಿದೆ. ಹಳ್ಳಿಗಳಲ್ಲಿ ಕೇಲ (ಕಲಶ) ವೆಂದು ಯಾವುದೇ ದೇವತೆಯ ಸಂಕೇತವಾಗಿಟ್ಟು ಪೂಜಿಸುವಾಗ ಮೇಲೆ ಗುಪ್ಪೆ ಇರಲೇಬೇಕು. ಇದು ಮಣ್ಣಿನದೂ ಆಗಿದ್ದು ತೆಂಗಿನ ಪರಟೆಯೂ ಆಗಿ ಮಾರ್ಪಾಟಾಗಿದೆ.

೨ New light on the Indus Civilization Vol. II
K. N. Sastri (p. 152, 153)

ಮೋಟಿ ನಿಲುವಯ್ಯ, ಮೋಟಿಯ ತಲೆಮೇಲೆ ಮುದ್ದೆ ಇಡಯ್ಯ' ಎನ್ನುತ್ತದೆ.[೧] ಮಂಡ್ಯ ಜಿಲ್ಲೆಯ ಒಕ್ಕಲಿಗರ ಮದುವೆಯಲ್ಲಿ ಚಪ್ಪರದ ಕಂಬಗಳೆಂದು ಆಯುವ ಮೂರು ಕಂಬಗಳಿಗೆ ಐದಾನ್ (ಐದು ಧಾನ್ಯಗಳ) ದ ಬುತ್ತಿಯ ಗಂಟು ಕಟ್ಟುತ್ತಾರೆ. ಒನಕೆಯ ಪೂಜೆಯ ಸಂದರ್ಭದಲ್ಲಿಯೂ ಮೂರು ಇಲ್ಲವೆ ಐದು ಒನಕೆಗಳಿಗೆ ಹೀಗೆಯೇ ಕಟ್ಟುತ್ತಾರೆ.[೨] ಅಕ್ಕಿಯ ಕಾಳಿನ ಗಂಟನ್ನು ಈ ಬಗೆಯಲ್ಲಿ ಕಟ್ಟುವ ವಿಧಿಕ್ರಿಯೆ ಉತ್ತರ ಕರ್ನಾಟಕದಲ್ಲಿಯೂ ಸರ್ವೇಸಾಮಾನ್ಯವಾಗಿದೆ. ಇದೇ ಬಗೆಯಲ್ಲಿ ಕಣಕದ ಆಶಯವು ಸ್ಥಾನಪಡೆದಿರಲು ಸಾಕು. ಕಂಬ ಆಶಯದ ಮೇಲೆ ಸೇರಿಕೊಂಡ ಹಾಗೆ, ದೀಪ ಆಶಯದೊಡನೆಯೂ ಸೇರಿಕೊಂಡಿರಲು ಸಾಕು.

ಆಹಾರದ ಆಶಯವಾಗಿ ಬಳಸುವ ಈ ಬಗೆ ಸ್ವತಂತ್ರವಾದುದು. ಇಂದಿಗೂ ಇದನ್ನು ಹೇಳುವ ವಿಧಿಕ್ರಿಯೆಗಳು ಸಾಕಷ್ಟು ದೊರೆಯುತ್ತವೆ. 'ಬುತ್ತಿಯ ಪೂಜೆ'ಯ ಸಂಪ್ರದಾಯ ಇದನ್ನೇ ಹೇಳುವಂತಹುದು. ಗುಡಿಗೆ ಹೋಗುವಾಗ ಅಕ್ಕಿಯನ್ನು ಒಯ್ಯುತ್ತಾರೆ. ಅದನ್ನು ಐದು ಗುಪ್ಪೆಯಾಗಿ ಇಟ್ಟು, ಅದರಲ್ಲಿ ಕಣ್ಣು ಮೂಡಿಸುತ್ತಾರೆ. ಬಿತ್ತುವಾಗ ಕಾಳಿನ ಗುಪ್ಪೆಹಾಕಿ ಪೂಜಿಸುವುದನ್ನು ಯಾರೂ ಬಲ್ಲರು. ಪಿತೃಸಂಕೇತವಾಗಿ ಬುತ್ತಿಯ ಗುಂಡುಗಳನ್ನು ಬಳಸುವ ಸಂಪ್ರದಾಯ ಪಂಚಮರಾದ ಹರಿಜನರಲ್ಲಿಯೂ ವಿಶೇಷವಾಗಿದೆ. ಈ ಬಗೆಯ ಉದಾಹರಣೆಗಳು ಸಾಕಷ್ಟು ದೊರೆಯುವುದರಿಂದ ಈ ಕುರಿತಾಗಿ ಹೆಚ್ಚಿಗೆ ಹೇಳದಿದ್ದರೆ ನಡೆಯುತ್ತದೆ ಎಂದು ಕಾಣುತ್ತದೆ. ಕಾಳುಗಳನ್ನು, ಹಿಟ್ಟನ್ನು, ಪೂರ್ತಿಗೊಳಿಸಿದ ಅಡಿಗೆಯನ್ನು ಹೀಗೆ ಅನುಕೂಲಕ್ಕೆ, ಕೆಲ ವಿಧಿಕ್ರಿಯಾ ಅವಶ್ಯಕತೆಗಳಿಗಾಗಿ ಬಳಸಿಕೊಂಡಿದ್ದು ಇವೆಲ್ಲ ಒಂದೇ ಬಗೆಯ ಆಶಯ ಹೇಳುವಂಥವು. ಆಹಾರವನ್ನು ಗುಪ್ಪೆಯಾಗಿ ಮಾಡಿ ವಿಧಿಕ್ರಿಯೆ ಆಚರಿಸುವಂತೆ ಮಣ್ಣನ್ನು, ಉಸುಕನ್ನು, ಕಟ್ಟಿಗೆಗಳನ್ನು ಹೀಗೆಯೇ ಹಲವಾರು ವಸ್ತುಗಳ ಅವುಗಳಲ್ಲಿಯ ಚೈತನ್ಯದ ಪೂಜೆಗಾಗಿ, ಇಲ್ಲಾ ಒಂದರ ಪ್ರತೀಕವಾಗಿ ಇನ್ನೊಂದನ್ನು ಭಾವಿಸುತ್ತ ಗುಪ್ಪೆಗಳ ಬಳಕೆ ಕಂಡುಬರುತ್ತದೆ. ಶುಭಕಾರ್ಯದಲ್ಲಿ ಬಳಕೆಯಾಗುವ ಕಣಕದ ಗುಪ್ಪೆಗಳಿಗೆ ಅರಿಷಿಣ ಬೆರೆಸುತ್ತಾರೆ, ಕುಂಕುಮ ಹಚ್ಚುತ್ತಾರೆ. ಇದೂ ಕೂಡ ಅವರ ಸ್ವತಂತ್ರ ಆಶಯದ ಕುರುಹು ಎನ್ನಬಹುದು. ಕಣಕ ಆಹಾರದ ಅವಶ್ಯಕತೆಯ ಹಿನ್ನೆಲೆಯಲ್ಲಿ ಭೂತವಾಗಿ, ದೈವತವಾಗಿ Fetish (ವಸ್ತುಪೂಜೆ) ಸ್ಥಿತಿಯ ಹಂತದಿಂದ ಹಿಡಿದು ಮೂರ್ತಿಸ್ವರೂಪ ಬರುವವರೆಗೂ ಬಳಕೆಯಾಗಿರುವ ಸಾಧ್ಯತೆಯಿದೆ. ಮದುವೆಯಲ್ಲಿ ವಧುವು ಪೂಜಿಸುವ ಕಣಕದ ಗಣಪತಿಯು ಇದನ್ನೇ ಹೇಳುತ್ತಿರಬೇಕು. ಕೆಟ್ಟ ನಕ್ಷತ್ರದಲ್ಲಿ ಸಾವು ಸಂಭವಿಸಿದಾಗ ಶವದ ಎದೆಯ ಮೇಲೆ ಕಣಕದ ಗುಪ್ಪೆಯಂತೆ, ಮೂರ್ತಿಸ್ವರೂಪಕ್ಕೆ ತಂದುಕೊಳ್ಳುವುದನ್ನು ಉದಹರಿಸಬಹುದು.

---

೧ ಕಾಡುಗೊಲ್ಲರ ಜನಪದಗೀತೆಗಳು : ಸಂ. ಎ. ಹಿರಿಯಣ್ಣ (ಪು. ೧೪೦).

೨ ಕೆಲವು ಜನಪದ ಸಂಪ್ರದಾಯಗಳು : ತ. ಚಿ. ಚೆಲುವೆಗೌಡ (ಪು. ೪೩, ೪೪).

ಬಲಿಪದ್ಧತಿಯಲ್ಲಿ, ಅಹಿಂಸಾ ತತ್ವದ ಪ್ರಚುರವಾದಂತೆ ಅದರ ಬದಲಾದ ವ್ಯವಸ್ಥೆಯಲ್ಲಿ ಕಣಕವನ್ನು ಬಳಸಿದುದೂ ಕಂಡುಬರುತ್ತದೆ; ಅದು ನಂತರದ್ದು.

ದೀಪದ ಆಶಯ ಸ್ವತಂತ್ರವಾದುದೇ ಆಗಿರಬೇಕು. ದೀಪವನ್ನು ಸ್ವತಂತ್ರವಾಗಿ ಪಿತೃಸಂಕೇತವಾಗಿ ಬಳಸುವುದಿದೆ. ನವರಾತ್ರಿಗಳಲ್ಲಿ ದೇವರ ಸಂಕೇತವಾಗಿ ದೀಪ ಇಡುವದಿದೆ. ಹಟ್ಟಿಯ ಹಬ್ಬದಲ್ಲಿ ಹಟ್ಟಿಯ ಪೀಡೆಯ ಸ್ವರೂಪದಲ್ಲಿ ದೀಪದ ಬಳಕೆಯಿದೆ. 'ಆಣಿ ಪೀಣಿ ಜಾಣಿಗೂ' ಎನ್ನುತ್ತ ಗೊಲ್ಲರ ಹುಡುಗರು ಮನೆ ಮನೆಗೆ ದೀಪ ಒಯ್ಯುತ್ತಾರೆ. 'ದಿವಾ ಪೂಜಾ' ಎಂಬುದು ಮಹಾರಾಷ್ಟ್ರದಲ್ಲಿ ವಿಶೇಷವಾಗಿ ನಡೆದುಬಂದಿರುವ ಸಂಪ್ರದಾಯ. ಅದು ಕರ್ನಾಟಕದಲ್ಲಿಯೂ 'ದೀವಸೀ ಗೌರಿ' ಯಾಗಿ ಪ್ರವೇಶ ಪಡೆದಿದೆ. ಇಂತಹ ಸಾಕಷ್ಟು ಉದಾಹಣೆಗಳು ದೊರೆಯುತ್ತವೆ. ದೀಪದ ಮೂಲ ಕೆಂಡದ ಬಳಕೆಯೇ ಹೇಗೆ ಮುಂತಾದ್ದು ವಿಚಾರಣೀಯವಾಗಿದ್ದು ಇಲ್ಲಿ ಅಪ್ರಸ್ತುತವಾಗಿದ್ದು, ಹೆಚ್ಚಿನ ವಿವರಣೆ ಬೇಕಿಲ್ಲವೆಂದು ಕಾಣುತ್ತದೆ.

ಯಜ್ಞಯಾಗಗಳಲ್ಲಿ 'ಕಳಸ'ವೆಂದು ಕರೆಯಿಸಿಕೊಂಡು 'ಕಂಬ' ಆಶಯದ ಮೇಲೆ ಬಳಕೆಗೊಂಡ ಕಣದ ಮುದ್ದೆ ಕಣಕದ ಆರತಿಯಲ್ಲಿ ಎರಡನೆಯ ಸ್ಥಲಕ್ಕಿಳಿದು ದೀಪಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟಿದೆ ಎನ್ನಬಹುದು. 'ಗಂಡಾರತಿ ಗರಿ ಕಳಸ' ಸಂಪ್ರದಾಯದಲ್ಲಿನ 'ಕಳಸ' ಶಬ್ದದ ಬಳಕೆಯನ್ನಿಲ್ಲಿ ಗಮನಿಸಬಹುದು ಅದು ಅರ್ಥವತ್ತಾದುದೇ ಆಗಿರಲು ಸಾಕು.

ಒಂದು ಸೋಜಿಗದ ಸಂಗತಿಯೆಂದರೆ, ಜೋಳದ ಬಳಕೆಯೇ ಈ ವಿಶೇಷವಾಗಿರುವ ಉತ್ತರ ಕರ್ನಾಟಕದಲ್ಲಿ ಕಣಕದ ಆರತಿಯಂತೆ. ಜೋಳದ ಹಿಟ್ಟಿನ ಬಳಕೆಯಾಗಲಿಲ್ಲ ಎನ್ನುವುದು. ಅಲ್ಲದೆ ಯಾವುದೇ ಹಬ್ಬದಲ್ಲಿ ಜೋಳದ ಅಡಿಗೆ ಅಷ್ಟಾಗಿ ವರ್ಜ್ಯವೇ ಆಗಿರುವ ಹಾಗಿದ್ದು, ಗೋದಿಯಿಂದುಂಟಾಗುವ ಹೋಳಿಗೆ, ಕಡಬು ಇವೇ ಪ್ರಧಾನವಾಗಿರುವ ಹಾಗಿದೆ. ಇದರಿಂದ ಇಲ್ಲಿನ ಮೂಲದ ಬೆಳೆ ಗೋದಿಯಾಗಿದ್ದು ಜೋಳದ ಬಳಕೆ ನಂತರ ವಿಶೇಷವಾಗಿ, ಗೋದಿಯ ಬಳಕೆ ಕೇವಲ ವಿಧಿಕ್ರಿಯಾವಲಯಗಳಲ್ಲಿ ಉಳಿಯುತ್ತಾ ಬಂದಿದೆ ಎನ್ನುವುದು ವಿಚಾರಣೀಯ. ಹರಪ್ಪಾ ಮೊಹೆಂಜೋದಾರೊಗಳ ಸಂಸ್ಕೃತಿಯೂ ಇಲ್ಲಿನ ಸಂಸ್ಕೃತಿಯೂ ಒಂದೇ ಬಗೆಯದೆಂದು ವಿದ್ವಾಂಸರು ಗಣಿಸುತ್ತಾರೆ. ಅಲ್ಲಿಯೂ ಗೋದಿಯ ಹಿಟ್ಟಿನಿಂದ ಮಾಡಿದ ಮುದ್ದೆಗಳೇ ದೊರೆತಿವೆ. ಈ ಕುರಿತಾಗಿ ವಿದ್ವಾಂಸರು ವಿಚಾರಕ್ಕೆಳಸಬಹುದೆಂದು ಕಾಣುತ್ತದೆ.

• •

ಕುಂದಗೋಳ ಬಸವಲಿಂಗನ

ಅಭಿಮನ್ಯುವಿನ ದುಂದುಮೆ

ವೀರಣ್ಣ ರಾಜೂರ

ಪ್ರಸ್ತಾವನೆ :

ಜಾನಪದ ಹಿರಿಯಪದ್ಯ ಪ್ರಕಾರಗಳಲ್ಲಿ ದುಂದುಮೆಗೆ ವಿಶಿಷ್ಟ ಸ್ಥಾನವಿದೆ. ಹೋಳೀ ಸಾಹಿತ್ಯದ ಒಂದು ಕವಲಾದ ಇದರ ಹರಹು ದೊಡ್ಡದು. 'ದಿಮ್ಮು' ಇದರ ಮುಖ್ಯ ಪಕ್ಕವಾದ್ಯ. ಅದಕ್ಕೆಂದೇ ಇದಕ್ಕೆ 'ದುಂದುಮೆ' ಎಂಬ ಸಾರ್ಥಕ ಹೆಸರು. ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಯಾವುದೇ ವಸ್ತು ಇದರಲ್ಲಿ ಇರಬಹುದಾದರೂ ಪೌರಾಣಿಕ, ಐತಿಹಾಸಿಕ ವಸ್ತುವಿಗೆ ಹೆಚ್ಚಿನ ಪ್ರಾಶಸ್ತ್ಯ. ವೀರ. ಭಕ್ತಿ, ಶೃಂಗಾರ ರಸ ಪ್ರತಿಪಾದನೆ ಇದರಲ್ಲಿ ಹೆಚ್ಚು. ಅವುಗಳಲ್ಲಿಯೇ ವೀರಕ್ಕೆ ಅಧಿಕ ಸ್ಥಾನ. ಪಕ್ಕವಾದ್ಯದ ನುಡಿತಕ್ಕೆ ತಕ್ಕಂತೆ ಕಾವ್ಯ ದುಡುಕಿನಿಂದ ಸಾಗುತ್ತದೆ. ಅದಕ್ಕನುಗುಣವಾದ ರಸ ರಭಸದಿಂದ ಮುನ್ನುಗ್ಗಿ ಕೇಳುಗರಲ್ಲಿ ರೋಮಾಂಚನವನ್ನುಂಟು ಮಾಡುತ್ತದೆ; ರಸ ನಿಷ್ಪತ್ತಿಯಾಗಿ ಆನಂದ ಹೊರಹೊಮ್ಮುತ್ತದೆ. ಈ ಹಾಡುಗಳ ಬೆಳೆ ಕನ್ನಡದಲ್ಲಿ ಹುಲುಸಾಗಿದೆ.

ಪ್ರಸ್ತುತ ಕೃತಿ ಅಭಿಮನ್ಯುವಿನ ದುಂದುಮೆ ಮಹಾಭಾರತದೊಳಗಿನ ಕಥಾಭಾಗವನ್ನು ಆಯ್ದುಕೊಂಡು ರಚಿಸಲಾದ ಪೌರಾಣಿಕ ವಸ್ತುವಿರುವ ವೀರರಸಪ್ರಧಾನ ಕಾವ್ಯ. ಇದರ ಕರ್ತೃ ಕುಂದಗೋಳ ಬಸವಲಿಂಗ. ಈತ ಆಶುಕವಿಯಾಗಿ ಅನೇಕ ಹೋಳೀ ಹಾಡುಗಳನ್ನು, ದುಂದುಮೆ ಪದಗಳನ್ನು ಬರೆದು ಪ್ರಸಿದ್ಧನಾಗಿದ್ದಾನೆ. ಈತನಿಂದ ರಚಿತವಾದ ಆದಯ್ಯ, ಪುರಾತನರ ಪೂಜೆ, ಹುಬ್ಬಳ್ಳಿಯ ಮಂಗ ಮತ್ತು ಶ್ರೀ ಕೃಷ್ಣಲೀಲೆಯೆಂಬ ದುಂದುಮೆಗಳು ಈಗಾಗಲೇ ಪ್ರಕಟವಾಗಿವೆ.[೧] ಇದು ಅವನ ಐದನೆಯ ದುಂದುಮೆಯಾಗಿದೆ.

ಅಭಿಮನ್ಯುವಿನ ದುಂದುಮೆ ೧೩೫ ನುಡಿಗಳಲ್ಲಿ ಹಬ್ಬಿಕೊಂಡಿದ್ದು ಅಭಿಮನ್ಯುವಿನ ಶೌರ್ಯ, ಧೈರ್ಯ, ಸಾಹಸಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತದೆ. ಕವಿಯು ನಿರೂಪಣೆ ವಸ್ತುವಿಗೆ ತಕ್ಕಂತೆ ದಿಡುಗಿನಿಂದ ಕೂಡಿದೆ. ತಂತ್ರ, ಪಾತ್ರ, ಭಾಷೆ,

---

೧ ಜೀವನ ಜೋಕಾಲಿ : ಭಾಗ—೫ ದುಂದುಮೆ ಪದ   ಸಂ. ಡಾ. ಎಂ. ಎಸ್. ಸುಂಕಾಪುರ
ಕ. ವಿ. ವಿ. (೧೯೭೫)

ಶೈಲಿ ಹದವರಿತು ಬೆರೆತಿವೆ. ಭಾಷೆ ಮಾರ್ಗ ದೇಶಿಗಳ ಸಮನ್ವಯ ಸಾಧಿಸಿದೆ. ಬಂಧ ಬಂಧುರ: ಬಿಗುವು ಹೆಚ್ಚು. ವೀರ ರಸ ಸಮರ್ಥವಾಗಿ ಪ್ರತಿಪಾದಿತವಾಗಿದೆ. ಅಭಿಮನ್ಯುವಿನ ವೀರೋಚಿತ ಪಾತ್ರ ಸೃಷ್ಟಿ ಕೃತಿಗೆ ಕಳಸವಿಟ್ಟಂತಿದೆ. ಒಟ್ಟಿನಲ್ಲಿ ಇದೊಂದು ಉತ್ತಮ ಜನಪದ ಕಾವ್ಯವಾಗಿದೆ.

ಈ ಹಾಡನ್ನು ಮುರಿಗೆಪ್ಪ ಬಿಂಕದಕಟ್ಟಿ ಸಾ. ಎರೆಬೂದಿಹಾಳ ಅವರಿಂದ ಸಂಗ್ರಹಿಸಲಾಗಿದೆ. ಅವರು ಕೊಟ್ಟ ಕೈಬರಹದ ಪ್ರತಿಯ ಅಂತ್ಯದಲ್ಲಿ "ಶ್ರೀ ಶಕೆ ೧೮೩೫ ನೆ ಪ್ರಮಾದಿಚ ನಾಮ ಸಂವತ್ಸರದ ಫಾಲ್ಗುಣ ಶುದ್ಧ ೩ ಶನಿವಾರ ತಾರೀಖು ೨೮-೨-೧೮೩೫ ಸನ್ ೧೯೧೪ ಇಸ್ವಿ. ದುಂಡಪ್ಪ ಚನಬಸಪ್ಪ ಜಕಾತಿ ಮುಕ್ಕಾಮ ಹುಬ್ಬಳ್ಳಿ ಇವರ ಪುಸ್ತಕ ಇರುತ್ತದೆ." ಎಂದು ಬರೆಯಲಾಗಿದೆ. ಹಸ್ತಪ್ರತಿಯನ್ನು ಸಂತೋಷದಿಂದ ಕೊಟ್ಟು ಉಪಕರಿಸಿದ ಮುರಿಗೆಪ್ಪ ಬಿಂಕದಕಟ್ಟಿ ಅವರ ಮಕ್ಕಳಾದ ಷಣ್ಮುಖಪ್ಪ ಬಿಂಕದಕಟ್ಟಿ ಅವರಿಗೆ ನಾನು ಕೃತಜ್ಞ.

ಅಭಿಮನ್ಯುವಿನ ದುಂದುಮೆ

ವರಗಿರಿಜಾತೆಯ ವದನಾಬ್ಜ ಮಿಹಿರ
ಶ್ರೀ ತರುಣಿಯನಾಥನೆ ಅನುಪಮನೆ । ದಯ
ಭರಿತ ನಂಬಿಗೆ ಕುಂಟಿಣಿಯಾದನೆ । ಬಾಣಾ
ಸುರನರಮನಿಯ ಬಾಗಿಲ ಕಾಯ್ದನೆ । ತಮ್ಮ
ತರುಳನೆಂದರಿದು ಪಾಲಿಪುದೆಂದು ಮನದೊಳು
ಭರದಿಂದೆ ಕೊಡುಯೆನ್ನ ಸ್ತುತಿಗೆ ಸನ್ಮತಿಯಾ ॥೧॥

ವಾಣಿಪುಸ್ತಕರಮ್ಯಪಾಣಿ ಸುಂದರ ಫಣಿ
ವೇಣಿಕಲ್ಯಾಣಿ ನಿನ್ನಡಿಗಳನು । ಬ್ಯಾಗ
ಕಾಣಿಸು ನಾನೀಗ ಪೊಗಳುವೆನು । ಸುಪ್ರ
ಜಾಣಗಣಪನೊಮ್ಮೆ ಬೇಡುವೆನು । ಮುಂದೆ
ಕ್ಷೋಣಿಯೊಳುಸುರುವೆ ಕೃತಿಬಲ್ಲ
ಜಾಣರಿಗರಿವಂಥಾ ಮಾಣದೆ ನುಡಿಯಾ ॥೨॥

ಕ್ಷಿತಿಪತಿಕೇಳ್ ಚಕ್ರವ್ಯೂಹದೊಳಭಿಮನ್ಯು
ಅತಿರಮ್ಯ ಯುದ್ಧವ ಮಾಡಿದನು । ಬಲು
ಖತಿಯಿಂದ ಶಿರವ ಚೆಂಡಾಡಿದನು । ಅಲ್ಲೆ
ಹತನಾಗಿ ಮುಕ್ತಿಯ ಗೂಡಿದನು । ಜಯ

ಧೃತನ ಮಸ್ತಕ ನರಹರಿಯುಚ್ಚನೆಂದು
ಯತಿರಾಯು ಪೇಳಿದ ಹಿತದಿ ತಾನೊಲಿದು ॥೩॥

ಬಲರಾಮು ಪೋದನು ಭೂಮಿಪ್ರದಕ್ಷಣೆ
ಕಲಿಯಾದ ವಿದುರನ ಬಿಲ್ಮುರಿದು । ಪೋದ
ಬಲವುಸಂದಣಿಯು ಪೋದಿತು ಸರಿದು । ಗುರು
ಗಳುದ್ರೋಣಾಚಾರ್ಯರುವಂದರಿದು । ಮುಂದೆ
ದಳಪಟ್ಟತನವನು ಆರಿಗೆ ಸರಿಯೆಂದು
ನಲವಿಂದ ದ್ರೋಣನ ಪಟ್ಟಗಟ್ಟಿದರು ॥೪॥

ಕುರುಕ್ಷೇತ್ರ ಭೂಮಿಯೊಳು ಕಲಿಪಾರ್ಥ ಭೀಷ್ಮನ
ಸರಳು ಮಂಚವ ಮಾಡಿ ಮಲಗಿಸಿದಾ । ಆಗ
ದುರಿಯೋಧನನು ಬಾಳ ಚಿಂತಿಸಿದಾ । ಮುಂದೆ
ತೆರವೇನು ನಮಗೆಂದು ಯೋಚಿಸಿದಾ । ಆಗ
ನೆರದಿದ್ದ ಪರಿವಾರ ಎಲ್ಲಾರೂ ತಲೆಗೂಡಿ
ವರಸೈನ್ಯ ಪಟ್ಟವು ಯಾರಿಗೆಂದೆನುತಾ ॥೫॥

ಪೃಥ್ವಿಪರೆಲ್ಲರು ಕಪ್ಪುಕಾಣಿಕೆಯಿಟ್ಟು
ಅತ್ಯಂತ ಪ್ರೇಮದಿ ಶರಣೆನಲು । ದ್ರೋಣ
ಮತ್ತೆ ನುಡಿದನತಿ ಗರ್ವದಲು । ಭೂಪ
ಚಿತ್ತದಿ ಬಯಕೆಯ ಬೇಡೆನಲು । ಯಮ
ಪುತ್ರನ ಹಿಡಿತಹುದೆಂದಿಗೆ ಆರರು
ಸತ್ವವಕಾಣೆನೆಂದೆನುತಲಿ ನುಡಿದಾ ॥೬॥

ಆದ ಕೇಳಿ ದ್ರೋಣನು ಭರದಿಂದ ಗರ್ಜಿಸಿ
ಇದಕ್ಯಾಕೆ ಬಿಡುಚಿಂತೆ ಮಾಡುವರೆ । ಕೇಳು
ಪದುಮವ್ಯೂಹವನೀಗ ರಚಿಸಿದರೆ । ಗೆಲ್ವ
ಪದುಮಾಕ್ಷ ಫಲ್ಗುಣ ತಪ್ಪಿದರೆ । ತಡಿ
ಯದೆ ತಂದು ನಿನ್ನ ಸದರಿಗೊಪ್ಪಿಸುವೆನು
ಚದುರತನದಿ ವ್ಯೂಹರಚಿಸಿ ನೋಡೆಂದಾ ॥೭॥

ವಾರಿಜ ವ್ಯೂಹದ ತಾರೀಪವೇನೆಂಬೆ
ವಾರಣ ಹಾಯ್ವುಟ ಸಾಲ್ಗಳಲಿ । ಮಿಗೆ
ಮೀರಿದ ಭಟರ ಸಮ್ಮೇಳ್ಗಳಲಿ । ರಥ

ಶೂರ ಅಕ್ಷೋಹಿಣಿ ಸಂಕುಳ್ಗಳಲಿ । ಸುವಿ
ಚ್ಯಾರೆ ವಿಸ್ತಾರ ಪಙ್ತಿಯು ಕಟ್ಟಿ ಕಂಸಾಳ
ಭೇರಿ ನಗಾರಿ ಕಾಳಿಯು ರಭಸದಲಿ ॥೮॥

ಮುಕ್ಕಟ್ಟದ್ವಾರಕ್ಕೆ ಸೈಂಧವನಿಕ್ಕಲು
ಮಿಕ್ಕಾದರತಿ ವೀರ ಬೊಬ್ಬಿಯಲಿ । ಸಣ್ಣ
ಚಿಕ್ಕಾಡ ಕೀಲಿಯು ಸಂದದಲಿ । ಪಾಂಡು
ಮಕ್ಕಳ ಕೊಲ್ವೆನೆಂಬೂ ಮಾಯದಲಿ । ಇಂಥಾ
ಕಿಕ್ಕರವಾದ ಕೋಟಿಯು ಕಂಡು ಕುರುಪತಿ
ಉಕ್ಕಿ ಉಲ್ಲಾಸದಿ ಪರಿಯಲಿ ಎಸೆಯೆ ॥೯॥

ಈ ತಂತ್ರದಿಂದ ನಿರ್ಮಿಸಿ ಶಮಸಪ್ತಕರು
ಆತುರದಿಂ ಬಂದು ಭೂಪನೊಳು । ಕೇಳೊ
ಪಾರ್ಥ ಪೌರುಷದಿಂದ ಸಮರದೊಳು । ನಮ್ಮ
ತಾತನ ಕೊಂದಾವ ಆತನೊಳು । ಬರೇ
ಮಾತಲ್ಲ ಕಾದುದು ಸಹಜಾಗಿ ಮುಂದೊಬ್ಬ
ದೂತನ್ನಟ್ಟಿದರು ಕಿರೀಟಿಯು ಬಳಿಗೆ ॥೧೦॥

ಭರದಿಂದ ಚರಬಂದು ಸಮರಕ್ಕೆ ಏಳುವ
ತ್ತರವುಂಟು ಹೊರಡೆಂಬು ನುಡಿಕೇಳುತಾ । ನರ
ಪರಿತೋಷದಿಂದಲಿ ನಸುನಗುತಾ । ಈಗ
ಬರುವೆನು ತಡವಿಲ್ಲ ನಡಿಯೆನುತಾ । ಕೇಳಿ
ತಿರಿಗಿ ಪೋಗಲು ದೂತ ಕೇಳುತ್ತ ದ್ರೋಣನ
ಚರನೋರ್ವ ಬಂದು ಧನಂಜಯಗೆಂದಾ ॥೧೧॥

ಎಲಎಲೋ ಕೇಳೋ ಕೇಳ್ ಇಂದ್ರಜ ವ್ಯೂಹದ
ಕಲಹದ ಪರಿಚ್ಯಾರೆ ಈದಿನದಿ । ನೀನು
ಛಲದಂಕನೆಂಬೂರು ಮೂಜಗದಿ । ಗೆದ್ದು
ಬಲವಂತನನಿಸಿಕೊ ಈರಣದಿ । ಬಹಳ
ಮಲತವರ ಗಂಡಾ ಮೂರ್ಲೋಕದೋಳಿಂದು
ಕುಲುತದಿ ಮಹಾಭಯುವೆಂಬುದನೆಲ್ಲನೋಳ್ಪೆ ॥೧೨॥

ಬರಸಿಕೊ ಬೇಗನೆ ಸಾರಥಿ ಗೋವಳ
ಇರಸಿಕೊ ನಿನ್ನ ಭಾರಿಯ ರಥಕೆ । ಈಗ
ಕರಸಿಕೊ ಮಾರುತ ಸುತನ ಧ್ವಜಕೆ । ಬಾಣ

ತರಸಿಕೊ ಗಾಂಢೀವಧನ ಹವಕೆ । ಬಲ
ನೆರಸಿಕೊ ಕುಲದೈವ ಸ್ಮರಸಿಕೊ ಎಂಬುತ
ವಿರಸದ ನುಡಿಯಿಂದ ಪಿಡಿದನು ಶರಗಾ ॥೧೩॥

ಕೇಳುತಲರ್ಜುನ ಆಳಾಗಿ ಬಂದವ
ಬಾಳೊಂದು ಮಾತನಾಡುವದ್ಯಾತಕೆ । ನೀನು
ಕಾಳಗದ್ಹುರುವು ಹೇಳುವದ್ಯಾತಕೆ । ನಿನ್ನ
ಕೇಳಿ ಬರುವೆನೇನೋ ಸಂಗರಕೆ । ನಿನ್ನ
ಆಳುವ ಒಡಿಯಾಗ ಬರತೇನಂತ್ಹೇಳೆಂದು
ಆಳತ್ತ ಕಳುಹಿ ಆಲೋಚಿಸುತ್ತಿರ್ದಾ ॥೧೪॥

ಹರಿಯು ಭಾಸುರ ಕಲ್ಪತರುವೆಂಬ ಭಕ್ತರ
ಪೊರೆವೆ ಬಾಯೆಂಬುತು ಭಕ್ತಿಯಲಿ । ಪರಿ
ಪರಿಯಿಂದ ನರನು ಕೊಂಡಾಡುತಲಿ । ತರು
ಕರುವ ನೆನಸಿ ಬರ್ಪ ಗೋವಿನಂದದಲಿ । ಅಂತಃ
ಕರುಣದಿ ಬಂದು ತರ್ಕೈಸಲು ಉಭಯ ಸಂ-
ಗರಕೆತ್ತತೆರಳಲೂದು ತಿಳಿಸೆಂದಾ ನರನು ॥೧೫॥

ಆಳಿಯನಿರಲು ಮುನ್ನ ಉಳಿವಿಲ್ಲವೆಂಬುದು
ತಿಳಿದೆಲೆ ಪಾರ್ಥನೆ ಕೇಳೆಂದನು । ಪೋಪಿ
ಹಳಹಳಿಯಾತಕೆ ಲೋಹವನು । ಗೆದ್ದು
ನಳಿನವ್ಯೂಹವ ಸೂರೆಗೊಂಬುವನು । ಅಸ
ದಳ ನಿನ್ನ ಕುವರಗೆ ಬಿಡುಚಿಂತಿಯೆಂಬುತ
ತಡಮಾಡದಾಕ್ಷಣ ತಿರುವಿದ ರಥವಾ ॥೧೬॥

ಹವಕತ್ತ ನರಹರಿ ತೆರಳಲು ವ್ಯೂಹಕ್ಕ
ಪವನಜ ನಕುಲಸಹದೇವ ಮುಖ್ಯರು । ಮಿಕ್ಕ
ದವನ ಪಾರ್ಪೇಟಿ ತಂದಿದ್ದವರು । ವಾದ್ಯ
ರವಸದ ಭರದಿಂದ ತೆರಳಿದರು । ಪೃಥ್ವಿ
ನವಖಂಡ ಉಬ್ಬರಿದು ತಲ್ಲಣಿಸುತ ಕೋಪದಿ
ಕವಿದರು ಶರಮರಳಿ ಉರವಣಿಸುತಲಿ ॥೧೭॥

ವರವುಂಟು ಸೈಂಧವ ಸರಿವನೆ ಶೀಘ್ರದಿ
ತ್ವರಿತದಿ ಬಂದು ಗಣೆಯಕೊರಿದು । ಒಬ್ಬ
ರಿರದೆ ದೇಹದ ಎಚ್ಚರ ಮರೆದು । ರಕ್ತ

ಸುರಿದು ಕಂಗೆಟ್ಟು ಓಡಿತು ಮುರಿದು । ಭೀಮ
ಭರದಿ ಮಸ್ತಕದಿಂದ ಸಡಲಿ ಘಾಯದಲ್ಲಿಂಗ
ಬರುತಿರೆ ಅದು ಕಂಡ ಧರ್ಮನಂದನನು ॥೧೮॥

ಬಲವೋಡಿ ಬಹೂಗ ಯಮಜಾತ ಮನನೊಂದು
ಬಲು ಚಿಂತಿಯಿಂದಲಿ ವ್ಯೂಹವನು । ಒಬ್ಬ
ಬಲರಾಮ ಕಾಳಗ ಬಲ್ಲವನು । ಒಬ್ಬ
ನಳಿನಾಕ್ಷ ಫಲ್ಗುಣ ತಿಳಿದವನು । ಮತ್ತಿ
ನ್ನುಳಿದವರಾರು ಕಾಣೆನು ಕೇಳ್ ಅಭಿಮನ್ಯು
ಛಲದಿಂದ ಹೊಗಬಲ್ಲ ತಿರಗಲಿನ್ನರಿಯ ॥೧೯॥

ಪುಂಡ ಪ್ರಚಂಡ ಉದ್ದಂಡ ಕ್ಷತ್ರಿಯ ಕುಲ
ಗಂಡರೆ ಪಾರ್ಥನ ನಂದನನು । ಪಿತನ
ಕೊಂಡಾಡಿ ಕಮಲವದ್ವಂದ್ವವನು । ದೀರ್ಘ
ದಂಡ ಶರಣು ಶರಣೆಂದವನು । ಭೂ
ಮಂಡಲ ಅಪ್ಪಣೆ ಕೊಟ್ಟದ್ದುಂಟಾದರೆ
ಭಂಡ ಬಲವನೆಲ್ಲಾ ಖಂಡಿಸಿ ಬರುವೆ ॥೨೦॥

ಹಸುಳನ ನುಡಿಕೇಳಿ ನಸುನಕ್ಕು ಧರ್ಮಜ
ವಸದಪ್ಪಿಕೊಂಡು ಮುದ್ದಾಡಿದನು । ಸಣ್ಣ
ಶಿಶುವೆಲೊ ಕಂದಾ ಕೇಳ್ ಕಲಹವನು । ನಿನ
ಗಸದಳವೊ ಮಹಾರಥಿಕರಹವನೂ । ಯಾ
ವಸಗಿಯನು ನೀನೆಂದು ಸೈರಿಪಿ
ಶಿಶುವಾಟವಲ್ಲವೊ ನಿನಗಿದು ಅಸಮಸಂಗವೊ ॥೨೧॥

ಶರಧಿಯ ಮಧ್ಯದಿ ಸುಳಿವುದು ಕಾಲನ
ಕೊರಳೊಳು ನಾಂಟ್ಯವನಾಡುವದೆ । ಮೃತ್ಯು
ತರುಣಿಯ ಬಾಯೊಳಗಿರಬಹುದೆ । ಸರ್ಪನ
ಶಿರಫಣಿ ಮಂಡಲೊಳಾಡುವದೆ । ಚಿಕ್ಕ
ತರುಳ ನೀ ಗೆಲುವಂಥಾ ಪರಿಯೆಂತು ಕಂದನೆ
ಅರಿತವನಲ್ಲಲ್ಲೊ ವ್ಯೂಹ ಭೇದವನು ॥೨೨॥

ಧರಣಿಪ ಕೇಳೊ ಸಂಪಿಗಿಪುಷ್ಪದ್ದುರಳುಂಡು
ಸರಸಾದಿ ಭ್ರಮರಾಳಿ ಜೀವಿಪುದೆ । ಸರ್ಪ
ಗರುಡನ ಕೆಣಕಿ ತಾ ಬಾಳುವುದೆ । ಗಜ

ಹರಿಯ ಸಮ್ಮುಖಕಿದಿರಾಗುವದೆ । ಬಿಡು
ಸರಕುಮಾಡದೆ ಕೊಲ್ವೆ ಕೇಳು ಕೃತಾಂತನ
ಪುರಕತ್ತ ಕಳುವಿ ಬಿಡುವೆ ರಿಪುಬಲವಾ ॥೨೩॥

ಕಂದಕೇಳರಿ ಬಲುವಧಟದ ಮಾರುತ
ನಂದನಾದಿಗಳೆಲ್ಲಾ ಹೆದರಿದರು । ಗುರು
ನಂದನರ ದೇಹ ಶಕುನಿಯುರು । ಕೃಪ
ಸೈಂಥವ ದುಸ್ಸಾಸರಾದವರು । ಕೇ
ಳಿಂದುಧರನು ಬ್ಯಾರೆ ಹಿಂದೆಮುಂದೆನಿಸುವ
ಇಂದಿಗೆ ನೀನೊಬ್ಬ ಹ್ಯಾಂಗ ಸೈರಿಸಿಯೊ ॥೨೪॥

ಕವಿದಟ್ಟಿಬರುವ ಕಾಳಗದಬ್ಬರಕಿನ್ನು
ರವಿಕಂಡು ಗಡಣಕ್ಕೆ ಅಂಜುವನೆ । ಬಿಡು
ಪವನಪಾವಕದಳಿಗ್ಹೆದರುವೆನೆ । ಜ್ವಾಲೆ
ತವಕದಿ ಬೆದರ್ವ ಹಿಮನೊಡನೆ । ಕುಂಭ
ಕುವರ ಕುಮಂತ್ರಿ ದೊಡ್ಡಿಹ ಭವಕಂಜದೆ
ಸವರಿ ಬಿಡುವೆ ಬಾಲ ಕಳುಹಿ ನೋಡೆಂದಾ ॥೨೫॥

ಹರುಷದಿ ಭೂವರು ಕೊಡಲಾಗಿ ನೇಮವ
ಹರಹರಯೆಂತಪ್ಪ ರಥಿಕರೊಳು । ಕಾದಿ
ತಿರುಗಿ ಬಂದಂಜಿ ಭೀಮಾದಿಗಳು । ತುಸಾ
ಕರುಣೆಲ್ಲ ಭೂಪಗ ಪಾಪಿಗಳು । ಎಳೇ
ತರುಳನ ಕಾಳಗಕಟ್ಟುವರಯ್ಯಯ್ಯೊ
ಪರಿಪರಿ ಸುತರೆಲ್ಲಾ ಮರುಗುತಲಿಹರು ॥೨೬॥

ಅರಸಿಗೆ ವಂದಿಸಿ ಭೀಮಾದಿನಕುಲರ
ಹರಕಿಯು ಕೈಕೊಂಡು ಹರುಷದಲಿ । ವರ
ಮಾರಗ ಬಾಲಕ ನಮಿಸುತಲಿಪ । ಚ್ಯಾ
ಕರಮುಟ್ಟಿ ನಸಲೀಗೆ ಚ್ಯಾಚುತಲಿ । ರಥ
ತಿರಿಗಿ ಎರಗಿ ಭಾರಿಭುಜಗಳನ್ನೊದರಿಸಿ
ಭರದಿಂದ ರಥಕೇರಿ ತಿರಗಲಭಿಮನ್ಯು ॥೨೭॥

ಬಿಗಿದು ಗಂಡುಡಿಗೆಯು ಖಡ್ಗ ಕಠಾರಿಯುೞ
ಮಿಗಿಲಾದ ಘಂಟಿಯು ಚರ್ಮವನು । ಕಟ್ಟಿ
ಅಗರ ಕಸ್ತೂರಿ ಗಂಧಲೇಪವನು । ಈಗ

ಸೊಗಸಿಂದ ಧರಿಸಿದ ಬಿರುದವನು । ಜಗ
ಝಗಿಸುವ ರತ್ನ ತೇರು ಕನಕನ್ನಿಗಿಯಿಂದ
ಹೋಗಲು ಆದನು ಹವಕಭಿಮನ್ಯು ॥೨೮॥

ತ್ವರಿತದಿ ಸೌಭದ್ರಿ ಮುಂಬಂದು ಹೋಗು ಅ-
ಬ್ಬರ ಬ್ಯಾಡೊ ನಿನಗಿದು ತರವಲ್ಲವೊ । ರ
ಣರಾಸಲ್ಲ ಹಿತವಲ್ಲೊ ಪರಲೋಕವು । ಎನ್ನ
ಕೊರಳು ಹರಿದು ಏರೋ ನೀ ರಥವ । ಚಿಕ್ಕ
ತರುಳನೆ ನಾನಿನ್ನ ಕಳುಹಿ ಜೀವಿಸಲ್ಯಾಂಗ
ಇರಲೆಂದು ಹೊರಳುತ ಅಳಲಿದಳವಳು ॥೨೯॥

ಹಡದವ್ವಾ ನೀಕೇಳ ತಡುವುದುಚಿತವಲ್ಲ
ಕೊಡುಗೆದ್ದು ಬಾಯೆಂದು ಹರಕಿಯನು । ಶೋಕ
ನುಡಿಯಾಕೆ ಬಿಡುಬಿಡು ಚಿಂತಿಯನು । ನಿನ್ನ
ನುಡಿಕೇಳಿ ಬಿಡೆ ನಾನು ಕೇಳೆಂದನು । ಎಂದು
ವಡವಡಗೊಂಡು ಸಾರಥಿವೀರಬೊಬ್ಬಿಗಳಿಂದ
ಪಡಮೆಟ್ಟಿರಥಕೇರಿ ಬರುವುದೇನಂಬೇ ॥೩೦॥

ವೊಳಗಿದುವಾಕ್ಷಣ ಕಾಳಿ ದುಂದುಭಿ
ಗಳು ಭೇರಿಚಿನಿಕಾಳಿ ಹೆಗ್ಗಾಳಿಗಳು । ಲಗ್ಗೆ
ಯಲವ ನಗಾರಿ ಕೌಂಸಾಳಿಗಳು । ಬೊಬ್ಬೆ
ಛಲದಿಂದ ವದರ್ವಂಥಾ ಬಾಹುಗಳು । ಗಿರಿ
ಕುಲವೆಲ್ಲ ಉರುಳಿ ಭೂಮಂಡಲಬಿರಿದೆದ್ದು
ಪ್ರಳಯಕಾಲದ ರುದ್ರನೆಂಬಿರೀ ಬಲಕೆ ॥೩೧॥

ಪೊಡವಿಪನನುಜರು ಸಹಿತಾಗಿ ಕಳುಹುತ
ವರ ಸೈನ್ಯಬಂದು ಸಮೀಪದಲಿ । ಇಂದು
ನಡಿ ಕಂದಾ ವಿಜಯನಾಗೆಂಬುತಲಿ । ತಾವು
ತಡವಾನೆಮಾಡಿ ತಾಪ್ ತಿರುಗತಲಿ । ಘುಡ
ಘುಡಿಸುವ ಶೀಘ್ರದಿ ವಿರೇಬೊಬ್ಬಿಗಳಿಂದ
ನಡದಾರು ತಿರವು ಸಾರಥಿಎಂದನಾಗ ॥೩೨॥

ವರಕಂದ ಕೇಳೊ ನಿನ್ನದು ಮಾತು ಒಪ್ಪವು
ಹರಕಾದ ಅರಿಯೊ ಈ ದುರ್ಗದಲಿ । ನಿನ್ನ
ಕೊರಳು ಸತ್ವವ ಮುನ್ನ ಅರಿಯದಲಿ । ದೊಡ್ಡ

ಗಿರಿಯು ಪೋಲುವರೇನೊ ಸಮರದಲಿ । ಕೃಪಾ
ತರುಣಿಜದ್ರೋಣ ಶಕುನಿಶಲ್ಯಮುಖ್ಯರು
ಇರುವರೆಂಬುತ ಸುತ ಶಿರವ ತೂಗಿದನು ॥೩೩॥

ಮರುಳ ಸಾರಥಿ ಕೇಳೊ ಬರಿಯಪೌರುಷವನ್ನು
ಪರಿಕಿಸುವವನಲ್ಲ ಕೇಳೆಂದನು । ಹರ
ಬರಲಿ ಸಮ್ಮುಖಕೊಮ್ಮೆ ದಣಿಸುವೆನು । ಸುರ
ವರನಹೊಡೆದು ಒಮ್ಮೆ ಸರಿಸುವೆನು । ಬಲ
ನೆರದೆ ಕೊಲ್ವೆನು ನರಹರಿಯು ಮೇಲ್ ಕುಮಕಿಲಿ
ಬರಲೊಮ್ಮೆ ನೋಡುವೆನೆಂದನಾ ಕಂದಾ ॥೩೪॥

ಹಸುಳನಂಬುವ ನುಡಿ ಬಿಡನೋಡು ಎಂದು ಬಿಲ್
ಮಸೆದು ಹೆದೆಯು ಜಗ್ಗಿ ಒದರಿಸಲು । ಆಗ
ವಸುಧಿ ಅಲ್ಲಾಡಿತು ನಿಲ್ಲದಲು । ಹೆಡೆ
ಕುಸದು ಉಸುಕೆದ್ದುದಬ್ಧಿಯೊಳು । ಗಿರಿ
ಕುಲವೆಲ್ಲ ಉರುಳಿ ಭೂಮಂಡಲ ಬಿರದೆದ್ದು
ಪ್ರಳಯ ಕಾಲದ ರುದ್ರನೆಂಬಿರೀ ಬಾಲಕಗೆ ॥೩೫॥

ಆವನ ರಥವಿದು ಆವ ಸಾರಥಿಯೊ ಮಹಾ
ದೇವನೊ ದೇವಕಿನಂದನನೊ। ಸುರ
ದೇವನೊ ಅತಿವೀರ ಅರ್ಜುನನೊ । ಇದು
ಭಾವಿಸಲರಿದು ಮತ್ತೆ ಆವವನೊ । ಎಂದು
ತೀವಿದ ಸೌಬಲ ಸೈಂಧವನಾಡಲು
ಆವಾಗ ಶೀಘ್ರದಿ ಬಂದು ಕೂಡಿದನು ॥೩೬॥

ನುಡಿದನು ಸೈಂಧವ ಹುಡುಗ ನೀ ಬರುವರೆ
ಪಡೆದಾತ ಭೀಮಂಜಿ ಓಡಿದನು। ತಿರಿ
ಗಡಿಯಿಡು ನಿನಗ್ಯಾಕೆ ಈ ಹವನು। ಎಂದು
ತಪವ್ಯಾಕೆ ಬಾಣವ ಹೊಡಿಯೆಂದನು। ಕಡಿ
ಹುಡುಗನೆಂಬುವ ಬಿರಿ ನುಡಿಯಾಕೆ ಹಿಡಿ ಹಿಡಿ
ತೊಡಚಿ ಬಿಟ್ಟನೊ ಗಣೆ ತಡಿಯಲೊ ಎನುತಾ ॥೩೭॥

ಸಿಡಿಲೆರಗಿದ ಪರಿ ಅಂದದಿ ದುಡುಕಲು
ಸಿಡದಿತು ರಥಮುನ್ನ ತೇಜಿಗಳು। ಅಡಿ
ಇಡದೆ ಬಿದ್ದವು ಬೇಗ ಭೂಮಿಯೊಳು। ಸುತ

ಬಿಡದೆ ಬಿದ್ದೊರಳಿದಾ ಮುಂಬಿನೊಳು। ಎದಿ
ವಡಿದು ಸುಭಟರಥ ತಲ್ಲಣಿಸಿ ಹಿಮ್ಮೆಟ್ಟಿತು
ದುಡಕಿದನಾಕ್ಷಣ ವಿಗಡ ಮೋಹರವಾ ॥೩೮॥

ಉಬ್ಬುತ ರಣವೀರ ಬೊಬ್ಬಿಲೆ ಒಳಪೊಕ್ಕು
ಕೊಬ್ಬಿದ ಬಲವ ಸಂಹರಿಸುತಲಿ। ಮುಕ
ಕೊಬ್ಬಿದಿರಾಗದೆ ಸಮರದಲಿ। ಭೂತ
ಕ್ಹಬ್ಬವಾಯಿತು ರಣ ಮಂಡಲಲಿ। ಪಾರ್ಥ
ನರ್ಭಕ ಶತತ ಶೌರ್ಯವು ಒಂದು ನಿಮಿಷದೊಳ್
ಅದ್ಭೂತವಾದುದು ಅರಸಕೇಳೆಂದಾ ॥೩೯॥

ಮಲ್ಹ ಸೌಬಲ ಸುತ್ತ ಗಜರಥ
ವತ್ತರ ಹಾಯ್ಬಟರು ಮತ್ತುಗಳು । ಬ್ಯಾಗ
ಕೆತ್ತಿ ಚಕೂರ ಕೂರಂಬುಗಳು । ಶಿರ
ಕತ್ತರಿಸಿದ ಕ್ಷೋಣಿ ದಂಡುಗಳ । ಕುಣಿ
ವುತ್ತಲಿ ಹಸ್ತಿ ತುರಗುತ ಲೆಕ್ಕಿಲ್ಲದೆ
ಸತ್ತಿತು ರಣಭೂಮಿನೆತ್ತರಂಬುಧಿಯು ॥೪೦॥

ಕೆಲರು ಕಡ್ಡಿಯಕಚ್ಚಿ ಕೆಲರು ಜಲವಪೊಕ್ಕು
ಕೆಲರು ಶ್ರವದ ಮರಿಗೊಂಬುವರು। ಮತ್ತೆ
ಕೆಲರು ನಿಲ್ಲದೆ ಮುರಿದೋಡುವರು। ಆಗ
ಕೆಲರು ಖಡ್ಗ ಚೆಲ್ಲಿ ಕೈಮುಗಿದು ನಿಂತು। ಬಲ
ವೆಲ್ಲ ಬೆದರಿ ಬಾಯಾರಿ ಕಂಗೆಟ್ಟು
ಸಲಹೆಂದು ಅಡಿಯೊಳು ಬಿದ್ದರು ಕೆಲರು ॥೪೧॥

ಅಣುಗಣುಧಟವನು ಎಷ್ಟಂತ ಬಂದ ಸಂ
ದಣಿಯೆಲ್ಲಾ ಕವಿದೊಂದ ಕಾಲದಲ್ಲಿ। ಮತ್ತೆ
ಗಣೆಯು ಸುರಿದ ಮಳೆಯಂದದಲಿ ಒಂದು
ಕ್ಷಣದೊಳು ಗಣೆಗಳ ಸವರುತಲಿ। ಫ
ಲ್ಗುಣನ ಕುವರ ಕಂಡಾ ಎಣಿಕಯಿಲ್ಲವು ನೋಡು
ರಣಭೂಮಿ ಹೆಣಮಯವಾದುದಾಕ್ಷಣದಿ ॥೪೨॥

ಆವಾಗ ಎದಿಗಂಬು ತಡಚೂತ ಬ್ಯಾಗದೊಳ್
ಆವಾಗ ಸರಳುಗಳ್ ಸೆಳವುವನು। ಮತ್ತೆ
ಆವಶಕ ದಂಡುಗಳ್ ಸದವುವನು।ಗುರು

ಆವವ ವಿದ್ಯೆವ ತೋರಿದನು। ಇದು
ಕೇವಲ ಶಿವನಲ್ಲಿನ್ನಾರಿಗಳವಲ್ಲದೆ
ದೇವ ತಿಂಥಿಣಿ ಚೋದ್ಯವಾದುದಂಬರದಿ ॥೪೩॥

ನಗದಟ್ಟಿ ಕುಣಿದರಟ್ಟಣಿಗಾಗ ಹರಿದು ಕಾಲುಗಳಾಗ
ನೆಗದವು ಗಗನದೊಳು। ತರು
ಗಗಳಾರಿ ಜೀವದ ಭಟರುಗಳು। ಬಾಯಿ
ತಗಿದು ರಥಿಕರಾಗ ಹಿಂದುಗಳು। ಮಿಕ್ಕ
ಅಗಣಿತವಾದ ಮಾರ್ಬಲ ಮುಳಿಗೇಳುತ
ರಗತದಂಬುಧಿಯೊಳು ಹಗೆದ ಮೋಹರವಾ ॥೪೪॥

ಎಡಬಲ ಉಗ್ರದಿ ಬರ್ಪರಾಹುತರನು
ಹೊಡೆದು ಮುಂಬರುವ ರಾಹುತಗಳನು। ತೆಗ್ಗಿ
ಲಿಡದೆ ಕೊಂದನು ಒಂದು ನಿಮಿಷದಲಿ। ರಥ
ಹುಡಿಹಿಟ್ಟು ಆದವು ಸಮರದಲಿ। ಅಸು
ಕೆಡವಿ ಕಾಲುಗಳಿಂದ ವರಸಿ ತಿಕ್ಕುತ ಬಲ
ನೆಡಗೆಡಸಿದನಾಗ ವಿಗಡ ಮೋಹರವಾ ॥೪೫॥

ಜೋಧರ ಆನಿಯ ಇಳಿದಾರು ರಾಹುತ
ರಾದರು ತೇಜಿಯ ಇಳವುತಲಿ। ಇಂದು
ಕಾದಲಾರದೆ ರಥ ತೊಲಗುತಲಿ। ನಮ
ಗಾದೀತು ಭಯಭಟರೆಂಬುತಲಿ। ತಂದೆ
ನೀದಯದಿಂದೆಮ್ಮ ಕೊರಳು ಸಲಹುಯೆಂದು
ದೆಶೆಗೆಟ್ಟಿತು ನೋಡುವೈರಿ ಸಂದಣಿಯಾ ॥೪೬॥

ಸೊಕ್ಕಿಲಿ ಸದವೇನೆಂದೊತ್ತರದಲಿ ಬರ್ಪ
ಮಿಕ್ಕಾದ ಸುಭಟರ ಕೋಲ್ಗಳನು। ಇದ
ರಿಕ್ಕುತ ಸುರಿಸುತ ಸವರಿದನು। ಆಗ
ಒಕ್ಕಲಿಕ್ಕುತ ಸೀಳಿ ಒಗಟಿದನು। ವೀರ
ಮಕ್ಕಳಾಟಕೆ ದೊಡ್ಡ ಮಾರಿಯಾಗುತ ರಣ
ಹೊಕ್ಕಾಡಿ ಕೊಚ್ಚಿತು ವೈರಿ ಸಂದಣಿಯು ॥೪೭॥

ಕಲಕಿಸಿ ಬಿಟ್ಟನು ಕರಿಘಟೆ ತೇಜಿಯು
ಉಳಿಯುದೆ ಸವರಿದ ರಥಿಕರನು। ತಿಕ್ಕಿ
ನೆಲಕೊರಸಿದನತಿ ವೀರರನು। ರಕ್ತ

ಜಲಧಿಯೊಳೋಕುಳಿಯಾಡಿದನು। ಕ್ಷತ್ರಿ
ಕುಲದೀಪ ಅಭಿಮನ್ಯು ಭಯವಾಗಿ ರಣದೊಳು
ಕಳಚಿದ ಶಿರದಂಡುರೌದ್ರದಬ್ಬರದಿ ॥೪೮॥

ಸಾರ ಸೌಬಲವೆಲ್ಲ ಮೇಣ್ ಗೈಸಿ ಕೈಲಗು
ದೋರಿರಿ ಶೂರಕರ್ಣಾದಿಗಳು। ಹಿಂದೆ
ಜ್ಯಾರದೆ ಕೊರಿರೆನ್ನ ಸರಳುಗಳು । ಸುಕು
ಮಾರನೋಡೆಚ್ಚ ಕೂರಂಬುಗಳು। ಉರಿವುಕ್ಕಿ
ತೋರುತ ತುಳುಕುತ ಗಾರುಗೆಡಿಸಿ ರಣ
ಧೀರ ಗಂಭೀರನ ಕಂಡ ಕೌರವನು ॥೪೯॥

ಭಲರೆ ಭಲರೆ ಭೂಪಾ ಬಾಲ ನೀನಹುದೆಂದು
ಕುಲಕಿಸಿಬಿಟ್ರ್ಯೊ ಈ ವ್ಯೂಹದಲಿ। ನಿನ್ನ
ಗೆಲಿವರಾರೊ ಈ ಸಮರದಲಿ। ಚಂದ್ರ
ಕುಲಜಾತ ಮುಕುಟವು ನಲಿಯುತಲಿ। ಚೆಲ್ವ
ಛಲದಂಕ ಚಪಳ ಚಾತುರ್ಯ ಶೌರಿಯಗುಣಪಾಂಡು
ಕುಲರತ್ನ ಸೈ ಸೈಯೆಂದ ಕೌರವನು ॥೫೦॥

ಸುಂದರಿ ಸೌಭದ್ರಿ ಹಿಂದೆ ಮಾಡಿದ ಫಲ
ಇಂದುಧರನಿಗೊಪ್ಪಿ ಅಲ್ಲದಲಿ। ಗುಣ
ವೃಂದನ ಶಾಲ್ಯದ ಶೌರ್ಯದಲಿ। ರಣ
ದಿಂದಲಿ ಒದಗಿದ ಗರ್ವದಲಿ। ಅದ
ರಿಂದೊದಗಿಹವು ಪಾರ್ಥನ ಪುಣ್ಯಕ್ಕೆಣೆಯುಂ
ಟೆಂದೊಂದ್ವಂಶಕ್ಕಗತಿಯಿನ್ನ ಆಗಲೇನರಿದು ॥೫೧॥

ಬಗಿಬಗಿಯಿಂದಲಿ ಪೊಗಳುತ್ತ ಕೌರವ
ಮಗುವೆ ನೀ ಸಾವುರೆ ಹೋಗೆನ್ನುತ। ಹೂಡಿ
ಅಗಣಿತಾಸ್ತ್ರದ ಮಳಿ ಸೂರ್ಯಾಡುತ। ವೀರ
ನೆಗೆದಟ್ಟಿ ಬರು ಅಸ್ತ್ರ ಖಂಡಿಸುತಾ। ನೆಂದು
ಮಗ ನೋಡಿ ನಸುನಕ್ಕು ಕಲಿ ಕಂದಾ
ಹೆದರದೆ ಮರಳಿ ನುಡಿದನಾಗ ವೈರಿ ಕೌರವಗೆ ॥೫೨॥

ಹಸುಳನಾನಹುದೊ ನಾನೆಸುವಂಥಾ ಬಾಣಕ್ಕೆ
ಹಸುಪಾಟವುಂಟೇನೊ ಸಮರದಲಿ। ಎಂದು
ಮುಸದಂಬು ಕರದಿಂದ ತೆಗೆಯುತಲಿ। ತೊಡ

ಕಿಸಿ ಬಿಟ್ಟ್ಯಾ ಪೆರ್ಗಿಡಿಯುುಗುಳುತ। ಬಂದು
ಮುಸುಕೀತು ರಥ ಮುನ್ನ ಮೈಯೊಳಂಬುಗಳು ಕಿಲ
ಕಿಸಿರಾಯು ಸಿಕ್ಕದ್ದು ಕಂಡನಾ ದ್ರೋಣಾ ॥೫೩॥

ಏ ಕಂದಾ ಮುನ್ನೇಳೊ ಎಲೆ ಶಲ್ಯ ನೀತೆರಳೊ ಎ
ಲೇಕರ್ಣ ಕೃತವರ್ಮ ತ್ವರಿತದಲಿ। ಕೃಪ
ನೀ ಕೂಡೋದು ಸ್ವಾಸಾ ಮುಂಚಿಸಲಿ। ರಣದೊ
ಳುಕಲಿ ಕಂದನ ಹಸ್ತದಲಿ। ಸಿಕ್ಕ
ಭೂಕಾಂತನ ಯತ್ನ ತಪ್ಪಿತು ಏಕಾಗಿದು
ಡುಕಿರೆಂದಾ ಆಗ ತಾ ದ್ರೋಣಾ ॥೫೪॥

ಅಂದ ನುಡಿಯ ಕೇಳಿ ಬಂದುದು ಕಾಲಾಡಿ
ನಿಂದ್ರದೆ ಕೊಲ್ಗಳ ಸುರಿಸಿದರು। ಕೌರ
ವೇಂದ್ರನ ಅತಿಭಯ ಬಿಡಿಸಿದರು। ರಥ
ದಿಂದಲಿ ರಾಯನ್ನ ತೆಗಸಿದರು। ರಾಹು
ಹೊಂದಿದ ಚಂದ್ರನ್ನ ಬಿಡಿಸುವ ಅಂದದಿ ಮತ್ತು
ಹೊಂದೇರನೇರಿದರು ಅತಿಮಹಾರಥರು ॥೫೫॥

ಗುರುಪುತ್ರನಯನ್ನ ಕೆಡಸುತ ಶಲ್ಯನ
ಬಲವ ತೆಗ್ಗಿಸಿ ಕೃಪವರ್ಮನನ। ಗರ್ವ
ಮುರಿದು ವ್ಯೂಹಕ್ಕ ಸೋಮದತ್ತನನ। ಮತ್ತ
ಉರುಳುಗೆಡಿಸಿ ರಾಯನನುಜರನ। ಮತ್ತೆ
ಇರದೆ ಸದದೆ ಕೃಪಾ ನೋಡಿಸಿ ಬಿಟ್ಟೊಬ್ಬ
ತರಳ ಗೆಲಿದ ನೋಡತಿ ಮಹಾರಥನು ॥೫೬॥

ಮುಳಿದರಂಬಿನ ಗಾಯದಿ ರಥಿಕರು
ಬಳಲುತ ಅತಿನೊಂದು ಓಡುತಲಿ। ಕಂಡು
ಕಲಿಕರ್ಣ ಕೂಗಿದ ಮುಂದರಿಸುತಲಿ। ರಣ
ಮಲತಾನವೊ ಮಗಯೆಂಬುತಲಿ । ಧನು
ರ್ಝಳಪಿಸಿ ಸಾರಥಿಗೆ ಯಚ್ಚರ ಸೂಚಿಸಿ
ತೊಲಗೊ ನೀಯೆಂಬುತ ತರ್ಬಿದ ಕರ್ಣಾ ॥೫೭॥

ಗಾರುಗೆಡಿಸಿ ಗೆದ್ದಿ ಪೋಗಿನ್ನ ನಮ್ಮೊಳು
ಶೂರತನವೆ ಸಣ್ಣ ಹಸುಳಿಗನು।ರಣ
ಧೀರ ಕರ್ಣನ ನುಡಿ ಕೇಳಿದನು। ಎಲೊ

ಸಾರೊ ಕೈಗುಣಗಳ ತೋರುವೆನು। ಎಂದು ಐ
ದಾರು ಶರಗಳಿಂದ ಹೊಡಿಯಲಾಕ್ಷಣಯಡಿ
ದೋರಿ ಒಡಿದು ಕರ್ಣಪೂರ್ಣಗಾಯದಲಿ ॥೫೮॥

ಬೆದರಿ ಬೆಂಡಾಗಿ ಚೇತರಿಸಿ ವೈಮರ
ದದ್ದುಕಂಡಾ ಕಲಿಶಲ್ಯ ಆಕ್ಷಣದಿ। ಕೆಡ
ವಿದನೆಂದು ಮೂದಲಿಸಿದನು ರಣದಿ। ಬಿಡು
ಮ್ಯಾಲೆ ಕರ್ಣನ ಗೆದ್ದಿ ಸಮ್ಮುದದಿ। ಎಲೊ
ರಾಜರಿಕಿ ನೋಡ ಕಲಿಶಲ್ಯ ನಾನೆಂದು
ಒದಗಿ ಸುರಿದನಾಗ ಅಂಬಿನಂಬುಧಿಯಾ ॥೫೯॥

ಸುರಿದ ಸರಳ ಮಧ್ಯ ಹರಿಯ ಖಂಡಿಸುಯಚ್ಚ
ಮರಳಿ ಕೂರಂಬುದಿನ್ನೈದರಲಿ। ಶಲ್ಯ
ನುರಬಿಚ್ಚಿ ಭೂಮಿಗೆ ಉರಳುತಲಿ। ತೆಲಿ
ತಿರಿಗಿ ಕಂಗಳಗಳ ಬೆಳಗುತಲಿ। ತುಟಿ
ಬರಿದು ಒಣಗಿ ರಥ ಮುರಿದು ಉಬ್ಬಸವಳಿ
ದಿರಲಾಗ ಕಂಡ ಶಲ್ಯನನುಜನು ॥೬೦॥

ಕಡುಕೋಪದಿಂದಲ್ಲೆ ದುಡಿಕಿದರಭಿಮನ್ಯು
ಹೊಡದನು ಐದಾರು ಬಾಣದಲಿ । ಶಿರ
ಕಡಿದು ಬಿದ್ಹೊರಳಿತು ಭೂಮಿಯಲಿ । ಮಾದ್ರಿ
ಒಡೆಯನ ಬಲಮುರಿದೋಡುತಲಿ । ಎಂದೂ
ಕಡುಯಂತೊ ಕಂದಾಸೆ ಕದಡೀದಾವ್ಯೂಹಕ್ಕೆ
ನುಡಿದ ಕೃಪಗ ದ್ರೋಣ ಮಗನ ಪೌರುಷವ ॥೬೧॥

ಮಗುವು ನೋಡಭಿಮನ್ಯ ಪೊಗಳಲಸಾಧ್ಯವು
ತೆಗೆದು ಬಿಟ್ಟಂತಿರೊ ರುದ್ರನನು । ಕೋಪ
ಹೊಗರ ಹೊಸತ ಸುಕುಮಾರಕನು । ಮ್ಯಾಲೆ
ಹೊಗುವವರ ಕಾಣೆನೆಂಬುತ ಕೃಪನು । ಮುಂದೆ
ತಗಿಬಗಿಗೊಳಿಸಿದಾ ಬಗಿಬಗಿ ಪೌರುಷ
ಹೊಗಳಿದ ದ್ರೋಣ ಕೇಳತಿ ಭಯದಿಂದಾ ॥೬೨॥

ಕೇಳಿತ್ತ ಕೌರವ ಕನಲಿ ಉಗ್ರದಲೆಲೊ
ಲೀಲೆಯಿಂ ಪೊಗಳಿದಿರಿ ವೈರಿಯನು । ನಮ್ಮ
ನೇಳಲ ಮಾಡಿದಿರಿ ಸಮರವನು । ಅತಿ

ಖೂಳರೆಂಬಿನ ಗುರುಯೆನಿಸುವೆನು । ಎಂದು
ಕಾಳಗದೊಳು ನಿಂತು ಆಡಿದ ಮಾತಿಗೆ
ದುಶ್ಶ್ಯಾಸನನು ಕೋಪದಿ ನುಡಿದಾ ॥೬೩॥

ಕೌರವ ಕೇಳಿತ್ತು ವೀರರ ಪೌರುಷ
ಹಾರುವರೇನು ಬಲ್ಲರು ಹವವಾ । ಘೃತ
ಗಾರಿಗಿ ವ್ಯಾಲೆ ಸೈಯತೆಗೆಲೆವ । ಬಿಡು
ಸಾರು ಭಂಡರ ಬೈದರೇನು ಫಲವಾ । ಶಿರ
ತೂರಿ ಚಂಡಾಡುವೆ ಎಂಬಂತೆ ತೆರಳಿದ
ಧರಣಿ ಬರುವಂತೆ ವಾದ್ಯ ಘೋಷದಲಿ ॥೬೪॥

ಧುರಕ ದುಸ್ವಾಸ ಅಣುದಟ್ಟಲಭಿಮನ್ಯು
ತಿರವೊ ಸಾರಥಿ ತೇಜಿ ಮುಂಬಿನಲಿ । ಈಗ
ಕರಳ ತೆಗಿವೆ ನೋಡೊ ಬೆನ್ನಿನಲಿ । ಅಂಜ
ದಿರ ನೀನು ಅಂಬಂದ ಸಮಯದಲಿ । ಬಂದು
ತರುಳನ ರಥಸುತ್ತ ಬಲಸುತ್ತ ಕವಿದಾರು
ಅರಗಿನ ಮನೆಗೆ ದಳ್ಳುರಿಯು ಸಾಹಸವೇ ॥೬೫॥

ಬಲವಂದು ನಿಮಿಷದೊಳ್ ಎರಗಲು ಹೆದರದೆ
ಗೆಲವಿಲ್ಲ ನಮ್ಮೊಳು ಸಮರದಲಿ । ನಿಮ್ಮ
ಫಲ್ಗುಣ ಭೀಮ ನಕುಲ ಬರಲಿ । ನೀನು
ಎಳೆ ಬಾಲ ಕೈಗಾದೆವೆಂಬುತಲಿ । ಕೂಳ
ಕೊಡಚಿಯು ದಾಟುತ ಶರಧಿ ಕಾಲ್ಹೊಳಿಯುಂಬೊ
ಭಲೆ ಭಂಡತನವೆಲ್ಲಾ ಬಲ್ಲೆನೆಂದನಾ ಕಂದ ॥೬೬॥

ಸರಳು ಸಾಹಸದಿಂದ ಗೆಲದಿನ್ನ ಬಳಿಕಾಗ
ನರ ಭೀಮ ನಕುಲರ ಬಯಸೆನ್ನುತಾ । ಹುಚ್ಚ
ಮರುಳೆ ನಿನ್ನೊಡಲಿನ ತಿಳಿರಗುತಾ । ತಾಯಿ
ತುರುಬನೆದ್ದಿಸಿ ತಾನು ಕೇಳೆನುತಾ । ಕಲಿ
ತರುಳನ ನುಡಿಕೇಳಿ ಕೌರವನನುಜನು
ಸುರಿವನು ಅಂಬು ಕತ್ತರಿಸೊ ಎಂದೆನುತಾ ॥೬೭॥

ಗಂಧ ಕೆಂದಾವರಿ ತುಂಬಿಗಳೊಲೆವುತ
ಹೊಂದಿರೆ ಕೋಲ್ಗಳ ಮುಸುಕಿರಲು । ಪಾರ್ಥ
ನಂದನ್ನ ಗಣೆಗಳು ಸೈರಿಸಲು । ಎಲೊ

ತಂದೆ ಭೀಮನಗಾಶೆ ಮುನ್ನಿರಲು । ನಿನ್ನ
ಕೊಂದರ ಮತವಲ್ಲ ಎಂದು ಭಂಗಿಸಿ ಹೊಯ್ಯೋ
ನೊಂದಿತು ಕುರುಬಲ ಬಳಲಿ ಕಾತರಿಸಿ ॥೬೮॥

ಭಾರಿ ಕೋಪದಿ ಕಲಿ ಕರ್ಣನು ನುಡಿಯುತ
ಸಾರೊ ಸಾರೆಲೊ ಕಂದಾ ನೀನೆನುತಾ । ಇನ್ನು ರಣ
ಸೂರ ಹೋಗಬ್ಯಾಡೆಂದೆನುತಾ । ಬಲ್ಲೆ
ಬಾರಿರೆಯು ಕರ್ಣನ ಮುನ್ನಿನ ಗುರುತಾ । ಭಂಡ
ಪೋರ ನೀನೆಂಬುತ ನಸುನಕ್ಕು ಎಂಟಂಬಿಲಿ
ವೀರಹೊಯ್ಯಲಾರಥ ತೊಯ್ದು ರಕ್ತದಲಿ ॥೬೯॥

ನರನಿನ್ನ ಕೊಲ್ವೆನೆಂಬುತ ಬಿಟ್ಟೆನೆಂಬುತ
ಮುರಿಯಲೆಚ್ಚನು ಧನುರ್ಬಾಣದಲಿ । ಬೇಗ
ಬರಲಿ ಶಲ್ಯನು ಸುತ ನಿಲ್ಲದಲಿ । ದಿವ್ಯ
ಸರಗಳಿಂದ ಶಿರವ ಚಂಡಾಡುತಲಿ । ದರ
ದುರವೆಲ್ಲ ಕರಗಿ ಕಾತರಿಸೀತು ನಡಗೀತು
ಧರುಣಿ ರಣದ ಬೊಬ್ಬೆ ಕೇಳಿ ಧರ್ಮಜನು ॥೭೦॥

ಕಂದ ಏನಾದನೊ ರಣದೊಳಗದ್ಭುತ
ದಂದುಗವೆಂತೊ ಭೀಮನೆನುತ । ಬೇಗ
ದಿಂದಲ್ಲೆ ನಕುಲರ ಕಳುಹಿಸುತಾ । ಆಗ
ಬಂದು ಮುಂದ್ವಾರದಾದಿಯು ಕೇಳುತಾ । ಸಿಕ್ಕ
ಕಂದನ ಹಂಬಲ ಬಿಡು ಹಿಂದಕ್ಕಡಿ ಇಡು
ಇಂದಿಗೆ ವರವುಂಟು ಎಂದ ಸೈಂಧವನು ॥೭೧॥

ಅಂದ ಮಾತನು ಕೇಳಿ ನಕುಲ ಸಹದೇವನು
ಹಿಂದಕ್ಕೆ ಅಡಿಯಿಟ್ಟು ನಡದಿದಾನು । ಶಂಭೊ
ಬಂದು ರಣಗಾರ ಕುಮಾರಕನ । ಆಗ
ಕೆಣಕಾದೆ ಹೊಡೆದನು ಸುಯೋಧನ ಸನ । ಪ್ರೀತಿ
ಯಣುಗಾರ ಉಳಿದ ಸುಭಟರ ನೋಡದೆ
ಕೊಂದಾ ತೃಣ ಸಮ ಮಾಡಿದಾ ಲಕ್ಷಣಾದಿಗಳು ॥೭೨॥

ಭೂಮಿಪ ಕೌರವನನ್ನವ ತಿನ್ನುವ
ಡೋಮ್ಯಾರ ನಿನಗ್ಯಾಕೊ ಪಂಥಗಳ । ಈಗ
ನೇಮದಿ ಕೂಡಿ ಸುಭಟರುಗಳ । ರಣ

ಸೀಮಿಯೊಳಾದಿರಿ ಶೌರ್ಯಗಳಾ । ಆ ಪಾರ್ಥ
ನಾ ಮಗನಾಡಿದ ನುಡಿ ಕೇಳಿ ರಥಿಕರು ಮತ್ತೆ
ತಾವ್ಮಾತಾಡಿಕೊಂಡರಾಕ್ಷಣದಿ ॥೭೩॥

ಷಡುರಥರೇಕಾಗಿ ದುಡುಕಿದರಭಿಮನ್ಯು
ಗಿಡಗನಂದದಿ ಹೊಕ್ಕು ಕೆಡವುತಲಿ । ರಥ
ಸಿಡಿದು ಬಿದ್ದವು ಗಿರಿಯಂದದಲಿ । ಘುಡ
ಘುಡಿಸುತ ವೀರ ಬೊಬ್ಬಿನಾದದಲಿ । ವೈರಿ
ಗಡಣ ಹಿಮ್ಮೆಟ್ಟಿ ಕುವರ ಬಿಟ್ಟ ಕೋಲ್ಮಗಳು
ತಡಿಯಲಾರೆವುಯೆಂದು ಮಿಡಿಕಿ ಸೌಬಲವು ॥೭೪॥

ಭಂಗ ಮಾಚಿದನೆಂದು ಕುಂಭಜಕಂದಪ
ತಗ ಸುತನ ಕರದ್ಹೇಳುತಲಿ । ನೀನು
ಬೆಂಗಡಿಯೊಳು ಬಂದು ನಿಲ್ಲುತಲಿ । ಕರ
ಸಿಂಗಾಡಿ ಖಂಡ್ರಿಸು ಶೀಘ್ರದಲಿ । ರಾಯನ
ಹಂಗಿಗಿರಾದೆವು ಹಿಂಗಲಾರೆವಸಮ
ರಂಗರಾಯನ ಕಾರ್ಯಕ್ಕೆಂದ ನಾ ದ್ರೋಣ ॥೭೫॥

ಅಂದ ನುಡಿಯ ಕೇಳಿ ಬಂದು ಬೆಂಗಡಿಯೊಳು
ಹಿಂದೆ ಕರ್ಣನು ಧನವ ಪಿಡಿದು । ಗುರು
ನಂದನ ದ್ರೋಣ ಶಲ್ಯರು ನಡಿದು । ಬಂದು
ಮುಂದಣೆದಟ್ಟ ಕಾದಲು ತಡಿದು । ಕರ್ಣ
ಹಿಂದಿಂದ ಕರ್ಮುಖ ಕಡಿದು ಮುಕ್ಕಡಿಯಾಗಿ
ಕಂದಾ ತಿರಿಗಿ ಕಂಡಾ ಕರ್ಣನ ಮುಖವಾ ॥೭೬॥

ಭಪ್ಪರೆ ಕರ್ಣಾ ಸೈಧೀರ ಕ್ಷತ್ರಿಯ ಕುಲ
ದೀಪ ನೀನಹುದೊ ಮಾಡಿದಿ ಕಲಹಾ । ರಣ
ದೀಪಂಥಗಾರ ಗೆಲಿದಿ ಹವವಾ । ಹಿಂದೆ
ಚ್ಯಾಪ ಖಂಡ್ರಿಸಿ ತೋರ್ದಿ ಸಾಹಸವಾ । ಕಂದ
ನಾ ಪರಿಹಾಸದ ನುಡಿ ಕೇಳಿ ಭಾನುವಿ–
ನಾ ಪುತ್ರ ಲಜ್ಜಿತನಾದನಾಕ್ಷಣದಿ ॥೭೭॥

ವ.ಎಂದಾಗಿ ಎನಿಸುತ ಧನವ ಮುರಿದ ದ್ರೋಣ
ಹೊಂದೇರಿ ಕಡಿದನು ತವಕದಲಿ । ಗುರು
ನಂದನ್ನ ಸಾರಥಿ ಕೆಡವುತಲಿ । ಕೃಪ

ನಿಂದ್ರದೆ ತೇಜಿಯು ಹೊಡೆಯುತಲಿ । ಶಲ್ಯ
ಕಂದನಾಟಕೆಯುಚ್ಚೆದಿಸಿ ಬೊಬ್ಬಿಟ್ಟು ದಂಡದ್ದು
ಬಂದೊಮ್ಮೆ ಮುಸುಕಿತಬ್ಬರದಿ ॥೭೮॥

ದುಡಕುವೆನೆಂದರೆ ಧನವಿಲ್ಲ ಮುಂದಕ್ಕೆ
ನಡಸೇನಂದರೆ ಇಲ್ಲೊ ಸಾರಥಿಯು । ಹೊಡೆ
ಹೊಡೆವೆನೆಂದರೆ ಇಲ್ಲೊ ಮಹಾಪಯವು । ಮುನ್ನ
ಒಡಿದು ಚೂರಾದಿತು ವರ ರಥವು । ಅಂತು
ಕಡುವೀರ ಕುವರ ತಾ ಹೆದರದೆ ರಣದೊಳು
ಖಡ್ಗವ ಕೈಯೊಳು ಕೊಂಡು ಬೊಬ್ಬಿರಿದಾ ॥೭೯॥

ಆ ಸುತ ರಣದೊಳು ರೋಷದಿ ಕಡಿದನು
ಬೇಸರವಿಲ್ಲದೆ ಖಡ್ಗದಲಿ । ಹೆಣ
ಹಾಸಿತು ರಣಭೂಮಿ ರಾಶಿಯಲಿ । ಭೂತ
ತೋಷದಿ ಉಂಡುಂಡು ತೇಗುತಲಿ । ಬಲು
ಘಾಸಿಯಾದಿತು ಬಲ ಕಾದಲಾರದೆ ಜನ
ನಾಶವಾಗುತ ರಕ್ತ ಸೂಸ್ಯಾಡುತಿರಲು ॥೮೦॥

ನೂಕು ನುಗ್ಗಾದರು ದ್ರೋಣಾದಿ ರಥಿಕರು
ಕಾಕಾಗಿ ನಿಂತುಸುರ್ಗರಿವುತಲಿ । ರಣ
ಸಾಕೊಸಾಕಿನ್ನೆಮಗೆಂಬುತಲಿ । ಕರ್ಣ
ನೀ ಕೈಯ್ಯ ಮರಿಯು ಬ್ಯಾಡೆಂಬುತಲಿ । ಕಂದ
ಹಾಕ್ಯಾಡುತ್ತಿರಲಿತ್ತ ಕರ್ಣ ಕೇಳಾಕ್ಷಣದಿ
ಕತ್ತಿ ಖಂಡ್ರಿಸಿದನು ಮರಳಿ ಭಂಗಿಸಿದಾ ॥೮೧॥

ಕ್ಷತ್ರಿಯ ಪದದಿ ಪುಟ್ಟಿದರಾದರೆ ಇಂಥಾ
ಕೃತ್ಯವ ನಮಿಸಾಗ ಅಂಬಿಗರ । ಕೆಟ್ಟ
ತೊತ್ತಿನ ಪುತ್ರನೆ ಈ ಸಮರ । ಸಯ್ಯೊ
ಮತ್ತೆಲ್ಲಿ ಕಾಣೆ ನಿನ್ನಂಥವರಾ । ತಿರಿ
ಗುತ್ತರ ಕೊಡದೆ ತೆಗ್ಗಿಸಿ ಮುಖ ಬರಳೊಳು
ತಿದ್ದುತ ನೆಲನೋಡುತ್ತಲಿರ್ದನಾ ಕರ್ಣಾ ॥೮೨॥

ಕದನದೊಳ್ ಖಡ್ಗವು ಪೊದರೇನಹುದೆಂದು
ಒದರಿ ಚೀರುತ ಸಿಂಹ ನಾದದಲಿ । ಆಗ
ಗದೆಯು ಒಡಿದು ದಳ ತುಡುಕುತಲಿ । ಘುಡ

ಘುಡಿಸುತ ಭಟರ ಸಂಹರಿಸುತಲಿ । ಕಂದ
ಗಿದಿರಿಲ್ಲ ನೋಡು ರಣದ ಮಂಡಲಿಕರು
ಶತದಶ ಕಿವಿಗಳು ಅಂಡೊಲೆಯುತಲಿ ॥೮೩॥

ವರ ಅಶ್ವತ್ಥಾಮನ ಸಾರಥಿ ಕೆಡವಿದ
ಗುರುವಿನ ರಥ ಹುಡಿಮಾಡಿದನು । ಮಾದ್ರಿ
ಅರಸನ ತುರಗಟ ನೂಕಿದನು । ಶಲ್ಯ
ನಿರದೆ ಬೇಗದಿ ನೆಡಗೆಡಸಿದನು । ಒಳ್ಳೆ
ದೊರೆ ದೊರೆ ನಾಯಕರುಳಿಯದೆ ಮಡಿದರು
ಮರಳಿ ಕಡಿದ ಕರ್ಣ ಕಂದನ ಗದೆಯಾ ॥೮೪॥

ಕಡಿದಂಥ ಗದೆ ಆ ಪೊಡವೀಗೆ ಬಿದ್ದಿತು
ಹಿಡಿದ ಆಯುಧವೆಲ್ಲ ಖಂಡ್ರಿಸುತ । ಭಟರ
ಕಡು ಹಿಂಡು ಸರಳುಗಳ್ ಸೂರ್‍ಯಾಡುತ । ಬಂದು
ನಡಲು ಮೈಯೊಳು ಬಾಣ ಮಾಯವಾಗುತ । ಘಾಯ
ತಡಿದು ಬೊಬ್ಬಿರಿದು ದುಡುಕಿ ಬಂದು ಒದ್ದೊದ್ದು
ಕೆಡವಿದ ನರಬಲ ರಣದ ಮಧ್ಯದಲಿ ॥೮೫॥

ಅರಸ ಕೇಳ್ ರಣದ್ಭೂತ ದಂದುಗ
ಪರಕಿಸಲೆಂತು ನಾನತಿಶಯವು । ತುಳಿ
ದೊರಸಿದಾಗ ಗಜಹಯ ಉದರಿದವು । ಬಿದ್ದು ಬಿದ್ದು
ನೆರಳ್ಯಾಡಿ ಘಾಯದಿ ಗೋಳಿಡುತಿಹವು । ಒಬ್ಬ
ರಿರದ್ಹಾಂಗ ಕೊಂದನು ಕರ್ಣ ನೋಡಲಾರದೆ
ಭರದಿಂದ ತರುಳನ ಕರವ ಖಂಡ್ರಿಸಿದಾ ॥೮೬॥

ಕರ ಹೋಗಲಾಕ್ಷಣ ತ್ವರಿತದಿ ಯನಿಸುತ
ಸುಂದರೈವತ್ತೈದು ಬಾಣದಲಿ । ಬಲು
ಸರನಡಲ್ಹುಚ್ಚೆದ್ದು ಬೊಬ್ಬಿಯಲಿ । ರಥ
ಮುರಿಯಲೊಡದು ಕೈಗಾಲಿಯಲಿ । ಇಕ್ಕಿ
ತಿರುವಿ ಹೊಯ್ಯಲು ಶಿರ ಹರಿದು ಕತ್ತರಿಸಲು
ಹರಿಯು ಕರದ ಚಕ್ರ ಬಂದು ಅಂಬರದಿ ॥೮೭॥

ಕೈ ಹೋಗಲಾಕ್ಷಣ ಮುಳ್ಳಿಡಲಿಂಬಿಲ್ಲ
ಮೈಯೊಳಗಂಬಿನ ಘಾಯದಲಿ । ಕಂದ
ಶೌರ‍್ಯಗರದು ಹೊಯ್ದಾಡುತ್ತಲಿ । ಮತ್ತು

ಧೈರ್ಯದಿ ನಿಂತು ಚೇತರಿಸುತಲಿ । ಘಾಯ
ಸೈರಿಸಲಾರದೆ ತಿರಿಗಿ ಬೀಳುತಲಿರೆ
ಹೊಯ್ಕೊಂದು ತಡಿದು ದುಶ್ಯಾಸನಾತ್ಮಜನು ॥೮೮॥

ಕಡುವಿಲಿ ಗರ್ವದಿ ಬಂದು ಗರ್ಜಿಸಿ ಎಲೊ
ಫಡ ನಿನ್ನ ಬಿಡುವರೆ ಸಂಗರದಿ । ನಿನ್ನ
ಕೆಡವದೆ ಬಿಡೆ ನೋಡೆಂಬುತಲಿ । ಕಂದ
ಮಡೆವ ಕಾಲಕೆ ಸಂಗತೆಂಬುತಲಿ । ಕೋಪ
ಕುಡಿವರಿದಾಕ್ಷಣ ಹೊಡಿದು ಕಾಲಡಿಯೊಳು
ಕೆಡವಿ ಮಾಡಿದನಾಗ ಧುರದ ಮಂಡಲದಿ ॥೮೯॥

ಬಿಗಿದು ಹುಬ್ಬಿದ ಗಂಟು ತೆಗಿದು ಕಂಗಳ ಮು
ಖಿಗುರುಳು ತಿದ್ದಿದ ಮೀಸಿ ಕುಣಿಯುತಲಿ । ಚೆಲ್ವ
ಬಗರಿ ಗಡ್ಡದ ಭವ ಎಸೆಯುತಲಿ । ಆಗ
ಜಗದಂಥ ರಕ್ತ ಜೋರಿಡವುತಲಿ । ಸತಿ
ನೆಗಧರ ಮಗ ಇವ ತಿರಿಗಿದ ಬಣ್ಣದಿ
ಮಗವು ಖಾರಿದನಾಗ ಶಸ್ತ್ರಶೈನ್ಯದಲಿ ॥೯೦॥

ಸಾವುರ ಹರಿಯಲೆ ಕೌರುವಾದಿಗಳೆಲ್ಲಾ
ಆವ ಸಮರ್ಥರು ಸಮರದಲಿ । ಹಿಂಡು
ಹಾವಿನ ಬಳಗವು ಕೂಡುತಲಿ । ಖಗ
ದೇವನ ಮರಿಕೊಂದೆವೆಂಬುತಲಿ । ಅಯ್ಯೊ
ಹ್ಯಾವವಿಲ್ಲದೆ ಕೊಂದ್ರು ರಥಿಕರೆಂಬುತ
ದೇವಿ ತಿಂಥಿಣಿ ಗೌರಿದೇವಿ ದುಃಖದಲಿ ॥೯೧॥

ಕೂಸಿನ ಮ್ಯಾಲ್ಹೋಗಿ ವೀರರು ಮೋಸದಿ
ಹೇಸದೆ ಕೊಂದರು ಯುದ್ಧದಲಿ । ಬಾಳ
ಏಸೊಂದು ಗಜೆಗಳ ಕೂಡುತಲಿ । ಒಂದು
ಕೇಸರಿಮರಿ ಕೊಂದೆವೆಂಬುತಲಿ । ಇಂದು
ವಾಸನು ಸಾಸಿರ ನೇತ್ರದಿ ಜಲಧಾರಿ
ಸೂಶ್ಯಾಡಿ ಕನಲಿದ ಕ್ಷಾತ್ರ ಭಾವದಲಿ ॥೯೨॥

ತವಕದಿ ಅಪ್ಸರ ನಾರಿಯರಳಿದರು
ಇದನ ಪೋಲುವರುಂಟೆ ಲೋಕದಲಿ । ಎಂದು
ಯುವತೇರು ಬಗೆಯಿಂದ ಪೊಗಳುತಲಿ । ಇಂದ್ರ

ನವಪೀಠದೊಳಗೊಯ್ದು ಇರಸುತಲಿ । ಇಂಥ
ಕುವರನ್ನ ನೋಡಲಾರೆನುಯೆಂದು ಗವುಕದಿ
ದಿವಕರನಿಳಿದನು ಪಶ್ಚಿಮಾಂಬುಧಿಗೆ ॥೯೩॥

ಧುರದೊಳಗಭಿಮನ್ಯು ಅಳಿದನೆಂಬುದು ಕೇಳಿ
ವರ ಪರಿವಾರವು ದುಡುಕುತಲಿ । ಆಗ
ಪುರವ ಪೊಕ್ಕಿತು ಬಂದು ಓಣಿಯಲಿ । ಕಲಿ
ತರುಳ ಮಡಿದ ಸುದ್ದಿ ಹರವುತಲಿ । ಪಾಂಡು
ವರದೊರೆ ನಾಯಕರು ಬರೆ ಚಿಂತಿಯಲಿ
ಬಂದು ಪೊಕ್ಕಿತು ಆಗ ರಾಜಮಂದಿರವಾ ॥೯೪॥

ಬವರದೊಳ್ ಕುವರನೇನಾದನೆಂಬುತ
ಯಮಧರ್ಮ ಚಿಂತಿಸುವಂಥ ಸಮಯದಲಿ । ಇಂದು
ರವರಾಗೆ ರಾಯ ಕೇಳೆಂಬುತಲಿ । ನಿನ್ನ
ಕುವರ ವ್ಯೂಹದಿ ಅತಿ ಶೌರ್ಯದಲಿ । ಬಲ
ಕುವರನೋರ್ವನೆ ಕೊಂದು ಜವಪುರಕಟ್ಟಿದ
ತವಕದಿ ಏರಿದ ಇಂದ್ರ ಗದ್ದಿಗಿಯು ॥೯೫॥

ನಾಯಕರಾಡಿದ ನುಡಿ ಕೇಳಿ ಧರ್ಮ
ರಾಯ ದುಃಖದಿ ಸುಕುಮಾರಕನು । ಬಾಣ
ಘಾಯದಿ ಎಷ್ಟೊಂದು ಬಳಲಿದನೊ । ಕಂದ
ಸಾಯಲಾರದೆ ಎಷ್ಟು ಅಳಲಿದನೊ । ಅಯ್ಯೊ
ಕೈಯಾರೆ ಕೊಂದೆವು ಭೀಮಾದಿ ನಕುಲರು
ಸುಯ್ಯಗರದಿ ಪುತ್ರನೆಂದಳಲಿದರು ॥೯೬॥

ಪೊಡವಿಯೊಳ್ ನಿಮ್ಮಂಥ ಕಡುಧೀರರುಂಟೇನೊ
ಪೊಡವಿಪಾಧರ್ಮಜ ದುಃಖದಲಿ । ಎದಿ
ಒಡೆದು ಬಿದ್ದೊರಳಿದ ಭೂಮಿಯಲಿ । ಹಣಿ
ಬಡಿದ್ದುಡಿಯೊಳು ಮುಳಿಗೇಳುತಲಿ । ಧೂಳ
ಅಡರಿ ರೂಪಾನೆಕೆಟ್ಟುರಾಯ ಹವ್ವನೆಹಾರಿ
ಒಡಿಯ ಮೈಮರದದ್ದು ಕಂಡರಾ ಭಟರು ॥೯೭॥

ಇದು ಘಾತವಾದಿತೆಂದೊದಗಿ ಮಂತ್ರಿಗಳೆಲ್ಲ
ಯದಿ ಮುಟ್ಟಿ ಮುಖನೋಡಿ ಶೋಕದಲಿ । ಆಗ
ಉದಿವ ಉಸುರನಾರೈಸುತಲಿ । ಆಗ

ಕುದಿದ ಉಸುರ ಕಂಡು ಧೈರ್ಯದಲಿ । ಬಲ
ಬೆದರದೆ ನಾಯಕರು ಒಡನೆ ಪೊಯ್ಯೊಳಿಕಂಡು
ಮುದದಿ ಭೂವರಗುಪಚರಿಸುತಲಿಹರು ॥೯೮॥

ಉರಿ ಬಿದ್ದು ಒಡಲೊಳು ಕರಗಿ ಕಾತರಿಸಿತು
ವರ ಕೊಂತಿಭೋಜ ವಿರಾಟನನು । ವಾಯ್ವ
ತರುಳ ಸಾತ್ಯಕಿ ದೃಷ್ಟದ್ಯುಮ್ನನನು । ಅಲ್ಲೆ
ಇರುವ ಶಿಖಂಡಿಯು ನಕುಲರನು । ಕಂದ
ಮರಣದ ಶೋಕತರದಬ್ಧಿಯೊಳಗಾಗಿ
ಹೊರಳ್ಯಾಡುವ ದುಃಖಹರಬಲ್ಲನರಸಾ ॥೯೯॥

ರಾಯ ಮೆಲ್ಲನೆ ಕಣ್ಣು ತೆಗಿದು ಎಚ್ಚರಹುಟ್ಟಿ
ಹಾಯೆನ್ನ ಪುತ್ರನೆ ಹ್ಯಾಂಗಿರಲಿ । ಒಮ್ಮೆ
ಕಾಯದೊಳೆಚ್ಚರ ಮರೆಯುತಲಿ । ಕಂದಾ
ಬಾಯೆಂದು ಬೈಲ ತರ್ಕೈಸುತಲಿ । ಅಯ್ಯೋ
ನೀಯೆಮ್ಮನಗಲಿದ್ಯಾ ಮಗನೆ ನಿನ್ನಯ ಚೆಲ್ವ
ಛಾಯ ಪೋಲುವರುಂಟೆ ಮೂರ್ಲೋಕದೊಳಗೆ ॥೧೦೦॥

ನರ ಬಂದು ಎನ್ನಯ ತರುಳ ನಂದರ ಪೇಳ್ವ
ತೆರ ನೀನು ಮಡದನಂತ್ಹೇಳಲೇನೊ । ವೈರಿ
ದೊರಿಯ ಕೈಯಲಿ ಸಿಕ್ಕನೆನ್ನಲೇನೊ । ನಾನೆ
ಕರವುಟ್ಟಿ ಕೊಂದೆನಂತ್ಹೇಳಲೇನೊ । ಹೇಳ
ಅರಿದಯ್ಯ ಮಗನೆಂದು ಮರುಗಿದ ಕಣ್ಣೀರು
ಸುರಿದವು ನದಿಯಂತೆ ಧರ್ಮನಂದನಗೆ ॥೧೦೧॥

ಅರಸು ಈ ಪರಿಯಿಂದ ದುಃಖಿಸುತಿರಲೊಳ
ಗಿರುವ ನಾರಿಯರಾಗ ಕೇಳಿದರು । ಮತ್ತೆ
ಧರೆಯೊಳಗಾರಾರು ಮಡದಿಹರು । ಆಗ
ಅರಸಿ ದ್ರೌಪತಿಗದನ್ನರವಿದರು । ಕೇಳಿ
ಉರಿಯುತಾಕಿದ ಎಳೆಬಾಳಿಯಂದದಿ ನಾರಿ
ಕರಗಿದಳಾಕ್ಷಣ ಕಂಡು ಸೌಭದ್ರಿ ॥೧೦೨॥

ಮುದ್ದು ಮುಖದ ಕಂದ ಬಿದ್ದ ರಣದಿಯೆಂಬ
ಸುದ್ದಿಯ ಕೇಳಿ ಸೌಭದ್ರಿಯಳು । ಉರಿ
ಬಿದ್ದೊಡಲೊಳು ಆಗ ಕರಗಿದಳು । ನಾರಿ

ಬಿದ್ದೊದ್ದುರಳಿದಳಾಗ ಭೂಮಿಯೊಳು । ಯದಿ
ಗುದ್ದಿ ಹಣೆಯು ಬಡಿದುದ್ದಿ ನೆಲನೆ ಪುಟ
ದೆದ್ದೆದ್ದು ಬೀಳುತ ಪದ್ಮಗಂಧಿಯುಳು ॥೧೦೩॥

ಹೊಡಮಳ್ಳಿ ಬೀಳುತ ನದಿಯಿಂದ ಸಿಡಿದಂಥ
ಕಿಡಿಯು ಮೀನಪ್ಪಂತೆ ಮಿಡುಕುತಲಿ । ಹೊರ
ಳೊಡ ಮುರಿದೇಳುತ ಚೀರುತಲಿ । ನಿನ್ನ
ಹುಡುಕಲಿನ್ನೆಲ್ಲ್ಯೋ ನಾನೆಂಬುತಲೀ । ನೆಲ
ಬಡಿದ್ಹುಡಿದು ವೃಥ ಸುಡಲೆನ್ನ ಜಲ್ಮವು
ಪೊಡವಿಯೊಳ್ ಕಡುಪಾಪಿಯೆಂದಳಾ ನಾರಿ ॥೧೦೪॥

ಗುಣಗಣ ಮಹಿಮೆಯ ಗಣೆಸಲಾರೆನೊ ಕ್ಷಣ
ಕ್ಷಣಕೊಮ್ಮೆ ಪಾಲುಬೆಣ್ಣೆ ಉಣಿಸಿದೆನೊ । ಇಂಥಾ
ರಣಕಾಗಿ ನಾನಿನ್ನ ಬೆಳಸಿದೆನೊ । ಪ್ರತಿ
ಅಣುಗರಿಹರಂತೆ ಮರಿಯಲೇನೊ । ವೈರಿ
ಜೈಸೆ ಬಾರದೆ ಪೋಗಿ ಆಹುತಿಯಾದಿ ವ್ಯೂಹಕ್ಕೆ
ಗುಣಮಣಿ ಸೌಭದ್ರಿ ನೆನದು ದುಃಖಿಪಳು ॥೧೦೫॥

ಕೌರವ ಸೈನ್ಯದಿ ದ್ರೋಣಾದಿ ರಥಿಕರೊಳ್
ಆರು ಪುಣ್ಯಾತ್ಮರು ಪುಟ್ಟಲಿಲ್ಲೆ । ನಿನ್ನ
ಶೂರ ಶೌರ್ಯತ್ವಕ್ಕೆ ಮೆಚ್ಚಲಿಲ್ಲೆ । ಬಂದು
ಭೂ ರಮಣನ ಧರ್ಮ ನಿಲ್ಲಲಿಲ್ಲೆ । ಅಸು
ಸೂರೆಗೊಂಡರು ನಾಯಿನ್ನಾರಿಗ್ಹೇಳಲಿ ಸುಕು
ಮಾರನ ಪೋಲ್ವರೆ ಧೀರ ಸುಂದರನೆ ॥೧೦೬॥

ಮಣ್ಣ ರಣಾಗ್ರಕ್ಕೆ ಪೋಗುವ ಸಮಯಕ್ಕೆ
ಚೆನ್ನಾಗಿ ಮುಖಪದ್ಮ ನೋಡಲಿಲ್ಲಾ । ಗುಣ
ರನ್ನ ಎನ್ನಯ ಮಾತು ಕೇಳಲಿಲ್ಲಾ । ಸಧ್ಯ
ಗನ್ನ ಗಾತಕಮಾಡಿ ಕೊಂದರಲ್ಲಾ । ಅಭಿ
ಮನ್ಯುಕುವರ ನಿನ್ನ ತಲಿಯು ಬೀಳುದ ಕಲಿ
ನಿನ್ನ ಕಾಲ್ಗತಿ ಅಲ್ಲಿಗೆಳಸತ್ತ್ಯ್ಯೋ ॥೧೦೭॥

ಈ ಸಭೆಯೊಳಗಿರುವ ಸತಿಯರು ಕೇಳಿ
ಕೂಸ ಕಂದಯ್ಯನ ತೋರಿದರೆ । ವರ್ಣ
ವಾಸದೊಳಗ ಚರಿಸ್ಯಾಡಿದರೆ । ಘನ

ಕ್ಲೇಶದವಾಗ್ನಿಯು ಕೆಡಸಿದರೆ । ಮುನ
ಬ್ಯಾಸರ ವಂತಿಗೆ ಕನಕಸುವಸ್ತುಗಳ್
ನಾ ಸಧ್ಯ ನಿಮಗೀಗ ಕೊಡುವೆನೆಂಬುವಳು ॥೧೦೮॥

ಕಳವಿ ವ್ಯೂಹದಿ ಕಂದ ಅಳಿಯಲೆಂಬುಮನ
ದೊಳು ಹವಣಿಕಿಯಿತ್ತೆ ರಾಯನೆ । ನಿನ್ನ
ಬಳಿಯಲ್ಲಿದ್ದರ ಭಾರವಾಗುವನೆ । ಕೊಂದು
ಗಳಸಿಕೊಂಡಿಯು ಬ್ಯಾಗ ಧರ್ಮಜನೇ । ಮುಂದೆ
ಬೆಳಿಯುಬಾರದು ಸದ್ಯಸಾಯಲೆಂದರುಯೆಂದು
ಬಳ ಬಳ ಬಳಲಿ ತೆಳಗುರುಳಿದಳು ॥೧೦೯॥

ಕಲ್ಲೆದಿ ಕಾಣೆರಿ ಕಳಿವಿ ಕೊಂದಿರಿ ಅಯ್ಯೋ
ನಿಲ್ಲದೆ ಗಿರಿಯು ಮರೆಯು ಹೋಗಲ್ಯಾ । ಹಾಂಗ
ದಲ್ಲಾದ ಭೂಮಿಯು ಬಗಿದ್ಹೋಗಲ್ಯಾ । ಈಗ
ಬಲ್ಲಿದಂಬುಧಿಯೊಳು ಮುಳಿಗೇಳಲ್ಯಾ । ಕಂದಾ
ಎಲ್ಲಿದ್ದಾನಯ್ಯಯ್ಯೋ ಹ್ಯಾಂಗ ಮಾಡಲಿ ನಾನು
ಪೋಲ್ವ ಶರನೆ ರೂಪ ಚೆಲ್ವ ಚೆನ್ನಿಗನು ॥೧೧೦॥

ತಾವರಿ ವ್ಯೂಹವ ದಾವಾತ ರಚಿಸಿದ
ನೋವೀರ ಅರ್ಜುನ ಇಲ್ಲದಾಗ । ಮತ್ತೆ
ಹಾವಳಿ ಬಂತೊ ಕುಮಾರಕಗ । ಅಯ್ಯೋ
ತಾವೇನು ಮಕ್ಕಳ ಹಡೆದಿರರೇ । ಎಳೇ
ಜೀವವಕೊಲ್ಲುವ್ದುಚಿತವಲ್ಲವೆಂದು
ಬೋವೇರು ಬಳಲಿ ಚಿಂತಿಸುತ ಶೋಕದಲಿ ॥೧೧೧॥

ಮಗನೆ ನಿನ್ನಯ ರೂಪ ಜಗದೊಳು ಕಾಣೆನು
ನಗಿಮುಖ ತೋರೊ ನಾ ನೋಡುವೆನು । ನಿನ್ನ
ಅಗಲಿ ಮಂದಿರದೊಳಗಿರಲಾರೆನು । ಎನ್ನ
ಬಗಲಿಗಿ ಬಾರೊ ಮುದ್ದಾಡುವೆನು । ನೆಲ
ಬಗಿದು ಸುಗುಣೆಯೆನ್ನ ಮಗುವೆ ಮಗುವೆಯೆಂದು
ಗಗನಕ್ಕೆ ಬಾಯ ತೆಗೆದಳೇನೆಂಬೆ ॥೧೧೨॥

ಹಿಂದಿನ ಜನ್ಮದಿ ಆರಾರ ಶಿಶುವಿನ
ಕೊಂದಿದ್ದೆನಂದರೀ ಜನ್ಮದಲಿ । ಎನ್ನ
ಕಂದನ್ನಗಲಿದೆನೆಂಬುತಲಿ । ಅರ

ವಿಂದ ಮುಖವು ಕಂದಿ ಬಾಡುತಲಿ । ಓಡಿ
ಬಂದಾಗ ರಾಯನ ಮುಂದೆ ಧಪ್ಪನೆ ಬಿದ್ದು
ಚಂದವಾದೀತಯ್ಯ ನಿಮ್ಮ ನಂದಿಕಾರಿಗಳು ॥೧೧೩॥

ಎಲ ಭೀಮ ನಕುಲರೆ ನೀವು ಅಳುವದ್ಯಾಕೆ ಈ
ಇಳೆಗೆ ಇದ್ದಿರಿ ನೀವು ಮೂಲವನು । ಮುನ್ನ
ಕಳವಿ ಕೊಂದಿರಿ ಬೇಗ ವ್ಯೂಹದಲಿ । ಮನ
ದೊಳಗಿನ ಹಟ ತೀರೀತೆಂಬುತಲಿ । ಎಂದೂ
ಲಲನೆಂದು ದ್ರೌಪತಿ ಕುವರ ನೀವೆಲ್ಲರು
ಗಳಿಲನೆ ಹಿಡಿರಯ್ಯೊ ಹಸ್ತಿನಾಪುರಕೆ ॥೧೧೪॥

ಸೃಷ್ಟಿಯೊಳಗ ರಾಯಧರ್ಮಿಷ್ಟನೆನ್ನುವರೋ
ಹೊಟ್ಟಿಯ ಮಗನಾದ ರಟ್ಟೀಯೇನೊ । ಶಿಶು
ಹುಟ್ಟಿದಾಕ್ಷಣ ಕೊಲ್ಲಬಾರದೇನೊ । ಬಲು
ದಿಟ್ಟರೈವರು ನೀವು ಧೀರರೇನೊ । ಬಿಡು
ವಟ್ಟಿಗಿನ್ನೇನದ ನೀವಿದ್ದು ಒಡಲಿಗೆ
ಕೊಟ್ಟಿರಿ ಕಿಚ್ಚನೆಂದಬ್ಬರಿಸಿದಳು ॥೧೧೫॥

ತರುಣಿಯಳಾಡಿದ ನುಡಿಕೇಳಿ ರಾಯಾಗ
ಸರಳು ನಟ್ಟಂತಿರೊ ಶರೀರದಲಿ । ಸುಮ್ಮ
ನಿರನ್ನ ತಂಗಿಗಂತ್ಹೇಳುತಲಿ । ಇಷ್ಟು
ಮರುಗ ಸಲ್ಲದು ತನಗೆಂಬುತಲಿ । ಬಾಳ
ಉರುವಕಿಚ್ಚಿಗೆ ಘೃತನೆರಿದಂತೆ ಆಡುವ
ಬಿರಿಮಾತು ಯಾಕೆಂದು ಅಳಲಿ ಧರ್ಮಜನು ॥೧೧೬॥

ತಪಸಿ ಶಿರೋಮಣಿ ವ್ಯಾಸ ತಿಳಿದು ಚಿಂತಿ
ವ್ಯಾಪಕದಿಂದ ಬಂದು ಶೀಘ್ರದಲಿ । ಆಗ
ಧರುಣಿಪತಿಯು ಕಂಡು ಮಮತೆಯಲಿ । ರತ್ನ
ನವಪೀಠದೊಳಗೊಯ್ದು ಇರಸುತಲಿ ।
ಶ್ರೀಪಾದ ಕಮಲಕ್ಕೆ ನಮಿಸಲು ಬಳಲಿದ
ಭೂಪ ಮುಕುಟವ ಎತ್ತಿದಾದಯದೀ ॥೧೧೭॥

ಇಳೆಪತಿ ಈ ಕ್ಷಣ ತಿಳಿಸಿ ಜ್ಞಾನವ ತನ್ನ
ಸ್ಥಳಕತ್ತ ಗಮಿಸಿಯತೀಶ್ವರನು । ಶರ
ಬಳಿಕಿತ್ತ ನಳಿನಾಕ್ಷ ಫಲ್ಗುಣನು । ಆಗ

ಖಳರ ಸಂದಣಿಯೆಲ್ಲಾ ಜೈಸಿದನು । ಕೃಷ್ಣ
ಅಳಿಯನಳಿದನೆಂದು ತಿಳಿದಾಗ ಮನದೊಳು
ನಳಿನಾಬ್ಧಿಗಿಳಿದನು ವರುಣ ವಾರಿಧಿಗೆ ॥೧೧೮॥

ಫಲ್ಗುಣ ನಡಿಯಿನ್ನ ಕೌರವ ಯುದ್ಧವ
ಮುಳಿಧನೆಂಬುತ ರಥ ತಿರುವುತಲಿ । ಕಂದ
ಅಳಿದನೆಂಬುವ ಸುದ್ದಿ ಉಸುರದಲಿ । ಶ್ರಮ
ಕಳಿದು ಹೋಗುವೆನೆಂದು ಸರಿಸಿಯಲಿ । ರಥ
ಇಳಿಸಿ ಕಿರೀಟಿಯು ಕಪಟದಿ ಮುಳುಗಿಸಿ
ತಿಳಿಸಿದಾನಭಿಮನ್ಯು ಮಡಿದನೆಂಬುದನು ॥೧೧೯॥

ಜಲದಿಂದ ಬಿಗಿದೆದ್ದು ಎಲೊ ಕೃಷ್ಣ ಅಂಬರ
ದಲಿ ಧನಿಯಾದಿತು ಸಮರದಲಿ । ಇಂದು
ನೆಲನ ಹಿಂಗಿದ ಕಂದನೆಂಬುತಲಿ । ಪಾರ್ಥ
ತಳಮಳಗೊಂಬುತ ಕಣ್ಣಿನಲಿ । ಸೂಸಿ
ಜಲಧಾರಿಗೊಂಡಾವು ಕನಲಿದ ದೇಹಕ್ಕೆ
ಬಿಲ್ಮಸೆದಂಬರ ನಟ್ಟಂತೆ ನರಗೆ ॥೧೨೦॥

ಪುತ್ರನ ಚಿಂತಿಲಿ ಹತ್ತಿದ ರಥ ತಿರು
ವುತ್ತ ಪುರಕೆ ಬರುತ್ತೀತನಿಗೆ । ದುಃಖ
ಚಿತ್ತದಿ ಸೂಚನೆ ಆ ಗಳಿಗೆ । ಬಹು
ಕುತ್ತಿಗೆ ಬಿಗಿದಾವು ಪಾರ್ಥನಿಗೆ । ಪುರ
ಪೊತ್ತ ಮುನೀಯೆನ್ನ ಬಳಲಿಸಬ್ಯಾಡವೊ
ಸತ್ಯವ ನುಡಿಯೆಂದನಾವಾಗ ನರನು ॥೧೨೧॥

ಧೃಡಗೆಡಬ್ಯಾಡವೊ ಫಲ್ಗುಣ ನಡಿ ನೀನೆಂದೊಡ
ಗೂಡಿ ಇಪ್ಪೂರು ಬರುತಿಹರು । ಸೂರ್ಯ
ಅಡಗಿದೆ ಗಗನದೊಳಂದದಲು । ಮತ್ತ
ಜಡಜಾತ ನಿಲ್ಲದು ಸರಸಿಯೊಳು । ನೋಡಿ
ದಡಲುರ ವಿಪರೀತ ಕಾಣಲು ಪಾರ್ಥಗ
ಕಡು ಭಯವಾಯಿತು ಪೊಕ್ಕನು ಪುರವಾ ॥೧೨೨॥

ಬಂದರು ರಾಜಬೀದಿಯೊಳೋಳು ಪಾರ್ಥನ
ಕಂದ ಮುಂಬರುವುದ ಕಾಂಬುವನು । ಮುದ್ದು
ನಂದನ ಇರವುದು ನೋಡುವೆನು । ವೈರಿ

ಕೊಂದನೆಂಬುದು ನಾನು ಕೇಳುವೆನು । ಮನ
ನೊಂದಿ ದೇಹದ ಕಳೆಗುಂದಿ ಬಳಲಿ ನರ
ಬಂದು ಪೊಕ್ಕನು ಆಗ ರಾಜ ಮಂದಿರವಾ ॥೧೨೩॥

ಹೊಕ್ಕು ನೋಡಲು ಭಟರೆತ್ತೆತ್ತು ಮುಖ ಮುಸು
ಕಿಕ್ಕಿದ.ಬಲವೆಲ್ಲಾ ಕಾಣುತಲಿ । ಮಗ
ಸತ್ತನೆಂಬುವ ಸುದ್ದಿ ಕೇಳುತಲಿ । ಆಗ
ಉಕ್ಕಿತು ಕೋಪವು.ಮುಸುಗುತಲಿ । ಕಂಡು
ಮುಕ್ಕುಂದ ಯಾದವ ಗಡಣದೊಳಗೆಂಬುತ
ಹೊಕ್ಕ ಆಡಿದನಾಗ ಬಂದು ಸೌಭದ್ರಿ ॥೧೨೪॥

ಕಂದಿದ ಕಾಂತನ ಮುಂದೆ ಧಪ್ಪನೆ ಬಿದ್ದು
ಕಂದನು ಎಲ್ಲಿಹನೆಂಬುತಲಿ । ನಯ
ದಿಂದಾಡ ಪೋಗ್ಯಾನು ಓಣಿಯಲಿ । ನಾರಿ
ನಂದಡಿಯೊಳು ಬಿದ್ದು ಹೊರಳುತಲಿ । ಇಂದ್ರ
ನಂದನ ಕಣ್ಣೀರು ಸುರಿದಾವು ಯಮ
ನಂದನ ಮುಖವನ್ನು ನಿಂತು ನೋಡಿದನು ॥೧೨೫॥

ಬಳಲಿ ಯುದ್ಧದಿ ನಾನು ಬರಲಾಗಿ ತಾ ಬಂದು
ಪೊಳವ ರಥವನೇರಿ ಆಡುವನು । ದೇಹ
ದೊಳಗ ನಟ್ಟಿವ ಘಾಯ ನೋಡುವನು । ಯುದ್ಧ
ಗಳ ಮಾಡಿ ದಣಿದ್ಯಾ ನೀನೆಂಬುವನು । ಎನ್ನ
ಬಳಲಿಕಿ ಹೋಗದು ಭೂಪತಿ ಕಂದನ್ನ
ಸುಳುವು ಕಾಣೆನು ಬೇಗ ತಂದು ತೋರೆನಲು ॥೧೨೬॥

ವರವ್ಯೂಹದೊಳು ಪೊಕ್ಕು ಸಾವುದ್ಯಾತಕ್ಕೆಂದು
ಹೊರಗಣ ಮಾರಿಯು ಹೊರಗ್ಹೋಗಲಿ । ಎಂದು
ಧುರಕಟ್ಟಿ ಕೊಂದಿರಿ ಮಮತೆಯಲಿ । ಕಿಚ್ಚು
ಸುರಿದಿರಿ ಒಡಲೊಳಗೆಂಬುತಲಿ । ಬಹಳ
ಮರಗಿಸಬ್ಯಾಡವು ಭೂಪತಿ ಮಗುವಿಗೆ
ಮರಣಾವ ತಂದಾವ ದಾವನ್ಹೇಳೆನಲು ॥೧೨೭॥

ಕಂದವ್ಯೂಹದಿ ಹೋಗಿ ಸಿಕ್ಕನೆಂಬುತ ಬೇಗ
ದಿಂದಲಿ ಕಳುವಿದೆ ಕುಮುಕವನು । ಇರ್ವ
ಮುಂದೆ ಬಾಗಿಲದೊಳು ಜಯದ್ರಥನು । ಬಲು ಬಲು

ಹಿಂದೆ ಕಾದಲು ಕಾಣೆ ಕೋಟೆಯುನು । ಹೊಕ್ಕೀ
ವೆಂದರೆ ಬಿಡದೆ ಕಟ್ಟಿದ ಮುಂದೆ ಬಾಲನ
ಕೊಂದವ ಸೈಂಧವನೆಂದು ಪೇಳಿದನು ॥೧೨೮॥

ಕೇಳಿದಾಕ್ಷಣ ನರ ತಾಳಿ ಕೋಪದಿ ಅಯ್ಯೊ
ಖೂಳನಿಂದಕನಾದ ಸೈಂಧವನ । ದಿನ
ನಾಳೆ ಹೊತ್ತಿರಲಾಗೆ ಸಾಯಿವವನ । ಶಿರ
ಹೋಳಮಾಡದೆ ಬಿಟ್ಟೆನಾ ಅವನ । ಈಗ
ಬೀಳುವೆ ಅಗ್ನಿಯೊಳ್ ಸಟೆಯಲ್ಲ ಎಂಬುತ
ಸುರಪನ ತನಯುನು ಶಪಥ ಮಾಡಿದನು ॥೧೨೯॥

ನರನ ಆರ್ಭಾಟಕ್ಕ ನಡಗಿತು ಸುರಲೋಕ
ಪುರಂಧರ ಬೆದರಿ ತಾ ಬಾಯ್ಬಿಡಲು । ಯುಮ
ಪುರದಿಂದ ಗುಳೇವ ತಗದಿರಲು । ಆಗ
ತರುಣಿಯು ಈಶಾನ್ಯ ಮೊರೆಹೋಗಲು । ಆಗ
ತ್ವರಿತದಿ ಶ್ರೀಹರಿ ಬಂದೆಲೊ ಪಾರ್ಥನೆ
ಸರಿ ನಿನ್ನ ಶಪಥಕ್ಕೆ ಮೆಚ್ಚಿದೆ ನಾನು ॥೧೩೦॥

ನಡಿ ತಡವ್ಯಾತಕೆಂದೊಡಗೂಡಿ ನರಹರಿ
ಪೊಡವಿ ಬಿರುವಂತೆ ವಾದ್ಯದಲಿ । ಮುಂಗೈ
ಕಡಿದು ಚೀರುತ ಸಿಂಹನಾದದಲಿ । ಪೊಕ್ಕು
ಕೆಡವಿದ ನರಬಲ ವ್ಯೂಹದಲಿ । ಮುನ್ನ
ನಡುವೆ ಸೈಂಧವನಿಟ್ಟು ಬಲಸುತ್ತ ಕವಿದಾರು
ಅಡಗಿಸಿದರು ಆರು ಕಾಣದಂದದಲಿ ॥೧೩೧॥

ಎತ್ತೆತ್ತ ನೋಡಲು ಸುತ್ತಲೆ ಪಾರ್ಥನ
ಮುತ್ತಿದ ಬಲವ ಸಂಹರಿಸಿದನು । ನೋಡು
ಮತ್ತೆಲ್ಲಿ ಕಾಣೆನು ಸೈಂಧವನು । ಕೃಷ್ಣಾ
ಹೊತ್ತು ಸ್ವಲ್ಪುಳದೀತು ನೋಡಿದನು । ಆಗ
ಎತ್ತಿದ ಚಕ್ರವ ಸೂರ್ಯ ಮಂಡಲಕೆಲ್ಲಾ
ಕತ್ತಲ ಮುಸುಕಿತು ಹತ್ತು ದಿಕ್ಕುಗಳು ॥೧೩೨॥

ನುಡಿದಂಥ ಭಾಷೆಗೆ ಹಾನಿ ಬಹುವದೆಂದು
ಕಡಿಸಿ ಧನಂಜಯು ಕೊಂಡವನು । ಕಾಷ್ಠ
ಸುಡಸಿ ಮಾಡಿದನಾಗ ಅಗ್ನಿಯನು । ಬಿಲ್ಲು

ಹಿಡಿದೆತ್ತಿ ಗಮಕಾದಿ ತಿರಗಿದನು । ಕೊಂಡ
ದುಡಕುವ ಸಮಯಕ್ಕೆ ಹರಿಯನಿಂದಿಸುಯೆಂದು ಸಂಶಯು
ಹಿಡಿಯದೆ ಹೊಡಿಯೆಂದಲಾ ಶಿರಗಡಿದಾ ॥೧೩೩॥

ಮತ್ತೊಂದು ಬಾಣವ ಎತ್ತಿದಾ ಚೆಲ್ವ ಶಿರ
ಹೆತ್ತ ತಾತಯ್ಯನ ಹಸ್ತದಿ ಬೀಳುತಲಿ । ನೋಡಿ
ಪೃಥ್ವಿಗೆ ಚೆಲ್ಲಿದ ಶೀಘ್ರದಲಿ । ಆಗ
ಮಸ್ತಕ ಶತಹೋಳು ಆಗುತಲಿ । ನೋಡಿ
ಚಿತ್ತಜ ಪಿತನ ಕೌತುಕವಿದು ಹರುಷದಿ
ಚಿತ್ತಿಟ್ಟು ಕೇಳಿರೆಂದರವಿದ ಮುನಿಪಾ ॥೧೩೪॥

ವಸುಧೆಯೊಳೊಪ್ಪುವ ಎಸೆವ ಶ್ರೀ ಕುಂದಗೋಳ
ಅಸಮಾಕ್ಷ ಗುರುಪಾದ ಕರುಣದಲಿ । ಅತಿ
ಪ್ರಸ್ವಡೆಹೇಮ ದ್ರೋಣ ಪರ್ವದಲಿ । ತೆಗ
ದುಸುರಿದೆನಿದರೊಳು ತಪ್ಪಿರಲಿ । ನೋಡಿ
ರಸಿಕರು ಜರಿಯದೆ ಮುರಿಬ್ಯಲಿಂಗಗರ್ಚಿಸಿ (?)
ಹಸನಾಗಿ ಲಾಲಿಸರಿ ಕುಶಲಕೋವಿದರು ॥೧೩೫॥

• •

ತಾಳಿಕೋಟಿ ದ್ಯಾಮವ್ವ

(ಜಾನಪದ ಸ್ಥಳೀಯ ಕಥೆ)

ಅರವಿಂದ ಮಾಲಗತ್ತಿ

ತಾಳಿಕೋಟೆಯಲ್ಲಿ ದ್ಯಾಮವ್ವ ಎನ್ನುವ ಹೆಸರಿನಲ್ಲಿ ಗತಿಸಿಹೋದ ಒಂದು ವ್ಯಕ್ತಿಯ ಸುತ್ತ ಹಬ್ಬಿಹರಡಿರುವ ಜನಪದ ಕಲ್ಪನೆಗಳು ಅಲ್ಲದೆ ಆ ಘಟನೆಯ ಕೆಲ ಪಳಿಯುಳಿಕೆಗಳನ್ನು ಜನ ತೋರಿಸುತ್ತಿದ್ದು, ಜನಪದರ ಕಲ್ಪನಾಮಯವಾದ ಮನ ಸ್ಥಿತಿಯನ್ನು ಅಧ್ಯಯನ ಮಾಡಲು ಆಕರ್ಷಕ ವಸ್ತುವಾಗಿದೆ. ಕೋಟೆಗೆ ಬಲಿ ಕೊಡು ವದು ಇಲ್ಲಿನ ಘಟನೆಯ ಕೇಂದ್ರ ಆಶಯವಾಗಿದೆ. ಈ ಕುರಿತಾಗಿ ವಿವರವಾದ ಮಾಹಿತಿಯನ್ನು ಕೊಡಲು ಈ ಲೇಖನದಲ್ಲಿ ಪ್ರಯತ್ನಿಸಲಾಗಿದೆ.

ಆರಾರಾಯರು ಬಡವರಾದರು ಹೃದಯದಿಂದಾ ಶ್ರೀಮಂತರಾಗಿದ್ದರು. ಇವರ ಹೊಟ್ಟೆಯಲ್ಲಿ ದ್ಯಾಮವ್ವ ಮಗಳಾಗಿ ಹುಟ್ಟಿದಳು. ಚಿಕ್ಕಂದಿನಲ್ಲಿಯೇ ತಾಳಿಕೋಟೆಯ ಬೂರಾರಾಯರ ಮನೆಗೆ ಸೊಸೆಯಾಗಿ ಹೋದಳು, ಇವರಿಗೆ 'ಗುಣಿಗರ ಹೊಟ್ಟಿ ಭರಮಣ್ಣ' ಎಂದು ಕರೆಯುತ್ತಿದ್ದರು. ಇವರಾದರು ಹೇಳಿ ಕೊಳ್ಳುವಷ್ಟು ಶ್ರೀಮಂತರೇನಲ್ಲ. ಇದ್ದುದರಲ್ಲಿಯೇ ಉಂಡುಟ್ಟು, ಕೊಟ್ಟು ನಾಲ್ಕು ಜನರಿಗೆ ಬೇಕಾದವರಾಗಿದ್ದರು.

ದ್ಯಾಮವ್ವ ಗಂಡನ ಮನೆಗೆ ಹೋದ ಹನ್ನೆರಡು ವರ್ಷಗಳ ನಂತರ ಆರಾ-ರಾಯರಿಗೆ ಮತ್ತೊಬ್ಬ ಮಗ ಹುಟ್ಟಿದ. ಅವ ಸುಲಿಯಲ್ಲ. ಸುಲಿಯಲ್ಲ ಬಹಳ ಹಟವಾದಿ ಮತ್ತು ಕಿಡಗೇಡಿ. ಏನೇ ಅದರೂ ತನ್ನದೆ ನಡೆಯಬೇಕು ಎನ್ನುವವ. ಚಿಣಿಯಾಟ ಆಡುವಾಗ, ಚಂಡಾಡುವಾಗ ದಾರಿಯಲ್ಲಿ ನೀರಿಗೆ ಹೋಗುವ ನಾರಿಯರ ಕೊಡಕ್ಕೆ ಬಡಿದು ಕೊಡ ಒಡೆದಾಗ—

> ಅಕ್ಕನ ಕಾಣದ ಮೂಳ, ತಂಗಿನ ಕಾಣದ ಮೂಳ
> ಅಕ್ಕತಂಗೇರ ಇದ್ದರ ಎಷ್ಟೊಂದ ಮೆರದಿತ ॥ಕೋಲ॥

ಎಂದು ಬೈಯಿಸಿಕೊಳ್ಳುತ್ತಿದ್ದ ನೀರು ಹೊರುವ ನಾರಿಯರಿಂದ

ದಿನಾ ಬೆಳಗಾದರೆ ಬೈಯಿಸಿಕೊಳ್ಳುತ್ತಿದ್ದ ! ಸುಲಿಯಲ್ಲ. ಸಾಕಾಗಿ ತನ್ನ ತಾಯಿಗೆ ನನಗಾರು ಅಕ್ಕತಂಗಿಯರೆ ಇಲ್ಲವೆ ಎಂದು ಕೇಳಿದಾಗ 'ಇದ್ದಳಪ್ಪ ನಿನಗೂ

ಒಬ್ಬಕ್ಕಿ ಅಕ್ಕ. ಆದರ ಏಳು ವರ್ಷ ಸಣ್ಣಕಿ ಇರಲಾಕಾಗೆ ಆಕಿಗಿ ತಾಳಿಕೋಟಿಗೆ ಮಾಡಿ ಕೊಟ್ಟೆ. ನೀ ಹುಟ್ಟಿದ್ದು ಆಕಿಗಿ ಗೊತ್ತಿಲ್ಲ.' ಎಂದು ಹೇಳಿದಾಗ ಸುಲಿಯಲ್ಲ 'ಬುತ್ತಿ ಕಟ್ಟು, ಹೋಗಿಬರತೀನಿ' ಎಂದಾಗ ತಾಯಿ ಸಂತಸದಿಂದಾ ಪಟೂಳ್ಳಿ ಸೀರಿ ಹರದು ಬುತ್ತಿ ಕಟ್ಟುವಾಗ ಹಲ್ಲಿ 'ಲೊಟ್ ಲೊಟ್ ಅಂತಾ ನುಡಿತಾ ಇತ್ತು. ಬುತ್ತಿ ತೆಗೆದು ಕೊಂಡು ಹೋಗುವಾಗ ಬೆಕ್ಕು ಅಡ್ಡ ಬಂದಿತು. ಹೊಸ್ತಿಲ ದಾಟುವಾಗ ಬಾಗಿಲು ತಲೆಗೆ ಬಡೆಯಿತು. ಇದನ್ನೆಲ್ಲ ನೋಡಿ ತಾಯಿ ಮನದಲ್ಲಿ ಕಸವಿಸಿಗೊಂಡು—

ಬ್ಯಾಡಪ್ಪ ನನ ಮಗನೆ ಅಪಶಕುನ ಆದಾವ
ಅಪಶಕುನ ಇವು ಶಕುನ ಅವು ನಮ್ಮ ತಲಿಮ್ಯಾಲ ॥ಕೋಲ॥

ಸುಲಿಯಲ್ಲ ಯಾವುದನ್ನು ಲೆಕ್ಕಿಸದೆ ಹೊರಟು ನಿಂತಾಗ ತಾಯಿ 'ಹೋಗು ವಾಗ ಗಣಜಲಗಿ ಗಿಡ ಹಿಡಿಬ್ಯಾಡ, ಹಾಳಬಾವಿ ಇಣಕಿ ನೋಡಬ್ಯಾಡ ಎಂದು ಹೇಳಿ ಕಳುಹಿಸಿಕೊಟ್ಟಳು. ಇವೇ ಮಾತನ್ನೇ ಮರುಕಳಿಸುತ್ತ ಇದರಲ್ಲೇನು ಇರಬಹುದೆಂದು ಕುತೂಹಲದಿಂದ ತಾಯಿಯ ಮಾತನ್ನು ಪರೀಕ್ಷಿಸತೊಡಗಿದ ದಾರಿಯಲ್ಲಿ ಗಣಜಲಿ ಗಿಡ ನೋಡಿದ. ಮುಟ್ಟಿ ನೋಡಿದಾಗ ಕೈಯಲ್ಲಾ ರಕ್ತ ವಾಯಿತು. ಹಾಳುಬಾಂವಿ ಇಣುಕಿ ನೋಡಿದ. ತಲೆಯ ಮೇಲಿನ ರುಮಾಲು ಬಾಂವಿ ಯಲ್ಲಿ ಬಿದ್ದಿತು. ತನ್ನ ತಾಯಿ ಹೇಳಿದ ಮಾತು ಅರ್ಥವತ್ತಾಗಿದೆ ಎಂದು ತಿಳಿದು ಕೊಂಡು ತಾಳಿಕೋಟಿ ಊರದಾರಿ ಹುಡುಕುತ್ತ ನಡೆದ.

ದಾರಿಯಲ್ಲಿ ದನ ಕಾಯುವವನೊಬ್ಬ ಭೆಟ್ಟಿಯಾದ. 'ತಾಳಿಕೋಟಿಯ ದಾರಿ ಯಾವುದು ?' ದನ ಕಾಯುವವ ಗೊತ್ತಿದ್ದರೂ 'ನನಗೆ ಗೊತ್ತಿಲ್ಲ' ಎಂದು ಹೇಳಿದ್ದ ಕ್ಕಾಗಿ ಸುಲಿಯಲ್ಲ 'ಮೆಟ್ಟ ಚಪ್ಪಲಿ ಚೋಳಾಗಲಿ, ಕೈಯ ಕೋಲು ಹಾವಾಗಲಿ. ಹೊತ್ತಿರುವ ಕಂಬಳಿ ಹದ್ದಾಗಿ ಹಾರಲಿ' ಎಂದು ಶಾಪ ಕೊಟ್ಟು ಮುಂದೆ ನಡೆದ. ಕೊಟ್ಟ ಶಾಪ ಸುಳ್ಳಾಗಲಿಲ್ಲ. ಹೊಲದಲ್ಲಿ ಬಿತ್ತುವವನಿಗೆ ಅದೇ ಪ್ರಶ್ನೆ ಕೇಳಿದಾಗ 'ಬಾಳಿ ಗಿಡ ಬಲಕ ಮಾಡಿ, ನಿಂಬೆ ಗಿಡ ಎಡಕ ಮಾಡಿ, ನಾಗಸಂಪಗಿ ಹಿಡದು ನಡುವೆ ಹಾಯ್ದುಹೋಗು.' ಎಂದು ಹೇಳಿದ್ದರಿಂದ ಅವರಿಗೆ ಮೆಟ್ಟಿದ ಚಪ್ಪಲಿ ಬೆಳ್ಳಿ ಯಾಗಲಿ, ಹೆಗಲ ಮೇಲಿನ ಬಾರಕೋಲು ಬಂಗಾರವಾಗಲಿ, ಹೊತ್ತಿರುವ ಛತ್ರರಿಕಿ ಕಂಬಳಿಯಾಗಲಿ ಎಂದು ಹರಕೆ ಕೊಟ್ಟು ಹೊರಟು ನಿಂತ.

ಹುಮ್ಮಸದಿಂದ ಊರು ಸೇರಿದಾಗ ಅಕ್ಕನಿಗಾಗಿ ಕುಪ್ಪಸ, ಸೀರೆ, ಬಳೆ, ಆಭ ರಣ, ಕುಂಕುಮ ಅರಸಿಣ ಎಲ್ಲವನ್ನೂ ಖರೀದಿಸಿದ. ವಿಚಿತ್ರವೆಂದರೆ ಎಲ್ಲರೂ ಕೇಳಿದಾಗ ಒಂದೊಂದು ಕೊಡದೆ ಮೂರು ಮೂರಂತೆ ಕೊಟ್ಟಿದ್ದರು. ಜೀರರ ಮನೆಗೆ ಬಂದು ದಂಡಿ ಕಟ್ಟಿಕೊಳ್ಳುವಾಗ ಆಕೆಯೂ ಮೂರು ದಂಡಿ ಕಟ್ಟಿಕೊಟ್ಟಿದ್ದ ರಿಂದ 'ಎಲ್ಲರಿಗೂ ಒಂದೊಂದು ಕೇಳಿದರೆ ಮೂರು ಮೂರು ಕಟ್ಟಿಕೊಡುವರಲ್ಲ ಏಕೆ ?' ಎಂದು ಕೇಳಿದಾಗ—

ದ್ಯಾಮವ್ವಗ ಒಂದಪ್ಪ ದುರಗವ್ವಗ ಒಂದಪ್ಪ
ಹಿಂದ ಬರುವ ಇದಿಮಾಯಿಗಿ ಒಂದೆಂದಳು ಜೀರಿ ॥ಕೋಲ॥

ಅಕ್ಕನಿಗಾಗಿ ಕೊಂಡ ಎಲ್ಲ ಮುತ್ತೈದೆಯ ಸಾಮಾನು ಕಂಬಳಿಯಲ್ಲಿ ಹಾಕಿಕೊಂಡು ಊರ ಬಾಂವಿಯ ಮೇಲೆ ಕುಳಿತು ನೀರಿಗಾಗಿ ಬಂದ ಹೆಣ್ಣು ಮಕ್ಕಳಿಗೆ ತಾನು ಬಂದ ಸುದ್ದಿ ತಮ್ಮಕ್ಕನಿಗೆ ತಿಳಿಸಲು ಹೇಳಿದಾ. ಅದೇ ರೀತಿ ಅವರು ದ್ಯಾಮವ್ವನಿಗೆ ಬಂದು ತಿಳಿಸಿದಾಗ ನನಗೆಲ್ಲಿಯ ತಮ್ಮ—ಅಣ್ಣಾ, ಅಣ್ಣಾ—ತಮ್ಮದೇರು ಇದ್ದವರು ನೀವು ಅಣಕಲ ಆಡತಿರಿ' ಎಂದು ದೂರುವಳು. ಕೊರಳಾಣಿ ಮಾಡಿದಾಗ ನಂಬಿ ಗೆಳತಿಯರೊಂದಿಗೆ ತಮ್ಮ ತಂದ ಎಲ್ಲ ವಸ್ತ್ರಾಭರಣ ತೊಟ್ಟು ಕಳಶದೊಂದಿಗೆ ಮುಂದೆ ದ್ಯಾಮವ್ವ ಹಿಂದೆ ಸುಲಿಯಲ್ಲ ಬಂದು ಮನೆ ಸೇರಿದರು

ಈ ಮೊದಲು ತಾಳಿಕೋಟಿಯ ಕೋಟೆ ಗೋಡೆಯನ್ನು ಕಟ್ಟುವಾಗ ನಿಲ್ಲದ್ದುದಕ್ಕಾಗಿ ಹೊತ್ತಿಗೆ ತಗೆಸಿ ಜೋತಿಷಿಗಳನ್ನು ಕೇಳಿದಾಗ ಅವರು ಪೂರ್ವದಿಕ್ಕಿನಿಂದ ಅಮವಾಸೆಯ ದಿನ ಯಾರು ಬರುವರು ಅವರಿಗೆ ಹಾರ ಬೇಡಿದೆ' ಎಂದು ಹೇಳಿದ್ದರು. ಅದೇ ರೀತಿ ಊರಲ್ಲಿ ಡಂಗುರವ ಸಾರಿದ್ದರು. ಅಲ್ಲದೆ ಅದರ ಮೇಲೆ ನಗದು ಬಹುಮಾನವು ಇಟ್ಟಿದ್ದರು. ಪೂರ್ವದಿಕ್ಕಿನಿಂದ ಬಂದ ಸುಲಿಯಲ್ಲನನ್ನು ಕಂಡ ದ್ಯಾಮವ್ವನ ನಾದುನಿ ಹಣದಾಸೆಗಾಗಿ ಹೋಗಿ ಜವಾನರಿಗೆ ತಿಳಿಸಿ ಬಂದಳು.

ತಮ್ಮಸಿಲ್ಲ ಎಂದು ತಿಳಿದುಕೊಂಡಿದ್ದ ದ್ಯಾಮವ್ವಳಿಗೆ ತಮ್ಮ ಮನೆಯ ಬಾಗಿಲ ವರೆಗೆ ಬಂದಿದ್ದರಿಂದಾ ಎಲ್ಲಿಲ್ಲದ ಸಂತಸ ದ್ಯಾಮವ್ವನಿಗೆ. ಜಳಕಕ್ಕಾಗಿ ಬಿಸಿನೀರು ಕಾಸಿ, ಕಂಚಿನ ಬಟ್ಟಲಲ್ಲಿ ಎಣ್ಣೆ ತಂದು ತಲೆಗೆ ಹಚ್ಚುವಾಗ, ಜವಾನರು ಬಂದು ಸುಲಿಯಲ್ಲನನ್ನು ಕೇಳಿದಾಗ ನನಗೆ ತಮ್ಮನಿಲ್ಲ—ಅಣ್ಣನಿಲ್ಲ ಎಂದು ಎಷ್ಟು ಗೋಗರೆದರೂ ಕೇಳಲಿಲ್ಲ. ಮನೆಯಲ್ಲ ಗಸ್ತಿ ಹಾಕಿ ಸುಲಿಯಲ್ಲನನ್ನು ಹೊರಗೆ ಎಳೆ ತಂದು ರಟ್ಟೆಗೆ ಹಗ್ಗಕಟ್ಟಿ ಎಳೆದುಕೊಂಡು ಹೊರಟಾಗ—

ಅತ್ತಿ ಸತ್ತರ ಅತ್ತಿನ ಕಂಡೇನ
ಗಂಡ ಸತ್ತರ ಗಂಡನ ಕಂಡೇನ— ॥ಕೋಲ॥

ಮಕ್ಕಳ ಸತ್ತರ ಮಕ್ಕಳ ಕಂಡೇನ
ಬೆನ್ನಿಗಿ ಬಿದ್ದ ತಮ್ಮ ಸತ್ತರ ನಾನೆಂದ ಕಂಡೇನ ॥ಕೋಲ॥

ಎಂದು ವಿಚಾರಿಸಿ, ಜವಾರನ್ನು 'ತಡೆದು' ಆಹುತಿ ಕೊಡುವದಾದರೆ ಮೊದಲು ನನಗೆ ಕೊಡಿ ನಂತರ ನನ್ನ ತಮ್ಮನಿಗೆ' ಎಂದು ಹೇಳಿ ಮುಂದೆ–ಮುಂದೆ ದ್ಯಾಮವ್ವ ಹಿಂದೆ-ಹಿಂದೆ ಸುಲಿಯಲ್ಲನನ್ನು ಕರೆದೊಯ್ದು ಕೋಟೆ ಗೋಡೆಯಲ್ಲಿಯೇ ಮೂರು ವರ್ಷದ ವರೆಗೆ ಸುಲುವಷ್ಟು ಕಾಳು–ಕಡಿ, ಬೀಸುವ ಕಲ್ಲು, ನೀರು ಕೂಡಾ ಇಟ್ಟು ಇಬ್ಬರಿಗೂ ಗೋಡೆಯಲ್ಲಿ ಹಾಕಿ ಕಟ್ಟಿದರು.

ಒಂದೊಂದ ಕಲ್ಲಿಗಿ ಹೊಂದ್ಯಾವ ತಾಳಿಕೋಟೆ ಕ್ವಾಟಿ
ಮೂರೆಂಟು ಕಲ್ಲಿಗಿ ಮುಗದವ ತಾಳಿಕೋಟಿ ಕ್ವಾಟಿ— ॥ಕೋ॥

ಮೂರು ವರ್ಷಗಳವರೆಗೂ ದ್ಯಾಮವ್ವ ನಸುಕಿನಲ್ಲಿಯೇ ಎದ್ದು ಬೀಸುತ್ತಿದ್ದ ಳಂತೆ. ಬೀಸುಕಲ್ಲಿನ ಸಪ್ಪಳಕೆ ನೆರಮನೆಯ ಅತ್ತಿಯಂದಿರು ದ್ಯಾಮವ್ವ, ಪದಾ ಹಾಡಿ ಬೀಸಾಕತ್ತ್ಯಾಳ ಏಳ್ರಿ ಎಂದು ಬೈ ಬೈದು ಸೊಸೆಯಂದಿರರಿಗೆ ಎಬ್ಬಿಸು ತ್ತಿದ್ದರಂತೆ. ಬೇಸತ್ತ ಸೊಸೆಯರು 'ಏನ ಮಾಲಗ್ಯಾಳ ಇಕಿ ಸೊಲ್ಲ ಅಡಗಲಿ' ಎಂದು ದ್ಯಾಮವ್ವನಿಗೆ ಶಪಿಸುತ್ತಿದ್ದರಂತೆ.

ಯಾವ ಬಡವಿಯಾದರು ಬಂದು 'ನನ್ನ ಮನೆಯಲ್ಲಿ ಕಾರಣವಿದೆ ನನಗೆ ಒಡವೆ ಕೊಡು' ಕೇಳಿದರೆ, ಹೊತ್ತು ಹೊರಡುವದರಲ್ಲಿಯೇ ಮಗಿಯಲ್ಲಿ ಆಭರಣಗಳನ್ನು ಹಾಕಿ ಕೋಟೆಯ ಗೋಡೆಯ ಕಿಡಕಿಯಿಂದ ಹೊರಗಿಡುತ್ತಿದ್ದಳಂತೆ. ಆಭರಣ ಒಯ್ದುವರು ಮತ್ತೆ ಮರಳಿಸುತ್ತಿದ್ದರಂತೆ. ಒಬ್ಬ ಲಜ್ಜಗೇಡಿ ಹೆಂಗಸು ಒಯ್ದು ಆಭರಣಗಳನ್ನು ಮರಳಿ ತಂದು ಕೊಡದಿದ್ದ ಕಾರಣ ಅವರ ಮನೆತನವೇ ಸರ್ವನಾಶ ವಾಗಿ ಹೋಗಿದೆಯಂತೆ.

ತಾಳಿಕೋಟಿಯ ಅಗಸಿಯಲ್ಲಿ ಹೋದರೆ ದ್ಯಾಮವ್ವನಿಗೆ ಹಾಕಿ ಕಟ್ಟಿದ ಕವಾ ನಿನ ಗುರ್ತು ಸಿಗುತ್ತದೆ. ಆದರೆ ಈಗ ಅದು ಮುಚ್ಚಿ ಚಿಕ್ಕದೊಂದು ಗುಡಿಮಾಡಿ ದ್ದಾರೆ. ಅದರಲ್ಲಿ ದ್ಯಾಮವ್ವನದೊಂದು ಕಲ್ಲು, ಬಲಭಾಗದಲ್ಲಿ ಸುಲಿಯಲ್ಲನ ಗುರುತಿನ ದೊಂದು ಕಲ್ಲು ಇಟ್ಟಿದ್ದಾರೆ. ಅಗಸಿಯ ಒಳಭಾಗದ ಎಸ್. ಸಿ. ಹಾಸ್ಟೇಲ್ ಎದುರು ಗಡೆಯಲ್ಲಿ ದ್ಯಾಮವ್ವನ ಬೀಸುವ ಕಲ್ಲು ಇದೆ. ಇದರ ಅಗಲ ೪ ಫೂಟು, ಎತ್ತರ ೧೬ ಇಂಚು. ಕಲ್ಲಿನ ಕೊಡ ರುಬ್ಬುವ ಕಲ್ಲು ಅಗಸಿಯ ಬಾಗಿಲಲ್ಲಿಯೇ ಹಾಕಿ ಹುಗಿ ದಿದ್ದಾರೆ. ಇವೆಲ್ಲ ನಾವು ಈಗಲೂ ಅಲ್ಲಿ ಕಾಣಬಹುದಾಗಿದೆ.

ಈ ಕಥೆಯನ್ನು ಹೇಳಿದವರು :

ಮಲ್ಲಮ್ಮ ದವಲಪ್ಪ ಮುರಾಳ, ವಯಸ್ಸು : ೭೫
ಹುಟ್ಟೂರು : ತಾಳಿಕೋಟಿ, ಇದ್ದೂರು : ಮುದ್ದೇಬಿಹಾಳ

ಈ ಕಥೆಯನ್ನು ಹಾಡಿ ತೋರಿಸಿದವರು :

ಯಶೋದಾಬಾಯಿ ಜಗತಾಪ (ಇತರರು), ವಯಸ್ಸು : ೩೮
ಊರು : ತಾಳಿಕೋಟಿ, ಹುಟ್ಟೂರು : ಬಿಜಾಪೂರ

ಸಂಗ್ರಹಕಾರರು :

ಅರವಿಂದ ಮಾಲಗತ್ತಿ, ಎಂ. ಎ. (ಜಾನಪದ)
ಸಂಶೋಧನ ವಿದ್ಯಾರ್ಥಿ, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೩
ಹುಟ್ಟೂರು : ಮುದ್ದೇಬಿಹಾಳ

• •

ಕವಿಗಳ ವರ್ಗೀಕರಣ ಮತ್ತು ಕಾವ್ಯಾಭ್ಯಾಸ

ಬಿ. ಎ. ಸನದಿ

ಕವಿಚರಿತೆ, ಕಾವ್ಯಾಭ್ಯಾಸ, ರಸಗ್ರಹಣ, ವಿಮರ್ಶೆ ಅಥವಾ ಮೌಲ್ಯಮಾಪನಗಳ ದೃಷ್ಟಿಯಿಂದ ಕವಿಗಳ ಮತ್ತು ಅವರ ಕೃತಿಗಳ ವರ್ಗೀಕರಣ ಮಾಡುವ ಪದ್ಧತಿ ಮೊದಲಿನಿಂದಲೂ ನಡೆದು ಬಂದದ್ದು. ಲಾಕ್ಷಣಿಕರೂ, ಸಾಹಿತ್ಯಚರಿತ್ರಕಾರರೂ ಆಯಾಕಾಲದ ಕವಿಗಳ ಸಾಮಾನ್ಯ ಹಾಗೂ ಅಸಾಮಾನ್ಯ ಅಂಶಗಳನ್ನೆತ್ತಿ ತೋರಿಸಲು, ಇಲ್ಲವೆ ಒಂದು ನಿರ್ದಿಷ್ಟ ಧಾರ್ಮಿಕ, ಸಾಮಾಜಿಕ, ರಾಜಕೀಯ ಪ್ರಗತಿ–ಪುನರುತ್ಥಾನ-ಪರಿವರ್ತನೆಗಳಿಗೆ ಸಂವಾದಿಯಾಗಿ ಹುಟ್ಟಿಬಂದ ಕಾವ್ಯ-ಕಲಾ-ಕೃತಿಗಳು ಆಯಾ ಸಮಾಜದ ಮೇಲೆ ಮಾಡಿದ ಪರಿಣಾಮಗಳನ್ನು ವಿಶ್ಲೇಷಿಸುವ ದೃಷ್ಟಿಯಿಂದಲೂ ಈ ವಿಂಗಡನೆಯ ಕ್ರಮವನ್ನನುಸರಿಸಿದ್ದುಂಟು. ಹಿಂದಿನ ಕಾಲದಲ್ಲಿ ತಮಗೆ ರಾಜಾಶ್ರಯನೀಡಿದವರ ಬಗೆಗೋ, ಬಿರುದು-ಬಾವಲಿಗಳನ್ನು ದಯಪಾಲಿಸಿದವರ ಬಗೆಗೋ, ತಾವು ನೆಚ್ಚಿಕೊಂಡಿದ್ದ ಮತ-ಧರ್ಮ-ತತ್ವಗಳ ಬಗೆಗೋ ನಿಷ್ಠೆಯುಳ್ಳವರಾಗಿದ್ದ ಕವಿಗಳು ವಿವಿಧ ಉದ್ದೇಶಗಳಿಗನುಗುಣವಾಗಿ ವಿಭಿನ್ನ ಮತ್ತು ವಿಶಿಷ್ಟ ರೀತಿ ಶೈಲಿಗಳಲ್ಲಿ ಕಾವ್ಯಸೃಷ್ಟಿ ಮಾಡಿದ್ದುಂಟು. ಆದರೆ ಆಧುನಿಕ ಜೀವನದ ಸಂದರ್ಭದಲ್ಲಿ ಬರೆಯುವ ಬಹುತೇಕ ಕವಿಗಳ ಕಾವ್ಯಸೃಷ್ಟಿಗೆ ಸಮಗ್ರ ಜೀವನ ನಿಷ್ಠೆಯೇ ಕೇಂದ್ರಬಿಂದು. 'ನೀನು ಇಂಥ ಕಾವ್ಯವನ್ನೇ ಬರೆ' ಎಂದು ಇಂದಿನ ಕವಿಗೆ ಯಾರೂ ಆದೇಶ ನೀಡುವಂತಿಲ್ಲ; ನೀಡಿದರೂ ಸ್ವ-ವಿವೇಕ ಮಾನ್ಯತೆಯಿಲ್ಲದೆ ಅವನ ಕಾವ್ಯರಚನೆ ನಡೆಯುವುದೂ ಇಲ್ಲ, ಕವಿಗೆ ಬಾಹ್ಯಪ್ರೇರಣೆಯ ಸ್ವೀಕೃತಿಗೆ ಹೇಗೆ ಸ್ವಂತ ವಿವೇಕದ ಸಮ್ಮತಿ ಬೇಕೋ ಹಾಗೆಯೇ ಅಂತಃಸ್ಫುರಣದ ಕಲಾತ್ಮಕ ಅಭಿವ್ಯಕ್ತಿಗಾಗಿಯೂ ವಿವೇಕದ ಬೆಂಬಲ ಬೇಕು. 'ಸಾಹಿತ್ಯದ ತಿರುಳು ಬೆಳೆಯಬೇಕಾದರೆ ಹೃದಯಾನುಭವಕ್ಕೆ ವಿವೇಕದ ಜೊತೆ ಬೇಕು'[೧] ಈ ದೃಷ್ಟಿಯಿಂದ ಕಾವ್ಯಸೃಷ್ಟಿಯೆಂಬುದು ಕವಿಯ ವೈಯಕ್ತಿಕ ಸಾಧನೆಯೆನಿಸಿದರೂ ಪ್ರಜ್ಞಾಶೀಲ ಕವಿ ಮನಸ್ಸು ಸಾಮೂಹಿಕ ವಿಚಾರವಂತಿಕೆ ವಿವೇಕಗಳ ಕೇಂದ್ರಸ್ಥಾನವಾದುದರಿಂದ ಅವನ ಅಂತರಂಗದಾಳದಲ್ಲೇಳುವ ಭಾವನಾತ್ಮಕ ಅಥವಾ ವೈಚಾರಿಕ ಅಲೆಗಳು ಸಾಮಾಜಿಕ ಅಥವಾ ಜನಸಂಕುಲದ ಪ್ರತಿಸ್ಪಂದನವನ್ನೇ ಪ್ರತಿನಿಧಿಸುತ್ತವೆ. ಈ ಸಂದರ್ಭದಲ್ಲಿಯೇ ಕಾವ್ಯದಲ್ಲಿ ಸಾಮಾಜಿಕ ಪ್ರಜ್ಞೆ, ಸಾಮಾಜಿಕ ಕಳಕಳಿ, ಜೀವನನಿಷ್ಠೆ

೧. ವಿ. ಕೃ. ಗೋಕಾಕ : ನವ್ಯತೆ ಹಾಗು ಕಾವ್ಯಜೀವನ ಪು—೩

ಎಂಬಂಥ ಮೂಲ ಪ್ರೇರಣಾಂಶಗಳು ಮಹತ್ವದ್ದಾಗಿ ಕಾಣುವವು. ಅತ್ಯಂತ ರಮ್ಯ ಭಾವದ ಮತ್ತು ವೈಯಕ್ತಿಕ ಅನುಭವದಿಂದ ಸ್ಫುರಣಗೊಂಡ ಒಂದು ಪ್ರೇಮಗೀತೆ ಕೂಡ ನೂರೊಂದು ಪ್ರೇಮಿಗಳು 'ನಮ್ಮ ನಿತ್ಯದ ಅಮೂರ್ತ ಅನುಭವಗಳಿಗೆ ಕವಿ ಮೂರ್ತಸ್ವರೂಪ ನೀಡಿದ್ದಾನೆ, ಆದ್ದರಿಂದ ಈ ಕವಿತೆ ನಮ್ಮದು' ಎಂದುಕೊಳ್ಳು ವಂತಾದರೆ ಮಾತ್ರ ಕವನಸಂಭವದ ಹಂತದಲ್ಲಿ ವ್ಯಕ್ತಿಗತದಾದದ್ದೂ ಅದರ ಪ್ರಸಾರ ಹಂತದಲ್ಲಿ ಸರ್ವಶ್ರುತವೆನಿಸಿಕೊಳ್ಳುತ್ತದೆ; ಕವನಕ್ಕೂ ಸಮಾಜಕ್ಕೂ ಸಾವಯುವ ಸಂಬಂಧ ಬೇರ್ಪಡುತ್ತದೆ; ಈ ಸಂಬಂಧ ಘನಿಷ್ಠವಾದಷ್ಟೂ ಕವಿಯ ಬಗ್ಗೆ ಆತ್ಮೀ ಯತೆ ಬೆಳೆಯುತ್ತದೆ; ಅವನ ಕಾವ್ಯದ ಆಯುಷ್ಯವೂ ವರ್ಧಿಸುತ್ತದೆ. ಆದರೆ ಪ್ರತಿಯೊಬ್ಬ ಕವಿಯ ವಿಷಯದಲ್ಲಿ ಈ ಕೆಲಸ ಸ್ವಯಂಚಾಲಿತ ಯಂತ್ರದಂತೆ ತನ್ನಷ್ಟಕ್ಕೆ ತಾನೆ ನಡೆಯುವುದಲ್ಲ. ವಾಚಕನಿಗೂ ಕವಿಗೂ ಭದ್ರವಾದ ಸ್ನೇಹಸೇತುವೆ ರಚಿಸಿಕೊಡುವ ಸೌಕರ್ಯ-ಕಾರ್ಯ ವಿಮರ್ಶಕನದು.

'ಹಿಂದೆಲ್ಲ ಕವಿಯ ಕಾಲನಿರ್ಣಯ, ಅವನ ಕಾವ್ಯದ ಸ್ವರೂಪ, ಅಲ್ಲಿ ಬರುವ ಅಲಂಕಾರ, ರಸ, ಭಾಷಾವೈಖರಿ, ಭಾವನಾವಿಲಾಸ, ತತ್ವಸಂದೇಶ ಇತ್ಯಾದಿಗಳನ್ನು ಗುರುತಿಸಿ ವರ್ಗೀಕರಿಸಿ ಅಚ್ಚುಕಟ್ಟಾಗಿ ಹೆಸರಿಸಿ ಸಿವುಡುಕಟ್ಟಿ ಇಟ್ಟರೆ ಆ ಕಾವ್ಯದ ವಿಮರ್ಶೆ ಯಶಸ್ವಿಯಾಯಿತೆಂದು ನಾವು ಭಾವಿಸುತ್ತಿದ್ದೆವು,[೨] ಆದರೆ ಇಂದಿನ ಜೀವನ ದಂತೆ ಕಾವ್ಯವೂ ಸಂಕೀರ್ಣವಾಗಿದೆ; ಇಂದಿನ ವಿಮರ್ಶಕನ ಜವಾಬುದಾರಿಯೂ ಬೆಳೆದಿದೆ. ಇಂದು ಯಾವುದೊಂದು ಸಾಮಾನ್ಯಾಂಶವನ್ನು ಗುರುತಿಸಿ ಸಿವುಡು ಕಟ್ಟಿಡುವುದು ಸುಲಭವಲ್ಲ ಯಾಕೆಂದರೆ, ಎಲ್ಲ ಕವಿಗಳೂ ಎಲ್ಲ ಕಾಲಕ್ಕೂ ಒಂದೇ ತೆರನಾದ ಕಾವ್ಯ ರಚನೆ ಮಾಡುವುದಿಲ್ಲ ನಿತ್ಯನವನವೋನ್ಮೆಷಶಾಲಿನಿಯಾದ ಪ್ರತಿಭೆ ಕವಿಯ ಚಿಂತನ ಶೀಲತೆಗೆ ಹೆಚ್ಚಿನ ಆಳವನ್ನೂ, ಅನುಭವಗಳಿಗೆ ಹೊಸ ವಿಸ್ತಾರಗಳನ್ನೂ, ಅಭಿವ್ಯಕ್ತಿಗೆ ಹೆಚ್ಚಿನ ಸಂಕೀರ್ಣತೆಯನ್ನೂ ಒದಗಿಸಿಕೊಡುತ್ತಲೇ ಇರುತ್ತದೆ. ಅಷ್ಟಲ್ಲದೆ, ಆಯಾ ಕಾಲದ ಪರಿಸರ ಮತ್ತು ಸಮಾಜ ಜೀವನದ ಪ್ರಭಾವಗಳಿಂದಾಗಿ ಕವಿಯ ದೃಷ್ಟಿ ಕೋನದಲ್ಲೂ ಪರಿವರ್ತನೆಯುಂಟಾಗುವುದು ಸಹಜ. ವೈಯಕ್ತಿಕ ಛಲ ಮತ್ತು ಸಾಮೂಹಿಕ ಬಲಗಳ ನಡುವೆ ಸಂಘರ್ಷ ನಡೆದಾಗ ಹುಟ್ಟುವ ಕಾವ್ಯಕ್ಕೂ ಪ್ರಶಾಂತ ಮತ್ತು ಗಂಭೀರ ವಾತಾವರಣದಲ್ಲಿ ಸೃಷ್ಟಿಯಾಗುವ ಕಾವ್ಯಕ್ಕೂ ವ್ಯತ್ಯಾಸವಿದ್ದೇ ಇರುತ್ತದೆ. ಹೀಗೆ ಕವಿಗಳ ಆಂತರಿಕ ವಿಕಾಸಕ್ರಮ ಮತ್ತು ಬಾಹ್ಯಪ್ರಪಂಚದ ಪರಿವರ್ತನ ಕ್ರಮ ಇವುಗಳಿಂದಾಗಿ ಬೇರೆ ಬೇರೆ ಕಾಲಕ್ಕೆ ಬೇರೆ ಬೇರೆ ಕಾವ್ಯಪದ್ಧತಿಗಳು ರೂಪ ಗೊಳ್ಳುವುದು ಅನಿವಾರ್ಯವೂ ಹೌದು; ಅಗತ್ಯವೂ ಹೌದು. ಈ ವಿಭಿನ್ನ ಪ್ರೇರ ಣಾಂಶಗಳ ಮತ್ತು ಅವುಗಳ ಪರಿಣಾಮಗಳ ಸುಸಂಬದ್ಧ ಅಧ್ಯಯನಗೈದು ಆಯಾ ಕಾಲದ ವಾಚಕರಿಗೆ ಅಂದಂದಿನ ಕಾವ್ಯದಲ್ಲಿ ಆಸಕ್ತಿ ಹುಟ್ಟುವಂತೆ, ಬೆಳೆಯುವಂತೆ,

೨. ಸಾಹಿತ್ಯದಲ್ಲಿ ನವ್ಯತೆ : ಗೌರೀಶ ಕಾಯ್ಕಿಣಿಯವರ ಲೇಖನ ಪು. ೩೯

ಮುಂದಿನ ಪೀಳಿಗೆಗಾಗಿ ಅದು ಉಳಿಯುವಂತೆಯೂ ಇಂದಿನ ವಿಮರ್ಶಕರು ನೆರವಾಗ ಬೇಕಾಗುತ್ತದೆ. ವಾಚಕರಿಗೂ ಕವಿಗಳಿಗೂ ನಿಕಟ ಬಾಂಧವ್ಯ ಬೆಳೆಯುವಂತೆ ನೋಡಿ ಕೊಳ್ಳುವುದೂ, ತನ್ಮೂಲಕ ಅಂದಂದಿನ ಸಾಹಿತ್ಯ ಕೃತಿಗಳಲ್ಲಿ ಅಡಕಗೊಂಡಿರುವ ಸಂಸ್ಕೃತಿಯ ಗುಣವಿಶೇಷಗಳನ್ನು ಸಮಾಜದ ಗಮನಕ್ಕೆ ತಂದು ಕಾವ್ಯ ಮತ್ತು ಸಂಸ್ಕೃತಿಗಳ ಸಂವಹನ ಕ್ರಿಯೆಗೆ ಹೊಸ ಹೊಸ ರಹದಾರಿಗಳನ್ನು ತೆಗೆದು ತೋರಿಸುವುದೂ ಇಂದಿನ ವಿಮರ್ಶಕರ ಪಾಲಿನ ಕರ್ತವ್ಯವೆನಿಸಿದೆ. ಈ ದೃಷ್ಟಿಯಿಂದ ವರ್ತಮಾನ ಕಾಲದ ಹಲವೊಂದು ಹೊಸ ಕಾವ್ಯಕೃತಿಗಳಲ್ಲಿರುವ ವಿಮರ್ಶಾತ್ಮಕ ಮತ್ತು ವಿಶ್ಲೇಷಾತ್ಮಕ ಮುನ್ನುಡಿ ಪ್ರಸ್ತಾವನೆ, ಹಿನ್ನುಡಿ, ಟಿಪ್ಪಣಿಗಳು ಇಂದಿನ ಮುಂದಿನ ವಾಚಕರಿಗೆ ಸಹಾಯಕಾರಿಯೆನಿಸುತ್ತವೆ.

'ಕವಿಯ ಬೆಲೆ ಕಟ್ಟುವುದು, ಕವಿಯ ಸ್ಥಾನ ನಿರ್ದೇಶ, ಕವಿಗಳ ವರ್ಗೀಕರಣ-ಇವೂ ಕೂಡ ವಿಮರ್ಶೆಯ ಕೆಲಸವೆ. ಈ ವಿಚಾರದಲ್ಲಿ ಪೂರ್ವಲಾಕ್ಷಣಿಕರಿಂದಲೂ ಕವಿಗಳಿಂದಲೂ ಕೆಲವು ಸೂಚನೆಗಳು ದೊರಕುತ್ತವೆ. ರಾಜಶೇಖರನು ತನ್ನ ಕಾವ್ಯಮೀಮಾಂಸೆಯಲ್ಲಿ ಕವಿಗಳ ವರ್ಗೀಕರಣ ಮಾಡಿದ್ದಾನೆ. ಸ್ಥೂಲವಾಗಿ ಮೂರು ಬಗೆ: ಶಾಸ್ತ್ರಕವಿ, ಕಾವ್ಯಕವಿ, ಉಭಯಕವಿ. ಕಾವ್ಯಕವಿಗಳಲ್ಲಿ ರಚನಾಕವಿ, ಶಬ್ದ ಕವಿ,ಅರ್ಥ ಕವಿ, ಅಲಂಕಾರ ಕವಿ, ಉಕ್ತಿಕವಿ. ರಸಕವಿ, ಮಾರ್ಗಕವಿ, ಶಾಸ್ತ್ರಾರ್ಥಕವಿ......ಕವಿರಾಜಮಾರ್ಗದಲ್ಲಿಯೂ ಅನುಕರಣಶೀಲ ಕವಿ, ಸೋಪಜ್ಞಕವಿ, ಮಹಾಮಾರ್ಗಕವಿ, ಕವಿವೃಷಭ (ಕವೀಶ್ವರ, ಕವಿರಾಜ) ಎಂಬ ಸ್ಥಾನ-ನಿರ್ದೇಶವಿದೆ. ಕನ್ನಡ ಕಾವ್ಯಗಳಲ್ಲಿ ವಸ್ತುಕ ಕವಿ. ವರ್ಣಕಕವಿ, ಉಭಯಕವಿ, ಚತುರಕವಿ, ಶಾಸ್ತ್ರಕವಿ, ಪೌಢಕವಿ ಎಂದು ಕವಿಸಂಬಂಧವಾದ ವಿಶೇಷವಾಚಕಗಳ ಉಲ್ಲೇಖ ಕಾಣಬಹುದು...ಹಳಗನ್ನಡ ಸಾಹಿತ್ಯದ ಮಟ್ಟಿಗೆ ಹೇಳುವದಾದರೆ, ಆರ್. ನರಸಿಂಹಾಚಾರ್ಯರು ತಮ್ಮ ಕವಿಚರಿತೆಯ ಸಂಪುಟಗಳಲ್ಲಿ ಕವಿಗಳ ಸ್ಥಾನನಿರ್ದೇಶನದ ಪಾಚಿಗಲ್ಲಿನ ಮೇಲೆ ನಡೆಯುವ ಸಾಹಸ ಮಾಡಲಿಲ್ಲ. ಅವರಿಂದೀಚೆಗೆ ಪ್ರಾಂತಾಭಿಮಾನದಿಂದಲೋ, ಮತಾಭಿಮಾನದಿಂದಲೋ ಇಲ್ಲವೆ ವಿಮರ್ಶೆಯಲ್ಲಿ ತೂಕ ತಪ್ಪಿಯೋ ವಿಮರ್ಶಕರು ಕೆಲವು ಕವಿಗಳಿಗೆ ಅವರು ಅರ್ಹರಾದದ್ದಕಿಂತ ಮೇಲ್ಮಟ್ಟದ ಸ್ಥಾನವನ್ನು ಕೊಟ್ಟಿರುವುದುಂಟು; ಕೆಲವರನ್ನು ಇಳಿಸಿರುವುದೂ ಉಂಟು'[೩]

ಇದು ಎಂ. ವಿ. ಸೀ. ಅವರು ನಿರೂಪಿಸಿದ ಪ್ರಕಾರ, ಕನ್ನಡ ಕವಿಗಳ ವರ್ಗೀಕರಣದ ಸಂಕ್ಷಿಪ್ತ ಚರಿತ್ರೆ. ಈ ಚರಿತ್ರೆಯಲ್ಲಿ ವಿವರಿಸಿದಂತೆ, ಮೊದಮೊದಲು ಕಾವ್ಯದ ಗುಣಾವಗುಣಗಳನ್ನೇ ಗಮನಿಸಿ ಕವಿಗಳ ವರ್ಗೀಕರಣ ನಡೆಯುತ್ತಿತ್ತು. ಕ್ರಮೇಣ ಈ ವರ್ಗೀಕರಣದಲ್ಲಿ ಪ್ರಾಂತಾಭಿಮಾನ–ಮತಾಭಿಮಾನಗಳಂಥ ಅಸಾಹಿತ್ಯಿಕ ಮಾನದಂಡಗಳು ಚಂಚುಪ್ರವೇಶ ಮಾಡಿದವು. ಇಂಥ ಅಭಿಮಾನಿಗಳ ಕಾರಣದಿಂದ ಸಾಹಿತ್ಯಚರಿತ್ರೆ

೩. ಕನ್ನಡ ವಿಮರ್ಶೆಯ ನೆಲೆ–ಬೆಲೆ : ವಿಮರ್ಶೆಯ ಭಾಷೆ ಮತ್ತು ಪರಿಭಾಷೆ : ಪುಟ ೬೮-೬೯

ಕಾರರ ವರ್ಗೀಕರಣಗಳು ಸಾಕಷ್ಟು ಅಪಾರ್ಥಗಳನ್ನು ಕಲ್ಪಿಸಿದ ಉದಾಹರಣೆಗಳು ಉಂಟು. ಆದರೆ ಚರಿತ್ರೆಯ ದೃಷ್ಟಿಯಿಂದ ಆಯಾ ಕಾಲದ ಕಾವ್ಯಾಭ್ಯಾಸದ ಅನುಕೂಲಕ್ಕೆಂದು ಮಾಡಿಕೊಂಡ ವರ್ಗೀಕರಣಕ್ಕೆ ಮತೀಯ ಅರ್ಥ-ಅಪಾರ್ಥಗಳನ್ನು ಆರೋಪಿಸಿ ಸಾಹಿತ್ಯಪ್ರಪಂಚದ ವಾತಾವರಣವನ್ನು ಹದಗೆಡಿಸುವುದೆಷ್ಟು ಅನಿಷ್ಟವೋ ಅಷ್ಟೇ ಕನಿಷ್ಟ ಕಾರ್ಯವೆಂದರೆ ಜಾತಿ ಮತಗಳನ್ನೇ ಆಧರಿಸಿ ಕವಿಗಳ ವರ್ಗೀಕರಣ ಮಾಡಿ, ಇದು ಕಾವ್ಯಾಭ್ಯಾಸದ ಅನುಕೂಲತೆಗಾಗಿ ಮಾಡಿಕೊಟ್ಟ ವರ್ಗೀಕರಣವೆಂದು ಸೂಚಿಸಿ ಪಾರಾಗುವ ಕುಶಲ ವಿಮರ್ಶೆಯ ಕಸಬುಗಾರಿಕೆ. ಇಲ್ಲಿ ಸಾಹಿತ್ಯಚರಿತ್ರೆ ಮತ್ತು ಸಾಹಿತ್ಯವಿಮರ್ಶೆಯ ವ್ಯಾಪ್ತಿಯಲ್ಲಿರುವ ವ್ಯತ್ಯಾಸವನ್ನು ಗಮನದಲ್ಲಿಟ್ಟುಕೊಂಡು ಈ ವರ್ಗೀಕರಣದ ಆರೋಗ್ಯಪರೀಕ್ಷೆ ಮಾಡುವುದಗತ್ಯ.

ಕನ್ನಡ ಕಾವ್ಯದ ಪ್ರಾರಂಭ ಕಾಲ ಮತ್ತು ನಡುಗಾಲ ಚರಿತ್ರೆಯನ್ನವಲೋಕಿಸಿದಾಗ ಜೈನ ಕವಿಗಳು, ವೀರಶೈವ ಕವಿಗಳು, ವೈಷ್ಣವ ಕವಿಗಳೆಂದು ನಿರ್ದಿಷ್ಟ ಧಾರ್ಮಿಕ ಹಿನ್ನೆಲೆಯಿಟ್ಟುಕೊಂಡೇ ಕಾವ್ಯಸೃಷ್ಟಿ ಮಾಡಿದ ಕವಿಗಳ ಪಂಗಡಗಳು ಕಾಣಸಿಗುತ್ತವೆ. ಆದರೆ ಆಧುನಿಕ ಕನ್ನಡ ಕಾವ್ಯದಲ್ಲಿ ಆವಿಷ್ಕಾರ ಹೊಂದಿದ್ದು ಯಾವೊಂದು ನಿರ್ದಿಷ್ಟ ಧರ್ಮವಲ್ಲ; ಮತಾಚಾರವಲ್ಲ. ಧಾರ್ಮಿಕ ಮೌಲ್ಯಗಳು, ಮತೀಯ ಶ್ರದ್ಧೆಗಳು. ಜಾತೀಯ ತಾರತಮ್ಯಗಳು, ವೃತ್ತಿ ಪರಂಪರೆಗಳು ಕರಗುತ್ತ ಬಂದ ಆಧುನಿಕ ಜೀವನದಲ್ಲಿ ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿಯ ಪರಿಣಾಮವಾಗಿ ಹೊಸ ಸಾಮಾಜಿಕ ಒಲವುಗಳು ಮೂಡಿಕೊಂಡವು; ವರ್ಣಗಳ ಒಲವು ಅಳಿದು ವರ್ಗಗಳ ನಿಲವು ನಿಚ್ಚಳಗೊಂಡವು. ಇಂಥ ಸಂದರ್ಭದಲ್ಲಿಯೂ ಹಿಂದಿನ ಕಾಲದಂತೆಯೇ ಕವಿಗಳ ವರ್ಗೀಕರಣ ಮಾಡಲು ಹೊರಡುವುದು ಹಾಸ್ಯಾಸ್ಪದವೆನಿಸುತ್ತದೆ. ಇಂದಿನ ಕನ್ನಡ ಕಾವ್ಯಪ್ರಪಂಚದಲ್ಲಿ ಹಲವೊಂದು ಗುಂಪುಗಳೂ ಪಂಗಡಗಳೂ ಕಂಡು ಬರುತ್ತವಾದರೂ, ಅವುಗಳಿಗೆ ಯಾವುದಾದರೂ ಜಾತಿ-ಧರ್ಮ–ಮತವೇ ಆಧಾರವಾಗಿದೆಯೆಂದು ಹೇಳಲಾಗದು. ಹಿಂದಿನಂತೆ ಇಂದಿನ ಯಾವ ಕವಿ ತನ್ನ ಮತಪ್ರಚಾರಕ್ಕೆಂದೇ ಕಾವ್ಯರಚನೆ ಮಾಡುವದಿಲ್ಲ, ಒಂದು ನಿರ್ದಿಷ್ಟ ಕೋಮಿನಲ್ಲಿ ಹುಟ್ಟಿ ಬಂದ ಮಾತ್ರಕ್ಕೆ ಎಲ್ಲ ಕವಿಗಳು ಬೆಳೆದು ಬಂದ ಪರಿಸರ, ಕಂಡುಂಡ ಅನುಭವ, ರೂಪಿಸಿಕೊಂಡ ಜೀವನದೃಷ್ಟಿ ಮತ್ತು ಕಾವ್ಯಧೋರಣೆಗಳಲ್ಲಿ ಏಕಮುಖ ಅಥವಾ ಏಕಪ್ರಕಾರದವುಗಳಾಗಿರಬೇಕೆಂಬೇನೂ ನಿಯಮವಲ್ಲ. ಆಧುನಿಕ ಕವಿಯ ಕಾವ್ಯಧರ್ಮವೇ ಬೇರೆ. In the poet's religion we find no doctrine or injunction, but rather the attitude of our entire being towards a truth which is ever to be revealed in its own endless creation. It never undertakes to lead anybody anywhere to any solid conclusion; yet it reveals endless spheres of light, because it has no walls

round 'itself.೪ ಪೂರ್ವಗ್ರಹ ಮುಕ್ತವಾದ ಪ್ರಾಂಜಲ ಮನಸ್ಸಿನ ಕವಿಯು ದೃಷ್ಟಿ ಜಾತಿ–ಮತಗಳ ಸೀಮೋಲ್ಲಂಘನ ಮಾಡಿ ಮನುಷ್ಯತ್ವವನ್ನರಸುವುದರಲ್ಲಿ ತೊಡಗಿರುವುದು ನಿಜವೆಂದೊಪ್ಪುವುದಾದರೆ, ಈಗಿನ ಕಾಲದಲ್ಲೂ ಹಿಂದಿನ ವರ್ಣಾಶ್ರಮದಂತೆ ಕವಿಗಳ–ಕಲಾವಿದರ ವಿಂಗಡಣೆಮಾಡುವುದು ಉಚಿತವೆನಿಸುವುದೇ? ಕನ್ನಡದಲ್ಲಿ ಬರೆಯುತ್ತಿರುವ ಮುಸ್ಲಿಂ ಕವಿಗಳಾದ ನಿಸಾರ ಅಹಮ್ಮದ್, ಅಕಬರ ಅಲಿ, ಅಬ್ದುಲ್ ಮಜೀದ್ ಖಾನ್, ಬಿ. ಎ. ಸನದಿ ಮುಂತಾದವರ ಕೊಡುಗೆಯ ಬಗ್ಗೆ ವಿಸ್ತೃತವಾದ ಲೇಖನವನ್ನು ಬರೆದು ಚರ್ಚಿಸುವ ಕಾಲವೀಗ ಬಂದಿದೆ'೫ ಎಂಬಂಥ ಹೇಳಿಕೆಗಳನ್ನು ಈ ಕಾಲದಲ್ಲಿ ಕೇಳಿಯೂ ಕೇಳದಂತೆ ಸುಮ್ಮನಿರಬಹುದೇ! 'ವಿಮರ್ಶೆಯ ಹೆಸರಿನಲ್ಲಿ ಕೊಂಕುತನ ತೋರಿಸುವ, ಹುಳುಕು ಹುಟ್ಟಿಸುವ ಕೆಲಸ ನಾನು ಮಾಡುವದಿಲ್ಲ'೬ ಎಂದು ಹೇಳುವವರು ಸಹಸ್ರಾರು ವಿದ್ಯಾರ್ಥಿಗಳ ಅಧ್ಯಯನಕ್ಕೆ ಪಠ್ಯವಾಗಿರುವ ಕವನಸಂಕಲನವೊಂದರಲ್ಲಿ ಕವಿಗಳ ಜಾತೀಯ ವಿಂಗಡಣೆಯ ಸೂಚನೆ ನೀಡುವುದು ಸೂಕ್ತವೇ ?

ಈ ಶತಮಾನದ ಪೂರ್ವಾರ್ಧದ ಮುಂಗಾರು ಬೆಳೆಯಾಗಿ ಬಂದ ಕನ್ನಡ ರಮ್ಯ ಕಾವ್ಯದ ಮಡಿವಂತಿಕೆಯನ್ನೆಲ್ಲ ಮುರಿದು ನವ್ಯಕಾವ್ಯದ ಪರ್ವವೇ ನಡೆದುದನ್ನು ನಾವೆಲ್ಲ ಕಂಡಿದ್ದೇವೆ; ಅನುಭವಿಸಿದ್ದೇವೆ. ಆದರೆ ಇಂದಿನ ಕಾವ್ಯಸಂದರ್ಭದಲ್ಲಿ... ನವ್ಯಕಾವ್ಯದ ಮಡಿವಂತಿಕೆಯನ್ನೂ ಕಿತ್ತುಹಾಕುವ ಪ್ರಯತ್ನ ನಡೆದುದನ್ನು ಕಂಡು ಹಿರಿ ಹಿರಿ ಹಿಗ್ಗುವ ವಿಮರ್ಶಕರೇ ಕನ್ನಡದಲ್ಲಿ ಬರೆಯುವ ಮುಸ್ಲಿಂ ಕವಿಗಳ ಕೊಡುಗೆಯ ಬಗ್ಗೆ ಪ್ರತ್ಯೇಕ ಅಧ್ಯಯನ ನಡೆಯಬೇಕೆಂದು ಸೂಚಿಸುವುದು ಯಾವ ಮಡಿವಂತಿಕೆಯನ್ನು ಕಿತ್ತು ಹಾಕುವ ಲಕ್ಷಣ ? 'ಕಾವ್ಯ ಮಾನವತೆಯ ಸಾರ ಎಂಬ ಮಾತನ್ನು ಎಂದೂ ಮರೆಯಬಾರದು. ದೇಶ, ಕಾಲ, ಜಾತಿ, ಜನಾಂಗ, ವೃತ್ತಿ ಈ ಯಾವವೂ ಒಂದು ಕಾವ್ಯವನ್ನು ಅನುಭವಿಸುವ ಕ್ರಿಯೆಗೆ ಪ್ರತಿಬಂಧಕವಾಗಲಾರವು' ಎಂಬ ಅಭಿಪ್ರಾಯ ಹೊಂದಿದ ಪ್ರಾಧ್ಯಾಪಕ–ಕವಿ—ವಿಮರ್ಶಕರಾದ ಎಂ. ಗೋಪಾಲಕೃಷ್ಣ ಅಡಿಗರ ಮಾತೊಂದನ್ನಿಲ್ಲಿ ಸ್ಮರಿಸಿಕೊಳ್ಳಬೇಕು. 'ಅಧ್ಯಾಪಕರು, ಪುಸ್ತಕಗಳು, ಶಬ್ದಕೋಶಗಳು, ವಿಮರ್ಶಗ್ರಂಥಗಳು ಇವೆಲ್ಲವೂ ಸಾಹಿತ್ಯಾಭ್ಯಾಸಕ್ಕೆ ಸಹಾಯಕ ನಿಜ... ಈ ಅಭ್ಯಾಸ ಅತ್ಯಂತ ಸ್ವತಂತ್ರವೂ ಉದಾರವೂ ಆದ ವಾತಾವರ

---

೪. R. Tagore : Creative Unity : The Poet's Religion P-16

೫. ಬಿ. ಎ. ಸನದಿಯವರ "ಸಪ್ತರಂಗ" ಕವನಸಂಕಲನಕ್ಕೆ ಸಿದ್ಧಲಿಂಗ ಪಟ್ಟಣಶೆಟ್ಟಿಯವರ ಪ್ರಸ್ತಾವನೆ

೬. ಸುಮತೀಂದ್ರ ನಾಡಿಗರ 'ಉದ್ಘಾಟನೆ'ಗೆ ಸಿದ್ಧಲಿಂಗ ಪಟ್ಟಣಶೆಟ್ಟಿಯವರ ಮುನ್ನುಡಿ ಪು. xi

ಣದಲ್ಲಿ ನಡೆಯಬೇಕಾದದ್ದು ಅತ್ಯವಶ್ಯ. ಅಂಥ ಸ್ವತಂತ್ರ ವಾತಾವರಣ ಸೃಷ್ಟಿಯ ಕಡೆಗೆ ಧೀಮಂತರೆಲ್ಲ ಕೆಲಸ ಮಾಡುವುದು ನಮ್ಮಲ್ಲಿ ಸಾಹಿತ್ಯಾಭ್ಯಾಸ ಸರಿಯಾಗಿ ನಡೆಯಲು ತಕ್ಕ ಪೂರ್ವಭಾವಿ ಕಾರ್ಯಕ್ರಮ.. ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ತನ್ನ ಅಭಿಪ್ರಾಯವನ್ನು ತಾನೇ ರೂಪಿಸಿಕೊಳ್ಳಲೂ, ಆ ಅಭಿಪ್ರಾಯವನ್ನು ಸಮರ್ಥಿಸಿಕೊಳ್ಳಲೂ ತಕ್ಕ ಸಹಾಯ ಮಾಡುವುದೇ ಸಾಹಿತ್ಯಾಚಾರ್ಯರ ಆದ್ಯ ಕರ್ತವ್ಯ.[೨]

• •

೨ ಎಂ. ಗೋಪಾಲಕೃಷ್ಣ ಅಡಿಗ : ಸಮಗ್ರ ಗದ್ಯ-ಸಾಹಿತ್ಯದ ಅಭ್ಯಾಸ ಪು. ೮೫

ದೇವಾಲಯ ಸಂಕೇತಾರ್ಥ ಮತ್ತು ದಕ್ಷಿಣದ ದೇವಾಲಯಗಳು

ಎಸ್. ಸತ್ಯನಾರಾಯಣ ಅಯ್ಯರ್

ದೇವಾಲಯ ಸಂಕೇತಾರ್ಥ :

ಹಿಂದೂ ದೇವಾಲಯವು ಒಂದು ಸಂಕೇತ, ಅಥವಾ ವಿವಿಧ ಸಂಕೇತಗಳ ಸಮನ್ವಯ ಎನ್ನೋಣ. ಜೀವಂತ ರೂಪಗಳಲ್ಲಿ ಎಲ್ಲಕ್ಕಿಂತಲೂ ಹೆಚ್ಚು ವಿಕಾಸವನ್ನು ಹೊಂದಿರುವ ಮಾನವ ದೇಹದ ಪರಿಭಾಷೆಯಲ್ಲಿ ಅದನ್ನು ಭಾವಿಸಿಕೊಳ್ಳಲಾಗಿದೆ. ಶಿಲ್ಪಶಾಸ್ತ್ರ ಗ್ರಂಥಗಳಲ್ಲಿ, ದೇವಾಲಯದ ರಚನೆಗೆ ಸಂಬಂಧಿಸಿದ ವಿವಿಧ ಭಾಗಗಳಿಗೆ ನಖಶಿಖಾಂತವಾದ (ಹೆಜ್ಜೆಯಿಂದ ನೆತ್ತಿಯ ಕೂದಲಿನ ವರೆಗೆ ಇರುವ) ಮಾನವ ಶರೀರದ ವಿವಿಧ ಅಂಗಗಳಿಗೆ ಇರುವ ಹೆಸರನ್ನೇ ಕೊಡಲಾಗಿದೆ. ಜಂಘೆ, ಊರು, ಶಿರ, ಪಾದ ಈ ಪದಗಳನ್ನು ಮಾನವ ದೇಹದ ಅಂಗಗಳಿಗೆ ಸಂವಾದಿಯಾಗಿರುವಂತೆ ದೇವಾಲಯದ ಕಟ್ಟಡದ ರಚನಾ ವಿನ್ಯಾಸ ಮತ್ತು ಕ್ರಿಯೆಗಳಿಗೆ ಅನ್ವಯಿಸಲಾಗಿದೆ. ಮತ್ತು ದೇವಾಲಯ ಶಿಲ್ಪದಲ್ಲಿರುವ ದೈವಿಕ ಏಕತೆಯ ಭಾವವನ್ನು ಒತ್ತಿ ಹೇಳುವುದಕ್ಕಾಗಿ ಈ ಮಾತುಗಳನ್ನು ಅನೇಕ ವೇಳೆ ಆಲಂಕಾರಿಕವಾಗಿ ಉಪಯೋಗಿಸಲಾಗಿದೆ.

ಅತ್ಯಂತ ಪರಿಪೂರ್ಣವಾಗಿ ದೇಹ ಕೂಡ ಅದರಲ್ಲಿರಬೇಕಾದ ಆತ್ಮವಿಲ್ಲದಿದ್ದಲ್ಲಿ ನಿರ್ಜೀವವಾಗಿ ಕಾಣುವುದೆಂಬುದು ಸ್ಪಷ್ಟವಾದ ಅಂಶವಲ್ಲವೆ ? ಹಿಂದೂವಿನ ದೃಷ್ಟಿಯಲ್ಲಿ ದೇವಾಲಯ ಜಗದಂತರ್ಯಾಮಿ, ಚೈತನ್ಯವಾದ ದೇವರ ನಿವಾಸ. ಆದ್ದರಿಂದಲೇ ಇವು ದೇವಾಲಯ:, ಶಿವಾಲಯ, ದೇವಾಯತನ ಎಂದು ಪ್ರಸಿದ್ಧವಾಗಿರುವುದು. ಹೀಗೆ ದೇವತಾರಾಧನೆಯೇ ದೇವಾಲಯದ ಪರಮ ಪ್ರಯೋಜನವಾದದ್ದರಿಂದ, ಗರ್ಭಗುಡಿಯಲ್ಲಿ ದೇವತಾ ವಿಗ್ರಹದ ಪ್ರಾಣ ಪ್ರತಿಷ್ಠೆಯಿಂದಾಗಿ ದೇವಾಲಯ ಅಸ್ತಿತ್ವಕ್ಕೆ ಬರುತ್ತದೆ. ದೇವಾಲಯದಲ್ಲಿ ನೆಲೆಸಿರುವ ದೇವತೆ ರಾಜಾಧಿರಾಜನ ಪ್ರತೀಕ. ದೇವರು ಈ ಜಗತ್ತಿನ ಸರ್ವಶ್ರೇಷ್ಠ ಪ್ರಭುಭಾವನೆಗೆ ಸಮಂಜಸವಾಗಿಯೇ ಇದೆ. ತತ್ಪರಿಣಾಮವಾಗಿ ಅದಕ್ಕೆ ರಾಜಯೋಗ್ಯವಾದ ಬಹುಮಾನಗಳನ್ನು ಅರ್ಪಿಸಲಾಗುವುದು.

ಪ್ರಸಾದ ಎಂಬ ಪದಕ್ಕೆ ಅರಮನೆ ದೇವಾಲಯ ಎಂಬ ಎರಡು ಅರ್ಥಗಳೂ ಇವೆ ಎಂಬುದು ಗಮನಾರ್ಹವಾದ ಅಂಶ. ಸಿಂಹಾಸನ, ಛತ್ರ ಚಾಮರಾದಿ ರಾಯ

ಪರಿಗಳು ದೇವತೆಗೂ ಉಂಟು. ಮತ್ತು ದೇವತಾರಾಧನೆಯ ಕಾಲದಲ್ಲಿ ಸಂಗೀತ, ನಾಟ್ಯ ದೀಪಾರಾಧನಾದಿಗಳೂ ಸೇರಿದಂತೆ ವೈಭವಪೂರ್ಣ ರಾಜುರಾಯಿಕೆಗಳು ನಡೆಯುತ್ತವೆ. ಅರಮನೆಯಲ್ಲಿ ಸಿಂಹಾಸನ ಗೃಹ, ಒಳ ಓಲಗದ ಮನೆ, ಸಾರ್ವಜನಿಕ ಸಭಾ ಮಂಟಪ ಇರುವಂತೆ, ದೇವಾಲಯದಲ್ಲೂ ಗರ್ಭಗೃಹ, ಒಳ ಮಂಟಪ ಮತ್ತು ಕೆಲವು ಸಂದರ್ಭಗಳಲ್ಲಿ ಹೊರಮಂಟಪಗಳೂ ಇರುತ್ತವೆ. ಕಾಲಾನುಗತಿಯಲ್ಲಿ ದೇವತಾರಾಧನೆಯ ನಾನಾ ಪ್ರಕ್ರಿಯೆ, ಉತ್ಸವಾದಿಗಳಿಗೆ ಸಂಬಂಧಿಸಿದಂತೆ ಅನೇಕ ಪೂರಕ ಕಟ್ಟಡಗಳು ಸೇರುತ್ತಾ ಬಂದುವು. ದೇವಾಲಯದ ಹೊರಮಂಟಪದ ಇದಿರಿನಲ್ಲಿ ಒಂದು ನಾಟ್ಯಶಾಲೆ ಮತ್ತು ನಿವೇದನ ಮಂಟಪವನ್ನು ಸೇರಿಸಲಾಯಿತು. ದಕ್ಷಿಣ ಭಾರತದಲ್ಲಿ ದೊಡ್ಡ ದೊಡ್ಡ ದೇವಾಲಯಗಳ ಆವರಣ ಸಾವಿರ ಕಂಭದ ಮಂಟಪ, ಕಲ್ಯಾಣಮಂಟಪ, ಉತ್ಸವ ಮಂಟಪ–ಹೀಗೆ ಅನೇಕ ಪೂರಕ ಕಟ್ಟಡಗಳಿಂದ ತುಂಬಿಕೊಂಡಿದ್ದು ಅವು ಕೋಟೆಯಿಂದ ಸುತ್ತುವರಿದ ಅರಮನೆಯಂತೆ ಹೋಲುತ್ತವೆ.

ನಾಟ್ಯ, ಸಂಗೀತ, ಸಾರ್ವಜನಿಕ ಉತ್ಸವಗಳು ಪೂರಕ ಕಟ್ಟಡಗಳಲ್ಲಿ ನಡೆಯುತ್ತವೆಯಾದರೆ ದೇವತೆಗೆ ನಿಜವಾದ ಪೂಜೆ ನಡೆಯುವುದು ಗರ್ಭಗೃಹದಲ್ಲಿ. ಇಲ್ಲಿ ಪ್ರತಿಯೊಬ್ಬ ಭಕ್ತನೂ ಪ್ರತ್ಯೇಕವಾಗಿ ಪೂಜೆ ಸಲ್ಲಿಸುತ್ತಾನೆ. ಏಕೆಂದರೆ ಹಿಂದು ದೇವಾಲಯ ಪ್ರಧಾನವಾಗಿ ವಯ್ಯಕ್ತಿಕ ಆತ್ಮಸಾಕ್ಷಾತ್ಕಾರಕ್ಕಾಗಿ ಏರ್ಪಟ್ಟ ಸ್ಥಳ. ಸಾಮೂಹಿಕ ಪ್ರಾರ್ಥನೆ, ಗೋಷ್ಠಿ ಪೂಜೆಗಳಿಗಾಗಿ ಏರ್ಪಟ್ಟ ಸ್ಥಳವಲ್ಲ. ಸಾಂಪ್ರದಾಯಿಕವಾಗಿ, ಗರ್ಭಗೃಹ ಬಹಳ ದಪ್ಪವಾದ ಗೋಡೆಗಳಿಂದ ಸುತ್ತುಗಟ್ಟಲ್ಪಟ್ಟ ಒಂದು ಕತ್ತಲೆ ಕೋಣೆ. ಮಸುಕು ಮಸುಕಾದ ಅದರ ಒಳಭಾಗದಲ್ಲಿ ಉರಿಯುವ ದೀಪ ಮಿನುಗುತ್ತ ಮಂದ ಪ್ರಕಾಶ ಬೀರುತ್ತಿರುತ್ತದೆ. ಈ ಸೃಷ್ಟಿಯನ್ನು ಆವರಿಸಿರುವ ನಿಗೂಢತೆಯನ್ನು ಇದು ಸೂಚಿಸುತ್ತದೆ ಮತ್ತು ಪ್ರಚೋದಿಸುತ್ತದೆ. ಈ ನಿಗೂಢತೆಯ ತೆರೆಯ ಹಿಂಬದಿಯಲ್ಲಿ ಪ್ರಕಾಶಿಸುತ್ತ ಈ ಜಗತ್ತನೆಲ್ಲಾ ಆವರಿಸಿಕೊಂಡು ಪ್ರಕಾಶಿಸುವ ದೈವೀಶಕ್ತಿಯನ್ನೂ ಗರ್ಭಗುಡಿಯು ಸೃಷ್ಟಿಯ ಅಣುರೂಪವಾಗಿರುವಂತೆ ಇಡೀ ದೇವಾಲಯ ದೇವೋಪದೇವಾಲಯಗಳು. ಮಾನವರು. ಪ್ರಾಣಿವರ್ಗದ ವಾಸವಾಗಿರುವ ಈ ವಿಶ್ವದ ಪ್ರತೀಕ. ದೇವಾಲಯದ ಹೊರಭಾಗದಲ್ಲಿ (facades) ಇವು ಆಕೃತಿರೂಪದಲ್ಲಿ ಪ್ರಾತಿನಿಧ್ಯವನ್ನು ಪಡೆಯುವುವು. ದೇವಾಲಯದ ಗೋಡೆಗಳ ಮೇಲೆ ಅಷ್ಟದಿಕ್ಪಾಲಕರ ಮೂರ್ತಿಗಳನ್ನು ರಚಿಸುವುದೂ ಈ ಭಾವನೆಯ ಅಭಿವ್ಯಕ್ತವಾಗಿಯೇ. ಅದೇ ರೀತಿ ದೇವಾಲಯದ ಸುತ್ತ ಪ್ರದಕ್ಷಿಣೆ ಮಾಡುವುದು ವಿಶ್ವಪ್ರದಕ್ಷಿಣೆಯ ಸಂಕೇತ.

ದೇವಾಲಯದ ವಿವಿಧ ಅಂಗಗಳ ವಾಸ್ತುಶಿಲ್ಪದ ಉಗಮ ಕೂಡ ಗಮನಾರ್ಹವಾದದ್ದು. ಅದರ ತಳಹದಿ ಅಥವಾ ಪಾಯ ವೈದಿಕ ಯಜ್ಞವೇದಿಕೆಯಿಂದ, ಸರಳ

ಘನಾಕೃತಿಯ ಗರ್ಭಗೃಹ. ಮಹಾ ಶಿಲಾಯುಗದ ಚಪ್ಪಡಿ ಕಲ್ಲಿನ ಗೂಡುಗಳಿಂದ, ಶಿಖರ, ಬಾಗಿಸಿದ ಬೊಂಬುಗಳನ್ನು ಒಂದು ಬಿಂದುವಿನಲ್ಲಿ ಸೇರಿಸಿ ಲಘುವಾಗಿ ಕಟ್ಟು ವುದರಿಂದ ರೂಪಗಳು ಸರಳ ಆಕೃತಿ ಇವುಗಳಿಂದ ತೆಗೆದುಕೊಂಡುವು(ಅವತರಿಸಿದುವು).

ಬಹಳ ದಪ್ಪವಾದ ಗೋಡೆಗಳನ್ನುಳ್ಳ ಗರ್ಭಗೃಹ ಅದರೊಳಗಿನ ಕತ್ತಲು ಇವು ಗುಹೆಯನ್ನು ಶಿಖರದಿಂದ ಕೂಡಿದ ಮೇಲು ಕಟ್ಟಡ ಪರ್ವವನ್ನು ಪ್ರತಿನಿಧಿಸುತ್ತವೆ ಮತ್ತು ಅನೇಕ ಬಾರಿ ಇವನ್ನು ಪುರಾಣೋಕ್ತವಾದ (ಕಾಲ್ಪನಿಕವಾದ) ಮೇರು ಮಂಧರ ಅಥವಾ ಕೈಲಾಸ ಪರ್ವತಗಳೆಂದು ಕರೆಯಲಾಗುತ್ತದೆ.

ಪರಸ್ಪರ ಹೊಂದಿಕೆಯುಳ್ಳ ಅಳತೆ ಪ್ರಮಾಣಗಳ ಮಿಡಿತವೇ ದೇವಾಲಯ ರಚನೆಗೆ ಆಧಾರ. ಮಾನವನ ಬುದ್ಧಿಶಕ್ತಿಯು ನಿರ್ಮಿಸಿದ ಮೂರ್ತಿ ರೂಪದ. ವಾಸ್ತವಿಕವಾದ (ಮುಕ್ತಿಗೆ ಮೂಲವಾದ) ತೀರ್ಥ.

ಹಿಂದು ದೇವಾಲಯವನ್ನು ಕಟ್ಟಿಸುವುದು ಯಜ್ಞ ಮಾಡುವುದಕ್ಕೆ ಸಮಾನ ವಾದದ್ದು. ಅದೊಂದು ಅರ್ಪಣೆ, ದೇವರ ಮಹಿಮೆಗಾಗಿಯೂ, ಮಾನವನ ಹಿತ ಕ್ಕಾಗಿಯೂ ಶ್ರದ್ಧಾಭಕ್ತಿಗಳಿಂದ ನಡೆಸಿದ ಕಾರ್ಯ. ಅದು ಕರ್ತೃವಿಗೆ (ಅವನ ಕುಟುಂಬಕ್ಕೆ) ಪುಣ್ಯಪ್ರದವಾದದ್ದು. ದೇವಾಲಯಕ್ಕೆ ಬರುವ ಭಕ್ತ ಮತ್ತು ಅವನ ಸಂಬಂಧಿಕರಿಗೂ ಪುಣ್ಯದಾಯಕವಾದದ್ದರಿಂದ ಅದು ಪರಾರ್ಥಕವಾದದ್ದು ಕೂಡ. ಭಕ್ತ ಕೇವಲ ಪ್ರೇಕ್ಷಕನಲ್ಲ. ಅವನು ಅಲ್ಲಿ ದೇವತಾ ಸಾನ್ನಿಧ್ಯವನ್ನು ಗ್ರಹಿಸಿ, ಪೂಜಿ ಸುತ್ತಾನೆ. ಮತ್ತು ಇದರಿಂದಾಗಿ ದೇವಾಲಯಕ್ಕೆ ಬರುವುದರ ಎರಡು ಉದ್ದೇಶ ಗಳನ್ನೂ ಈಡೇರಿಸಿಕೊಳ್ಳುತ್ತಾನೆ. ದೇವಾಲಯದ ಗೋಡೆಗಳ ಮೇಲಿರುವ ಅಲಂಕಾರಗಳೂ. ಮೂರ್ತಿಶಿಲ್ಪಗಳೂ ಹಾಗೂ ಇಡೀ ದೇವಾಲಯದ ಸ್ವರೂಪ– ಇವು ಈ ಉದ್ದೇಶ ಸಾಧನೆಗೆ ಸಹಾಯಕವಾಗುವ ರೀತಿಯಲ್ಲಿ ರೂಪಿತವಾಗಿರುತ್ತವೆ.

ದೇವಾಲಯ ಕೆಲವು ಅಂಶಗಳನ್ನು ವಿಶದೀಕರಿಸುವಂಥ ಕಟ್ಟಡ. ದೇವಾಲಯದ ವಿನ್ಯಾಸದ ಎಲ್ಲ ಅಂಗಗಳೂ ಮತ್ತು ನಿಲುವು ಇದರಲ್ಲಿ ಭಾಗಿಗಳಾಗುತ್ತವೆ. ಈ ಪ್ರಕಾರ ಗರ್ಭಗೃಹಕ್ಕೆ ಮುಂಭಾಗದಲ್ಲಿ ಒಂದೇ ಒಂದು ಬಾಗಿಲಿರುತ್ತದೆ. ಉಳಿದ ಮೂರು ಪಕ್ಕದ ಗೋಡೆಗಳ ಮಧ್ಯ ಭಾಗದ ಮುನ್‌ಚಾಚುಗಳಲ್ಲಿ ಮಾಡುಗಳ ರೂಪದ ಹುಸಿ ಬಾಗಿಲುಗಳು ಇರುತ್ತವೆ. ಇವು ಮಜಬೂತಾದ ಸಾಂಕೇತಿಕ ಕಲ್ಪನಾ ದೃಶ್ಯಗಳಾದರೂ ಪರಾತ್ಪರ ವಸ್ತುವಿನ ಪ್ರತಿಷ್ಠಿತ ಪ್ರತೀಕವಾದ ದೇವತೆಯ ತೇಜ ಶ್ಶಕ್ತಿ ಒಳಗಿನಿಂದ ಹೊರ ಹೊಮ್ಮಿ ಬೇರೆ ಬೇರೆ ದಿಕ್ಕುಗಳಲ್ಲಿರುವ ಗೂಡುಗಳಲ್ಲಿ ಪ್ರತಿಷ್ಠಿತ ದೇವತೆಯ ಪ್ರಧಾನ ರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆ. ಅಥವಾ ಅದಕ್ಕೆ ಸಂಬಂಧಿಸಿದ ಇತರ ದೇವತೆಗಳ ರೂಪದಲ್ಲಿ ದೇವಾಲಯದ ಗೋಡೆಗಳ ಮುನ್ ಚಾಚು ಮತ್ತು ಹಿಂದಕ್ಕೆ ಸರಿದ ಭಾಗಗಳಲ್ಲಿರುವ ಗೂಡುಗಳಲ್ಲಿ ಪ್ರಧಾನ ದೇವತೆಯ ಗೌಣರೂಪಗಳಿಗೆ ಸ್ಥಳ ದೊರೆಯುತ್ತದೆ. ಗೋಡೆಯಲ್ಲಿ ಕೆತ್ತಿರುವ ಈ ಪ್ರತಿಮೆಗಳ

ಸುತ್ತ ಪ್ರದಕ್ಷಿಣೆ ಮಾಡುವುದು ವಾಸ್ತವವಾಗಿ ಆಲಯದ ಪ್ರಧಾನ ದೇವತೆಯೊಡನೆ ಅನ್ಯೋನ್ಯ ಸಂಸರ್ಗ ಪಡೆಯುವ ಪ್ರಕ್ರಿಯೆಯೇ ಆಗಿದೆ. ಆಲಯದ ಒಳಭಾಗದ ಗೋಡೆಗಳು, ಕಂಬಗಳು, ತೊಲೆ. ಬಾಗಿಲುವಾಡ, ಮೇಲ್ಛಾವಣಿ ಇವುಗಳ ಮೇಲಿರುವ ದೇವತಾ ಸಂಬಂಧವಾದ ಪೂಜ್ಯ ಕೆತ್ತನೆಗಳು ಕೂಡ ಭಕ್ತನ ಮನಸ್ಸಿನ ಮೇಲೆ ಪ್ರಬಲವಾದ ಪರಿಣಾಮವನ್ನು ಉಂಟು ಮಾಡುವುವು. ಹೀಗೆ ಅನುಗೊಳಿಸಿ ಸಿದ್ಧವಾದ ಮನಸ್ಸುಳ್ಳ ಭಕ್ತ ಗರ್ಭಗುಡಿಯ ಕಡೆ ನಡೆದು ಅದರ ಬಾಗಿಲಲ್ಲಿ ನಿಲ್ಲುತ್ತಾನೆ. ಅವನು ಕೆತ್ತನೆ ಕೆಲಸವನ್ನು ಕಾಣುವ ಕೊನೆಯ ಆಲಯಭಾಗ ಇದು. ಬಾಗಿಲುವಾಡದ ಮೇಲಿರುವ ನದಿ ದೇವಿಯರ ಸಾನಿಧ್ಯ ಭಕ್ತನ ಎಲ್ಲ ಪ್ರಾಪಂಚಿಕ ಮಾಲಿನ್ಯಗಳನ್ನೂ ಕಳೆದು ಅವನನ್ನು ಶುದ್ಧಗೊಳಿಸುತ್ತದೆ. ಅವನ ಮನಸ್ಸು ಮತ್ತು ಆತ್ಮಗಳು ಈಗ ಪ್ರತಿಷ್ಠಿತ ದೇವತೆಯ ದೇವತ್ವದ ಮೇಲೆ ಕೇಂದ್ರಿತವಾಗಿದೆ. ಈ ದೇವತೆಯ ರಕ್ಷಕ ಸಂಕೇತ ಬಾಗಿಲುವಾಡದ ಮೇಲಿನ ಅಡ್ಡಕಲ್ಲಿನ ಮೇಲೆ ಇರುತ್ತದೆ.

ದೇವಾಲಯದ ಏಕಾಂತ ಗೃಹವನ್ನು ಗರ್ಭಗುಡಿ ಗರ್ಭಗೃಹ ಎಂದು ಕರೆಯುವುದು ಅರ್ಥಗರ್ಭಿತವಾಗಿದೆ. ಇಲ್ಲಿ ಭಕ್ತನ ಆತ್ಮೋದ್ಧಾರವಾಗುತ್ತದೆ. ಏಕೆಂದರೆ ದೀಕ್ಷೆ ಮತ್ತು ಆತ್ಮಸಾಕ್ಷಾತ್ಕಾರದ ಮೂಲಕ ಇಲ್ಲಿ ಆತ್ಮ ಉನ್ನತ ಮಟ್ಟದ ಪುನರ್ ಜನ್ಮವನ್ನು ಪಡೆಯುತ್ತದೆ.

ದೇವಾಲಯದ ಮೇಲು ಭಾಗದ ಕಟ್ಟಡದಿಂದಲೂ ಇಂಥದೇ ಉದ್ದೇಶ ಸಾಧಿತವಾಗುತ್ತದೆ. ಇದು ವಿಶಾಲವಾದ ತಳಹದಿಯಿಂದ ಆರಂಭವಾಗಿ, ಕೊನೆಯಲ್ಲಿ ಎಲ್ಲ ರೇಖೆಗಳೂ ಏಕಾಗ್ರಮುಖವಾಗಿ ಒಂದು ಬಿಂದುವಿನಲ್ಲಿ ಸೇರುತ್ತವೆ. ಕಲಶದ ತುದಿ ಗರ್ಭಗುಡಿಯ ಕೇಂದ್ರದ ಅಗ್ರಸ್ಥಾನವಾಗಿದ್ದು ಆಲಯದಲ್ಲಿ ಪ್ರತಿಷ್ಠಿತವಾಗಿರುವ ಪರಾತ್ಮರ ತತ್ವದ ವ್ಯಕ್ತ ಅಂತಿಮ ಪ್ರತೀಕವಾಗಿದೆ.

ದಕ್ಷಿಣದ ದೇವಾಲಯಗಳು :

ದಕ್ಷಿಣ ಭಾರತವನ್ನು ದೇವಾಲಯಗಳ ನೆಲೆವೀಡು ಎಂದು ಕರೆಯುವ ವಾಡಿಕೆಯಿದೆ. ಕಾರಣ ನಮ್ಮ ರಾಷ್ಟ್ರದ ಅತ್ಯುತ್ತಮ, ಅತಿವಿಶಾಲ, ಭವ್ಯ ಮತ್ತು ಕಲಾತ್ಮಕ ದೇವಾಲಯಗಳು ಇರುವುದು ದಕ್ಷಿಣ ಭಾರತದಲ್ಲೇ. ಆದ್ದರಿಂದ ದಕ್ಷಿಣ ಭಾರತದಲ್ಲಿ ಪ್ರವಾಸವನ್ನು ಕೈಗೊಳ್ಳುವ ವ್ಯಕ್ತಿ-ಯಾತ್ರಾರ್ಥಿಯೇ ಆಗಲೀ ಸಾಮಾನ್ಯ ಸಂಚಾರಿಯೇ ಆಗಲೀ ದೇವಾಲಯಗಳ ದರ್ಶನ ಅವನ ಪ್ರವಾಸ ಕಾರ್ಯಕ್ರಮದ ಒಂದು ಮುಖ್ಯ ಅಂಗವಾಗುತ್ತದೆ.

ದೇವಾಲಯಗಳನ್ನು ಕಟ್ಟುವ ಪ್ರಯತ್ನ ಮೊದಲಾದದ್ದು ನಮ್ಮ ಕನ್ನಡ ನಾಡಿನಲ್ಲಿ ಎಂಬುದು ನಮಗೆಲ್ಲಾ ಹೆಮ್ಮೆಯ ವಿಷಯ. ಇಂಥ ಪ್ರಥಮ ಪ್ರಯತ್ನ ನಡೆದದ್ದು ನಮ್ಮ ರಾಜ್ಯದ ಬಿಜಾಪೂರ ಜಿಲ್ಲೆಯ ಹುನಗುಂದ ತಾಲೂಕಿನಲ್ಲಿ ಮಲ

ಪ್ರಭಾ ನದೀತೀರದಲ್ಲಿರುವ ಐಹೊಳಿಯಲ್ಲಿ. ಇದನ್ನು ಹಿಂದೆ ಅಯ್ಯವಳಿ, ಆರ್ಯಪುರ ಎಂದು ಕರೆಯುತ್ತಿದ್ದರು.

ದೇವಾಲಯಗಳನ್ನು ಕಟ್ಟುವ ಬಗೆಗೆ ಇಲ್ಲಿ ಪ್ರಯೋಗಗಳು ಆರಂಭವಾದದ್ದು ಕ್ರಿ. ಶ. ಐದನೆಯ ಶತಮಾನದಲ್ಲಿ ಅಂದರೆ ಸುಮಾರು ೧೫೦೦ ವರ್ಷಗಳ ಹಿಂದೆ. ಅನಂತರ ಸುಮಾರು ಮುನ್ನೂರು ವರ್ಷಗಳ ಕಾಲ ಈ ಪ್ರಯೋಗಗಳು ನಡೆದು ದೇವಾಲಯವನ್ನು ಕಟ್ಟುವ ಕಲೆಗೆ ಭದ್ರವಾದ ಬುನಾದಿ ಹಾಕಲ್ಪಟ್ಟಿತು.

ಕರ್ನಾಟಕವನ್ನು ಆಳಿದ ಕದಂಬರು, ರಾಷ್ಟ್ರಕೂಟರು, ಚಾಲುಕ್ಯರು, ಹೊಯ್ಸಳರು. ವಿಜಯನಗರದ ಅರಸರು ತಮಿಳು ನಾಡಿನ ಪಲ್ಲವ, ಚೋಳ ಮತ್ತು ಪಾಂಡ್ಯ ರಾಜಮನೆತನದವರು ದಕ್ಷಿಣ ಭಾರತದ ವಿವಿಧ ಭಾಗಗಳಲ್ಲಿ ಅನೇಕಾನೇಕ ಭವ್ಯ ದೇವಾಲಯಗಳನ್ನು ನಿರ್ಮಿಸಿದರು. ಈ ಅದ್ಭುತ ಕಲಾಕೃತಿಗಳನ್ನು ನಾವು ದಕ್ಷಿಣ ಭಾರತದ ಅನೇಕ ಸ್ಥಳಗಳಲ್ಲಿ ಕಾಣಬಹುದು.

ದೇವಾಲಯ ಚಿಕ್ಕದಾಗಿರಲಿ, ದೊಡ್ಡದಾಗಿರಲಿ, ಯಾವ ಕ್ರಮವನ್ನು ಅನುಸರಿಸಿ ಅದನ್ನು ಕಟ್ಟಬೇಕು, ಅದರ ವಿನ್ಯಾಸ ಹೇಗಿರಬೇಕು ಎಂಬ ವಿಚಾರದಲ್ಲಿ ವಿಶಿಷ್ಟ ನಿಯಮಗಳಿವೆ. ಹಾಗೆಯೇ ಈ ದೇವಾಲಯಗಳಲ್ಲಿ ಸ್ಥಾಪಿಸುವ ಅಂದರೆ ಪ್ರತಿಷ್ಠೆ ಮಾಡುವ ವಿವಿಧ ದೇವತಾ ವಿಗ್ರಹಗಳನ್ನು ಎಂಥ ಶಿಲೆಯಲ್ಲಿ ಯಾವ ರೀತಿಯಲ್ಲಿ ಕಡೆಯಬೇಕು ಎಂಬ ಬಗೆಗೆ ಕೂಡ ಸ್ಪಷ್ಟವಾದ ನಿಯಮಗಳಿವೆ. ಇವುಗಳನ್ನು ನಮ್ಮ ಪ್ರಾಚೀನ ವಾಸ್ತು ಮತ್ತು ಶಿಲ್ಪ ಗ್ರಂಥಗಳಲ್ಲೂ ಆಗಮ ಗ್ರಂಥ ಪುರಾಣಗಳಲ್ಲೂ ವಿವರವಾಗಿ ವರ್ಣಿಸಿದ್ದಾರೆ. ನಮ್ಮ ಪ್ರಾಚೀನ ದೇವಾಲಯಗಳ ಮತ್ತು ದೇವತಾ ಮೂರ್ತಿಗಳ ರಚನೆಯಲ್ಲಿ ಈ ನಿಯಮಗಳನ್ನು ತಪ್ಪದೆ ಅನುಸರಿಸಿದ್ದಾರೆ.

ಶಾಸ್ತ್ರಸಮ್ಮತವಾದ ರೀತಿಯಲ್ಲಿ ಕಟ್ಟಿದ ದೇವಾಲಯದಲ್ಲಿ ದೇವತಾ ಮೂರ್ತಿ ಪ್ರತಿಷ್ಠಿಸಬಾರದು. ಅಂಥ ಮೂರ್ತಿ ಪೂಜಾರ್ಹವಲ್ಲವೆಂಬ ಭಾವನೆಯಿತ್ತು. ಹಾಗೆಯೆ ಶಾಸ್ತ್ರೋಕ್ತ ಲಕ್ಷಣಗಳು ಇಲ್ಲದ ದೇವತಾ ಮೂರ್ತಿಗಳು ಕೂಡ ಪೂಜಾರ್ಹವಲ್ಲವೆಂಬುದು ನಮ್ಮ ಪೂರ್ವಿಕರ ನಂಬಿಕೆ. ಅಲ್ಲದೆ ಶಾಸ್ತ್ರ ನಿಯಮವಿರುದ್ಧವಾದ ದೇವತಾ ಮೂರ್ತಿಯ ಪೂಜೆಯಿಂದ ಇಡೀ ದೇಶಕ್ಕೆ ಹಾನಿ, ಕಷ್ಟಗಳು ಸಂಭವಿಸುವುವೆಂಬ ನಂಬಿಕೆಯೂ ಇತ್ತು. ಆದ್ದರಿಂದ ದೇವಾಲಯ ಮತ್ತು ದೇವತಾ ಮೂರ್ತಿಯ ರಚನೆಯ ಬಗೆಗೆ ನಮ್ಮ ಸ್ಥಪತಿಗಳೂ. ಶಿಲ್ಪಿಗಳೂ ಅತ್ಯಂತ ಶ್ರದ್ಧೆಯಿಂದ ಶಾಸ್ತ್ರ ನಿಯಮಗಳನ್ನು ಅನುಸರಿಸಿ ತಮ್ಮ ಕಾರ್ಯವನ್ನು ಅತ್ಯಂತ ಸಮರ್ಪಕವಾಗಿ ನೆರವೇರಿಸುತ್ತಿದ್ದರು.

ಹೀಗೆಂದ ಮಾತ್ರಕ್ಕೆ ಶಿಲ್ಪ ಕೃತಿಗಳು ಶಾಸ್ತ್ರ ನಿಯಮಗಳ ಕಟ್ಟುಪಾಡಿಗೆ ಸಿಕ್ಕಿ ಅದರ ಪರಿಣಾಮವಾಗಿ ಅವು ತಮ್ಮ ಕಲಾವಂತಿಕೆಯನ್ನು ಕಳೆದುಕೊಂಡುವೆಂದು ಯಾರೂ ಭಾವಿಸಬಾರದು. ಮೂರ್ತಿ ಅಂದರೆ ವಿಗ್ರಹ. ಶಾಸ್ತ್ರೋಕ್ತ ತಾಲ ಪ್ರಮಾಣ

ವನ್ನು ಕಡ್ಡಾಯವನ್ನಾಗಿ ಅನುಸರಿಸಿದ ಭಾವವನ್ನು ಸ್ಫುಟಗೊಳಿಸುವುದರಲ್ಲಿಯೂ ಅದಕ್ಕೆ ಪೂರಕವಾದ ಅಲಂಕರಣದಲ್ಲಿಯೂ ಶಿಲ್ಪಿಯು ತನ್ನ ಕಲಾವಂತಿಕೆಯನ್ನೂ, ಕೈ ಚಳಕವನ್ನೂ ತೋರಿಸಲು ಅವಕಾಶವಿತ್ತು. ಇದಲ್ಲದೆ, ದೇವಾಲಯದ ಸ್ತಂಭಗಳು, ಗೋಡೆಗಳು, ಮುಂತಾದ ಭಾಗಗಳಲ್ಲಿ ತನ್ನ ಕಲ್ಪನಾ ವಿಲಾಸವನ್ನೂ ಕಾರ್ಯಕುಶಲತೆ ಯನ್ನೂ ಪೂರ್ಣವಾಗಿ ಉಪಯೋಗಕ್ಕೆ ತಂದುಕೊಳ್ಳಲು ಅವಕಾಶವಿತ್ತು. ದಕ್ಷಿಣ ಭಾರತದ ಸುಪ್ರಸಿದ್ಧ ದೇವಾಲಯಗಳಲ್ಲೆಲ್ಲಾ ನಮ್ಮ ಶಿಲ್ಪಿಗಳ ಕಲಾ ಪ್ರೌಢಿಮೆ ಚಾತುರ್ಯವನ್ನೂ ಕಾಣಬಹುದು. ಅವರ ಈ ಅಮೂಲ್ಯ ಸಾಧನೆಯನ್ನು ಕಂಡು ಅಪಾರ ಆನಂದಾನುಭವವನ್ನೂ ಕಾಣಬಹುದು.

• •

ಕರ್ನಾಟಕದ ಜಾನಪದಕಲೆಗಳು

ಬಿ. ಆರ್. ಹಿರೇಮಠ

ಒಂದು ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ತಿಳಿಸಿಕೊಡುವಲ್ಲಿ ಜಾನಪದ ಕಲೆಗಳು ಪ್ರಧಾನಪಾತ್ರ ವಹಿಸುತ್ತವೆ. ಸಾಹಿತ್ಯ, ಕಲೆಗಳು ಆ ನಾಡಿನ ಸಂಸ್ಕೃತಿಯ ಸತ್ವವನ್ನು ಪ್ರಪಂಚಕ್ಕೆ ಪರಿಚಯಿಸಿಕೊಡುವವು. ಸಂಸ್ಕೃತಿ ಎನ್ನುವದು ಯಾವುದೇ ಒಬ್ಬ ವ್ಯಕ್ತಿಯ ಸ್ವಂತ ಆಸ್ತಿಯಲ್ಲ. ಅದು ಜನಪದಕ್ಕೆ ಸೇರಿದಂತಹದು. ಹೀಗಾಗಿ ಸಂಸ್ಕೃತಿ, ಸಮಷ್ಟಿಯ ಸ್ವತ್ತು ಎನಿಸಿಕೊಳ್ಳುತ್ತದೆ. ಜಾನಪದಕಲೆಯೆನ್ನುವದು ಇಂಥ ಸಂಸ್ಕೃತಿಯ ಒಂದು ಅಂಶ. ಆದುದರಿಂದ ಜಾನಪದ ಕಲೆಗಳಲ್ಲಿ ವ್ಯಷ್ಟಿ ಪ್ರಭಾವಕ್ಕಿಂತ ಸಮಷ್ಟಿಪ್ರಭಾವ ಅಧಿಕ ಪ್ರಮಾಣದಲ್ಲಿ ಪ್ರಕಟಗೊಳ್ಳುತ್ತದೆ.

"ಮಾನವಜನಾಂಗ ಯಾವ ಕಾಲಕ್ಕೂ ಪ್ರಾಕೃತಿಕಸ್ತರ, ನಾಗರಿಕಸ್ತರಗಳಲ್ಲಿ ಬದುಕು ನಡೆಸುತ್ತದೆ. ಇವುಗಳಲ್ಲಿ ಒಂದು ನಿಸರ್ಗನಿಯಂತ್ರಿತವಾದರೆ, ಇನ್ನೊಂದು ನಗರನಿಯಂತ್ರಿತವಾದುದು. ನಗರನಿಯಂತ್ರಿತ ಜನಾಂಗಕ್ಕಿಂತ ನಿಸರ್ಗನಿಯಂತ್ರಿತ ಜನಾಂಗದಲ್ಲಿ ಮಾನವನ ಪ್ರಾಕೃತಿಕಪ್ರಜ್ಞೆಗಳು ದಟ್ಟವಾಗಿ ನೆಲೆನಿಂತಿರುತ್ತವೆ. ಇಂಥ ಜನಾಂಗವೇ ಜನಪದ[1]. ಇಂಥ ಜನಪದದಲ್ಲಿ ಹುಟ್ಟುವ ಸಾಹಿತ್ಯ, ನೃತ್ಯ, ಗೀತೆ, ಸಂಗೀತ ಮೊದಲಾದವು ಜಾನಪದ ಕಲೆಗಳು. ಈ ಜಾನಪದ ಕಲೆಗಳ ಮಾತಾಪಿತೃ ಜನಪದರು. ಇವು ಜನಾಂಗದಲ್ಲಿ ಹುಟ್ಟಿ, ಜನಾಂಗದಲ್ಲಿ ಬೆಳೆಯುವಂಥವು. ಆ ಆ ಪ್ರದೇಶಗಳ ಜನಪದತ್ವದ ಮೇಲೆ ಈ ಕಲೆಗಳ ಗುಣಮಟ್ಟ ನಿಂತಿರುತ್ತದೆ.

ಒಂದು ಗ್ರಾಮ, ಒಂದು ಕುಟುಂಬದಂತೆ ಬದುಕು ನಡೆಸುತ್ತದೆ. ಹೀಗಾಗಿ ಅಲ್ಲಿ ಒಬ್ಬ ವ್ಯಕ್ತಿಯ ಅನುಭವ ಎಲ್ಲ ವ್ಯಕ್ತಿಗಳ ಅನುಭವವಾಗಿ, ಎಲ್ಲ ವ್ಯಕ್ತಿಗಳ ಅನುಭವ ಒಬ್ಬನ ಅನುಭವವಾಗಿ ಪರಿಣಮಿಸುವುದು. ಇದರಿಂದ ಅದಕ್ಕೆ ಸಾಮೂಹಿಕ ಅಥವಾ ಸಮುದಾಯ ಪ್ರಜ್ಞೆ ಲಭಿಸುತ್ತದೆ. ಆದುದರಿಂದ ಜಾನಪದ ಕಲೆಗಳಲ್ಲಿ ಮಾನವನ ಪ್ರಾಕೃತಿಕ ಪ್ರಜ್ಞೆ ಮತ್ತು ಸಾಮೂಹಿಕ ಅಥವಾ ಸಮುದಾಯ ಪ್ರಜ್ಞೆಗಳ ಸಂಗಮವನ್ನು ಕಾಣುತ್ತೇವೆ. ಒಂದರ್ಥದಲ್ಲಿ Folk Art is "of the people, for the people, by the people" ಎಂಬುದು ಸತ್ಯವೆನಿಸುತ್ತದೆ.

---


೧. ಡಾ॥ ಎಂ. ಎಂ. ಕಲಬುರ್ಗಿ—ಉತ್ತರ ಕರ್ನಾಟಕದ ಜನಪದ ಪದ್ಯಸಾಹಿತ್ಯ : ಪುಟ ೩

ಜಾನಪದ ಕಲೆಗಳು ಮಾನವನ ಮೂಲ ಸಂವೇದನೆಗಳಿಗೆ ತೀರ ಹತ್ತಿರವಾದವುಗಳು. ಇವು ಮಾನವ ಜೀವನದ ವಿವಿಧ ಮುಖಗಳನ್ನು ಪರಿಚಯಿಸುವ ಮಹಾ ಸಂಪುಟಗಳು. ನಾಡಿನ ಸಂಸ್ಕೃತಿ ಹಾಗೂ ಪರಂಪರೆಯನ್ನು ಜೀವಂತವಾಗಿ ಬದುಕಿಸಿಕೊಂಡು ಬಂದ ಹಿರಿಮೆ ಇವುಗಳಿಗೆ ಇದೆ. ವ್ಯಕ್ತಿಯ ಬದುಕಿನಷ್ಟೇ ವೈವಿಧ್ಯಮಯ, ವರ್ಣಮಯವಾಗಿವೆ ಈ ಕಲೆಗಳು. ವ್ಯಕ್ತಿ ತನ್ನ ಅನುಭವಗಳಿಗೆ ಜೀವ ಕೊಟ್ಟದ್ದು, ಬಣ್ಣ ತುಂಬಿದ್ದು ಇಂಥ ಕಲೆಗಳ ಮೂಲಕ. ಜನಪದರ ಅನುಭವ ಅರಳಿದುದು, ಸುಗಂಧ ಸೂಸಿದುದು ಈ ಕಲೆಗಳಲ್ಲಿ. ಜನಪದ ಕಲಾಪರಂಪರೆ, ಹೃದಯ ಶ್ರೀಮಂತಿಕೆ, ಭಾವಗಮ್ಯತೆ, ಸಂಸ್ಕಾರವಂತಿಕೆಗಳು ಕಲೆಗಳಲ್ಲಿ ಥಳಥಳಿಸುತ್ತಿವೆ.

ಒಂದು ಯುಗದ ಗರ್ಭದಿಂದ ಸಮಾಜ, ಸಮಾಜ ಗರ್ಭದಿಂದ ವ್ಯಕ್ತಿ, ವ್ಯಕ್ತಿಯ ಗರ್ಭದಿಂದ ಸಾಹಿತ್ಯ, ಗೀತ, ನೃತ್ಯ, ಸಂಗೀತ ಮೊದಲಾದ ಕಲೆಗಳು ಉದಯಿಸುತ್ತವೆ. ಆದುದರಿಂದ ಜಾನಪದ ಕಲೆಗಳಲ್ಲಿ ಜನರ ನಡೆ-ನುಡಿ, ಆಚಾರ-ವಿಚಾರ, ನಂಬಿಕೆ-ನಡುವಳಿಕೆ, ಪರಂಪರೆ-ಸಂಪ್ರದಾಯ, ಸರಳತೆ—ಸತ್ಯನಿಷ್ಠತೆಗಳು ಪ್ರತಿಫಲಿಸುವವು. ಜಾನಪದಕಲೆಗಳು ಜನರ ಅಂತರಂಗ—ಬಹಿರಂಗ ದರ್ಶನ ಮಾಡಿಕೊಡುವವು. ಇವು ಅವರ ಬದುಕಿನಷ್ಟೇ ಸರಳ, ಸಾದಾ ಹಾಗೂ ಸ್ವಚ್ಛ ಸಂಸ್ಕೃತಿಯ ಪ್ರಸಾರವಾಹಕಗಳಾದ ಈ ಜಾನಪದ ಕಲೆಗಳ ವರ್ಗೀಕರಣವನ್ನು ಮುಂದಿನ ಪುಟದಲ್ಲಿ ಕೊಡಲಾಗಿದೆ.[೨]

ಕರ್ನಾಟಕದ ಸಮಗ್ರ ಜಾನಪದ ಕಲೆಗಳನ್ನು ಹೀಗೆ ವರ್ಗೀಕರಿಸುವದು ಸಮಂಜಸವೆನಿಸುತ್ತದೆ. ಪ್ರಯೋಜಕ ಕಲೆಗಳು ಪುರುಷನಿಷ್ಠ ಹಾಗೂ ಸ್ತ್ರೀನಿಷ್ಠಗಳಾಗಿವೆ ಇದರಲ್ಲಿ ಬಡಿಗತನ, ಕಮ್ಮಾರಿಕೆ, ಚಮ್ಮಾರಿಕೆ, ಬುಟ್ಟಿ ಹೆಣೆಯುವುದು, ಹಗ್ಗ ಹೊಸೆಯುವದು, ಕುಂಬಾರಿಕೆ ಮೊದಲಾದವು ಸೇರುತ್ತವೆ. ಪ್ರಯೋಜಕ ಕಲೆಗಳ ಅಧ್ಯಯನ ನಮ್ಮಲ್ಲಿ ತುಂಬ ಅಲಕ್ಷ್ಯ ಹಾಗೂ ಅನಾದರಕ್ಕೆ ಗುರಿಯಾಗಿದೆ. ಇವುಗಳ ಸಮಗ್ರ ಪರೀವಿಕ್ಷಣೆ ಹಾಗೂ ಅಧ್ಯಯನಗಳು ಜಾನಪದ ವಿದ್ವಾಂಸರನ್ನು ಎದುರು ನೋಡುತ್ತಿವೆ. ಉಪಜೀವನದ ಕಲೆಗಳು ಲೌಕಿಕ ಮತ್ತು ಧಾರ್ಮಿಕವಾಗಿರುತ್ತವೆ. ಇವು ಏಕವ್ಯಕ್ತಿನಿಷ್ಠ ಹಾಗೂ ಸಮುದಾಯನಿಷ್ಠವಾಗಿವೆ. ಪುರುಷನಿಷ್ಠವಾದ ಉಪಜೀವನಕಲೆ ಗೀತಪ್ರಧಾನ, ವಾದ್ಯಪ್ರಧಾನ, ಅಭಿನಯಪ್ರಧಾನವಾಗಿರುವುದು. ಇದರಂತೆಯೇ ಸ್ತ್ರೀನಿಷ್ಠ ಉಪಜೀವನ ಕಲೆಗಳು, ಕರಪಲ್ಲವ, ಕಾಲಜ್ಞಾನ, ಗೊಂದಲಿಗರ ಮೇಳ, ಬುಡುಬುಡಿಕೆಯವರು, ವೇಷಗಾರರು, ಚೌಡಿಕೆಮೇಳ, ನೀಲಗಾರರು, ಕಂಸಾಳೆಯವರು, ಹೆಳವರು —ಈ ವರ್ಗಕ್ಕೆ ಸೇರುತ್ತವೆ. ಉಪಜೀವನಕಲೆಯಂತೆಯೇ

೨. ಡಾ॥ ಎಂ. ಎಂ. ಕಲಬುರ್ಗಿ ಅವರ "ಉತ್ತರ ಕರ್ನಾಟಕದ ಜನಪದ ಪದ್ಯಸಾಹಿತ್ಯ" (ಪು : ೧೧) ದಲ್ಲಿ ಉತ್ತರ ಕರ್ನಾಟಕದ ಜನಪದ ಪದ್ಯಸಾಹಿತ್ಯಕ್ಕಾಗಿ ಮಾಡಿದ ವರ್ಗೀಕರಣವನ್ನು ಮಾದರಿಯಾಗಿಟ್ಟುಕೊಂಡು, ವ್ಯತ್ಯಾಸಗಳನ್ನು ಮಾಡಿಕೊಂಡಿದ್ದೇನೆ.


ಜಾನಪದ ಕಲೆ
ಪ್ರಯೋಜಕ
ಉಪಜೀವನ (ಲೌಕಿಕ + ಧಾರ್ಮಿಕ)
ಉತ್ಸವ (ಧಾರ್ಮಿಕ + ಮನರಂಜನೆ)
ಉತ್ಸಾಹ (ಮನರಂಜನೆ + ಧಾರ್ಮಿಕ)
ಪುರುಷ
ಸ್ತ್ರೀ
ಗೀತ ಪ್ರಧಾನ
ವಾದ್ಯ ಪ್ರಧಾನ
ಅಭಿನಯ ಪ್ರಧಾನ

ಉತ್ಸವ ಹಾಗೂ ಉತ್ಸಾಹ ಕಲೆಗಳು. ಆದರೆ ಇವು ಧಾರ್ಮಿಕ, ಮನರಂಜನ ಕಲೆಗಳು. ಉತ್ಸವ ಕಲೆಗಳು ಹೆಚ್ಚಾಗಿ ಸಮುದಾಯನಿಷ್ಠವಾದವುಗಳು. ಉತ್ಸಾಹಕಲೆಗಳು ಸಮುದಾಯನಿಷ್ಠವಾಗಿರುತ್ತವೆ ಇಲ್ಲವೆ ಏಕವ್ಯಕ್ತಿನಿಷ್ಠವಾಗಿರುತ್ತವೆ. ಕಂಬಿಯವರು, ಡೊಳ್ಳುಮೇಳ, ಕೋಲಾಟ, ಕರಡಿಮಜಲು, ಉಮ್ಮತ್ತಾಟ, ಲಂಬಾಣಿ ಕುಣಿತ, ಭಜನಾಮೇಳ, ಜೋಕುಮಾರ ಮೊದಲಾದವು ಉತ್ಸವ ಹಾಗೂ ಉತ್ಸಾಹ ಕಲೆಗಳ ಗುಂಪಿಗೆ ಸೇರುತ್ತವೆ.

ಜಾನಪದ ಚಿತ್ರಕಲೆ, ಜಾನಪದ ವಾಸ್ತುಶಿಲ್ಪ, ಜಾನಪದ ಮೂರ್ತಿಕಲೆಗಳು ಪ್ರತ್ಯೇಕ ಅಧ್ಯಯನದ ವಿಷಯಗಳಾಗಿವೆ. ಈಗಿನ ಮಟ್ಟಿಗೆ ಇವುಗಳ ಅಧ್ಯಯನ ನಡೆದಿಲ್ಲವೆಂದೇ ಹೇಳಬೇಕಾಗುತ್ತದೆ. ಆದುದರಿಂದ ಈ ಕ್ಷೇತ್ರದಲ್ಲಿ ನೂರಾರು ಸಂಖ್ಯೆಯ ಸಂಶೋಧಕರು, ಹವ್ಯಾಸಿಗಳು ದುಡಿಯುವ ಅವಶ್ಯಕತೆ ಇದೆ ಎಂಬುದನ್ನು ಒತ್ತಿಹೇಳಬೇಕಾಗುತ್ತದೆ. ಜಾನಪದ ಪದ್ಯ—ಗದ್ಯ ಸಾಹಿತ್ಯದ ಸಂಗ್ರಹ–ವಿಶ್ಲೇಷಣೆ ಸಂಶೋಧನೆಗಳಲ್ಲಿ ನಿರತರಾಗಿರುವ ವಿದ್ವಾಂಸರು, ಜಾನಪದ ಚಿತ್ರಕಲೆ, ವಾಸ್ತುಶಿಲ್ಪ ಹಾಗೂ ಮೂರ್ತಿ ಕಲೆಗಳ ಪರಿವೀಕ್ಷಣೆ—ಸಂಗ್ರಹ–ವಿಶ್ಲೇಷಣೆ—ಸಂಶೋಧನೆಗಳ ಕಡೆಗೆ ಗಮನಹರಿಸಿದಷ್ಟು ಫಲನಿರೀಕ್ಷೆ ಇದೆ. ದಿನದಿಂದ ದಿನಕ್ಕೆ ಮಸಳಿಸುತ್ತ ನಡೆದಿರುವ ಇವುಗಳನ್ನು ಮೂಲಬಣ್ಣ ಹಾಗೂ ರೂಪದಲ್ಲಿ ಹಿಡಿದಿರುವ ಕಾರ್ಯ ಪವನ ವೇಗದಲ್ಲಿ ನಡೆಯಬೇಕಾಗಿದೆ. ಜಾನಪದ ಚಿತ್ರಕಲೆಯಲ್ಲಿ ರಂಗವಲ್ಲಿ, ಕಸೂತಿ, ಪಾತ್ರೆಗಳ ಮೇಲಿನ ಚಿತ್ರ, ಹಣಚೆ. ದುರಗಮುರಗವ್ವನ ಗುಡಿ—ಪಾಲಕಿ, ಚಾಮರ, ಖಡ್ಗ, ಕೊಡಲಿಗಳ ಮೇಲಿನ ವಿವಿಧ ಚಿತ್ರಗಳು, ಆಭರಣ ಮೊದಲಾದವು ಸೇರ್ಪಡೆಯಾಗುತ್ತವೆ. ಸಮಾಜದ ವಿವಿಧ ವರ್ಗಗಳ ಜನರು ಕಟ್ಟಿಸಿದ ಮನೆ, ಮಠ ಮೊದಲಾದವು ವಾಸ್ತುಶಿಲ್ಪದಲ್ಲಿ ಬರುತ್ತವೆ. ಗುಳ್ಳವ್ವ, ಬಸವಣ್ಣ (ಎತ್ತು), ನಾಗಪ್ಪ. ಗಣಪತಿ. ಗಂಗವ್ವ—ಗೌರವ್ವ, ದುರಗವ್ವ—ಮುರಗವ್ವ, ದ್ಯಾಮವ್ವ ಮೂರ್ತಿಗಳು ಜಾನಪದ ಮೂರ್ತಿಕಲೆಗಳೆನಿಸಿಕೊಳ್ಳುತ್ತವೆ. ಇವುಗಳನ್ನು ಕಟ್ಟಿಗೆ—ಕಲ್ಲು, ಲೋಹ—ಮಣ್ಣುಗಳಿಂದ ತಯಾರಿಸುವರು.

ಜಾನಪದ ಕಲೆಗಳು, ಜನಪದರು ತಮ್ಮ ಬದುಕಿನಲ್ಲಿ ಹೊತ್ತಿಸಿದ ಸಾಲುದೀಪಗಳು. ಇವು ಬೆಳಗಬೇಕು, ಬೆಳೆಯಬೇಕು; ಆರಬಾರದು, ಅಳಿಯಬಾರದು, ಈಗ ಎಣ್ಣೆ ತೀರಿ ನಂದಿ ಹೋಗದೆ ಮಿನುಕು ಮಿನುಕಾಗಿ ಉರಿಯುತ್ತಿವೆ. ಈ ದೀಪಗಳಿಗೆ ಎಣ್ಣೆ ಎರೆಯುವ ಕೈಗಳು ಮುಂದೆ ಬಂದು, ಎಣ್ಣೆ ತೀರದಂತೆ ಕಾಳಜಿವಹಿಸಿ ಜ್ಯೋತಿ ನಂದದಂತೆ ನೋಡಿಕೊಳ್ಳಬೇಕಾಗಿದೆ. ಈ ಸಾಲುದೀಪಗಳ ಬೆಳಕಿನಲ್ಲಿ ನಾಡವರ ಜೀವನ ಜ್ಯೋತಿರ್ಮಯವಾಗಲಿ.

ಇವು, ಜೀವನದ ಒಂದು ಅಂಗವಾಗಿ ಬೆಳೆದುಬಂದಿವೆ. ವಂಶಪಾರಂಪರ್ಯವಾಗಿ ನಡೆದುಬಂದ ಜಾನಪದ ಕಲೆಗಳು, ಸಮಾಜದ ಆಶ್ರಯದಲ್ಲಿ ಬದುಕು ನಡೆಸುತ್ತಿದ್ದವು.

ಅನೇಕ ಕಾರಣಗಳಿಂದ ಚೂರು ಚೂರುಗೊಳ್ಳುತ್ತಿರುವ ಇಂದಿನ ಸಮಾಜ, ಇವುಗಳಿಗೆ ತನ್ನ ಆಶ್ರಯವನ್ನು ಕ್ಷೀಣಗೊಳಿಸುತ್ತಿರುವ ಲಕ್ಷಣಗಳು ಕಂಡುಬರುತ್ತಿವೆ ಜೊತೆಗೆ ಸಮಾಜದಲ್ಲಿಯ ಉನ್ನತವರ್ಗದವರು ಜಾನಪದಕಲೆ—ಕಲಾಕಾರರನ್ನು ಶೂದ್ರಭಾವನೆಯಿಂದ ಕಾಣುತ್ತಿದ್ದಾರೆ. ಹೀಗೆ ಅಸ್ಪೃಶ್ಯವೆನಿಸಿದ ಜಾನಪದಕಲೆ ಹಾಗೂ ಕಲಾಕಾರರು ಪರಿಣತಿಯನ್ನು ಕಳೆದುಕೊಳ್ಳುತ್ತ, ಸೊರಗುತ್ತ ನಡೆದಿವೆ. ಈ ಕಲೆಗಳು ಬೆಳೆಯಬೇಕಾದರೆ ಮೊದಲು ಕಲಾಕಾರರು ಬೆಳೆಯಬೇಕು. ಕಲಾಕಾರರನ್ನು ಗುರಿತಿಸುವ, ಅರ್ಥೈಸುವ, ಗೌರವ ಭಾವನೆಯಿಂದ ಕಾಣುವ, ಮೆಚ್ಚುವ, ಸನ್ಮಾನಿಸುವ ಸಮಾಜ ಬೇಕು. ಅಂದರೆ ಕಲಾಕಾರ ಹಾಗೂ ಕಲೆಗಳು ಫಲವತ್ತಾಗಿ ಬೆಳೆಯಲು ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ಸರಕಾರ, ವಿಶ್ವವಿದ್ಯಾಲಯ, ಸಾಹಿತ್ಯಪರಿಷತ್ತು ಹಾಗೂ ಸ್ಥಾನಿಕ ಸಂಸ್ಥೆಗಳು ಮೈಮುರಿದು ದುಡಿಯಬೇಕಾಗಿದೆ. ಕಲಾಕಾರರಿಗೆ ವಾದ್ಯ—ವೇಷಭೂಷಣಗಳನ್ನು ರಿಯಾಯಿತಿ ಬೆಲೆಯಲ್ಲಿ ಒದಗಿಸಿಕೊಡಬೇಕು. ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಕಲಾಕಾರರನ್ನು ಸನ್ಮಾನಿಸಿ ಪ್ರಶಸ್ತಿಗಳನ್ನು ನೀಡುವ ಸಂಪ್ರದಾಯ ನೆರವೇರಬೇಕಾಗಿದೆ. ಜೊತೆಗೆ ಇವರನ್ನು ಕುರಿತ ಸಂಭಾವನ ಗ್ರಂಥಗಳನ್ನು ಹೊರತರಬೇಕಾಗಿದೆ. ಪ್ರಪ್ರಥಮವಾಗಿ ಕರ್ನಾಟಕದ ಸಮಗ್ರ ಜಾನಪದ ಕಲೆ ಹಾಗೂ ಕಲಾಕಾರರ ಪರಿವೀಕ್ಷಣೆಯನ್ನು ಪ್ರದೇಶನಿಷ್ಠ, ಜನಾಂಗವಾರು ಆಗಿ ಕೈಕೊಳ್ಳುವುದು ಹೆಚ್ಚು ಅಗತ್ಯವಿದೆ ಎಂಬುದನ್ನು ಬೇರೆ ಹೇಳಬೇಕಿಲ್ಲ. ನಾಡಿನ ಅಮೂಲ್ಯ ಆಸ್ತಿಗಳಾದ ಜಾನಪದಕಲೆಗಳನ್ನು ಸಂರಕ್ಷಿಸುವ ಗುರುತರವಾದ ಹೊಣೆ ನಮ್ಮ ಮೇಲಿದೆ. ನಾಳಿನ ಜನಾಂಗ ಹಳಿಯದಂತೆ ಎಚ್ಚರವಹಿಸಬೇಕಾಗಿದೆ. ಒಟ್ಟಿನಲ್ಲಿ ಕರ್ನಾಟಕದ ಜಾನಪದ ಕಲೆಗಳು ಅಕ್ಷಯವಾಗಿ ನಿಂತು, ಸಂಸ್ಕೃತಿಯ ಸುಗಂಧವನ್ನು ಹರಡುವಂತಾಗಲಿ.

• •

ಶೈವಾಗಮ ಮತ್ತು ವಚನಸಾಹಿತ್ಯದಲ್ಲಿ ಷಟ್‌ಸ್ಥಲ : ಒಂದು ವಿವೇಚನೆ

ಡಾ. ವ್ಹಿ. ಎಸ್. ಕಂಬಿ

ಅವಶ್ಯಕತೆ :

'ಷಟ್‌ಸ್ಥಲ' ವೆಂಬುದು ವೀರಶೈವ ಶಾಸ್ತ್ರವು ಬಳಸಿದ ಒಂದು ವಿಶಿಷ್ಟ ಪದವು. ಭಾರತೀಯ ಶಾಸ್ತ್ರ ಸಾಹಿತ್ಯದಲ್ಲಿ ಇದೊಂದು ನವೀನ ಪಾರಿಭಾಷಿಕ ಪದವಾಗಿದೆ. ಈ ಪದವು ಆಗಮಗಳಲ್ಲಿ ವಚನಸಾಹಿತ್ಯದಲ್ಲಿ ತಿರುಮೂಲರು ಬರೆದ ತಿರುವಂದಿರಮ್ ಎಂಬ ಗ್ರಂಥದಲ್ಲಿ, ಉಪಲಬ್ಧವಿರುತ್ತದೆ. ಈ ಪಾರಿಭಾಷಿಕ ಪದದ ಬಳಕೆಯನ್ನು ಆಗಮಗಳಲ್ಲಿ, ವಚನ ಸಾಹಿತ್ಯದಲ್ಲಿ ಯಾವ ಯಾವ ಅರ್ಥದಲ್ಲಿ ಮಾಡಿದ್ದಾರೆ ಎಂಬುದನ್ನು ನೋಡಿದರೆ ಆಗಮ ಮತ್ತು ವಚನಸಾಹಿತ್ಯದಲ್ಲಿ ಅದರ ವಿಶೇಷಾರ್ಥದಲ್ಲಾಗಿರುವ ಅಂತರವನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಈ ಕಾರ್ಯವು ಅವಶ್ಯವೆಂದು ತೋರಿದ್ದರಿಂದ ಇಲ್ಲಿ ಅದನ್ನು ಕೈಕೊಳ್ಳಲಾಗಿದೆ.

ಆಕರ ಸಾಹಿತ್ಯ :

ಆಗಮಗಳು ಕಾಮಿಕಾದಿ ವಾತುಲಾಂತವೆಂದು ಇಪ್ಪತ್ತೆಂಟು. ಇವುಗಳನ್ನು ದಿವ್ಯಾಗಮಗಳೆಂದು ಕರೆಯುತ್ತಾರೆ. ಶಾಸನಗಳಲ್ಲಿ ಇವುಗಳ ಉಲ್ಲೇಖವುಂಟು. ಕ್ರಿ. ಶ. ೭ನೆಯ ಶತಮಾನದ ಶಾಸನವೊಂದು ಕಂಚಿಯ ಕೈಲಾಸನಾಥನ ಗುಡಿಯಲ್ಲಿದೆ[೧]. ಅದರಲ್ಲಿ ೨೮ ಶಿವಾಗಮಗಳ ಉಲ್ಲೇಖವಿದೆ. ಪಂಡಿತರು ಈ ಆಗಮಗಳು ಕ್ರಿ. ಶ. ಪ್ರಾರಂಭದಲ್ಲಿಯೇ ಇದ್ದವೆಂದು ಅಭಿಪ್ರಾಯ ಪಡುತ್ತಾರೆ.[೨] ಇವೆಲ್ಲವುಗಳು ಇಂದು ಲಭ್ಯವಿರುವದಿಲ್ಲ. 'ತಂತ್ರ ಸಂಗ್ರಹ' ಎಂಬುದನ್ನು ಹುಬ್ಬಳ್ಳಿಯ ಮೂರುಸಾವಿರ ಮಠದವರು ಪ್ರಕಟಿಸಿದ್ದು ಅದರಲ್ಲಿ ವಾತುಲಾಗಮ, ದೇವೀಕಾಲೋತ್ತರಾಗಮ, ಸೂಕ್ಷ್ಮಾಗಮ, ಪಾರಮೇಶ್ವರಾಗಮಗಳು ಉಂಟು. ಅವು ಪೂರ್ತಿಯಿರುವದಿಲ್ಲ. ಸೊಲ್ಲಾಪುರದ ವಾರದ ಮಲ್ಲಪ್ಪನವರು ಕೆಲವು ಆಗಮಗಳನ್ನು ಪ್ರಕಟಿಸಿದ್ದು ತಿಳಿದುಬರುತ್ತದೆ. ನಾಗನೂರ ಬ್ರಹನ್ಮಠಾಧ್ಯಕ್ಷರಾದ ಪಂ. ಕಾಶೀನಾಥ ಶಾಸ್ತ್ರಿಗಳು ಸೂಕ್ಷ್ಮಾಗಮ, ಪಾರಮೇಶ್ವರಾಗಮ, ಮಕುಟಾಗಮ, ಚಂದ್ರಜ್ಞಾನಾಗಮ, ಸೂಕ್ಷ್ಮಾಗಮಾದಿಗಳನ್ನು ಪ್ರಕಟಿಸಿದ್ದಾರೆ. ಇವು ಪೂರ್ತಿಯಿರುವುದಿಲ್ಲ. ದೇವಕೋಟಿ

ಯಲ್ಲಿಯ ಶಿವಾಗಮ ಸಿದ್ಧಾಂತ ಪರಿಪಾಲಕ ಸಂಘದವರು ಮೃಗೇಂದ್ರಾಗಮ ಪೂರಾ ಹಾಗೂ ಮತಂಗ ಪಾರಮೇಶ್ವರಾಗಮದ ವಿದ್ಯಾ ಪಾದಗಳನ್ನು ಪ್ರಕಟಿಸಿರುವರು. ಶಂಭುಲಿಂಗ ಶಿವಾಚಾರ್ಯರು ಆಗಮ ಪರಿಜ್ಞಾನವೆಂಬ ಗ್ರಂಥದಲ್ಲಿ ಮದ್ರಾಸಪ್ರತಿ ವೀರಾಗಮ ಎಂದು ಉಲ್ಲೇಖಿಸುತ್ತಾರೆ. ಡಾ. ಸಿ. ಚ. ನಂದೀಮಠರು ನೇಪಾಳದ ದರ್ಬಾರ ಲೈಬ್ರರಿಯಲ್ಲಿ ಆಗಮಗಳ ಹಸ್ತಪ್ರತಿಗಳುಂಟೆಂದು ಬರೆಯುತ್ತಾರೆ. ಇಂದು ನಮಗೆ ಸುಲಭವಾಗಿ ಲಭ್ಯವಿರುವ ಆಗಮ ಸಂಗ್ರಹಗಳೆಂದರೆ ಮೂರುಸಾವಿರಮಠ ಹುಬ್ಬಳ್ಳಿಯವರು ಪ್ರಕಟಿಸಿದ ತಂತ್ರಸಂಗ್ರಹ, ಕನ್ನಡ ಅಧ್ಯಯನಪೀಠದ ಹಸ್ತಪ್ರತಿ ಭಂಡಾರದಲ್ಲಿ ಗುಬ್ಬಿಯ ಮಲ್ಲಣಾಚಾರ್ಯರು ಬರೆದ ಸಟೀಕ ವಾತುಲಾಗಮದ ಹಸ್ತಪ್ರತಿ, ಹಾಗೂ ಪಂ. ಕಾಶೀನಾಥ ಶಾಸ್ತ್ರಿಗಳು ಪ್ರಕಟಿಸಿದ ಆಗಮಗಳು.

ಆಗಮಗಳ ಮೇಲೆ ಡಾ. ಶಿ. ಚ. ನಂದಿಮಠರು ಪಿಎಚ್. ಡಿ. ಗೆ ಮಹಾ ಪ್ರಬಂಧ ಬರೆದಿರುವರು. ಗೋಪಿನಾಥ ಕವಿರಾಜ ಅವರ Some Aspects of Indian Philosophy ಎಂಬ ಗ್ರಂಥವು ಶೈವಾಗಮಗಳನ್ನು ಕುರಿತು ಬರೆದ ತತ್ವ ವಿವೇಚನೆ ಪ್ರಬಂಧ Veerashaiva Philosophy of the Shaivagamas... ಎಂಬುದು ಸಿದ್ಧರಾಮಪ್ಪ ಪಾವಟೆಯವರು ಬರೆದುದು. Saivagamas and Upanisads ..ಎಂಬುದು ಡಾ. ಎಚ್. ಪಿ. ಮಲ್ಲೇದೇವರು ಬರೆದ ಪಿ ಎಚ್.ಡಿ. ಪ್ರಬಂಧವು. ಡಾ. ಆರ್. ಸಿ. ಹಿರೇಮಠರು ಸಂಪಾದಿಸಿದ ಚನ್ನಬಸವಣ್ಣನವರ ವಚನಗಳ ಮುನ್ನುಡಿಯು ಡಾ. ಆರ್. ಆರ್. ದಿವಾಕರ ಅವರು ವಚನಶಾಸ್ತ್ರ ರಹಸ್ಯ ಎಂಬ ಗ್ರಂಥದಲ್ಲಿ ೧೧ನೆಯ ಪ್ರಕರಣವು ಶೈವಾಗಮಗಳ ಮತ್ತು ವಚನಗಳ ತಾತ್ವಿಕ, ಧಾರ್ಮಿಕ ವಿಷಯಗಳ ತೌಲನಿಕ ಅಧ್ಯಯನವಾಗಿರುವವು. ಪ್ರೊ. ಎಂ.ಆರ್. ಸಾಖರೆಯವರು ಬರೆದ ಲಿಂಗಧಾರಣ ಚಂದ್ರಿಕೆಗೆ ಬರೆದ ಮುನ್ನುಡಿ. ಇವು ಕೆಲವು ಶೈವಾಗಮ ಕುರಿತಿರುವ ಸುಪ್ರಸಿದ್ಧ ಬರಹಗಳಾಗಿವೆ. ಇನ್ನೂ ಹಲಕೆಲವು ಪ್ರಬಂಧಗಳು ಇದ್ದರೂ ಇರಬಹುದು. ಮೇಲೆ ಉಲ್ಲೇಖಿಸಿದ ಕೃತಿಗಳು ಸುಪ್ರಸಿದ್ಧವಾದವು.

ವೀರಶೈವ ತಾತ್ವಿಕ ವಿಚಾರ, ಧಾರ್ಮಿಕ ವಿಚಾರಗಳು ಆಗಮಗಳಲ್ಲಿ ಇರುವುದನ್ನು ಆಗಮಗಳಿಂದ ಹಾಗೂ ಅವುಗಳನ್ನು ಕುರಿತ ಕೃತಿಗಳಿಂದ ತಿಳಿದುಕೊಳ್ಳಬಹುದು.

ಆಗಮಗಳಲ್ಲಿ ಷಟ್‌ಸ್ಥಲ :

ಅ) ಇಂದು ಉಪಲಬ್ಧವಿರುವ ಆಗಮಗಳೆಂದರೆ 'ತಂತ್ರ ಸಂಗ್ರಹ' ದಲ್ಲಿಯ ವಾತುಲಾಗಮ, ದೇವೀ ಕಾಲೋತ್ತರಾಗಮ, ಸೂಕ್ಷ್ಮಾಗಮ. ಪಾರಮೇಶ್ವರಾಗಮ; ಮತ್ತು ಶ್ರೀ ಕಾಶೀನಾಥ ಗ್ರಂಥಮಾಲಾ ಪ್ರಸಿದ್ಧಪಡಿಸಿದ 'ಚಂದ್ರಜ್ಞಾನಾಗಮ', ಮಕುಟಾಗಮ, ಕಾರಣಾಗಮ, 'ಸೂಕ್ಷ್ಮಾಗಮ'. ಇವುಗಳಲ್ಲಿ ತಂತ್ರ ಸಂಗ್ರಹವು ವೀರಶೈವಧರ್ಮದ ತಾತ್ವಿಕ ಮತ್ತು ಧಾರ್ಮಿಕ ಸಾಧನೆಯ ವಿಚಾರಗಳನ್ನು ಪ್ರತಿಪಾದಿಸು

ತ್ತದೆ. ಸೊಲ್ಲಾಪೂರದ ವಾರದ ಮಲ್ಲಪ್ಪನವರು ಪ್ರಕಾಶಗೊಳಿಸಿದ 'ಪಾರಮೇಶ್ವರಾಗಮು'ವು ಉಪಯುಕ್ತವಿರುತ್ತದೆ. ನಿಜಗುಣ ಶಿವಯೋಗಿಗಳ 'ವಿವೇಕ ಚಿಂತಾಮಣಿ'ಯಲ್ಲಿಯು ಆಗಮುಪಾದದಲ್ಲಿ ಬರುವ ವೀರಶೈವ ಪ್ರತಿಪಾದನೆಯು ಪ್ರಸಂಗಪ್ರ ಷಟಸ್ಥಲ ವಿಚಾರವನ್ನು ನಿರೂಪಿಸುವದು. ಆಗಮುದ ದೃಷ್ಟಿಕೋನವನ್ನು ಆಚಾರ್ಯ ನಿಜಗುಣರು ತಿಳಿಸುವದು ಉಪಯುಕ್ತವಿದೆ.

೧) ಷಟ್‌ಸ್ಥಲವು—ಸ್ಥಲದ ಷಡ್ವಿಧರೂಪ :

ಪಾರಮೇಶ್ವರಾಗಮು ಆರನೆಯು ಪಟಲದ ಆರನೆಯು ಶ್ಲೋಕದಲ್ಲಿ ಶಿವನು ಪಾರ್ವತಿಗೆ ಹೀಗೆ ಹೇಳುತ್ತಾನೆ[೨] :

ಅಹಮೇವ ಜಗತ್‌ಸ್ರಷ್ಟಾ ಪುನರ್ಮಯ್ಯೇವ ಲೀಯತೇ ।
ಅಹಮೇವ ಸ್ಥಲಂ ವಿದ್ಧಿ ಷಡ್ವಿಧಂ ಮಮರೂಪಕಂ ॥

ನಾನು ಜಗತ್ತನ್ನು ಸೃಷ್ಟಿಸಿದೆನು. ನನ್ನಲ್ಲಿ ಜಗವು ಲಯುವಾಗುವದು. ನಾನೇ ಸ್ಥಲವೆಂದು ತಿಳಿ. ನನ್ನದು ಷಡ್ವಿಧರೂಪವು. ಶಿವನ ಈ ಷಡ್ವಿಧರೂಪವೆಂದರೆ ಷಟ್‌ಸ್ಥಲ. ಆ ಷಡ್ವಿಧ ರೂಪಗಳು ಇಂತಿವೆ :[೩]

ಭಕ್ತೋ ಮಹೇಶ್ವರಶ್ಚೈವ ಪ್ರಸಾದೀ ಪ್ರಾಣಲಿಂಗಿಕಃ ।
ಶರಣಃ ಶಿವಲಿಂಗೈಕ್ಯಃ ಸ್ಥಲಷಟಕಂ ಮಮ ಪ್ರಿಯಂ ॥

ಭಕ್ತಮಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯ ಎಂಬ ಸ್ಥಲಷಟ್ಕವು ನನಗೆ ಪ್ರಿಯವು. ಈ ಷಡ್ವಿಧ ಸ್ಥಲಗಳಿಗೆ-ಅಂದರೆ ಶಿವನ ಆರು ರೂಪಗಳಿಗೆ-ಪೂಜೆ ಮಾಡಿಕೊಳ್ಳುವದಕ್ಕೋಸ್ಕರ ಶಿವನೇ ಆರು ಲಿಂಗಗಳಾದನು. ಆ ಆರು ಲಿಂಗಗಳು ಇಂತಿವೆ: ಆಚಾರ ಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ ಮತ್ತು ಮಹಾಲಿಂಗ. ಇದು ಒಂದು ಬಗೆಯು ಆತ್ಮಧ್ಯಾನ ವಿಧಾನವೆಂದು ಹೇಳಬಹುದು.

ಷಟ್‌ಸ್ಥಲ ವಿಕಾಸ :

ಪಾರಮೇಶ್ವರಾಗಮುದ ಈ ಶ್ಲೋಕಗಳಿಂದ ತಿಳಿಯುವ ರಹಸ್ಯವೇನಂದರೆ ಶಿವನು ಷಡ್ವಿಧ ರೂಪುತಾಳಿ ಷಟ್‌ಸ್ಥಲವೆಂದು ಹೆಸರು ಪಡೆದನು. ಈ ಷಟ್‌ಸ್ಥಲ ರೂಪಿಯಾದ ಪರಶಿವನು ಅಂಗಷಟ್‌ಸ್ಥಲ ಮತ್ತು ಲಿಂಗಷಟ್‌ಸ್ಥಲಗಳಾಗಿ ಲೀಲಾಮಯುನಾಗಿ ತನ್ನ ಪೂಜೆಯುನ್ನು ತಾನೆ ಮಾಡಿಕೊಳ್ಳುವನೆಂದು ಗೊತ್ತಾಗುತ್ತದೆ. ಇದು ಅಪರೂಪದ ಸಿದ್ಧಾಂತವಾಗಿದೆಯೆಂದು ಭಾರತದ ದರ್ಶನ ಚರಿತ್ರೆಯು ಅವಲೋಕನದಿಂದ ತಿಳಿದುಬರುತ್ತದೆ. ಪರಶಿವನು ಈ ಷಡ್ವಿಧರೂಪವಾಗುವುದನ್ನು ಷಟ್‌ಸ್ಥಲ ಪ್ರವೃತ್ತಿಮಾರ್ಗವೆಂದೂ, ಲಿಂಗಪೂಜೆಯಲ್ಲಿ ತನ್ನೊಳು ತಾನು ಲೀನವಾಗಿ ಸ್ವಯಂಭೂಪಾವಸ್ಥೆ ಹೊಂದುವದು ಷಟ್‌ಸ್ಥಲ ನಿವೃತ್ತಿಮಾರ್ಗ ಎಂದೂ ಪ್ರತಿಪಾದಿಸಲಾಗಿದೆ. ಷಟ್‌ಸ್ಥಲ ಪ್ರವೃತ್ತಿ ಹಾಗೂ ನಿವೃತ್ತಿಯುನ್ನು ಕೆಳಗಿನಂತೆ ಅಂಶರೂಪದಲ್ಲಿ ತೋರಿಸಬಹುದು :

- ನಿಃಕಲ ಪರಶಿವ
  - ಚಿತ್
    - ಶಿವ-ಶಕ್ತ್ಯಾತ್ಮಕ ಶಿವತತ್ವ
      - ಲಿಂಗಸ್ಥಲ-ಶಕ್ತಿ-ಪ್ರವೃತ್ತಿ-ಉಪಾಸ್ಯ-ಶಿವ
        - ಇಷ್ಟಲಿಂಗ
          - ಆಚಾರ ಲಿಂಗ — ಕ್ರಿಯಾ ಶಕ್ತಿ
          - ಗುರು ಲಿಂಗ — ಜ್ಞಾನ ಶಕ್ತಿ
        - ಪ್ರಾಣಲಿಂಗ
          - ಶಿವ ಲಿಂಗ — ಇಚ್ಛಾ ಶಕ್ತಿ
          - ಜಂಗಮ ಲಿಂಗ — ಆದಿ ಶಕ್ತಿ
        - ಭಾವಲಿಂಗ
          - ಪ್ರಸಾದ ಲಿಂಗ — ಪರಾ ಶಕ್ತಿ
          - ಮಹಾ ಲಿಂಗ — ಚಿತ್ ಶಕ್ತಿ
      - ಭಕ್ತಿ-ನಿವೃತ್ತಿ-ಉಪಾಸಕ-ಜೀವ : ಅಂಗಸ್ಥಲ
        - ತ್ಯಾಗಾಂಗ
          - ಭಕ್ತ — ಸದ್ಭಕ್ತಿ
          - ಮಹೇಶ — ನೈಷ್ಠಿಕಾ ಭಕ್ತಿ
        - ಭೋಗಾಂಗ
          - ಪ್ರಸಾದಿ — ಅವಧಾನ ಭಕ್ತಿ
          - ಪ್ರಾಣಲಿಂಗಿ — ಅನುಭಾವ ಭಕ್ತಿ
        - ಯೋಗಾಂಗ
          - ಶರಣ — ಆನಂದ ಭಕ್ತಿ
          - ಐಕ್ಯ — ಸಮರಸ ಭಕ್ತಿ

ಬ) ಪಾರಮೇಶ್ವರಾಗಮವು ಷಟ್‌ಸ್ಥಲದ ಹೊಸ ಮುಖವನ್ನು ಹೊರಗೆಡುಹುತ್ತದೆ. ಪಟಲ ೬. ಶ್ಲೋಕ ೩೨—

ಸರ್ವಜ್ಞತಾ ತೃಪ್ತಿರನಾದಿ ಬೋಧಃ । ಸ್ವತಂತ್ರತಾ ನಿತ್ಯಮಲುಪ್ತ ಶಕ್ತಿಃ ॥
ಅನಂತ ಶಕ್ತಿಶ್ಚ ವಿಭೋರ್ವಿಧಿಜ್ಞಾಃ । ಷಡಾಹುರಂಗಾನಿ ಮಹೇಶ್ವರಸ್ಯ ॥
ಯದ್ಭಕ್ತಸ್ಥಲ ಮಿತ್ಯಾಹುಸ್ತತ್ಸರ್ವಜ್ಞತ್ವ ಮುಚ್ಯತೇ ।
ಮನ್ಮಹೇಶ್ವರಕಂ ನಾಮ ಸಾ ತೃಪ್ತಿರ್ಮಮ ಶಂಕರಿ ॥
ಯತ್ಪ್ರಸಾಧಾಭಿಧಂ ಸ್ಥಾನಂ ತದ್ಬೋಧೋ ಮೇ ನಿರಂಕುಶಃ ।
ಯತ್ಪ್ರಾಣಲಿಂಗಕಂ ನಾಮ ತತ್ ॥
ಸ್ವಾತಂತ್ರ್ಯ ಮುದಾಹೃತಂ । ಯದಸ್ತಿ ಶರಣಜ್ಞಾನಮಲುಪ್ತಾ ಶಕ್ತಿರುಚ್ಯತೇ
ಯದೈಕ್ಯಸ್ಥಾನ ಮೂರ್ಧ್ವಸ್ಥಂ ಶಕ್ಯನಂತೇ ಶಿತಾ ಮಮ ॥೩೬॥

ಸರ್ವಜ್ಞತ್ವವೆ ಭಕ್ತ, ತೃಪ್ತಿಯೆ ಮಹೇಶ್ವರ, ನಿರಂಕುಶವಾದ ಬೋಧೆಯೆ ಪ್ರಸಾದಿ, ಸ್ವಾತಂತ್ರ್ಯವೇ ಪ್ರಾಣಲಿಂಗಿ, ಅಲುಪ್ತ ಶಕ್ತಿಯೆ ಶರಣ; ಮತ್ತು ಊರ್ಧ್ವವಾದ ಅನಂತ ಶಕ್ತಿಯೇ ಐಕ್ಯ ಎಂದು ಹೇಳಲ್ಪಟ್ಟಿದೆ ಆಗಮದಲ್ಲಿ.

ಪಾರಮೇಶ್ವರಾಗಮದ ಇಬ್ಬಗೆಯ ಹೇಳಿಕೆಗಳು ಷಟ್‌ಸ್ಥಲದ ದ್ವಿಧ ಲಕ್ಷಣ ವಿಶೇಷಗಳನ್ನು ಚಿತ್ರಿಸುತ್ತವೆ. ಮೊದಲನೆಯದು ಪಿಂಡಾಂಡ ಮತ್ತು ಬ್ರಹ್ಮಾಂಡಗಳ ಪ್ರವೃತ್ತಿ ಮತ್ತು ನಿವೃತ್ತಿಗಳನ್ನು ತಿಳಿಸಿದರೆ ಆ ಪಿಂಡ ಬ್ರಹ್ಮಾಂಡಗಳು ಷಟ್‌ಸ್ಥಲಗಳು ಆಗಿರುತ್ತವೆ ಎಂದು ಬೋಧೆಯಿದೆ. ಷಟ್‌ಸ್ಥಲದ ಪ್ರವೃತ್ತಿಯಲ್ಲಿರುವಾಗ ಕಿಂಚಿದತ್ವವದರಲ್ಲಿ ತಲೆದೋರಿದರೆ, ನಿವೃತ್ತಿಯಲ್ಲಿರುವಾಗ ಮಹತ್–ತೆಯು ಅಥವಾ ಏಕಮೇವಾದ್ವಿತೀಯತೆಯು ಉಂಟಾಗುತ್ತದೆ. ಮೊದಲನೆಯದು ಅನೇಕತ್ವವಾದರೆ, ಎರಡನೆಯದು ಏಕತ್ವಸಿದ್ಧಿಯಾಗಿರುತ್ತದೆ. ಷಟ್‌ಸ್ಥಲದ ಒಂದು ಸ್ವರೂಪವಿದು ಆಗಮದಲ್ಲಿ.

ಷಟ್‌ಸ್ಥಲದ ಇನ್ನೊಂದು ಮುಖವು ಪಾರಮೇಶ್ವರಾಗಮದಿಂದ ತಿಳಿದುಬರುವುದೇನಂದರೆ— ಪರಶಿವನು ತನ್ನೊಳು ತಾನಿದ್ದ ಸ್ಥಿತಿಯಲ್ಲಿದ್ದರೂ ಅವನಲ್ಲಿ ಷಡ್ವಿಧ ಶಕ್ತಿಗಳು– ಭಕ್ತ್ಯಾದ್ಯೈಕಾಂತವಾಗಿ— ಇರುತ್ತವೆ. ಈ ಷಡ್ವಿಧ ಶಕ್ತ್ಯಾತ್ಮಕ ಶಿವನೇ ಷಟ್‌ಸ್ಥಲ. ಅವು ಸರ್ವಜ್ಞತ್ವ, ತೃಪ್ತಿ. ನಿರಂಕುಶ ಬೋಧೆ. ಸ್ವಾತಂತ್ರ್ಯ. ಅಲುಪ್ತ ಶಕ್ತಿ. ಊರ್ಧ್ವವಾದ ಅನಂತ ಶಕ್ತಿಗಳು. ಆದುದರಿಂದ ಷಟ್‌ಸ್ಥಲವೆಂದರೆ ಶಕ್ತಿ ವಿಶಿಷ್ಟ ಪರಶಿವನು. ಕಠೋಪನಿಷತ್ತು, ಪ್ರಶ್ನೋಪನಿಷತ್ತು ಮತ್ತು ಶ್ವೇತಾಶ್ವತರೋಪನಿಷತ್ತುಗಳು ಹೇಳುವ ಶಕ್ತಿವಿಶಿಷ್ಟವಾದ ಪರಬ್ರಹ್ಮಸಿದ್ಧಾಂತ ಇದುವೆಂದು ನಾವು ಗುರುತಿಸಬಹುದು. ಇವೆರಡು ರೂಪಗಳು ಷಟ್‌ಸ್ಥಲವು ಪಾರಮೇಶ್ವರಾಗಮ ಚಿತ್ರಿಸಿದಂತೆ.

ಸೂಕ್ಷ್ಮಾಗಮದ ಷಟ್‌ಸ್ಥಲ ವಿಚಾರ :

ಪ್ರಣವ ಪಟಲದಲ್ಲಿ ಪ್ರಣವ ಮಂತ್ರ ವಿಚಾರವನ್ನು ಪ್ರತಿಪಾದಿಸುವ ಸೂಕ್ಷ್ಮಾಗಮವು ವೀರಶೈವ ತತ್ವವಿಚಾರವನ್ನು ಪರಿಶೀಲಿಸತೊಡಗಲು ಪ್ರಾರಂಭಿಸಿದಾಗ ಷಟ್‌ಸ್ಥಲಕ್ಕೆ ಬಂದು ತಲುಪುತ್ತದೆ. ಪ್ರಣವ ಷಡ್ವರ್ಣ ಎಂದು ತಿಳಿಸುವಲ್ಲಿ ಷಟ್‌ಸ್ಥಲ ವಿಚಾರ ಮುಟ್ಟುವ ಮೂಲವಿದೆ. ಪ್ರಣವವು ಷಡ್ವರ್ಣವೆಂದು ಪ್ರಾರಂಭದಲ್ಲಿ ಹೇಳಿದ ಸೂಕ್ಷ್ಮಾಗಮವು ಅದರ ಷಟ್‌ತತ್ವ ಸ್ವರೂಪವನ್ನು ಸೂಕ್ಷ್ಮವಾಗಿ ಅಥವಾ ಸಾರವತ್ತಾಗಿ ತಿಳಿಸುತ್ತದೆ : ಯಕಾರವು ಪೂರ್ಣರೂಪ, ವಾಕಾರವು ನಿತ್ಯರೂಪ, ಶಿಕಾರವು ಆನಂದರೂಪ, ಮಕಾರವು ಚಿದ್ರೂಪ, ನಕಾರವು ಸದ್ರೂಪ, ಓಂಕಾರವು ಮಿಶ್ರರೂಪ. ಯಕಾರಕ್ಕೆ ಪರಾಸಂಜ್ಞೆ, ವಾಕಾರಕ್ಕೆ ಗೂಢಸಂಜ್ಞೆ, ಶಿಕಾರಕ್ಕೆ ಶರೀರಸ್ಥ ಸಂಜ್ಞೆ, ಮಕಾರಕ್ಕೆ ಲಿಂಗಕ್ಷೇತ್ರ ಸಂಜ್ಞೆ, ನಕಾರಕ್ಕೆ ಅನಾದಿ ರೂಪ ಸಂಜ್ಞೆ, ಪ್ರಣವಕ್ಕೆ ಮಹಾಸಂಜ್ಞೆ. ಯಾಕ್ಷರ ಪರಾಶಕ್ತಿ, ವಾಕ್ಷರ ಆದಿಶಕ್ತಿ, ಶಿಕಾರ ಇಚ್ಛಾಶಕ್ತಿ, ಮಾಕ್ಷರ ಜ್ಞಾನ ಶಕ್ತಿ, ನಾಕ್ಷರ ಕ್ರಿಯಾಶಕ್ತಿ, ಓಂಕಾರ ಚಿಚ್ಛಕ್ತಿ. ಯಾಕಾರ ಶಿವಸಾದಾಖ್ಯ, ವಾಕಾರ ಅಮೂರ್ತ ಸಾದಾಖ್ಯ ಶಿಕಾರ ಮೂರ್ತ ಸಾದಾಖ್ಯ, ಮಕಾರ ಕರ್ತೃಸಾದಾಖ್ಯ, ನಕಾರ ಕರ್ಮಸಾದಾಖ್ಯ, ಓಂಕಾರ ಮಹಾ ಸಾದಾಖ್ಯ, ಯಕಾರ ಪ್ರಸಾದಲಿಂಗ, ವಾಕಾರ ಚರಲಿಂಗ, ಶಿಕಾರ ಶಿವಲಿಂಗ, ಮಕಾರ ಗುರುಲಿಂಗ, ನಕಾರ ಆಚಾರಲಿಂಗ, ಓಂಕಾರ ಮಹಾಲಿಂಗ. ಐಕ್ಯ, ಶರಣ, ಪ್ರಾಣಲಿಂಗಿ, ಪ್ರಸಾದಿ, ಮಾಹೇಶ್ವರ, ಭಕ್ತ ಈ ಷಟ್‌ಸ್ಥಲಾತ್ಮಕವಾಗಿದೆ ಷಡಕ್ಷರ. ಇದೆಲ್ಲ ಷಟ್‌ಸ್ಥಲದ ವೈವಿಧ್ಯಮಯವಾದ ವಿವರಣೆ.

ಲಿಂಗಪಟಲದಲ್ಲಿ ಸೂಕ್ಷ್ಮಾಗಮವು ತುಂಬಾ ಮಹತ್ವದ ವಿಚಾರಗಳನ್ನು ತಿಳಿಸುವುದು ಗಮನಾರ್ಹ. ಲಿಂಗದಲ್ಲಿ ಮಂತ್ರವಿದೆ ; ಮಂತ್ರದಲ್ಲಿ ಲಿಂಗವಿದೆ. ವೀರಶೈವ ಸಿದ್ಧಾಂತದಲ್ಲಿ ಎರಡಕ್ಕೂ ಐಕ್ಯಭಾವವಿದೆ. ಲಿಂಗ ಪೂಜಾಕ್ರಮವನ್ನು ವಿವರಿಸುವ ಸೂಕ್ಷ್ಮಾಗಮವು ಇಷ್ಟಲಿಂಗ ಪೂಜೆ, ಪ್ರಾಣಲಿಂಗ ಪೂಜೆಗಳು ಹೇಗೆ ಭಿನ್ನ ಭಿನ್ನವಾಗಿವೆ ಕ್ರಿಯಾಭೇದದಿಂದ ಎಂದು ತಿಳಿಸಿ ಇದು ಷಟ್‌ಸ್ಥಲಾತ್ಮಕ ರಹಸ್ಯ ಪೂಜೆಯೆಂದು ಬೋಧಿಸುತ್ತದೆ. ಅದನ್ನು ಹೀಗೆ ವಿವರಿಸುತ್ತದೆ— ವಿಭೂತಿ ರುದ್ರಾಕ್ಷಿ ಧರಿಸಿದಲ್ಲಿಗೆ ಭಕ್ತಸ್ಥಲ, ಷಡಕ್ಷರ ಮಂತ್ರ ಜಪಿಸಿದಲ್ಲಿಗೆ ಮಹಾಹೇಶ್ವರ ಸ್ಥಲ, ಸತ್ಕ್ರಿಯೆ ಲಿಂಗವನ್ನು ಕರಸ್ಥಲಕ್ಕೆ ತಂದಲ್ಲಿಗೆ ಪ್ರಸಾದಿಸ್ಥಲ, ಮಜ್ಜನಾದಿಗಳಿಂದ ಪೂಜಿಸುವಲ್ಲಿಗೆ ಪ್ರಾಣಲಿಂಗಿಸ್ಥಲ, ಆನಂದದಿಂದ ಶಿವಪ್ರಸಾದರ್ಪಣವಾಗಲು ಶರಣಸ್ಥಲ, ಆ ಲಿಂಗಾರ್ಪಣ ಪ್ರಸಾದವನ್ನು ತಾನು ಉಪಭೋಗಿಸಿ ತೃಪ್ತನಾದಲ್ಲಿಗೆ ಐಕ್ಯಸ್ಥಲ. ಹೀಗೆ ಸಮರಸಭಾವದಿಂದ ಅಂಗ ಷಟ್‌ಸ್ಥಲಯೋಗದಿಂದ ಆರಾಧಿಸಿದವನು ವೀರಶೈವನೆನಿಸುವನು.

ಸೂಕ್ಷ್ಮಾಗಮದ ಲಿಂಗಾಂಗ ಪಟಲದಲ್ಲಿಯ ವಿಚಾರ[೬] :

ಸಿ) ಲಿಂಗವಿಜ್ಞಾನವು ಅದೇ ರೀತಿ ಅಂಗವಿಜ್ಞಾನವು ಷಟಸ್ಥಲಾತ್ಮಕವಾಗಿರುವದೆಂದು ಸೂಕ್ಷ್ಮಾಗಮವು ತಿಳಿಸುತ್ತದೆ. ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಚರಲಿಂಗ, ಪ್ರಸಾದಲಿಂಗ ಮತ್ತು ಮಹಾಲಿಂಗ ಎಂಬ ಆರು ಲಿಂಗಗಳು ಲಿಂಗಷಟ್‌ಸ್ಥಲಗಳು.

ಡಿ) ಇನ್ನು ಅಂಗವು ಆರು ಬಗೆಯಾಗಿರುವುದೆಂಬುದನ್ನು ತಿಳಿಸುವುದೇ ಅಂಗಷಟ್‌ಸ್ಥಲ ವಿಜ್ಞಾನವು. ಭಕ್ತ ಮಹೇಶ ಪ್ರಸಾದಿ ಪ್ರಾಣಲಿಂಗಿ ಶರಣ ಮತ್ತು ಐಕ್ಯ. ಇವಾರು ಅಂಗಷಟ್‌ಸ್ಥಲಗಳು. ದೇಹಾಭಿಮಾನವನ್ನು ಬಿಟ್ಟವನೇ ಭಕ್ತ. ಚಿತ್ತ ಶುದ್ಧವಾದವನೆ ಮಾಹೇಶ್ವರ. ಚಿತ್ತಸ್ಥಿರವಾದವನೆ ಪ್ರಸಾದಿ. ಜೀವಭ್ರಾಂತಿಯನ್ನು ಬಿಟ್ಟು ಲಿಂಗಾತ್ಮನಾದವನೇ ಪ್ರಾಣಲಿಂಗಿ. ಶಿವನಿತ್ಯತ್ವದಿಂದ ನಿಶ್ಚಿಂತನೂ ನಿಜಾನಂದನೂ ಆದವನೆ ಶರಣ. ಶಿವ ಜೀವ ಎಂಬ ಉಭಯ ಭ್ರಾಂತಿರಹಿತನೆ ಐಕ್ಯನು.

ಪಾರಮೇಶ್ವರಾಗಮದಲ್ಲಿಯ ಅಂಗಷಟ್‌ಸ್ಥಲ ವಿಚಾರ :

ಡಿ) ಗುರುಲಿಂಗ ಜಂಗಮವನು ತಾರತಮ್ಯದಿಂದ ಪೂಜಿಸುವವನು ಭಕ್ತ. ಗುರುಶಾಸನದಂತೆ ಲಿಂಗ ಜಂಗಮ ಪೂಜೆಯನ್ನು ಮಾಡಿ ಸಮತಾಚಾರದಿಂದ ಆಚರಿಸುವವನು ಮಾಹೇಶ್ವರ. ಜಂಗಮ ಪೂಜೆ ಶಿವಾರ್ಪಣೆಗಳನ್ನು ಮಾಡದೆ ಅನ್ನವನ್ನು ಗ್ರಹಿಸದಿರುವುದು ಪ್ರಸಾದಿತ್ವ. ಪ್ರಾಣ ಲಿಂಗ ಶಿವ ಇವು ಮೂರು ಒಂದು ಎಂಬ ಏಕಬುದ್ಧಿಯುಳ್ಳವನು ಪ್ರಾಣಲಿಂಗಿ. ಈ ಕ್ಷಣತ್ರಯದಿಂದ ಮುಕ್ತನಾಗಿ ಏಕಾಂತ ಸೇವಿಯಾಗಿ ಶಿವಧ್ಯಾನದಲ್ಲಿರುವವನು ಶರಣ. ಪೂಜಾಧ್ಯಾನಾದಿಗಳ ಅವಶ್ಯಕತೆ ಇಲ್ಲದೆ ಸೋಹಂಭಾವ ಪೂರ್ಣವಾಗಿರುವವನು ಐಕ್ಯನು.

ಸೂಕ್ಷ್ಮಾಗಮ ವಿಚಾರ ಪರಿಶೀಲನೆ :

ಇ) ಸೂಕ್ಷ್ಮಾಗಮದಲ್ಲಿಯ ಮಂತ್ರಪಟಲದ ವಿವರಣೆಯು ವಿಶಿಷ್ಟವಾದ ತತ್ತ್ವಜ್ಞಾನ ದೃಷ್ಟಿಕೋನವುಳ್ಳುದಾಗಿದೆಯೆಂದು ಕಂಡುಬರುತ್ತದೆ. ಇದನ್ನು ಶಬ್ದ ಅಥವಾ ವರ್ಣತತ್ತ್ವಜ್ಞಾನವೆಂದು ಹೇಳಬಹುದು. ಮಂತ್ರವಿಚಾರ ಹಾಗೂ ಲಿಂಗವಿಚಾರದ ಏಕತ್ವವನ್ನು ತಿಳಿಸುವ ಮಂತ್ರಪಟಲವು ಮಂತ್ರ ಹಾಗೂ ಲಿಂಗವು ಷಟ್‌ಸ್ಥಲವೆಂದು ತೋರಿಸಿ ಷಟಸ್ಥಲ ತತ್ತ್ವಜ್ಞಾನವನ್ನು ಅನುಷ್ಠಾನವಿಜ್ಞಾನದಲ್ಲಿ ಪರಿವರ್ತನಗೊಳಿಸುವಲ್ಲಿ ಯಶಸ್ವಿಯಾಗಿದೆ. ಮಂತ್ರ, ಲಿಂಗ ಮತ್ತು ಅಂಗಗಳ ಬಹುತ್ವವನ್ನು ನಿವಾರಿಸಿ ಅದ್ವೈತೋಪಾಸನಾಮಾರ್ಗ ತೋರಿಸಿ, ಷಟಸ್ಥಲ ಉಪಾಸನಾ ವಿಜ್ಞಾನವನ್ನು ದೃಢಗೊಳಿಸಿದೆ. ತತ್ತ್ವಜ್ಞಾನವು ಉಪಾಸನಾಮಾರ್ಗಕ್ಕೆಡೆಮಾಡಿಕೊಡುವ ಒಂದು ಉತ್ತಮ ಉದಾಹರಣೆಯು ಇಲ್ಲಿದೆ.

ಸೂಕ್ಷ್ಮಾಗಮದ ಮಂತ್ರಪಟಲದಲ್ಲಿಯ ಷಟಸ್ಥಲವಿಚಾರವಿದು.[೭]

ಲಿಂಗಾಂಗ ಪಟಲ ವಿಚಾರ : ಸೂಕ್ಷ್ಮಾಗಮದ ಲಿಂಗ ಪಟಲದಂತೆ ಲಿಂಗಾಂಗ ಪಟಲವೂ ಸಹ ಷಟಸ್ಥಲ ಶಾಸ್ತ್ರ ಪ್ರತಿಪಾದನೆಯನ್ನು ಮಾಡುತ್ತದೆ. ಅಂಗಪದದ ನಿರ್ವಚನವೂ ಇಲ್ಲಿರುತ್ತದೆ, ಪರಲಿಂಗವು ಷಟಸ್ಥಲಾತ್ಮಕವಾದ ಈ ಅಂಗದಲ್ಲಿ ಜ್ಞಾನ ಮತ್ತು ಕ್ರಿಯೆಗಳಿಂದ ನಾಮರೂಪ ಕ್ರಿಯಾತ್ಮಕವಾಗಿರುವುದು. ಅಂಗನ ನಾಸಿಕಾಂಗ, ಜಿಹ್ವಾಂಗ, ದೃಗಂಗ, ತ್ವಗಂಗ, ಶ್ರೋತ್ರಾಂಗ, ಮತ್ತು ಹೃದಯಾಂಗ ಷಟಸ್ಥಲಗಳಲ್ಲಿ ಅನುಕ್ರಮವಾಗಿ ಆಚಾರ, ಗುರು, ಶಿವ, ಚರ, ಪ್ರಸಾದ, ಮತ್ತು ಮಹಾಲಿಂಗಗಳಿರುತ್ತವೆ. ಇದು ಜ್ಞಾನಷಟಸ್ಥಲಂಗಳಲ್ಲಿ ಲಿಂಗಷಟಸ್ಥಲಸಂಬಂಧವಾಗಿರುತ್ತದೆ. ಇದೇ ಪ್ರಕಾರ ಕರ್ಮಾಂಗಷಡ್ವಿಧದಲ್ಲಿ ಷಡ್ಲಿಂಗಗಳ ಸಂಬಂಧವಿದೆಯೆಂದು ಆಗಮವು ತಿಳಿಸುವುದು. ಇದು ಸರ್ವಾಂಗಲಿಂಗತ್ವ, ಇದೇ ಷಟಸ್ಥಲ ಸಂಬಂಧ ಬೋಧೆ. ಇಲ್ಲಿಗೆ ಆಗಮಗಳಲ್ಲಿರುವ ಷಟಸ್ಥಲವಿಚಾರ ಪ್ರತಿಪಾದನೆಯು ಮುಕ್ತಾಯವಾಯಿತು.

ಆಗಮಗಳಲ್ಲಿಯ ಷಟಸ್ಥಲ ನಿರೂಪಣೆಯ ಮೀಮಾಂಸೆ :

ನಿಜಗುಣ ಶಿವಯೋಗಿಗಳು ಈ ವಿಷಯವನ್ನು ಪ್ರತಿಪಾದನೆ ಮಾಡಿರುವುದನ್ನು ವಿವೇಕ ಚಿಂತಾಮಣಿಯಲ್ಲಿಯ ಆಗಮ ಪಾದದಲ್ಲಿ ನೋಡಿದಾಗ ಆಗಮ ಪಾರಾಂಗತರಾದ ಅವರು ಷಟಸ್ಥಲ ವಿಚಾರವನ್ನು ಅತ್ಯಂತ ಸಾರರೂಪದಲ್ಲಿ ತಿಳಿಸಿರುವುದು ಗೊತ್ತಾಗುತ್ತವೆ. ಷಟಸ್ಥಲದ ಫಲಕ್ರಮಗಳನ್ನು ತಿಳಿಸಿರುವುದು ಪಾರಮೇಶ್ವರಾಗಮದ ಆರನೇ ಪಟಲದ ನಲವತ್ತೆರಡನೆಯ ಶ್ಲೋಕದಲ್ಲಿ ಪ್ರತಿಪಾದಿಸಿದಂತಿರುವುದು ಗಮನಾರ್ಹ. ಅವರು ಷಟ್‌ಸ್ಥಲಾಚಾರ ವಿಚಾರವನ್ನು ಮಾತ್ರ ತಿಳಿಸಿರುವುದು ಅವರು ಷಟ್‌ಸ್ಥಲಶಾಸ್ತ್ರದ ಜೀವಾಳವನ್ನೆ ತಿಳಿಸಿದಂತಾಗಿರುತ್ತದೆ. ಭಾರತೀಯರಿಗೆ ಸಿದ್ಧಾಂತವು ಆಚಾರದಿಂದ ಪೂರ್ಣವಾಗುತ್ತದೆ, ಹಾಗೂ ಆಚಾರ ವಿರಹಿತ ಅರಿವು ಅಜ್ಞಾನವೆಂಬುದು ಇಲ್ಲಿ ಎತ್ತಿತೋರಿಸಲಾಗಿದೆಯೆನ್ನಲಡ್ಡಿಯಿಲ್ಲ. ಜ್ಞಾನವೇ ಲಿಂಗ, ಆಚಾರವೇ ಅಂಗ. ಜ್ಞಾನ ಮತ್ತು ಆಚಾರಗಳ ಸಾಮರಸ್ಯವೇ ಲಿಂಗಾಂಗ ಸಾಮರಸ್ಯವೆಂಬುದು ಷಟ್‌ಸ್ಥಲ ಸಿದ್ಧಾಂತ. ಇದೇ ಪರಾತ್ಪರದ ಬದುಕು. ಇದನ್ನು ಜೀವನ್ಮುಕ್ತ ಸ್ಥಿತಿಯೆಂದು ಹೇಳಬಹುದು. ಆಗಮದಲ್ಲಿ ಕಂಡುಬರುವ ಷಟ್‌ಸ್ಥಲ ಸಿದ್ಧಾಂತದ ಒಂದು ಚಿತ್ರವಿದು.

ಷಟಸ್ಥಲವೆಂದರೆ ಬಹುತ್ವ ಹೊಂದಬಲ್ಲ ಪರಬ್ರಹ್ಮವು. ಇದು ವಸ್ತುಸಿದ್ಧಾಂತವಾಗಿರುತ್ತದೆಯೆಂಬುದು ಪಾರಮೇಶ್ವರಾಗಮದ ಪ್ರತಿಪಾದನೆಯಿಂದ ಸ್ಪಷ್ಟವಾಗುತ್ತದೆ. ವಸ್ತುಸಿದ್ಧಾಂತವೆಂದಾಗ ವಸ್ತುವಿನ ಲಕ್ಷಣಗಳೇನು ಎಂದು ತಿಳಿದುಕೊಳ್ಳಬೇಕೆಂಬುದು ಸಹಜವಾದ ಕುತುಹಲ. ಶಕ್ತ್ಯಾತ್ಮಕವಾದ ಪರಮವಸ್ತುವು ಷಟ್‌ಸ್ಥಲವೆಂದು ಪಾರಮೇಶ್ವರಾಗಮದ ಅಭಿಪ್ರಾಯ ಆ ಶಕ್ತಿಯು ಷಡ್ವಿಧವಾಗಿರುವ ಕಾರಣ ಆ ಸ್ಥಲನಾಮದ ವಸ್ತುವು—ಪರಬ್ರಹ್ಮವು—ಷಟ್‌ಸ್ಥಲವೆಂದು ಸಾಂಕೇತಿಕ

ನಾಮವನ್ನು ಪಡೆಯಿತು. ಆಗಮದಲ್ಲಿ ಬರುವ ಷಟ್‌ಸ್ಥಲ ಸಿದ್ಧಾಂತವು ವಸ್ತು ಸಿದ್ಧಾಂತವಾಗಿರುವುದು ಇದರಿಂದ ಖಚಿತವಾಗುತ್ತದೆ. ಸ್ಥಲತತ್ವವು ನಿಃಕಲಪರ ಶಿವನೆಂಬ ಪರ್ಯಾಯ ಪದದಿಂದ ಸಂಬೋಧಿಸಲ್ಪಟ್ಟಿರುವುದು ಆಗಮದಲ್ಲಿ. ಆಗಮ ದಲ್ಲಿ ಈ ಪರಬ್ರಹ್ಮವು—ನಿಃಕಲಪರಶಿವವು ಅಥವಾ ಷಟ್‌ಸ್ಥಲವು–ವಿಕಾಸಹೊಂದಿದ ಕ್ರಮದ ಕೋಷ್ಟಕರೂಪದ ಚಿತ್ರಣವನ್ನು ನೋಡಿದಾಗ ವಿಕಾಸಸಿದ್ಧಾಂತವು ಷಟ್ ಸ್ಥಲ ಸಿದ್ಧಾಂತದಿಂದ ಸ್ವೀಕರಿಸಲ್ಪಟ್ಟಿದೆಯೆಂದು, ತಿಳಿದುಬರುತ್ತದೆ. ಇದು ವಿಕೃತ ಪರಿಣಾಮವಾದವೊ, ಅವಿಕೃತ ಪರಿಣಾಮವಾದವೊ ಎಂಬುದು ಇಲ್ಲಿ ಹುದುಗಿ ಕೊಂಡಿರುವ ತಾತ್ವಿಕಪ್ರಶ್ನೆಯಾಗಿರುತ್ತದೆ.

ಪಾರಮೇಶ್ವರಾಗಮದಲ್ಲಿ ಷಟ್‌ಸ್ಥಲವೆಂದರೆ ಅರಿವು ಹಾಗೂ ಆಚಾರಗಳ ಸಾಮರಸ್ಯವೆಂಬ ಸಿಂದ್ಧಾಂತವಾಗಿ, ಶಕ್ತಿವಿಶಿಷ್ಟವಾದ ನಿಃಕಲಪರ ಶಿವನೆಂದರೆ ಷಟ್ ಸ್ಥಲವೆಂಬ ವಸ್ತು ಸಿದ್ಧಾಂತವಾಗಿ ಪ್ರತಿಪಾದನೆಗೊಂಡಿರುತ್ತದೆ.

ಸೂಕ್ಷ್ಮಾಗಮದಲ್ಲಿ[೬] ಷಟ್‌ಸ್ಥಲಸಿದ್ಧಾಂತವು ಅನುಭಾವ ಸ್ವರೂಪವನ್ನು ತಳೆ ದದ್ದು ಗೊತ್ತಾಗುತ್ತದೆ. ಸರ್ವಾಂಗ ಲಿಂಗಿಯಾಗುವುದು ಅನುಭಾವದ ಗುರಿಯಾ ಗಿದ್ದು, ಅದನ್ನಿಲ್ಲಿ ನಿರೂಪಿಸಲಾಗುತ್ತದೆ. ತನ್ನಿಂದ ತಾನು ಪೂಜೆಗೊಳ್ಳಬೇಕೆಂಬುದನ್ನು 'ರುದ್ರನನ್ನು ರುದ್ರನಾಗಿ ಪೂಜಿಸು' ಎಂಬ ಸೂತ್ರಮುಖಾಂತರ ತಿಳಿಸಿರುವುದನ್ನು ಶಿವಶರಣನು ಲಿಂಗವಾಗಿ ಲಿಂಗಪೂಜೆ ಮಾಡಿಕೊಳ್ಳುವುದು ಹಾಗೂ ಆ ಅನುಭವದಲ್ಲಿ ಲೀನವಾಗಿಬಿಡುವುದು ಇಲ್ಲಿಯ ರಹಸ್ಯವಾಗಿರುತ್ತದೆ. ಷಟ್‌ಸ್ಥಲ ಸಿದ್ಧಾಂತದಲ್ಲಿ ಇದನ್ನು ಸರ್ವಾಂಗಲಿಂಗಿಯಾಗುವದು ಎಂದು ಹೇಳುವರು. ಷಟ್‌ಸ್ಥಲಸಿದ್ಧಾಂತ ವೆಂದಾಗ ಸರ್ವಾಂಗಲಿಂಗಿಯಾಗುವ ಅನುಭಾವಮಾರ್ಗವೆಂದು ತಿಳಿದುಬರುತ್ತದೆ. ಇದು ಸೂಕ್ಷ್ಮಾಗಮದಲ್ಲಿಯ ಷಟ್‌ಸ್ಥಲಶಾಸ್ತ್ರದ ವಿಚಾರವಾಗಿದೆ.

ಷಟ್‌ಸ್ಥಲವನ್ನು ಮಂತ್ರರೂಪದಲ್ಲಿ ವಿವರಿಸುವ ಸೂಕ್ಷ್ಮಾಗಮವು[೭] ನಿಗಮ ಗಳಲ್ಲಿ ಸರ್ವೋತ್ತಮ ಮಂತ್ರವು—ದೇವತೆ—ಷಡಕ್ಷರಮಂತ್ರವೆಂದು ತಿಳಿಸಿ ಅದೇ ಪರಾತರ ತತ್ವವೆಂದು, ಮಂತ್ರ ಮತ್ತು ಲಿಂಗವೆಂದರೆ ಒಂದೇ ಎಂದು. ಹಾಗೂ ಅದೇ ಷಟ್‌ಸ್ಥಲವೆಂದು ತಿಳಿಸುವಾಗ ವ್ಯೆಯಾಕರಣ ತಾತ್ವಿಕ ವಿಚಾರ ರೂಪದಲ್ಲಿ ಷಟಸ್ಥಲ ವನ್ನು ಅದು ಬೋಧಿಸುವದೆಂದು ಗೊತ್ತಾಗುತ್ತದೆ. ಇಲ್ಲಿ ಮೂಲಭೂತ ತಾತ್ವಿಕ ನಿಲವಿಗೆ ಕುಂದು ಬರದಂತೆ ತಿಳಿಸಿರುವುದು ಗಮನೀಯವಾಗಿದೆಯೆಂದು ಬೇರೆ ಹೇಳ ಬೇಕಿಲ್ಲ.

ತತ್ವಪ್ರತಿಪಾದನೆಯನ್ನು ಮಾಡುವ ಅನೇಕ ದಾರ್ಶನಿಕರು ಸಂಖ್ಯೆಯನ್ನು ಬಳ ಸುವರು. ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ದಾರ್ಶನಿಕರಿಬ್ಬರೂ ಸಂಖ್ಯಾಬಳಕೆ ಯನ್ನು ಮಾಡಿದ್ದಾರೆ. ಒಂದು, ಎರಡು, ಮೂರು, ನಾಲ್ಕು, ಐದು ಹಾಗೂ ಆರು ಎಂಬ ಸಂಖ್ಯೆಗಳು ತತ್ವಗಳ, ಅವುಗಳ ಗುಣಗಳ ಮತ್ತು ಶಕ್ತಿಗಳ ಹಾಗೂ

ಸಾಧನ ಮಾರ್ಗದ ಹಂತಗಳ ಬೋಧನೆಗಾಗಿ ಬಳಸಿಕೊಂಡುದು ಕಂಡುಬರುತ್ತದೆ. ವೇದಾಗಮಗಳಲ್ಲಿ ಇದು ಸರ್ವಸಾಮಾನ್ಯ. ಅದೇ ರೀತಿ ತ್ರಿಪಿಟಿಕಗಳಲ್ಲಿ, ಜೈನಾಗಮಗಳಲ್ಲಿ ಸಹ ಈ ಪದ್ಧತಿ ಇರುತ್ತದೆ. ಷಟ್‌ಸ್ಥಲ ಸಿದ್ಧಾಂತವು ಸಹ ಸಂಖ್ಯೆಯನ್ನು ಬಳಸಿಕೊಂಡು ತತ್ವವಿವರಣೆ, ಸಾಧನವಿವರಣೆ ಮಾಡಲು ತೊಡಗಿರುವುದು, ಮೇಲಿನ ಆಗಮಗಳ ನಿರೂಪಣೆಯಿಂದ ಸ್ಪಷ್ಟವಾಗುತ್ತದೆ.

ಆಗಮಗಳಲ್ಲಿರುವ ಷಟ್‌ಸ್ಥಲವಿಚಾರವನ್ನು ನೋಡಲಾಯಿತು. ಈಗ ವಚನ ಸಾಹಿತ್ಯದಲ್ಲಿರುವ ಷಟ್‌ಸ್ಥಲ ವಿಚಾರವನ್ನು ಅರಿತುಕೊಳ್ಳುವಾ.

ವಚನಸಾಹಿತ್ಯದಲ್ಲಿ ಷಟ್‌ಸ್ಥಲ ವಿಚಾರ ನಿರೂಪಣೆ :

ವಚನ ಸಾಹಿತ್ಯವು ಕನ್ನಡ ಸಾಹಿತ್ಯ ಪ್ರಕಾರವು. ಅದು ಧಾರ್ಮಿಕಸಾಹಿತ್ಯ. ಇದನ್ನು ಅಭಿವ್ಯಕ್ತಗೊಳಿಸಿದವರು ಶಿವಶರಣರು. ವಚನಕಾರರೆಂದಾಗ ಹನ್ನೆರಡನೆಯ ಶತಮಾನದ ಶಿವಶರಣರೆಂದೇ ಸಾರ್ವತ್ರಿಕ ಅಭಿಪ್ರಾಯವು. ಶಿವಶರಣರ ವಚನಗಳಲ್ಲಿ ಕೂಡ ಶೈವಾಗಮಗಳಲ್ಲಿಯಂತೆ ಷಟ್‌ಸ್ಥಲಸಿದ್ಧಾಂತದ ವಿಚಾರಗಳು ಇರುತ್ತವೆ. ಇವುಗಳನ್ನೀಗ ನೋಡುವಾ :

೧. ಭಕ್ತಂಗೆ ವಿಶ್ವಾಸ, ಮಹೇಶ್ವರಂಗೆ ನೈಷ್ಠೆ,
ಪ್ರಸಾದಿಗೆ ಅವಧಾನ, ಪ್ರಾಣಲಿಂಗಿಗೆ ಯೋಗ,
ಶರಣಂಗೆ ಮುನ್ನವೇ ಬಿಡುಗಡೆ,
ಐಕ್ಯಂಗೆ ಕುರುಹುಗೊಂಬುದಕ್ಕೆ ಮುನ್ನವೇ ನಿರಾಳ,
ಇಂತೀ ಷಟ್‌ಸ್ಥಲ ಭೇದ ಎನ್ನಯ್ಯಪ್ರಿಯ ನಿಷ್ಕಳಂಕ ಮಲ್ಲಿಕಾರ್ಜುನ[೬]

೨. ಭಕ್ತಂಗೆ ಕ್ರೀ, ಮಹೇಶ್ವರಂಗೆ ನಿಶ್ಚಯ;
ಪ್ರಸಾದಿಗೆ ಅರ್ಪಣ, ಪ್ರಾಣಲಿಂಗಿಗೆ ಯೋಗ,
ಶರಣಂಗೆ ನಿಬ್ಬೆರಗು, ಐಕ್ಯಂಗೆ ನಿರ್ಲೇಪ,
ಇಂತೀ ಷಟ್‌ಸ್ಥಲವನವಗ್ರಹಿಸಿ ನಿಂದ ವಿರಕ್ತನ
ಏಕಸ್ಥಲದಾಟ, ನಿಜತತ್ವದ ಕೂಟ;
ಶಂಭುವಿಂದಿತ್ತ, ಸ್ವಯಂಭುವಿಂದತ್ತ ಅತಿಬಳಿ ನೋಡಾ
ಮಾತುಳಂಗ ಮಧುಕೇಶ್ವರನು.[೭]

೩. ಕಿಂಕುರ್ವಾಣತೆಯಿಂದ ಬಂದ ಜಂಗಮವೆ ಲಿಂಗವೆಂದು
ತನಗುಳ್ಳದನರ್ಪಿತು ಮನಸಹಿತ ಮಾಡುವಲ್ಲಿ ಭಕ್ತ.
ನಿಷ್ಠೆ ನಿಬ್ಬೆರಸಿ ಗಟ್ಟಿಗೊಂಡು, ಅಭಿಲಾಷೆ ಸಮನಿಸದೆ,
ಪರಿಚ್ಛೇದ ಬುದ್ಧಿಯುಳ್ಳಲ್ಲಿ ಮಾಹೇಶ್ವರ.
ಅನರ್ಪಿತ ಸಮನಿಸದೆ, ಬಂದುದ ಕಾಯದ ಕೈಯಲ್ಲಿ ಕೊಟ್ಟು

ಲಿಂಗಸಹಿತ ಭೋಗಿಸುವಲ್ಲಿ ಪ್ರಸಾದಿ,
ಪ್ರಾಣಕ್ಕೆ ಪ್ರಾಣವಾಗಿರ್ದು ಕಾಯ ಸ್ಥಿತಿಯನಱಿದು
ಎಚ್ಚರಿಕೆ ಗುಂದದಿಪ್ಪಲ್ಲಿ ಪ್ರಾಣಲಿಂಗಿ
ತನಗೆ ಲಿಂಗವಾಗಿ, ಲಿಂಗಕ್ಕೆ ತಾನಾಗಿ
ಬೆಚ್ಚು ಬೇಱಿಲ್ಲದಿರ್ದಡೆ, ಶರಣ,
ಸದಾಚಾರ ಸಂಪತ್ತಿನಲ್ಲಿ ಬಂದ ಅನುಭಾವವನು ಮೀಱಿ
ಹೆಸರಗಡಗಿದ ಸುಖವದು ಲಿಂಗೈಕ್ಯ
ಇದು ಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ ಬಸವಣ್ಣಂಗಲ್ಲದೆ ಷಟ್
ಸ್ಥಲವ ಪೂರ್ವ.[೪]

೪. ವೇದ ವೇದಾರ್ಥ ಸಾರಾಯದಿಂದ ಆಱು ಶಾಸ್ತ್ರ ಹದಿನೆಂಟು ಪುರಾ
ಣಂಗಳಾದವು.
ಆ ಪುರಾಣಂಗಳನಱಿವುದಱಿಂದೆ ಜ್ಯೋತಿಜ್ಞಾನವಾಯಿತ್ತು.
ಆ ಜ್ಯೋತಿಜ್ಞಾನದಿಂದೆ ಮತಿಜ್ಞಾನ ಶ್ರುತಜ್ಞಾನ ಮನಪರಿಪೂರ್ಣ
ಜ್ಞಾನ
ಅವಧಿಜ್ಞಾನ ಕೇವಲಜ್ಞಾನ ಇಂತೀ ಪಂಚಜ್ಞಾನವೆ ಪಂಚಸ್ಥಲ
ವಾಯಿತ್ತು.
ಮತಿಜ್ಞಾನವುಳ್ಳಾತನೆ ಭಕ್ತ, ಶ್ರುತಜ್ಞಾನವುಳ್ಳಾತನೆ ಮಹೇಶ್ವರ
ಮನಪರಿಪೂರ್ಣ ಜ್ಞಾನವುಳ್ಳಾತನೆ ಪ್ರಸಾದಿ, ಅವಧಿ ಜ್ಞಾನವುಳ್ಳಾತನೆ
ಶರಣ,
ಶರಣಸ್ಥಲವೆಂಬುದು ಭವಂ ನಾಸ್ತಿ,
ಪಂಚಜ್ಞಾನಕ್ಕೆ ಮೂಲವಾದ ಜ್ಯೋತಿಜ್ಞಾನವೆ
ಪಂಚಸ್ಥಲದಲ್ಲಿ ಏಕಾಕಾರದ ಐಕ್ಯನು.
ಇಂತೆಂದುದಾಗಿ, ಕೂಡಲಚನ್ನಸಂಗನಲ್ಲಿ ಪಂಚಸ್ಥಲದ ನೆರೆಯಬಲ್ಲ—
ಐಕ್ಯಬಸವಣ್ಣಂಗೆ ನಮೋ ನಮೋ ಎಂಬೆನು.[೫]

೫. ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣನೈಕ್ಯನು
ಮೆಲ್ಲಮೆಲ್ಲನೆ ಆದಹೆನೆಂಬನ್ನವರ ನಾನೇನು ವಜ್ರದೇಹಿಯೆ ?
ನಾನೇನು ಅಮೃತವ ಸೇವಿಸಿದೆನೆ ?
ಆನು ಮರುಜೇವಣಿಯ ಕೊಂಡೆಗೆ ?
ನುಡಿದ ನುಡಿಯೊಳಗೆ ಷಡುಸ್ಥಲ ಬಂದು
ಎನ್ನಮನವನಿಂಬುಗೊಳ್ಳದಿದ್ದರೆ
ಸುಡುವೆನೀತನುವ. ಕೂಡಲಸಂಗಮದೇವಾ ।[೬]

೬. ...ಮತಿಜ್ಞಾನವೆ ಭಕ್ತ, ಶ್ರುತಿಜ್ಞಾನವೆ ಮಹೇಶ್ವರ,
ಖಂಡಜ್ಞಾನವೆ ಪ್ರಸಾದಿ, ಕೇವಲಜ್ಞಾನವೆ ಪ್ರಾಣಲಿಂಗಿ,
ಜ್ಯೋತಿಜ್ಞಾನವೆ ಶರಣ, ಮಹಾಜ್ಯೋತಿಜ್ಞಾನವೆ ಐಕ್ಯ,
ಈ ಷಟ್‌ಸ್ಥಲದ ನೆಲೆಯ ಬಲ್ಲಾತನೆ ಕೂಡಲಚನ್ನಂಗನಲ್ಲಿ ಐಕ್ಯನು॥

೭. ಭಕ್ತಮಹೇಶ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯ
ಎಂದಿಂತು ಷಟ್‌ಸ್ಥಲವಾರು.
ಭಕ್ತಮಹೇಶ ಈ ಎರಡು ಗುರುಸ್ಥಲ
ಪ್ರಸಾದಿ ಪ್ರಾಣಲಿಂಗಿ ಈ ಎರಡು ಲಿಂಗಸ್ಥಲ
ಶರಣ ಐಕ್ಯ ಈ ಎರಡು ಜಂಗಮಸ್ಥಲ
ಇವಕ್ಕೆ ಅಂಗಾಂಗಳಾವವೆಂದಡೆ
ಭಕ್ತಂಗೆ ಪೃಥ್ವಿಯೆ ಅಂಗ, ಮಹೇಶ್ವರಂಗೆ ಅಪ್ಪುವೆ ಅಂಗ,
ಪ್ರಸಾದಿಗೆ ಅಗ್ನಿಯೆ ಅಂಗ, ಪ್ರಾಣಲಿಂಗಿಗೆ ವಾಯುವೆ ಅಂಗ,
ಶರಣಂಗೆ ಆಕಾಶವೆ ಅಂಗ, ಐಕ್ಯಂಗೆ ಆತ್ಮನೆ ಅಂಗ॥

ಮೇಲೆ ಉದ್ಧರಿಸಿದ ವಚನಗಳನ್ನು ಅವಲೋಕಿಸಿದಾಗ ನಮಗೆ ಹೊಸ ಹೊಸ ಸಂಗತಿಗಳು ಪರಿಚಯವಾಗುತ್ತವೆ. ಈ ಮೊದಲು ಆಗಮಗಳಲ್ಲಿ ನೋಡಿದ ಷಟ್‌ಸ್ಥಲದ ಲಕ್ಷಣಗಳು, ನಂತರ ವಚನಗಳಲ್ಲಿ ನೋಡಲಿರುವ ಷಟ್‌ಸ್ಥಲ ಲಕ್ಷಣಗಳು ಷಟ್‌ಸ್ಥಲದ ಜ್ಞಾನಭಂಡಾರವನ್ನು ಹೆಚ್ಚಿಸುವವೆಂಬುದು ಗೊತ್ತಾಗುತ್ತದೆ.

ಈ ಲೇಖದಲ್ಲಿ ಉದ್ಧರಿಸಿದ ವಚನಗಳಲ್ಲಿ ಮೂರನೆಯದು ಚೆನ್ನಬಸವಣ್ಣನವರ ವಚನವಿರುತ್ತದೆ. ಅದು ಷಟ್‌ಸ್ಥಲಗಳನ್ನು ಲಕ್ಷಣಿಸುವುದು ಅಧ್ಯಯನೀಯವಾಗಿದೆ. ಷಟ್‌ಸ್ಥಲಶಾಸ್ತ್ರದಲ್ಲಿ ಪರಶಿವನ ಮೂರು ರೂಪಗಳಲ್ಲಿ ಒಂದಾದ ಜಂಗಮಸೇವೆಯ ವಿಚಾರವನ್ನು ಎತ್ತಿಕೊಂಡು ಷಟ್‌ಸ್ಥಲಗಳನ್ನು ವಿವರಿಸಲು ಪ್ರಾರಂಭಿಸುವುದು ಹೀಗೆ: ತನಗುಳ್ಳುದನ್ನು ಮನಸಹಿತವಾಗಿ ಕಿಂಕರಭಾವದಿಂದ ಕೊಡುವುದು ಭಕ್ತಸ್ಥಲವು. ಆಗ ಮನದಲ್ಲಿ ಜಂಗಮವೆ ಲಿಂಗವೆಂಬ ನಿಷ್ಠೆ ನಿರತಿಶಯವಾಗಿ ಬೆಳೆಯಬೇಕು. ಹಾಗೂ ಅಭಿಲಾಷೆ ಉಂಟಾಗಬಾರದು. ಎಂಬ ಬುದ್ಧಿಯು ಇರಬೇಕು. ಆಗ ಅದು ಮಹೇಶ್ವರ ಸ್ಥಲ. ತನಗೆ ದೊರಕೊಂಡುದನು ಲಿಂಗದೇವನಿಗೆ ಕೊಟ್ಟು ಕೊಳುವುದು ಪ್ರಸಾಧಿಸ್ಥಲ. ದೇಹದ ಸ್ಥಿತಿಯ ಅರ್ಥಮಾಡಿಕೊಂಡು ಸದಾ ಎಚ್ಚರವಾಗಿ ಪ್ರಾಣವು ಲಿಂಗವೆಂಬ ಅರಿವಿನಲ್ಲಿರುವುದು ಪ್ರಾಣಲಿಂಗಿಸ್ಥಲವು. ಲಿಂಗವೇ ತನಗೆ ಆಶ್ರಯವೆಂದೂ, ಲಿಂಗಕ್ಕೆ ತಾನು ಆಶ್ರಯವೆಂದೂ ಅನ್ಯೋನ್ಯವಾದ ಆಶ್ರಯಭಾವದಲ್ಲಿರುವುದು ಶರಣಸ್ಥಲವು–ಶರಣ ಎಂದರೆ ಆಶ್ರಯ. ಹೀಗೆ ಅರಿತ ಅರಿವು ಮತ್ತು ಆಚಾರಗಳು ಒಂದಕ್ಕೊಂದು ಆಶ್ರಯವಾಗಿದ್ದುಕೊಂಡು ಅವೆರಡರುಗಳಿಗೆ ಉಪರಿಯಾದ ಸ್ಥಿತಿಯನ್ನು ಅಂದರೆ ನಿಶ್ಶಬ್ದ ಸ್ಥಿತಿಯನ್ನು ಸಂಪಾದಿಸುವುದು ಐಕ್ಯಸ್ಥಲವು.

ಈ ವಚನದಲ್ಲಿ ಗುರುಲಿಂಗ ಜಂಗಮ—ಪರಶಿವದೊಡನೆ ಶರಣನು ತನ್ನ ಸಂಬಂಧ ವೆಂಥದಿರಬೇಕೆಂಬುದನ್ನು ತಿಳಿಸುವಂತೆ, ಈ ಬದುಕಿನಿಂದುಂಟಾಗುವ ಸಿದ್ಧಿಯು ನಿಶ್ಶಬ್ದವೆಂಬುದನ್ನು ಬೋಧಿಸುವುದು. ಇದು ಅನುಭವ.

ವಚನದಲ್ಲಿರುವ ಷಟ್‌ಸ್ಥಲದ ಈ ವಿಚಾರವನ್ನು ಪಾರಮೇಶ್ವರಾಗಮದಲ್ಲಿರುವ ಷಟ್‌ಸ್ಥಲದ ವಿಚಾರದೊಡನೆ ಹೋಲಿಸಿ ನೋಡಲು ಇಲ್ಲಿ ಅವಕಾಶವಿದೆ. ಪಾರಮೇಶ್ವರಾಗಮವು ಷಟ್‌ಸ್ಥಲದಲ್ಲಿಯು ಅಂದರೆ ಶಿವಶರಣನು ಹೇಗಿರಬೇಕೆಂಬುದನ್ನು ತಿಳಿಸಿದ್ದು ಇಂತಿದೆ : ಭಕ್ತನು ಗುರುಲಿಂಗ ಜಂಗಮಗಳನ್ನು ತಾರತಮ್ಯದಿಂದ ಪೂಜಿಸಬೇಕು. ಮಾಹೇಶ್ವರನು ಗುರು ಶಾಸನದಂತೆ ಲಿಂಗ ಜಂಗಮ ಪೂಜೆಮಾಡಿ ಸಮತಾಚಾರದ ಆಚರಣೆಯುಳ್ಳವನಾಗಿರಬೇಕು. ಜಂಗಮಪೂಜೆ ಶಿವಾರ್ಪಣೆಗಳನ್ನು ಮಾಡದೆ ಅನ್ನವನ್ನು ಗ್ರಹಿಸಿದವನು ಪ್ರಸಾದಿಯು. ಪ್ರಾಣ, ಲಿಂಗ ಮತ್ತು ಶಿವ ಇವು ಮೂರು ಒಂದು ಎಂಬ ಏಕಬುದ್ಧಿಯುಳ್ಳವನು ಪ್ರಾಣಲಿಂಗಿಯು. ಈಷಣತ್ರಯದಿಂದ ಮುಕ್ತನಾಗಿ ಏಕಾಂತಸೇವಿಯಾಗಿ ಶಿವಧ್ಯಾನದಲ್ಲಿರುವವನು ಶರಣನು. ಪೂಜಾ, ಧ್ಯಾನಾದಿಗಳ ಅವಶ್ಯಕತೆಯು ಇಲ್ಲದೆ ಸೋಹಂಭಾವ ಪೂರ್ಣನಾಗಿರುವವನು ಐಕ್ಯನು.

ಚೆನ್ನಬಸವಣ್ಣ ಮತ್ತು ಪಾರಮೇಶ್ವರಾಗಮಗಳು ಸ್ಥೂಲವಾಗಿ ಒಂದೇ ಬಗೆಯ ಆಚಾರಷಟ್ಕವನ್ನು ಬೋಧಿಸುವುದು ಕಂಡುಬರುತ್ತದೆ. ಷಟ್‌ಸ್ಥಲವೆಂದರೆ ಆಚಾರ ಷಡ್ವಿಧವೆಂದು ಇಲ್ಲಿ ಗೊತ್ತಾಗುತ್ತದೆ. ಚೆನ್ನಬಸವಣ್ಣ ಮತ್ತು ಪಾರಮೇಶ್ವರಾಗಮಗಳು ಬೋಧಿಸುವ ಷಟ್‌ಸ್ಥಲಗಳು ಮಾನವ ಜೀವನದ ಮುಖ್ಯ ಘಟಕಗಳಾದ ಅರಿವು, ಇರವು ಮತ್ತು ಅರ್ಪಣಗಳನ್ನು ಸಮರಸಗೊಳಿಸಿಕೊಂಡು ಬದುಕಬೇಕೆಂದು ಹೇಳುವವು. 'ಶರಣನೆಂತಿರ್ದಡಂತೆ ಬ್ರಹ್ಮ' ಎಂಬ ವಚನಭಾಗವು ಷಟ್‌ಸ್ಥಲ ಬದುಕಿನ ಸೂತ್ರವಾಗಿದೆಯೆಂದು ಈ ಸಂದರ್ಭದಲ್ಲಿ ಭಾಸವಾಗುತ್ತದೆ.

ಮೇಲೆ ನೋಡಿದ ಚೆನ್ನಬಸವಣ್ಣನವರ ಮತ್ತು ಪಾರಮೇಶ್ವರಾಗಮದ ಪರಿಶೀಲನೆಯಿಂದ ಅವೆರಡುಗಳ ಪಠ್ಯದಲ್ಲಿ ಭಿನ್ನವೂ ವಿಶಿಷ್ಟವೂ ಆದ ಒಂದು ಅಂಶವು ಕಂಡು ಬರುತ್ತದೆ. ಇದು ಗಮನಾರ್ಹ. ಈ ವಿಚಾರವನ್ನು ಪ್ರತಿಪಾದಿಸುವಾಗ ನಾನು ಪಾರಮೇಶ್ವರಾಗಮದ ಆರನೆಯ ಪಟಲದಲ್ಲಿ ಬರುವ ವಿವರಣೆ ಮತ್ತು ಚೆನ್ನಬಸವಣ್ಣನವರ ವಚನ ೧೩೧೦ ರಲ್ಲಿ ಬರುವ ವಿವರಣೆಗಳಿಗೆ ಮಾತ್ರ ಇಲ್ಲಿಯ ಪರಿಶೀಲನೆಯನ್ನು ಸೀಮಿತಗೊಳಿಸಿಕೊಳ್ಳುತ್ತೇನೆ. ಪಾರಮೇಶ್ವರಾಗಮವು ಐಕ್ಯಸ್ಥಲದ ಸಿದ್ಧಿಯೆಂದರೆ 'ಸೋಹಂ' ಭಾವವು ಎಂದು ಹೇಳಿದರೆ, ಚೆನ್ನಬಸವಣ್ಣನವರ ವಚನವು (೧೩೧೦) ಐಕ್ಯಸ್ಥಲದ ಸಿದ್ಧಿಯು 'ಹೆಸರಡಗಿದ ಸುಖ'— ಅಂದರೆ 'ನಿಶ್ಶಬ್ದಾನಂದ' ಭಾವವು— ಎಂದು ತಿಳಿಸುತ್ತದೆ. ಹೆಸರೆಂದರೆ ನಾಮ. ಹೆಸರಡಗುವದು ಎಂದರೆ ನಾಮವಡಗುವದು. ನಾಮವಡಗುವದೆಂದರೆ ನಿಶ್ಶಬ್ದವಾಗುವುದು. ಇದು

ವಚನದ ಪ್ರಕಾರ ಐಕ್ಯಸ್ಥಲದ ಅನುಭವವಾದರೆ, 'ಶಿವೋಹಂ' ಎಂಬುದು ಆಗಮದಲ್ಲಿಯ ಐಕ್ಯಸ್ಥಲದ ಅನುಭವ. ವಚನಕಾರರು ಶಿವೋಹಂ ಎಂಬುದು ಬಹಿರಂಗದ ಮದವೆಂದೂ. 'ಅಹಂಬ್ರಹ್ಮಾಸ್ಮಿ' ಎಂಬುದು ಅಂತರಂಗದ ಮದವೆಂದೂ ತಿಳಿಸಿ ಅವೆರಡೂ ತಾಜ್ಯಸಿದ್ಧಿಗಳೆನ್ನುವರು. 'ಬಹಿರಂಗ' ವೆಂದರೆ 'ಇದಿರು'; 'ಅಂತರಂಗ' ವೆಂದರೆ 'ತಾನು', ತಾನು ಹಾಗೂ ಇದಿರು ಎಂಬೆರಡಕ್ಕೂ ಉಪರಿಯಾದ ಅವಸ್ಥೆ ಹೆಸರಡಗಿದ ಅಂದರೆ ನಿಶ್ಶಬ್ದ ಸ್ಥಿತಿ. ಆತ್ಮ ಮತ್ತು ಬ್ರಹ್ಮ ಒಂದೇ ಎಂದು ಉಪನಿಷತ್ತುಗಳು ಸಿದ್ಧಮಾಡಿವೆ. ಆಗಮವೂ ಶಿವೋಹಂ ಎಂದು ಹೇಳುವಾಗ ಶಿವ (ಬ್ರಹ್ಮ) ಮತ್ತು ಅಹಂ (ಆತ್ಮ) ಒಂದೇ ಎಂಬುದನ್ನೇ ಬೋಧಿಸುತ್ತದೆ. ಆದರೆ ಶಿವಶರಣರು ಇವೆರಡೂ ಒಂದೇ ಎಂಬುದನ್ನು ಕೂಡ ಸಿದ್ಧಿಸಿಕೊಂಡು ಇವೆರಡರಾಚೆಗೆ ನಿಶ್ಶಬ್ದತೆಯೇ ತತ್ವ ಇವುಗಳಿಗೆ ಎಂದು ಹೇಳುವುದು ಆಗಮಗಳಲ್ಲಿಯ ಷಟ್‌ಸ್ಥಲ ಸಿದ್ಧಾಂತದಿಂದ ಭಿನ್ನವೂ ಉಪರಿಯೂ ಆದ ತತ್ವಪ್ರತಿಪಾದನೆಯೆಂದು ಕಂಡುಬಾರದಿರದು.

ಆಗಮಗಳಲ್ಲಿ ಬರುವ ಷಟ್‌ಸ್ಥಲವಿಕಾಸ ಸಿದ್ಧಾಂತವು ವಚನಗಳಲ್ಲಿ ಬರುವ ಷಟ್‌ಸ್ಥಲವಿಕಾಸ ಸಿದ್ಧಾಂತವು ಒಂದೇ ವಿಕಾಸವಾದವು.

ಆಗಮಗಳಲ್ಲಿ ಉಪಲಬ್ಧವಿಲ್ಲದ ಷಟ್‌ಸ್ಥಲ ವಿಚಾರಗಳನ್ನು ವಚನಗಳಲ್ಲಿ ನೋಡಬಹುದು. ವಚನಶಾಸ್ತ್ರದಿಂದ ಆಯ್ಕೆಮಾಡಿ ಅದೇ ಲೇಖದಲ್ಲಿ ಬಳಸಿಕೊಂಡಿರುವ ವಚನಗಳ ಪರಿಶೀಲನೆಯಿಂದ ಈ ಮಾತು ಖಚಿತವಾಗುತ್ತದೆ. ಷಟ್‌ಸ್ಥಲದ ತಾತ್ವಿಕ ವಿಚಾರಗಳಲ್ಲಿ ವಸ್ತು ಮತ್ತು ಜ್ಞಾನ ತತ್ವಗಳು (Ontological and epistemological categories) ಬಹು ಮುಖ್ಯವಾದವುಗಳು. ಭಕ್ತ ಮಹೇಶ ಪ್ರಸಾದಿ ಪ್ರಾಣಲಿಂಗಿ ಶರಣ ಮತ್ತು ಐಕ್ಯ ಸ್ಥಲಗಳೆಂಬ ಅಂಗಸ್ಥಲಗಳು ಅನುಕ್ರಮವಾಗಿ ಪೃಥ್ವಿ ಅಪ್ಪು ತೇಜ ವಾಯು ಆಕಾಶ ಮತ್ತು ಆತ್ಮಗಳು. ಷಟ್‌ಸ್ಥಲವೆಂದಾಗ ಈ ಷಡ್ವಿಧವಾದ ತತ್ವಗಳೆಂದು ವಚನಶಾಸ್ತ್ರದ ಅಭಿಪ್ರಾಯವಿರುವಂತೆ ಅವು ಷಟ್‌ಚಕ್ರಗಳಿಗೆ ಷಡಾಧಾರಗಳಾಗಿರುವವೆಂದು ಸಹ ವಚನಕಾರರ ಅಭಿಪ್ರಾಯವಿರುವುದು. ಆದುದರಿಂದ ಷಡಾಧಾರವೆಂದರೂ ಷಟ್‌ಸ್ಥಲ. ಯೋಗ ಪರಿಭಾಷೆಯಲ್ಲಿ ವಚನಕಾರರಂತೆಯೇ ತಮಿಳುನಾಡಿನ ತಿರುಮೂಲರ್ ಎಂಬುವವರು ತಮ್ಮ ತಿರುಮಂದಿರಮ್ ಎಂಬ ಗ್ರಂಥದಲ್ಲಿ ಷಟ್‌ಸ್ಥಲವೆಂದರೆ ಷಟ್‌ಚಕ್ರಗಳು ಎಂದು ಬರೆದಿರುವುದನ್ನು ಪ್ರೊ. ಎಂ. ಆರ್. ಸಾಖರೆಯವರು 'ಲಿಂಗಧಾರಣ ಚಂದ್ರಿಕೆ' ಗ್ರಂಥದ ಮುನ್ನುಡಿಯಲ್ಲಿ ಬರೆದಿದ್ದಾರೆ.

ಆಗಮಗಳು ಷಡ್ವಿಧವನ್ನೈದಲು ಬ್ರಹ್ಮಕ್ಕೆ ಸಾಧ್ಯವಾಗಲು ಷಡ್ವಿಧ ಶಕ್ತಿಗಳು ಉಂಟು ಎಂದು ಹೇಳುವವು. ಇದು ವಸ್ತುವಿನ ಲಕ್ಷಣಗಳ ಪ್ರತಿಪಾದನೆಯು. ಆದರೆ ವಚನಗಳು, ಆಗಮಗಳಲ್ಲಿ ಬರುವ ಪರಬ್ರಹ್ಮದ ಅಥವ ಪರಶಿವನ ಷಡ್ವಿಧ

ಶಕ್ತಿಗಳು ಭಕ್ತಾದಿ ಐಕ್ಯಾಂತವಾದ ಷಟ್‌ಸ್ಥಲಗಳೆನ್ನುವಂತೆ, ಮತಿಜ್ಞಾನಾದಿಯಾಗಿ ಮಹಾಜ್ಯೋತಿಜ್ಞಾನಾಂತ್ಯವಾಗಿರುವ ಷಡ್ವಿಧಜ್ಞಾನಗಳು ಭಕ್ತ್ಯಾದಿಯಾಗಿ ಐಕ್ಯಾಂತ ವಾದ ಷಟ್‌ಸ್ಥಲಗಳೆಂದು ಹೇಳುತ್ತವೆ. ಇದು ಷಟ್‌ಸ್ಥಲದ ಹೊಸ ವಿವರಣೆ ಯಾಗಿರುವುದು. ಇದು ಜ್ಞಾನ ಇಲ್ಲವೆ ಪ್ರಮಾಣ ಸಿದ್ಧಾಂತದ ವಿಚಾರವಾಗಿರು ತ್ತದೆ. ಚೆನ್ನಬಸವಣ್ಣನವರ ವಚನಗಳು ಈ ಚಿತ್ರಣವನ್ನು ಕೊಡುತ್ತವೆ. ಪ್ರಮಾಣ ಗಳ ವಿಷಯದಲ್ಲಿ ವಚನಕಾರರು ಅಥವ ಶಿವಶರಣರು ಹೇಳಬೇಕಾದುದೇನಿಲ್ಲ; ಯಾಕಂದರೆ ಅವರು ಅನುಭಾವಿಗಳಾಗಿದ್ದಾರೆ ಎಂಬುದು ಒಂದು ಅಭಿಪ್ರಾಯವಿರು ವಂತೆ, ವಚನಶಾಸ್ತ್ರವು ಪ್ರಮಾಣ ಸಿದ್ಧಾಂತವಿಲ್ಲದ್ದು ಎಂಬುದು ಇನ್ನೊಂದು ಅಭಿ ಪ್ರಾಯವು ಕೇಳಬರುತ್ತದೆ. ಆದರೆ ಇವೆರಡೂ ಅಭಿಪ್ರಾಯಗಳು ವೈಜ್ಞಾನಿಕವಾದ ಅಭಿಪ್ರಾಯಗಳಲ್ಲ ಎಂದು ಚೆನ್ನಬಸವಣ್ಣನವರು ಪ್ರತಿಪಾದಿಸಿದ್ದನ್ನು ನೋಡಿದಾಗ ಮನವರಿಕೆಯಾಗುತ್ತದೆ. ಬೇರೆ ವಚನಕಾರರು ಶ್ರುತ, ದೃಷ್ಟ, ಮತ್ತು ಅನುಮಾನ ಗಳ ವಿಚಾರವನ್ನು ತಿಳಿಸುತ್ತಾರೆ. ಇವುಗಳಿಂದ ಒರೆದು ನೋಡಿಯೆಂದು ಹೇಳು ತ್ತಾರೆ.[೧೦] ಚೆನ್ನಬಸವಣ್ಣನವರು ಪ್ರಮಾಣದ ವಿಶ್ಲೇಷಣೆ ಮಾಡಿದ್ದು ಅದಕ್ಕನು ಗುಣವಾಗಿ ಮತಿಜ್ಞಾನವೆಂದರೆ ಭಕ್ತ, ಶ್ರುತಜ್ಞಾನವೆಂದರೆ ಮಹೇಶ್ವರ, ಖಂಡ ಜ್ಞಾನವೆ ಪ್ರಸಾದಿ, ಕೇವಲಜ್ಞಾನವೆ ಪ್ರಾಣಲಿಂಗಿ, ಜ್ಯೋತಿಜ್ಞಾನವೆ ಶರಣ ಮತ್ತು ಮಹಾಜ್ಯೋತಿಜ್ಞಾನವೆ ಐಕ್ಯವೆಂದು ಹೇಳಿದರು. ಇದು ಷಟ್‌ಸ್ಥಲದ ಹೊಸ ತತ್ವಜ್ಞಾನ. ಈ ದೃಷ್ಟಿಯಿಂದ ವಚನಶಾಸ್ತ್ರವು ಆಗಮಶಾಸ್ತ್ರದಿಂದ ಷಟ್‌ಸ್ಥಲ ತತ್ವಜ್ಞಾನದಲ್ಲಿ ಭಿನ್ನವೂ ನವೀನವೂ ಆದಂಥ ಮಾರ್ಗವನ್ನು ಕ್ರಮಿಸಿದೆಯೆಂದು ಖಚಿತವಾಗಿ ಹೇಳಬಹುದು.

ಇನ್ನೊಂದು ಮಹತ್ವದ ಸಂಗತಿಯು ವಚನಶಾಸ್ತ್ರದಿಂದ ಷಟ್‌ಸ್ಥಲ ವಿಚಾರದ ಬಗ್ಗೆ ಗೊತ್ತಾಗುವದು ಏನಂದರೆ ಬಸವಣ್ಣ ಮತ್ತು ಚೆನ್ನಬಸವಣ್ಣನವರ ನಡುವೆ ಚರ್ಚೆ ನಡೆಯಿತು ಎಂಬುದು. ಷಟ್‌ಸ್ಥಲ ತತ್ವಜ್ಞಾನ ಚರಿತ್ರೆಯಲ್ಲಿ ಇದು ಒಂದು ಮಹತ್ವದ ಘಟನೆಯೆಂದು ತಿಳಿಸಬೇಕಾಗುತ್ತದೆ. ಈ ಚರ್ಚೆಯು ಕೂಡ ಷಟ್ ಸ್ಥಲದ ಬಳಕೆಯಲ್ಲಿ ಯಾವುದು ಪ್ರಗತಿಪರವಾದುದು ಎಂಬುದನ್ನು ನಿರ್ಣಯಿಸು ತ್ತದೆ. ಇದು ತಾತ್ವಿಕ ಚರ್ಚೆಯಾಗಿ ಆ ಮನೋಧರ್ಮವನ್ನು ಕೂಡ ಅಭಿವ್ಯಕ್ತ ಗೊಳಿಸುತ್ತದೆ.

ಬಸವಣ್ಣನವರು ಮೆಲ್ಲಮೆಲ್ಲನೆ ಭಕ್ತ ಮಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಮತ್ತು ಐಕ್ಯಸ್ಥಲವನ್ನು ಆಚರಿಸಬೇಕೆಂಬ ಪ್ರತಿಪಾದಕರಾಗಿದ್ದರೆಂಬುದು ಗೊತ್ತಾಗು ತ್ತದೆ. ಒಂದು ಸ್ಥಲ ಆದಮೇಲೆ ಇನ್ನೊಂದು ಸ್ಥಲವನ್ನು ಆಚರಿಸುವುದನ್ನು ಕ್ರಮಾಚರಣೆಯೆಂದು ತಿಳಿಯಬಹುದು. ವೈದಿಕ ಧರ್ಮದಲ್ಲಿ ಆಶ್ರಮಗಳ ಆಚರ ಣೆಯೂ ಕೂಡ ಹೀಗೆ ಒಂದು ಆದಮೇಲೆ ಒಂದನ್ನು ಆಚರಿಸುವದು ಅಂದರೆ ಕ್ರಮ

ಯುಕ್ತ ಆಚರಣೆಯು ಕಂಡುಬರುವುದು. ಬಸವಣ್ಣನವರು ಷಟ್‌ಸ್ಥಲವನ್ನು ಕ್ರಮವಾಗಿ ಆಚರಿಸಬೇಕೆಂಬ ವಿಶ್ವಾಸವನ್ನು ವ್ಯಕ್ತಗೊಳಿಸುತ್ತ, ಆಚರಿಸುತ್ತ ಇರುವದನ್ನು ಚೆನ್ನಬಸವಣ್ಣನವರು ಖಂಡಿಸಿ ಭಕ್ತಾದಿ ಐಕ್ಯಾಂತವಾದ ಷಟ್‌ಸ್ಥಲಗಳನ್ನು ಕ್ರಮವಾಗಿ ಆಚರಿಸದೆ ಸಮವಾಗಿ ಅಂದರೆ ಭಕ್ತಸ್ಥಲವನ್ನು ಆಚರಿಸುತ್ತಿರುವಾಗ ಐಕ್ಯಸ್ಥಲದ ಆಚರಣೆ ಕೂಡ ಅಲ್ಲಿ ಇರಬೇಕು ಎಂಬುದು ಅವರ ಸಿದ್ಧಾಂತವು. ಭಾರತೀಯ ಆಸ್ತಿಕ ದರ್ಶನದ ಪರಿಭಾಷೆಯಲ್ಲಿ ಹೇಳಬೇಕೆಂದರೆ ಷಟ್‌ಸ್ಥಲದ ಕ್ರಮಸಮುಚ್ಚಯದ ಬದಲು ಸಮಸಮುಚ್ಚಯವನ್ನು ಚೆನ್ನಬಸವಣ್ಣನವರು ಪ್ರತಿಪಾದಿಸಿದರು ಎಂದೆನ್ನಬೇಕಾಗುತ್ತದೆ. ಆಸ್ತಿಕ ದರ್ಶನಗಳಲ್ಲಿ ಈ ಕ್ರಮಸಮುಚ್ಚಯವಾದ, ಸಮಸಮುಚ್ಚಯವಾದ ಮತ್ತು ವಿಕಲ್ಪ ಸಮುಚ್ಚಯವಾದಗಳು ಬಹಳ ಪುರಾತನ ಕಾಲದಲ್ಲಿಯೇ ಬಳಕೆಯಲ್ಲಿದ್ದುದು ಕಂಡುಬರುತ್ತದೆ. ಆದರೆ ಇಂದು ಉಪಲಬ್ಧವಿರುವ ಆಗಮಗಳಲ್ಲಿ ಷಟ್‌ಸ್ಥಲದ ವಿಚಾರದಲ್ಲಿ ಸಮಸಮುಚ್ಚಯದ ಹಾಗೂ ವಿಕಲ್ಪ ಸಮುಚ್ಚಯದ ಪ್ರತಿಪಾದನೆಯು ಕಂಡು ಬರುವದಿಲ್ಲ; ಷಟ್‌ಸ್ಥಲ ಸಮಸಮುಚ್ಚಯ ವಿಚಾರ ಮತ್ತು ಷಟ್‌ಸ್ಥಲ ವಿಕಲ್ಪಸಮುಚ್ಚಯದ ವಿಚಾರ ಅನುಕ್ರಮವಾಗಿ ಚೆನ್ನಬಸವಣ್ಣ ಮತ್ತು ಸಿದ್ಧರಾಮದೇವರ ವಚನಗಳಲ್ಲಿ[೧೦] ಬರುತ್ತವೆ. ಚೆನ್ನಬಸವಣ್ಣನವರಂತೆ ಸಿದ್ಧರಾಮದೇವರು ಕ್ರಮಸಮುಚ್ಚಯವನ್ನು ಪ್ರಶ್ನಿಸಿ ಷಟ್‌ಸ್ಥಲ ವಿಕಲ್ಪ ಸಮುಚ್ಚಯವನ್ನು ಪ್ರತಿಷ್ಠಾಪಿಸಿದವರು. ಹೀಗಾಗಿ ಷಟ್‌ಸ್ಥಲ ಆಚರಣೆಯ ವಿಷಯದಲ್ಲಿ ಪರಂಪರಾನುಗತವಾಗಿ ಇದ್ದ ರೂಢಿಯನ್ನು ವಚನಶಾಸ್ತ್ರಕಾರರು ಅತಿಕ್ರಮಿಸಿ ಹೊಸರೀತಿಯ ಆಚರಣೆಯನ್ನು ಬಳಕೆಗೆ ತಂದರು. ಇದು ಷಟ್‌ಸ್ಥಲ ಶಾಸ್ತ್ರದಲ್ಲಾದ ಹೊಸಬದಲಾವಣೆ. ಅಥವಾ ಹೊಸ ಬೆಳವಣಿಗೆಯೆಂದು ಬೇರೆ ಹೇಳಬೇಕಾಗಿಲ್ಲ.

ಷಟ್‌ಸ್ಥಲ ಶಾಸ್ತ್ರದಲ್ಲಿ ಕಂಡುಬರುವ ಇನ್ನೊಂದು ಬದಲಾವಣೆಯನ್ನು ಗುರುತಿಸಬಹುದು. ಷಟ್‌ಸ್ಥಲವೆಂದರೆ ಪರಶಿವ ಅಥವ ಲಿಂಗವೆಂದು ತಿಳಿದು ಬರುವಂತೆ, ಷಟ್‌ಸ್ಥಲವೆಂದರೆ ಅಂಗ -- ಪಿಂಡಾಂಡ ಮತ್ತು ಬ್ರಹ್ಮಾಂಡಗಳು — ವೆಂದೂ ಅರ್ಥವುಂಟು. ಲಿಂಗಧಾರಣೆ ಅಂದರೆ ಷಟ್‌ಸ್ಥಲಧಾರಣೆ. ಲಿಂಗವನ್ನು ಅಂಗಕ್ಕೆ ಅಳವಡಿಸಿಕೊಳ್ಳುವದೆಂದರೂ. ಷಟ್‌ಸ್ಥಲಧಾರಣೆಯೆಂದರೂ ಬೇರೆ ಬೇರೆ ಎಂದರ್ಥವಲ್ಲ. ಷಡ್ವಿಧವಾದ ಲಿಂಗವು ಷಟ್‌ಸ್ಥಲವೆನಿಸಿಕೊಳ್ಳುವಂತೆ, ಷಡ್ವಿಧವಾದ ಮಂತ್ರವೂ ಷಟ್‌ಸ್ಥಲವೆ. ಷಟ್‌ಸ್ಥಲ ಶಾಸ್ತ್ರದಲ್ಲಿ ಲಿಂಗ ಮತ್ತು ಮಂತ್ರಗಳು ಒಂದೇ. ಲಿಂಗ ಅಥವಾ ಮಂತ್ರ—ಷಟ್‌ಸ್ಥಲ-ಚ್ಯುತಿಯಾದರೆ ಪ್ರಾಣತ್ಯಾಗವನ್ನು ಆಗಮಗಳಲ್ಲಿ ಹೇಳುವರು. ಆದರೆ ವಚನಶಾಸ್ತ್ರವು ಪ್ರಾಣತ್ಯಾಗವನ್ನು ಹೇಳುವದಿಲ್ಲ. ಯಾಕೆಂದರೆ ಶಿವಶರಣರ ಅಭಿಪ್ರಾಯದಲ್ಲಿ ಲಿಂಗವು ಬೀಳಲಾರದು; ಒಂದು ವೇಳೆ ಬಿದ್ದರೆ ಜಗವು ತಾಳಲಾರದು.[೧೧] ಇದು ಷಟ್‌ಸ್ಥಲ ಆಚರಣಾ ಸಿದ್ಧಾಂತದಲ್ಲಾದ ಹೊಸ ತಿರುವು ಎಂದು ಹೇಳಬಹುದು.

ಮೇಲಿನ ವಿವರಣೆಯಿಂದ ಆಗಮಗಳಲ್ಲಿಯ ಷಟ್‌ಸ್ಥಲವಿಚಾರ ಮತ್ತು ವಚನಶಾಸ್ತ್ರದಲ್ಲಿಯ ಷಟ್‌ಸ್ಥಲ ವಿಚಾರಗಳಲ್ಲಿ ಬದಲಾವಣೆಯು ಉಂಟಾದುದು ಗೊತ್ತಾ

ಗುತ್ತದೆ. ಆ ಬದಲಾವಣೆಯು ಎಂಥದೆಂಬುದೂ ಗೊತ್ತಾಗುವಂತೆ ಅನೇಕ ಹೊಸ ಅಂಶಗಳೂ ಷಟ್‌ಸ್ಥಲ ತತ್ವಜ್ಞಾನಕ್ಕೆ ಶಿವಶರಣರಿಂದ ಸೇರಿಕೊಂಡಿವೆಯೆಂಬುದೂ ಮನವರಿಕೆಯಾಗುತ್ತದೆ. ಈ ಲೇಖನದ ಉದ್ದೇಶವು ಈ ದೃಷ್ಟಿಯಿಂದ ಸಫಲವಾಗಿದೆ. ಶಿವಶರಣರು ತೋರಿಸಿದ ಹೊಸ ಶಾತ್ವಿಕ ವಿಚಾರಗಳು ತಾತ್ವಿಕ ಸಂಕೀರ್ಣ ಸಮಸ್ಯೆಗಳಿಗೆಡೆಮಾಡಿಕೊಟ್ಟಿದ್ದು ಅವುಗಳನ್ನು ಕುರಿತು ಪ್ರತ್ಯೇಕವಾಗಿ ಮೀಮಾಂಸೆ ಮಾಡಬೇಕಾಗುವದು. ಅವುಗಳನ್ನು ಇಲ್ಲಿ ಎತ್ತಿ ಈ ಲೇಖನವು ಎರಡು ಉದ್ದೇಶಗಳನ್ನು ಸಾಧಿಸುವ ಗೊಂದಲದಲ್ಲಿ ತೊಡಗಿಕೊಳ್ಳಬಾರದೆಂದು ಹಾಗೆ ಮಾಡಿಲ್ಲ. ಷಟ್‌ಸ್ಥಲಶಾಸ್ತ್ರ ಕೋವಿದರು ಈ ನಿಟ್ಟಿನಲ್ಲಿ ಮುನ್ನಡೆದು ಶಾಸ್ತ್ರ ಬೆಳವಣಿಗೆಗೆ ನೆರವಾಗಬಹುದು. ಇದೇ ಲೇಖನದ ತಾತ್ವಿಕ ಚರ್ಚೆಯನ್ನು ತತ್ವಜ್ಞಾನದ ವಿದ್ಯಾರ್ಥಿಗಳು ನಡಿಸಿ ಹೆಚ್ಚಿನ ಜ್ಞಾನಮಾಡಿಕೊಡುವದು ಸ್ವಾಗತಾರ್ಹ.

ಸಂದರ್ಭ :

೧. Dr. S. Radhakrishnan, Indian Philosophy Vol. II

೨. Shiddharamappa D. Pavate, Veerashaiva philosophy of the Shaivagamas Hubli 1927.
ಆರ್. ಆರ್. ದಿವಾಕರ, ವಚನಶಾಸ್ತ್ರ ರಹಸ್ಯ, ಪ್ರಕರಣ ೧೦. ಪು. ೩೦೭ ರಿಂದ ಆಧ್ಯಾತ್ಮ ಕಾರ್ಯಾಲಯ, ಧಾರವಾಡ ೧೯೨೮

೩. ಪಾರಮೇಶ್ವರಾಗಮ ಪಟಲ ೬ ಶ್ಲೋಕ ೬ ಶ್ರೀಮಂತ ವಾರದ ಮಲ್ಲಪ್ಪ ಪ್ರಕಟಣೆ ಸೊಲ್ಲಾಪುರ ೧೯೦೪
ಷಟ್‌ಸ್ಥಲ ಕೌಮುದೀ ಪು. ೯ ಮೈಸೂರು ಹೊಸಮಠ ೧೯೨೭

೪. ಡಾ. ಜಚನಿ, ಸೂಕ್ಷ್ಮತಂತ್ರ ಸಾರ, ಲಿಂಗಪಟಲ ಶ್ರೀಗುರುಕುಮಾರಾಶ್ರಮ ಗಿರಿಯಾಪುರ ೧೯೭೧

೫. ಆರ್. ಆರ್. ದಿವಾಕರ, ವಚನಶಾಸ್ತ್ರ ರಹಸ್ಯ. ಆಧ್ಯಾತ್ಮ ಕಾರ್ಯಾಲಯ. ಧಾರವಾಡ ೧೯೨೮

೬. ತಂತ್ರ ಸಂಗ್ರಹ, ಮೂರುಸಾವಿರಮಠ, ಹುಬ್ಬಳ್ಳಿ ೧೯೨೪
ಡಾ. ಜಚನಿ, ಸೂಕ್ಷ್ಮತಂತ್ರ ಸಾರ, ಪ್ರಣವ ಪಟಲ ಶ್ರೀಗುರುಕುಮಾರಾಶ್ರಮ ಗಿರಿಯಾಪುರ ೧೯೭೦

೭. ಡಾ. ಎಚ್. ತಿಪ್ಪೇರುದ್ರಸ್ವಾಮಿ. ವಚನಗಳಲ್ಲಿ ವೀರಶೈವ ಧರ್ಮ ಪು. ೧೪೩ ಡಿವಿಕೆ ಮೂರ್ತಿ, ಮೈಸೂರು ೧೯೬೯

೮. ಡಾ. ಆರ್. ಸಿ. ಹಿರೇಮಠ, ಚೆನ್ನಬಸವಣ್ಣನವರ ವಚನಗಳು, ವ. ಸಂ. ೧೩೧೦, ೧೪೦೨೨ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೧೯೬೫

೯. ಪ್ರೊ. ಎಸ್. ಎಸ್. ಬಸವನಾಳ, ಬಸವಣ್ಣನವರ ವಚನಗಳು, ವ. ಸಂ. ೮೯೬ ಎಲ್. ಇ. ಅಸೋಸಿಯೇಶನ್, ಧಾರವಾಡ-೧೯೬೨

೧೦. Dr. V. S. Kambi, Forms of Indian Philosophical Literature and other papers, P. 15–38 Shrividya Prakashan, Dharwad 1979

೧೧. ಡಾ. ವ್ಹಿ. ಎಸ್. ಕಂಬಿ, ವೀರಶೈವ ದರ್ಶನ ಮೀಮಾಂಸೆ. ಸಂ. ೧. ಪು. ೧೯-೩೧ ಕುಮಾರೇಶ ಗ್ರಂಥಮಾಲೆ. ಧಾರವಾಡ ೧೯೬೨

೧೨. ಡಾ. ವ್ಹಿ. ಎಸ್. ಕಂಬಿ ಅದೇ ಪು. ೫೦-೬೧

೧೩. ಡಾ. ಫ. ಗು. ಹಳಕಟ್ಟಿ, ಶೂನ್ಯಸಂಪಾದನೆ, ಘಟ್ಟಿವಾಳಯ್ಯಗಳ ಸಂಪಾದನೆ. ವಿಜಾಪುರ ೧೯೩೦

• •

ಅಕ್ಕಮಹಾದೇವಿಯ ವಚನ

ಒಂದು ವಿಶ್ಲೇಷಣೆ

ಯು. ಎಸ್. ಎಸ್. ಆರಾಧ್ಯ

ಯಾವುದೇ ಕಾವ್ಯಕ್ಕೆ ಕವಿ ಹೇಳಿಕೊಳ್ಳುವ ಅರ್ಥವಷ್ಟನ್ನೇ ಹಚ್ಚಿ, ಉಳಿದಂತೆ ಹೊಳೆಯುವ ಯಾವುದೇ ಉತ್ತಮ ಅರ್ಥವನ್ನು ಅಲಕ್ಷ್ಯಿಸುವುದಾಗಲೀ ಅಥವಾ ಕವಿ ಏನೇ ಹೇಳಿಕೊಳ್ಳಲಿ ವಿಮರ್ಶಕನಿಗೆ ಅನ್ನಿಸುವ ಎಲ್ಲವನ್ನೂ ಆ ಕೃತಿಗೆ ಅಂಟಿಸುವುದಾಗಲೀ ಅಸಾಧು ಎನ್ನಿಸುವುದಕ್ಕೆ ಕಾರಣ; ಮುಖ್ಯವಾಗಿ, ಕಾವ್ಯ 'ಪ್ರಜ್ಞಾ ಮತ್ತು ಅಪ್ರಜ್ಞಾ ಸ್ಥಿತಿಯ ನಡುವೆ ವಿಶೇಷ ಸಂದರ್ಭವೊಂದರಲ್ಲಿ ಘಟಿಸುತ್ತದೆ'— ಎಂಬ ನಂಬಿಕೆ ಸತ್ಯವೆಂದು ಭಾವಿಸಿರುವುದರಿಂದ, ಬುದ್ಧಿಯ ಜೊತೆಗೆ ಪ್ರತಿಭೆಯೂ ಕೆಲಸ ಮಾಡುವುದರಿಂದ ಈ ಎರಡೂ ಮಟ್ಟದಿಂದ ಕಾವ್ಯವನ್ನು ಪ್ರವೇಶಿಸುವುದು ನ್ಯಾಯವಾದ ರೀತಿಯಾಗುತ್ತದೆ. ಹೀಗಿರುವುದರಿಂದಲೇ ಯಾವುದೇ ಉತ್ತಮ ಕವಿಯ ಕಾವ್ಯದಲ್ಲಿ ಕವಿ ತನ್ನ ಬುದ್ಧಿ ಗ್ರಹಿಸಿದ್ದರ ಆಧಾರದ ಮೇಲೇ 'ಇದು ತನ್ನ ಕಾವ್ಯದ ಅರ್ಥ' ಎಂದು ಹೇಳುವ ಅರ್ಥಕ್ಕೆ ಪ್ರತಿಭೆ ಅವನ ಬುದ್ಧಿ ಮಟ್ಟಕ್ಕೂ ಮೀರಿದ ಅರ್ಥದ ಅಗಲವಾದ ಪದರಗಳನ್ನುಳ್ಳ ಪ್ರತಿಮೆಗಳನ್ನು ಪದಗಳ ಹಂದರದಲ್ಲಿ ತಂದು ಕೂಡಿಸಿರುತ್ತದೆ. ಎನ್ನುವುದು ಪ್ರತಿಯೊಬ್ಬ ನಿಷ್ಠಾವಂತ ಸಾಹಿತ್ಯ ವಿದ್ಯಾರ್ಥಿಯೂ ಗಮನಿಸುವ ಪ್ರಥಮ ಪಾಠ ಎಂಬುದು ತಿಳಿದ ವಿಚಾರ. ಆದ್ದರಿಂದ ಆ ಮುಖ್ಯಾರ್ಥದ ನೆಲೆಯಲ್ಲಿ ಅದಕ್ಕೆ ಅಪಚಾರವಾಗದಂತೆ, ಅರ್ಥ ಸಾಧ್ಯತೆಗಳನ್ನು ಅಗೆದು–ತೆಗೆಯುವ ಪ್ರಯತ್ನ ಅಸಾಧುವೇನೂ ಆಗಲಾರದು.

ಈ ಮುಂದೆ ವಿವೇಚಿಸಲಿರುವ ವಚನ ಪ್ರತಿಯೊಬ್ಬರಿಗೂ ತಿಳಿದಿರುವ ವಚನವಾಗಿದೆ. ಅದರ ಸಾಮಾನ್ಯಾರ್ಥವನ್ನೇ ಬಹಳ ಜನ ಕೊನೆಯ ಅರ್ಥವೆಂದು ನಂಬಿಕೊಂಡಿರುವುದರಿಂದ, ಹೆಚ್ಚಿನ ಅರ್ಥ ವಿವರವನ್ನು ಅತ್ಯುತ್ಪ್ರೇಕ್ಷೆ ಎನ್ನಿಸಿ ತಳ್ಳಿ ಬಿಡುವ ಸಾಧ್ಯತೆ ಇರಬಹುದು—ಎನ್ನಿಸಿದ್ದಕ್ಕಾಗಿ ಇಷ್ಟು ಮಾತುಗಳನ್ನು ಮೊದಲೇ ಹೇಳಿಕೊಳ್ಳಬೇಕಾಯಿತು.

ಮುಖ್ಯವಾಗಿ ಇಲ್ಲಿ ಎರಡು ಅತಿಕ್ರಮಣಗಳನ್ನು ನಡೆಸಿದ್ದೇನೆ.

೧) ಪದಗಳನ್ನು ವಿಭಜಿಸಿ ಅರ್ಥ ವಿಶ್ಲೇಷಣೆ ಮಾಡುವಾಗ ವ್ಯಾಕರಣ ನಿಯಮರೀತ್ಯಾ ನಿಷ್ಠನಾಗಿಲ್ಲದಿರುವುದು.

೨) ಕಾಲದ ಅಂತರವನ್ನು ಗೌಣವಾಗಿಸಿಕೊಂಡು ಇಂದಿನ ಸಂದರ್ಭದಲ್ಲಿ ಪದಗಳು ತೊಟ್ಟುಕೊಳ್ಳಬಹುದಾದ ಬಹು ಅರ್ಥಗಳನ್ನು ನಿಸ್ಸಂಕೋಚವಾಗಿ ಹೆಕ್ಕಿರುವುದು.

ಇವೆರಡೂ ಅತಿಕ್ರಮಣಗಳೂ ಅತಿ ಸ್ವಚ್ಛಂದತೆ ಮತ್ತು ಅತಿವ್ಯಾಪ್ತಿಗಳೆಂದು ತೀವ್ರವಾದ ಆಕ್ಷೇಪಣೆಗಳನ್ನು ತರುತ್ತವೆಂಬುದನ್ನು ತಿಳಿದೂ ಯಾವುದೋ ಲಾಭದ–ಅರ್ಥಗ್ರಹಣ ದೃಷ್ಟಿಯಿಂದ–ಆಸೆಗಾಗಿ, ಈ ಕ್ರಮವನ್ನು ಅನುಸರಿಸಿದ್ದೇನೆ.

ಈ ರೀತಿಯ ಕ್ರಮವನ್ನು ಅನುಸರಿಸುವುದಕ್ಕೆ ಕಾರಣವಾದ ನನ್ನ ನಿಲುವನ್ನು ಮತ್ತಷ್ಟು ಸ್ಪಷ್ಟಪಡಿಸುವುದು ಒಳ್ಳೆಯದು.

ಕೆಲವೊಮ್ಮೆ ಹೀಗೆ ಯಾವುದೋ ಕಾಲದ ಕಾವ್ಯಗಳಿಗೆ ಅವುಗಳ ರಚನಕಾರರ ಭಾಷಾಜ್ಞಾನ, ಪರಿಸರ, ಉದ್ದೇಶಗಳನ್ನು ತೀರಾ ನಿಷ್ಠವಾಗಿ ಗಮನಿಸಿ ಅಷ್ಟಕ್ಕೆ ಮಾತ್ರ ಅರ್ಥ ಹೇಳಬೇಕು. ಈಗಿನ ಭಾಷೆ ಪರಿಸರ ಸಾಹಿತ್ಯಿಕ ಉದ್ದೇಶಗಳ ಒರೆಗಲ್ಲಿನಲ್ಲಿ ವಿಶ್ಲೇಷಿಸುವುದು ಒಣತಾರ್ಕಿಕತನ ಎಂಬ ಮಾತು ಸಲೀಸಾಗಿ ಏಳಬಹುದು. ಆದರೆ ಈ ಟೀಕೆ ಮಾಡುವಾಗ ಕೆಲವು ಅಂಶಗಳನ್ನು ಗಂಭೀರವಾಗಿ ಪರಿಶೀಲಿಸುವುದು ಒಳ್ಳೆಯದು ಎನಿಸುತ್ತದೆ. ಹಿಂದಿನ ಕವಿಗಳ ಕಾವ್ಯದ ವಸ್ತುವೇ ಇಂದಿನವರೆಗಿನ ಅನೇಕ ಕವಿಗಳ ಕಾವ್ಯದ ವಸ್ತುವಾಗಿ ಪದೇ ಪದೇ ಪರಿಣಮಿಸಿರುವುದು ನಿಜ ವಿಚಾರ. ಅದು ಸಹಜ—ಏಕೆಂದರೆ ಮಾನವನ ಮೂಲ ಪ್ರವೃತ್ತಿಗಳು ಎಂದಿಗೂ ಒಂದೇ ಆದರೆ ಆ ಪ್ರವೃತ್ತಿಗಳ ಮೇಲೂ ನಿಯಂತ್ರಣಗಳ ಯಶ ಅಪಾಯಶಕ್ಯನುಗುಣವಾಗಿ ಬಲಲಾದ ಸಾಮಾಜಿಕ ಮೌಲ್ಯಗಳ ಬೆಳಕಿನಲ್ಲಿ ತನ್ನ ಬಣ್ಣವನ್ನು ಪರಿಸರಕ್ಕನುಗುಣವಾಗಿ ಬದಲಾಯಿಸುತ್ತವೆ.

ವಸ್ತು ಒಂದೇ ಎಂದು ಒಪ್ಪಿಕೊಂಡಾಗ ಹಳೆಯ ಕಾವ್ಯದ ಶಬ್ದಾರ್ಥಗಳನ್ನೇ ಹೊಸ ಭಾಷೆಯ ಅರ್ಥ ಸಾಧ್ಯತೆಗಳೊಡನೆ ವಿಶ್ಲೇಷಿಸಿದಾಗ–ವಿಸ್ತೃತ ಅರ್ಥವನ್ನು ಪಡೆಯಬಹುದಾದರೆ ಅಂಥ ಕೃತಿ ಹೊಸಕಾಲದ ಒರೆಗಲ್ಲಿನಲ್ಲೂ ಬದುಕಿದ ಸಾರ್ವತ್ರಿಕತೆಯನ್ನು ಪಡೆದ ಹಿರಿಮೆಯದಾಗುತ್ತದೆ. ಹೀಗಾದಾಗ ಅದೊಂದು ಕಾವ್ಯ ಜಗತ್ತಿನ ಪ್ರಾಕೃತಿಕ ವಿಸ್ಮಯಗಳಲ್ಲೊಂದಾಗುತ್ತದೆ— ನೀರನ್ನು ಬೇರೆ ಬೇರೆ ಆಕಾರದ ಪಾತ್ರೆಗಳಿಗೆ ಹಾಕಿದ ಹಾಗೆ. ಮೂಲದ ಬದಲಾವಣೆ ಇಲ್ಲದೆ ಹೊಸ ಪರಿಸರದಲ್ಲಿ ಹೊಸ ಅರ್ಥವನ್ನು ಪಡೆಯುವುದು ಅಪರಾಧವಾಗಲಾರದು. ಆದರೆ ಅಲ್ಲಿ ಕೃತಿಯ ಮೂಲ ಉದ್ದೇಶ ಮತ್ತು ಅದು ಕಟ್ಟಿಕೊಂಡಿರುವ ಪರಿವೇಕ್ಷದಿಂದ ದೂರ ಸಾಗದಂತೆ ಎಚ್ಚರಿಕೆಯನ್ನು ವಹಿಸಬೇಕಾದುದು ಅಗತ್ಯ. ಈ ನಿಟ್ಟಿನ ದೃಷ್ಟಿಗೆ ಹೊಸ ಭಾಷೆಯಲ್ಲಿ ಹಳೆಯ ಕಾವ್ಯವನ್ನು ಬರೆಯುವುದೂ ಒಂದೇ. ಹಳೆಕಾವ್ಯದ ಭಾಷೆಗೆ–ಸಾಧ್ಯವಾಗುವುದಾದರೆ– ಹೊಸ ಅರ್ಥವನ್ನು ಹಚ್ಚುವುದೂ ಒಂದೇ. ಅಕ್ಕನ

ವಚನಗಳಿಗೆ ಸಂಸ್ಕೃತ ಕನ್ನಡ ಪದಗಳ ಅರ್ಥವನ್ನು ಗಮನಿಸಿ ಅರ್ಥೈಸುವಾಗ ನನ್ನ ಧೋರಣೆ ಹೀಗಿದೆ.

ಅಕ್ಕಮಹಾದೇವಿ, ಮೊದಲನೆಯದಾಗಿ ಒಬ್ಬ ಹೆಣ್ಣು, ಎರಡನೆಯದಾಗಿ ವಿರುದ್ಧ ಪರಿಸರದಲ್ಲೂ ಹೆಣ್ಣಿನ ಸಹಜಾನುಭವಗಳನ್ನು, ನಿಜ ವಿಚಾರಗಳನ್ನು ಸೈದ್ಧಾಂತಿಕ ಮಟ್ಟದಲ್ಲೂ ಪ್ರೌಢವಾಗಿ ಬಹಳಲಾಯಕ್ಕಾಗಿ ಹೊರಚೆಲ್ಲಿದ ಮೊದಲ ಕನ್ನಡಿತಿ. ಈ ನಿರ್ಭಯತೆ, ಸ್ವಾತಂತ್ರ್ಯಪ್ರಿಯತೆ ಅವಳ ಬುದ್ಧಿಮತ್ತೆಯ ಕೊಪ್ಪರಿಗೆಯಲ್ಲಿ ಕುದಿಗೊಂಡು ಪ್ರತಿಭೆಯ ಬೆಳಗಿನೊಡನೆ ಶಕ್ತಿವಾಕ್ ಆಗಿ ವಚನ ರೂಪದಲ್ಲಿ ಒಡಮೂಡಿದೆ. ಅಂಥ ವಚನವೊಂದರ ವಿಶ್ಲೇಷಣೆ ಇಲ್ಲಿನ ಉದ್ದೇಶ.

ವಚನದ ಪೂರ್ಣಪಾಠ ಇದು.

'ಗಿರಿಯಲಲ್ಲದೆ ಹುಲು ಮೊರಡಿಯಲ್ಲಾಡುವುದೇ ನವಿಲು ?
ಕೊಳನಲ್ಲದೆ ಕಿಱುವಳ್ಳಕ್ಕೆಳಸುವುದೇ ಹಂಸೆ ?
ಮಾಮರ ತಳಿತಲ್ಲದೆ ಸ್ವರಗೈವುದೇ ಕೋಗಿಲೆ ?
ಪರಿಮಳವಿಲ್ಲದ ಪುಷ್ಪಕ್ಕೆಳಸುವುದೇ ಭ್ರಮರ ?
ಎನ್ನ ದೇವ ಮಲ್ಲಿಕಾರ್ಜುನಗಲ್ಲದೆ
ಅನ್ಯಕ್ಕೆಳಸುವುದೇ ಎನ್ನಮನ, ಕೇಳಿರೇ ಕೆಳದಿಯರಿರಾ !

ಈ ವಚನದ ಪದಗಳ ಪ್ರಯೋಗ ತುಂಬ ಕುಶಲತೆಯಿಂದ ಕೂಡಿದೆ. ಅಕ್ಕ ತನ್ನ ಪ್ರೀತಿ ಎಂಥವರಿಗಾಗಿ ಮೀಸಲಾಗಿದೆ ಎಂಬುದನ್ನು ತಿಳಿಸುವ ಈ ವಚನದಲ್ಲಿ ತನ್ನ ಯೋಗ್ಯತೆ, ತಾನು ಪ್ರೀತಿಸುವವನ ಯೋಗ್ಯತೆ ಮತ್ತು ತಮ್ಮಿಬ್ಬರ ನಡುವಿರುವ 'ಇಹ'ದ ಅಯೋಗ್ಯತೆ–ಈ ಮೂರೂ ವಿಚಾರಗಳನ್ನು ಚೆನ್ನಾಗಿ ಜೋಡಣೆಗೊಳಿಸಿ ಹೇಳಿದ್ದಾಳೆ. ಇಲ್ಲಿನ ಶಬ್ದ, ಅರ್ಥ ಧ್ವನಿಗಳೆಲ್ಲವನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದಾಗ ಈ ಅರ್ಥ ಹೊಮ್ಮುವ ಪ್ರತೀಯಮಾನತ್ವ ಮನಸ್ಸನ್ನು ಮುಟ್ಟುತ್ತದೆ. ಇದು ಎಷ್ಟು ವ್ಯವಸ್ಥಿತವಾಗಿದೆಯೆಂದರೆ ಈ ಮೂರು ವಿಚಾರಗಳಿಗೆ ಸಂಬಂಧಿಸಿದಂತೆ ಬರುವ ಪದಗಳನ್ನೊಳಗೊಂಡಂತೆ ವಚನವನ್ನು ಲಂಬವಾಗಿ (Verticle) ಗೆರೆ ಹಾಕಿ ಮೂರು ಮನೆಗಳಲ್ಲಿ ಪಟ್ಟಿ ಮಾಡಬಹುದು. ಮುಂದಿನ ಪುಟದಲ್ಲಿ ಅದನ್ನು ಹಾಗೆ ಮಾಡಲಾಗಿದೆ.

೧) **ಗಿರಿ :** ಪರಮಾತ್ಮನ—ಪ್ರಿಯತಮನ—ಬೃಹತ್ತನ್ನೂ,

೨) **ಕೊಳ ;** ಸ್ಥಿರತೆ ಮತ್ತು ತಿಳಿಯಾಗಿರುವ (ಶುಭ್ರ) ಗುಣವನ್ನೂ.

೩) **ಮಾಮರ :** ಚೇತನದಾಯಿತ್ವವನ್ನೂ (ಜೀವಂತಿಕೆ) ಸೃಜನಶೀಲತೆಯನ್ನೂ ಚಿಗುರು ಸಸ್ಯದ ಬೆಳವಣಿಗೆಯ ಆ ಹಂತದಲ್ಲಿ ಅದರ ಒಟ್ಟು ಆಯುಷ್ಯದಲ್ಲಿ–ಎಲೆಯ ಮೂರು ಹಂತ (ಮನುಷ್ಯನಂತೆ) ಗಳಾದ ಬಾಲ್ಯ ಯೌವನ ಮುಪ್ಪುಗಳಲ್ಲಿ ಇನ್ನೂ

ಪ್ರಾಥಮಿಕ ಹಂತ. ಅಲ್ಲದೆ ಅದು ಪುಷ್ಪದ ಅರಳುವಿಕೆಯ ಶಕ್ತಿಯನ್ನು ಗರ್ಭೀಕರಿಸಿ ಕೊಂಡಿದೆ. ಈ ಸಂಪದ್ಯುಕ್ತತೆಯಿಂದ ಸೃಜನಾತ್ಮಕತೆ ಅಲ್ಲಿ ನೆಲೆಗೊಂಡಿದೆ. ಚೆನ್ನ ಮಲ್ಲಿಕಾರ್ಜುನ ಹೀಗೆ ಸೃಷ್ಟಿಯ ಸೃಜನಶೀಲತೆಯುಳ್ಳವನು. (Resourcefull and creative)

	ಪರಮಾತ್ಮ ಪರ	ಇಹದ ಪರ	ತನ್ನ ಪರ
೧	ಗಿರಿ	ಹುಲು ಮೊರಡಿ	ನವಿಲು
೨	ಕೊಳ	ಕಿಱುವಳ್ಳ	ಹಂಸೆ
೩	ಮಾಮರ	ತಳಿತಲ್ಲದ ಮರ	ಕೋಗಿಲೆ
೪	ಪರಿಮಳ	ಪರಿಮಳವಿಲ್ಲದ ಪುಷ್ಪ	ಭ್ರಮರ

ಕ್ರಿಯಾ ಪದಗಳ ಅನುಕ್ರಮ : ಆಡು→ಎಳಸು (ಬಯಸು) → ಸರಗೈ→ಎಳಸು (ಹೆಣೆದುಕೋ) ಪ್ರೀತಿಸು, ಮಿಲನಗೊಳ್ಳು

೪) **ಪರಿಮಳ :** ಅನಿರ್ವಚನೀಯ ಆನಂದ–ಅನುಭವೈಕವೇದ್ಯ ಸ್ವರೂಪ. ಆದರೂ ಆಕರ್ಷಕ—ಅಮೂರ್ತನಾದರೂ ಆಕರ್ಷಕನಾಗಿರುವ, ಅಮೂರ್ತವಾಗಿಯೇ ಆಕರ್ಷಕವಾಗಿರುವ ಭಗವತ್ ಶಕ್ತಿಯ ವೈಶಿಷ್ಟ್ಯ—ಇದಿಷ್ಟು ತಾನು ಪ್ರೀತಿಸಲು ಇಚ್ಛಿಸುವ ಪರಮಾತ್ಮ ಪರ ಪ್ರತಿಮೆಗಳು. ತನ್ನ ಪರವಾಗಿರುವ

೧) **ನವಿಲು** : ತನ್ನ ಸೌಂದರ್ಯ ಮತ್ತು ಅವನ ಬಗೆಗಿನ ಆಕಾಂಕ್ಷೆಯ ಚಡಪಡಿಕೆಯನ್ನು ಸೂಚಿಸುತ್ತದೆ. ನವಿಲಿನ ಕುಣಿತ ಪ್ರಿಯನನ್ನು ನೆನೆದಾಗ ಉಂಟಾಗುವ ಸಂಭ್ರಮ ಮತ್ತು ಲವಲವಿಕೆಯನ್ನು ಸೂಚಿಸುತ್ತದೆ.

೨) **ಹಂಸ** : ಸೊಗಸು, ನಯಗಾರಿಕೆ, ಗಾಂಭೀರ್ಯ, ಘನವಂತಿಕೆ (Dignified stature, status) ಅಂದರೆ ಶ್ರೇಷ್ಠತೆಯನ್ನು (ತಾನು ಸಾಮಾನ್ಯ ಹೆಣ್ಣಲ್ಲ. ಎಂಬ ಹೆಮ್ಮೆ, ಆತ್ಮಾಭಿಮಾನ, ಹಿರಿಮೆಯೂ ಇಲ್ಲಿದೆ) ಸೂಚಿಸುತ್ತದೆ. ಈ ಪದಕ್ಕೆ ಅಹಂ + ಸಃ=ನಾನು + ಅವನು ಎಂಬ ಅರ್ಥವೂ ಸ್ವಾರಸ್ಯಕರವಾಗಿ ತಗಲಿಕೊಳ್ಳುತ್ತದೆ. ಅಕ್ಕನ ಭಗವದಾರಾಧನೆ–ಸತಿಪತಿ ಭಕ್ತಿ ಭಾವದ್ದು. ಎಂಬುದು ಇಲ್ಲಿ ಗಮನ ಯೋಗ್ಯ ಅಂಶ.

೩) **ಕೋಗಿಲೆ** : ಬಯಕೆಯ ಕೂಗು. ಅನುರಾಗದ ಮಧುರ ರಾಗ. ಇಂಪು ನಾದ ಮುಂತಾದುವನ್ನೂ :

೪) **ಭ್ರಮರ** : ಅನುಭವ, ಭೋಗ, ಮಿಲನವನ್ನೂ ಸೂಚಿಸುವಂಥದು. ಇಹದ ಪರವಾಗಿ ಇಲ್ಲಿ ಬರುವ

೧) **ಹುಲು ಮೊರಡಿ** : ಲೋಕ ಸುಖದ ಅಸಾರತೆಯನ್ನು ಸೂಚಿಸುತ್ತದೆ. 'ಮೊರಡಿ' ಎಂದರೇ ಬೋಳುಗುಡ್ಡ ಅದಕ್ಕೆ 'ಹುಲು' ಎಂಬ ವಿಶೇಷಣ ಬೇರೆ. ಇದು ಉದ್ದೇಶಿತ ಅರ್ಥದ ಪುನರುಕ್ತಿಗೆ ಅವಕಾಶ ಮಾಡಿ--ಅಸಾರತೆ ಗೊಡ್ಡುತನವನ್ನು ವಿಶೇಷ ಬಲದಿಂದ ಹೇಳುತ್ತದೆ.

೨) **ಕಿಱಿವಳ್ಳ** : ಚಂಚಲತೆ, ಅಸ್ಥಿರತೆ, ಅಶುದ್ಧತೆಯನ್ನು ಸೂಚಿಸುತ್ತದ. ಯಾವಾಗಲೂ ಹರಿಯುತ್ತಿರುವದರಿಂದ, ಹಳ್ಳದಲ್ಲಿನ ನೀರಿನಲ್ಲಿ ದಡದ ಕಸ ಮಣ್ಣು ಗಳು ಇದ್ದೇ ಇರುತ್ತವೆ. ಇಂತಹ ಸ್ಥಳ ಹಂಸೆಯ ಏಕಾಂತ ವಿಹಾರಕ್ಕೆಲ್ಲಿಯ ಯೋಗ್ಯತೆಯುಳ್ಳದ್ದು ? ಇದಕ್ಕೆ ವಿರುದ್ಧವಾಗಿ ಪರಮಾತ್ಮ ಪರವಾಗಿ ಬರುವ 'ಕೊಳ' ಪದ ತನ್ನ ಭೌತಿಕ ಸ್ವರೂಪದಲ್ಲಿಯೇ ಮೃದುತ್ವವನ್ನೂ, ಸಂಕ್ಷಿಪ್ತವಾಗಿದ್ದು ಅರ್ಥಪೂರ್ಣ ಅಚ್ಚುಕಟ್ಟನ್ನೂ, ಹಂಸೆಯ ಯೋಗ್ಯತೆಗೆ ತಕ್ಕ ವಿಹಾರ ಸ್ಥಳವಾಗಿ-ಸೂಚಿಸುತ್ತದೆ. ಕಿಱಿವಳ್ಳ ಎಂಬ ಪದ 'ಕೊಳ' ಕ್ಕಿಂತ ದೊಡ್ಡದಾಗಿದ್ದು, ಸಂಕೀರ್ಣ ಮತ್ತು ಒತ್ತಕ್ಷರಗಳಿಂದ ಜಿಡುಕಾಗಿದ್ದು ತನ್ನ ಭೌತಿಕ ಸ್ವರೂಪದಲ್ಲಿಯೇ ಅಶುದ್ಧತೆ, ಚಂಚಲಮಯತೆಯ ಭಾವವನ್ನು ಮಿಡಿಯುತ್ತದೆ. ಲೌಕಿಕದ ಸಂಕೋಲೆ ತನವನ್ನು ವ್ಯಕ್ತಪಡಿಸುತ್ತದೆ.

೩) **ತಳಿತಲ್ಲದ (ಚಿಗುರದೆ ಇರುವ) ಮರ** : ಜಡತ್ವವನ್ನೂ, ಮಿತ ಚೇತನವನ್ನೂ; ಒಟ್ಟಾರೆ ಇದು ನಿತ್ಯ ನೂತನ ಚೇತನದ ಎದುರು ಇಹದ ಮರಣ ಸದೃಶ ಸ್ವರೂಪವನ್ನು ಸೂಚಿಸುತ್ತದೆ.

೪) **ಪರಿಮಳವಿಲ್ಲದ ಪುಷ್ಪ** : ಶುಷ್ಕ, ಅರುಚಿಕರ,ತೋರಿಕೆಯ ಸೌಂದರ್ಯ ಮತ್ತು ಗೊಡ್ಡುತನವನ್ನೂ ಸೂಚಿಸುತ್ತದೆ.

ಇದಲ್ಲದೆ ಇಲ್ಲಿನ ಕ್ರಿಯಾಪದಗಳು ಸೂಚಿಸುವ ಕ್ರಿಯೆಗಳಿಗೂ ಅವುಗಳ ಅನುಕ್ರಮಕ್ಕೂ ವಿಶೇಷ ಔಚಿತ್ಯವಿದೆ.

ಮೊದಲನೆಯ ಸಾಲಿನಲ್ಲಿ ಬರುವ ಆಡು → ಎರಡನೆಯ ಸಾಲಿನಲ್ಲಿ ಬರುವ 'ಎಳಸು' (ಬಯಸು) → ಮೂರನೆಯ ಸಾಲಿನಲ್ಲಿ ಬರುವ 'ಸ್ವರಗೈ' → ನಾಲ್ಕನೆಯ ಸಾಲ್ಲಿನಲ್ಲಿ ಬರುವ 'ಎಳಸು' (ಹೆಣೆದುಕೊ, ಪ್ರೀತಿಸು, ಮಿಲನಗೊಳ್ಳು)

ಮೊದಲು ಬೃಹತ್ತನ್ನು ಬಯಸಿ (ಇನಿಯನನ್ನು) 'ಎಂಥವನು ನನ್ನ ಇನಿಯ'! ಎಂಬುದನ್ನು ಗುರುತಿಸಿಕೊಂಡು ಖುಷಿಪಟ್ಟು ಅದನ್ನು ಪಡೆಯುವ ಆಶಯಿಂದ' ದೊರೆಯುತ್ತಾನೆಂಬ ಖಚಿತ ನಂಬಿಕೆಯಿಂದ ನರ್ತಿಸುವುದು, ತನ್ನ ಸೌಂದರ್ಯ ಪ್ರದರ್ಶನ ಮಾಡುವುದು (ಇಲ್ಲಿ ಸೌಂದರ್ಯವಿರುವುದು ಗಂಡು ನವಿಲಿಗೊ ಹೆಣ್ಣಿಗೋ ಎಂಬುದು ಅಪ್ರಕೃತ. ಏಕೆಂದರೆ ಗಂಡೆಂದು ಅನ್ವಯಿಸುವುದಾದರೆ ಪರ್ವತ ಅಥವಾ

ಗಿರಿಯನ್ನು ಹೆಣ್ಣಿಗೆ ಹೋಲಿಸುವುದು ಅಸಾಧ್ಯವಾಗುತ್ತದೆ. ಬಹುಪಾಟ್ಟಿಗೆ ಅಸಹ್ಯ ಯವಾಗುತ್ತದೆ.) ತನ್ನ ಜೀವಕ್ಕೆ ಬೇಕಾದ ಅಂಥದೊಂದು ವಸ್ತುವಿದೆ. ಎಂಬ ತಿಳಿವೇ ಸಂತೋಷದ ಮೂಲ ಕಾರಣ. ಹೀಗೆ ಬಂದ ಸಂತೋಷ ಸಂಭ್ರಮ ಲವಲವಿಕೆ ಯನ್ನು 'ಆಡು', ಪದ ಸಮರ್ಥವಾಗಿ ಮೀಟುತ್ತದೆ. ಅನಂತರ ಎಳಸುವುದು ಅರ್ಥಾತ್ ಬಯಸುವುದು.

ಅದರ ಮುಂದಿನ ಹಂತ ಸ್ವರಗೈಯುವುದು ಅದಕ್ಕಾಗಿ ಬಾಯಿ ತೆರೆದು, ಹೃದಯ ತೆರೆದು ಅನುರಾಗದ ಮಧುರ ಕಂಠದಲ್ಲಿ ಕರೆಯುವುದು, ಆಹ್ವಾನಿಸುವುದು.

ಅನಂತರ, 'ಎಳಸು'ವುದು. ಇಲ್ಲಿ ಅದರ ಅರ್ಥ ಅದರೊಡನೆ ಅನುಭವಿಸು ವುದು, ಮಿಲನಗೊಳ್ಳುವುದು ಅಂದರೆ ಐಕ್ಯ ಗೊಳ್ಳುವುದು.

ಈ ವಚನದಲ್ಲಿನ ಅಕ್ಕನ ಧೋರಣೆಯನ್ನು ಹೀಗೆ ಸಂಗ್ರಹಿಸಬಹುದು.

ಬೇರೆ ಬೇರೆ ಪಕ್ಷಿಗಳು ಕ್ಷುದ್ರವಾದ ಬೋಳು ಗುಡ್ಡದಲ್ಲಿ ಆಡಬಹುದು ನವಿ ಲಲ್ಲ. ಬೇರೆ ಬೇರೆಯ ಸಾಮಾನ್ಯ ಘನತೆ, ದರ್ಜೆಯ ಜಾತಿಯ (Quality) ಪಕ್ಷಿ ಗಳು ಕಿಱಿವಳ್ಳವನ್ನೇ ವಿಹಾರಕ್ಕೆ ಬಯಸಬಹುದು. ಆದರೆ ಹಂಸೆಯಲ್ಲ.

ಬೇರೆ ಬೇರೆ ಪಕ್ಷಿಗಳು ಚಿಗುರದೇ ಇರುವ ಬೇರೆ ಬೇರೆ ಮರಗಳನ್ನು ಆಶ್ರ ಯಿಸಿ ಹೇಗಾದರೂ ಸ್ವರಗೈಯಬಹುದು ಆದರೆ ಕೋಗಿಲೆ ಅಂತಹ ಪಕ್ಷಿಗಳಲ್ಲಿ ಒಂದಲ್ಲ.

ಬೇರೆ ಬೇರೆ ಹುಳು ಹುಪ್ಪಟೆಗಳು ಪರಿಮಳವಿಲ್ಲದ ಗೊಡ್ಡು ಹೂವಿಗೂ ಹಾರ ಬಹುದು. ಆದರೆ ಭ್ರಮರವಲ್ಲ.

ಹಾಗೆಯೇ ಸಾಮಾನ್ಯ ಹೆಣ್ಣು ಲೋಕ ಸಾಮಾನ್ಯಕ್ಕೆ ಬಾತು ಬಯಸಬಹು ದಾದರೂ ಅಕ್ಕನಂತಹವಳು ಹಾಗೆ ಮಾಡುವುದಿಲ್ಲ.

ಇಂಥ ಮಹತ್ವದ ಗುಣಗಳನ್ನು ಪಡೆದಿರುವುದರಿಂದಲೇ ಅವನು ಚೆನ್ನ+ ಮಲ್ಲಿಕ+ಅರ್ಜುನ. ಸುಂದರ ಮಲ್ಲಿಗೆಯಂಥವನು, ಬಿಳಿಯವನು ಅಂದರೆ ಸೊಬಗ, ಶ್ವೇತ, ಶುಭ್ರ, ಮಧುರ, ಕೋಮಲ ಸಂವೇದನೆಯನ್ನು [ಮಲ್ಲಿಗೆಯಂತೆ] ಉಂಟು ಮಾಡುವವನು. ಆದ್ದರಿಂದಲೇ ಅವನನ್ನು ಪ್ರೀತಿಸಿದ್ದಾಳೆ. ಒಲಿದಿದ್ದಾಳೆ, ವರಿ ಸಿದ್ದಾಳೆ. ಆದ್ದರಿಂದ ಆ ಮನ ಅನ್ಯಕ್ಕೆ ಎಳಸುವುದಿಲ್ಲ. ಅದು ವ್ಯಭಿಚಾರವಾದೀತು. ಪತಿವ್ರತೆಗೆ ಅದೆಂದೂ ಸಾಧ್ಯವಿಲ್ಲ. ಅಷ್ಟೇ ಅಲ್ಲ ದೈಹಿಕ, ಮಾನಸಿಕ ಆರೋಗ್ಯ ವಂತನು ಕೊಳಕು ಪದಾರ್ಥಗಳನ್ನು ತಿರಸ್ಕರಿಸುವಂತೆ ಸಹಜ ನಿಯತಿ ನಿಯಮ. ಚನ್ನಮಲ್ಲಿಕಾರ್ಜುನನನ್ನು ಅನನ್ಯ 'ಎನ್ನದೇವ' ಎನ್ನುತ್ತಾಳೆ. ಅವಳ ಪಾಲಿನ 'ಪರ' ಅವನು. ಅವಳ 'ದಿವ'ದವನು. ಅವನನ್ನು ಉಳಿದದ್ದೆಲ್ಲ ಅನ್ಯ. ಅವನೇ ತನಗೆ ಅನನ್ಯ. ಅಂದರೆ ಸ್ವಕೀಯ. ಪರಕೀಯವಾದದ್ದು ಎಂದಿಗೂ ಅನಪೇಕ್ಷಣೀಯ.

ಸ್ವಕೀಯಕ್ಕೆ ಒಲಿಯುವುದೇ ಸಹಜ. ಋಜು. ಆ ವಸ್ತು ಎನ್ನದೆ+'ಏವ' ಎಂದೇ ಆಕೆ ಅನ್ನುವುದು.

ಈ ಅರ್ಥ ವ್ಯವಸ್ಥೆ ಮೊದಲನೆಯ ಸಾಲಿನಿಂದ ಕೊನೆಯ ಸಾಲಿನವರೆಗೂ ಇದೆ ನವಿಲಿನಿಂದ ಪರಿಮಳವಿರುವ ಪುಷ್ಪದವರೆಗೆ ಪ್ರತಿಮೆಗಳ ಅನುಕ್ರಮ ಋತು ಮಾಸಕ್ಕೆ ಅನುಸಾರವಾಗಿದೆ. ನವಿಲು ಕುಣಿಯುವಾಗ ಮಳೆ ಬರುವ ಸೂಚನೆ. ಅನಂತರ ಮಳೆ ಬಂದು ಕೊಳ್ಳ ತುಂಬುತ್ತದೆ. ಮಾವಿನ ಮರ ತಳಿಯುತ್ತದೆ. ಪುಷ್ಪ ಅರಳುತ್ತದೆ. ಹೀಗೆ ನವಿಲಿನ ಕುಣಿತ, ತುಂಬಿದ ಕೊಳ, ಮಾಮರ ತಳಿಯು ವುದು, ಪುಷ್ಪ ಅರಳುವ ಪ್ರತಿಮೆಗಳನ್ನು ಕೊಡುವ ಅನುಕ್ರಮದಲ್ಲಿ ಔಚಿತ್ಯಪೂರ್ಣ ತರ್ಕಬದ್ಧತೆ ಇದೆ.*

ಮೇಲಿನ ವಚನದಲ್ಲಿನ 'ಮಾಮರ' ಮತ್ತು 'ಭ್ರಮರ' ಪದಗಳದು ವಿಶೇಷ ಸ್ಥಾನ. ಈ ಪದಗಳನ್ನು ನಾನಾ ವಿಧವಾಗಿ ಒಡೆದಾಗಲೂ ವಚನದ ಆಶ್ರಯಕ್ಕೆ ಸಂಗತವಾದ ವಿವಿಧ ಅರ್ಥಗಳನ್ನು ಕೊಡುತ್ತವೆ.

'ಮಾಮರ ತಳಿತಲ್ಲದೆ ಸ್ವರಗೈವುದೇ ಕೋಗಿಲೆ'

ಇದರ ಸರಳಾರ್ಥ : ಕೋಗಿಲೆಯು ಮಾವಿನ ಮರ ಚಿಗುರಿದಲ್ಲದೆ ಸ್ವರಗೈಯುವುದಿಲ್ಲ ಎಂಬ ಕವಿಸಮಯವನ್ನು ಬಳಸಿಕೊಂಡದ್ದು, ಅಕ್ಕಮಹಾದೇವಿ ಕೋಗಿಲೆಯಂತೆ. ಮಲ್ಲಿಕಾರ್ಜುನ ಮಾವಿನಮರದಂತೆ ಎಂಬ ವಿವರಗಳಿಗಿಂತ ಕೋಗಿಲೆ ಸ್ವರಗೈಯಲು ಕಾರಣವಾದ ವಿಶೇಷ ಅನುಭವದ ಸ್ಥಿತಿ ಮುಖ್ಯವಾದದ್ದು.

ಇನ್ನು ಭ್ರಮರ ಪದದ ಅರ್ಥವೈಶಾಲ್ಯವನ್ನು ಕೂಡ ವಿಶ್ಲೇಷಿಸಬಹುದು. ಭ್ರಮ ವೃತ್ತಾಕಾರದಲ್ಲಿ ಸುತ್ತುವದು. ವೃತ್ತ ಎಂದರೆ ಶೂನ್ಯ.

ಶೂನ್ಯ ಎಂದರೆ ವೀರಶೈವ ತತ್ವ ಪರಿಭಾಷೆಯಲ್ಲಿ ಪರಮಾತ್ಮ. ಭ್ರಮಿಸು ವುದು. ಭ್ರಮರ ಅದು ಗುಂಯ್‌ಗುಟ್ಟುತ್ತಾ ಭ್ರಮಿಸುವುದು. ಇಲ್ಲಿ ಶೂನ್ಯಕ್ಕಾಗಿ, ಅದರ ಸಂಪಾದನೆಗಾಗಿ ಬಯಸುತ್ತಾ ಬದ್ಧ ಉದ್ದೇಶದಿಂದ ಹಾರಾಡುತ್ತಾ, ಹಾಡುತ್ತ ತಿರುಗುವ ಅಕ್ಕನ ಮನಸ್ಸಿಗೆ ಇದು ಪ್ರತಿಮೆ. 'ಮರ' ಎಂದರೆ 'ಮರವಡು'. ಇದು ಮಿಲನ ಸುಖದ ಐಕ್ಯ ಸುಖದಿಂದ ಮೈಮರೆ ಎಂದು ಅರ್ಥೈಸಬಹುದು. ಇದು ಮಿಲನ ಸುಖದ ಅಂತ್ಯ ಸ್ಥಿತಿಯ ಅಭಿವ್ಯಕ್ತಿಯಾಗಬಲ್ಲದು.

ಇಲ್ಲಿನ ಎಲ್ಲಾ ಪದಗಳು ತನ್ನ ದೇವ ಚೆನ್ನಮಲ್ಲಿಕಾರ್ಜುನನ, ಸಾಮಾನ್ಯನನ್ನು ಮೀರಿದ ಅಂಥವನನ್ನು ಒಲಿಯುತ್ತಿರುವ ತನ್ನಂಥ ಅಸಾಮಾನ್ಯಳನ್ನು ಅರ್ಥ ಮಾಡಿಸಿ ಕೊಡುತ್ತದೆ. ಹೀಗೆ ಅಸಾಮಾನ್ಯವಾಗಿರುವುದರಿಂದಲೇ ತಮ್ಮಿಬ್ಬರ

* ಈ ಅಂಶದ ಕಡೆಗೆ ನನ್ನ ಗಮನ ಸೆಳೆದ ಗೆಳೆಯ ಬಿ. ಆರ್. ಶಿವಕುಮಾರ್‌ಗೆ ಇಲ್ಲಿ ಋಣಿಯಾಗಿದ್ದೇನೆ.

ಸಂಬಂಧದ ಸ್ವರೂಪದ ಮಾಹಿಮಾಮಯತೆಯನ್ನು ವಿವರಿಸುವ ಸಂದರ್ಭದಲ್ಲಿ ಬರುವ ಇಲ್ಲಿನ ಪ್ರತಿಯೊಂದು ಪದಗಳಿಗೂ ಈ ಆಧ್ಯಾತ್ಮಿಕ ಗೌರವ ಪೂರ್ಣ ಪಟ್ಟ ಕಟ್ಟಲ್ಪಟ್ಟಿದೆ.

ಸತಿಪತಿ ಭಕ್ತಿಭಾವದಲ್ಲಿ ಲೈಂಗಿಕ ಪ್ರತಿಮೆಗಳ ಮೂಲಕ ಮಾತಾಡುವ ಅಕ್ಕ ತನ್ನ+ಚೆನ್ನಮಲ್ಲಿಕಾರ್ಜುನನ ಸಂದರ್ಭವನ್ನು, ತನ್ನನ್ನು 'ಮರುಳು' ಎಂದು ಟೀಕಿಸಿದವರಿಗೆ ಹೀಗೆ ಉತ್ತರಿಸಿದ್ದಾಳೆಂದು ನಂಬಬಹುದು. ಈ ವಚನದಲ್ಲಿ ತನ್ನ-ತನ್ನಿನಿಯನ ಸುಸ್ವರೂಪವನ್ನು ಹೇಳುವುದಷ್ಟೇ ಅಲ್ಲ? ಪರ್ಯಾಯವಾಗಿ ಹೀಗೆ ನೀವೂ ಸಂಸ್ಕಾರಗೊಂಡಾಗ ಮಾತ್ರ ಇಂಥವನನ್ನು ಪಡೆಯಬಹುದು. ಎಂಬ ತಿಳುವಳಿಕೆಯನ್ನು ಕೊಡುವ ಧ್ವನಿಯೂ ಇದೆ. ಹೀಗೆ ಸಂಸ್ಕಾರಗೊಂಡ ಅಕ್ಕನ 'ತಲೆಯು ಯಾವುದೋ ನಾಡಿಯೊಳಗೆ ಸುರುವಾದ ಸುಗ್ಗಿ ಸೊಲ್ಲು ಸುತ್ತುಗುಡ್ಡನುಗ್ಗಾಗಿ' ಹೋಗುವ ಹಾಗೆ ಕೂಗಿದಾಗ ಇದಕ್ಕೆ ಓಗೊಟ್ಟು ಎಷ್ಟೋ ಮೊರಡಿಗಳೂ ಕರಗಿರಬಹುದು.

ಇನ್ನೂ ಮುಂದುವರಿದು ಈ ವಚನ ಪ್ರತಿಪಾದಿಸುವ ವಿಚಾರವನ್ನು ಸ್ಪಷ್ಟಪಡಿಸಬಹುದಾದರೆ 'ಲೋಕದ ಮಹಾಮನಸ್ಸುಗಳಾವುವೂ ಅಲ್ಪಕ್ಕೆ ಆಸಕ್ತಿ ತೋರುವುದಿಲ್ಲ. ಅವುಗಳ ಒಲವು ಮಹತ್ತಿಗೇ' ಎನ್ನುವ ಅರ್ಥ ಸಂಪತ್ತನ್ನು ಇಲ್ಲಿ ತುಂಬಿದ್ದಾಳೆಂದು ಭಾವಿಸಬಹುದು. ಕೆಳದಿಯರಿರಾ ! ಎಂಬ ಸಂಬೋಧನೆಯೂ ವಿಷಯದಲ್ಲಿ ಪೂರ್ಣ ತಿಳುವಳಿಕೆಯನ್ನು ಪಡೆದ ಜ್ಞಾನಿಯೊಬ್ಬ ಮಹತ್ತನ್ನು ಅರ್ಥಮಾಡಿಕೊಳ್ಳದೆ ಟೀಕಿಸಿದ ವ್ಯಕ್ತಿಯ ಮೌಢ್ಯವನ್ನು ಕುರಿತು, ಅವನಿಗೆ ಅರ್ಥಮಾಡಿಸಿ 'ಇಂಥದ್ದನ್ನು ಹೀಗೆ ತಪ್ಪು ತಿಳಿದಿದ್ದೆಯಲ್ಲಾ'— ಎಂದು ತಿಳಿ ಹೇಳುವ 'ಜ್ಞಾತೃ' ಭಾವ ಅಥವಾ ಪ್ರಾಜ್ಞ ಮನೋಭಾವವನ್ನೂ ದೊಡ್ಡತನದ ತೂಕವನ್ನೂ ಒಳಗೊಂಡಿದೆ. ಹೀಗೆ ಈ ಅರ್ಥಗಳನ್ನೆಲ್ಲಾ ಪರಿಭಾವಿಸುತ್ತಾ ಹೋದ ಹಾಗೆಲ್ಲ ಅಕ್ಕನ ಆಂತರಿಕ ವ್ಯಕ್ತಿತ್ವ ಆಕಾಶದುದ್ದಕ್ಕೆ ಬೆಳೆದು ನಿಲ್ಲುತ್ತದೆ.

'ಪರಿಮಳವಿಲ್ಲದ ಪುಷ್ಪಕ್ಕೆಳಸುವುದೇ ಭ್ರಮರ' ಎಂಬ ಸಾಲಿನ ಇನ್ನೂ ಒಂದು ಅರ್ಥ ಸಾಧ್ಯತೆಯನ್ನು ಇಲ್ಲಿ ಗಮನಿಸಬಹುದು. ಮೇಲಿನ ಮೂರು ಸಾಲುಗಳಲ್ಲಿ ತನ್ನ ಸ್ವರೂಪವನ್ನೂ (ತನ್ನ ಪ್ರಿಯನ ಸ್ವರೂಪದ ಜತೆಗೆ) ಪ್ರಕರ್ಷಿಸಿಕೊಂಡವಳು. ಇಂಥವನ್ನು ಬಿಟ್ಟು (ಸುಸಂಸ್ಕೃತ ಹದಗೊಂಡ ಜೀವಕ್ಕಲ್ಲದೆ) ಉಳಿದ ಗೊಡ್ಡುಗಳಿಗೆ ಅವನಂಥವನು ಒಲಿಯುವುದೂ ಇಲ್ಲ ಎಂದು ಭ್ರಮರವನ್ನು ಮಲ್ಲಿಕಾರ್ಜುನನಿಗೆ ಅನ್ವಯಿಸಿ 'ಪರಿಮಳದ ಪುಷ್ಪ' ವನ್ನು ತನಗೇ ಅನ್ವಯಿಸಿಕೊಂಡಿರಬಹುದು. ಹೀಗೆ ಅರ್ಥಮಾಡಿದಾಗ ಭಗವತ್ ಶಕ್ತಿಯನ್ನು ಹಂಬಲಿಸಿ ಪತಿಗಾಗಿ ಸತಿ (ಭಕ್ತ) ಹೇಗೆ ಹಂಬಲಿಸುತ್ತಾಳೋ ಹಾಗೆಯೇ ಪತಿಯು (ಪ್ರಿಯ) ಪ್ರಿಯೆಗಾಗಿ ಅದರಲ್ಲೂ ಇಂಥ ಸತಿ (ಭಕ್ತನಿಗಾಗಿ) ಗಾಗಿ ಹಂಬಲಿಸುತ್ತಾನೆ. ಹುಡುಕುತ್ತಾನೆ. ಪರೀಕ್ಷಿಸಿ, ಪರೀಕ್ಷಿಸಿ.

ಅಂಥ ಹೂವಿಗೇ ಹಾರುತ್ತಾನೆ. ಎಂದು ಭ್ರಮರ ಪದದ ಅರ್ಥ ಹರಡಿಕೊಳ್ಳುತ್ತದೆ. ಒಟ್ಟಿನಲ್ಲಿ ಪೂರ್ಣವಾದದ್ದು ಪೂರ್ಣಕ್ಕಾಗಿ ಅರಸುತ್ತಾ ಪೂರ್ಣವಾದುದನ್ನೇ (ಅದರ ದರ ನೈಸರ್ಗಿಕ ಮಿತಿಯಲ್ಲಿ) ಸೇರೆದು ಪೂರ್ಣಗೊಳ್ಳುತ್ತದೆ, ಐಕ್ಯಸ್ಥಿತಿಯಿಂದ ಶೂನ್ಯತೆಗೆ ಸಲ್ಲುತ್ತದೆ ಎಂಬ ಅರ್ಥ ಇಲ್ಲಿ ಸಂಗತ.

ವಚನ ಯಾರನ್ನೋ ಸಂಬೋಧಿಸಿಯೇ ಪ್ರಾರಂಭವಾಗುವದರಿಂದ ಅದರ ಹುಟ್ಟಿನಲ್ಲಿಯೇ ನಾಟಕೀಯ ಅಂಶ ಒಡಮೂಡಿದೆ.

ಹೀಗೆ ಅಕ್ಕ ತನಗೆ ತಕ್ಕವನನ್ನೇ ಆರಿಸಿ ಅವನೊಡನೆ ಕೂಡುವದನ್ನು ಬಿಗಿಯಾದ ಭಾಷೆಯಲ್ಲಿ, ಸಂಕೀರ್ಣ ಅಭಿವ್ಯಕ್ತಿ ವಿಧಾನದಲ್ಲಿ ಹೇಳಿದ್ದಾಳೆ. ಧ್ವನಿಪೂರ್ಣವಾದ ಈ ವಚನ, ವಚನ ಸಾಹಿತ್ಯದ ಕಲಾವಂತಿಕ್ಕೆ ಕೊಡಬಹುದಾದ ಶ್ರೇಷ್ಠ ಉದಾಹರಣೆಯಾಗಬಹುದು.

ಯಾರೋ ಅಕ್ಕನನ್ನು 'ಕಾಣದ ಗಂಡನನ್ನು ಪ್ರೀತಿಸಿರುವ ಮರುಳು' ಎಂದು ಟೀಕಿಸಿರಬೇಕು. ಅಕ್ಕ ಹೀಗೆ ತಾನು ಪ್ರೀತಿಸುವವನ ಚೇತನಶೀಲತೆಯ ಸ್ವರೂಪವನ್ನು ಹೇಳಿ ಅಂಥವನನ್ನೇ ಹುಡುಕಿ ಪ್ರೀತಿಸುವ ತನ್ನ ಹೆಚ್ಚಿನ ಯೋಗ್ಯತೆಯ ಬಗೆಗೆ ಹೆಮ್ಮೆಪಟ್ಟುಕೊಂಡು ಸಾಮಾನ್ಯರಾದ ನೀವು ಸಾಮಾನ್ಯರಾದ ಗೊಡ್ಡು ಲೌಕಿಕರನ್ನು ಪ್ರೀತಿಸುತ್ತೀರಿ ಎಂಬ ಟೀಕೆಯ ಬಾಣವನ್ನು ತಿರುಗಿಸಿ ಪ್ರಯೋಗಿಸಿದ್ದಾಳೆಂಬುದನ್ನು ಗುರುತಿಸಬಹುದು.

ಭವ್ಯ ಜನಗಳಿಂದ ಬೈಸಿಕೊಳ್ಳಲು ಒಂದು ಪುಣ್ಯಬೇಕು. ಬೈಯುವಂತೆ ಪ್ರಚೋದಿಸಿದವರೂ ಭಾಗ್ಯವಂತರೆ! ಇಬ್ಬರ ಪ್ರಯತ್ನದಿಂದ ಕಾವ್ಯಪ್ರಿಯರಿಗೊಂದು ಅಮೂಲ್ಯ ಆಸ್ತಿ ದೊರಕಿತು. ಅದಕ್ಕಾಗಿ ನಾವು ಇಬ್ಬರಿಗೂ ಕೃತಜ್ಞತೆ ಅರ್ಪಿಸಬೇಕು.

• •

ಸೇಟನ್-ಒಂದು ಲೋಕೋಜಿತ ಸೃಷ್ಟಿ

ಚಕ್ಕೆರೆ ಶಿವಶಂಕರ್

ಮಿಲ್ಟನನದು ಜಗತ್ತಿನ ಮಹಾಕವಿಗಳ ಸಾಲಿನಲ್ಲಿ ಎದ್ದು ನಿಲ್ಲುವ ಹೆಸರು. ಭಾರತಕ್ಕೆ ವ್ಯಾಸ ವಾಲ್ಮೀಕಿಗಳಾದರೆ ಗ್ರೀಸಿಗೆ ಹೋಮರ್, ರಷ್ಯಾಕ್ಕೆ ಟಾಲ್‌ಸ್ಟಾಯ್ ಪುಷ್ಕಿನ್‌ಗಳಾದರೆ, ಇಟಲಿಗೆ ವರ್ಜಿಲ್, ಡಾಂಟೆ. ಹಾಗೆಯೇ ಇಂಗ್ಲೆಂಡಿಗೆ ಮಿಲ್ಟನ್. ಈ ಕಾರಣದಿಂದ ಇಂಗ್ಲೀಷ ಸಾಹಿತ್ಯದಲ್ಲಿ ಇಂದು ಮಿಲ್ಟನ್‌ಗೆ ಅಗ್ರಸ್ಥಾನವಿದೆ. ಪ್ರಥಮ ಬಾರಿಗೆ ಇಂಗ್ಲೀಷ ಸಾಹಿತ್ಯಕ್ಕೆ ಮಹಾಕಾವ್ಯವನ್ನು ಒದಗಿಸಿಕೊಟ್ಟ ಕೀರ್ತಿ ಮಿಲ್ಟನನದಾಗಿದೆ.

ಬಾಲ್ಯದಿಂದಲೂ ಮಹತ್ವಾಕಾಂಕ್ಷಿಯಾದ ಮಿಲ್ಟನ್, ಕುವೆಂಪು ಅವರಂತೆ ಬಹಳಷ್ಟು ಹಿಂದೆಯೇ ಮಹಾಕಾವ್ಯ ರಚನೆಯೊಂದಕ್ಕೆ ಪೂರ್ವಭಾವಿಯಾಗಿ ಯೋಜನೆ ತಯಾರಿಸಿಕೊಂಡಿದ್ದವನು. ಆದ್ದರಿಂದ ಚಿಕ್ಕಂದಿನಿಂದಲೂ ಆಳವಾದ ಅಧ್ಯಯನದಲ್ಲಿ ತೊಡಗಿ ಲ್ಯಾಟಿನ್, ಗ್ರೀಕ್, ಹೀಬ್ರೂ ಮುಂತಾದ ಭಾಷೆಗಳಲ್ಲಿ ಪ್ರಭುತ್ವವನ್ನು ಸಾಧಿಸಿದ್ದನು. ಈ ಭಾಷಾ ಪ್ರಭುತ್ವ ಅವನಲ್ಲಿ ಶಕ್ತಿಯುತವಾದ ವ್ಯಕ್ತಿತ್ವವನ್ನು ಬೆಳೆಸಿತು. ಆ ಶಕ್ತಿಯುತವಾದ ವ್ಯಕ್ತಿತ್ವ ಗಾಢ ಪ್ರಭಾವ-ಪರಿಣಾಮಗಳನ್ನು ಎಸಗಿ 'ಪ್ಯಾರಡೈಸ ಲಾಸ್ಟ್' ನಂಥ ಮಹಾಕೃತಿಯ ರಚನೆಗೆ ಮಿಲ್ಟನನನ್ನು ಅಣಿಗೊಳಿಸಿತು.

ಪ್ಯಾರಡೈಸ್ ಲಾಸ್ಟ್‌ನ ಕಾವ್ಯವಸ್ತು ಸಾಮಾನ್ಯಾರ್ಥದಲ್ಲಿ ಲೋಕಗಳ ನಾಶ, ಸ್ವರ್ಗ ಭೂಮಿಗಳ ಕ್ರಾಂತಿ. ಮಾನವನ ಪತನದ ಹಳೆಯ ಕತೆಯನ್ನು, ದೇವರ ದಾರಿಯನ್ನು ಮಾನವರಿಗೆ ಪ್ರತ್ಯಕ್ಷೀಕರಿಸುವುದು ಕವಿಯ ಅದಮ್ಯ ಆಕಾಂಕ್ಷೆ. ಅದಕ್ಕೆಂದೇ ಕಾವ್ಯಾರಂಭದಲ್ಲಿ ತಿಳಿಯಪಡಿಸುತ್ತಾನೆ. "To Justify the ways of God to men" ಈ ದೃಷ್ಟಿಯಿಂದ Milton ನ 'ಪ್ಯಾರಾಡೈಸ್ ಲಾಸ್ಟ್' ಬರಿಯ ಸಾಹಿತ್ಯ ಕೃತಿಯಷ್ಟೇ ಅಲ್ಲ, ಧರ್ಮದ ರೀತಿ ನೀತಿಗಳನ್ನು ಪ್ರತಿಪಾದಿಸುವ ಕೃತಿಯೂ ಹೌದು. ಈಶ್ವರ ಕರುಣಾಮಯಿ, ನ್ಯಾಯನಿಷ್ಠುರಿ, ಸರ್ವಶಕ್ತ ಈ ಮೂರು ಅಂಶಗಳೂ ಕಾವ್ಯದಲ್ಲಿ ಮುಪ್ಪುರಿಗೊಂಡಿವೆ. ಆದರೆ ಕವಿಯು ಅಂದುಕೊಂಡಿದ್ದೇ ಒಂದಾದರೆ ಕಾವ್ಯದಲ್ಲಾದದ್ದೇ ಮತ್ತೊಂದು. ಕವಿಯ ಆಶಯಕ್ಕೆ ವಿರುದ್ಧ ದಿಕ್ಕಿನಲ್ಲಿ ಕೃತಿ ಸಾಗಿದೆ. ಮಿಲ್ಟನ್‌ನ ಆಶಯ ದೇವರು ಎಷ್ಟು ಕರುಣಾಮಯಿಯೋ ಅಷ್ಟೇ ಕಠಿಣನೂ ಆಗಬಲ್ಲನು. ಅಂತೆಯೇ ಶ್ರೇಷ್ಠ ನ್ಯಾಯವಾದಿಯೂ ಸಹ ಎಂಬುದನ್ನು ತಿಳಿಯಪಡಿ

ಸುವುದಾಗಿದ್ದಿತು. ಮಾನವನ ಮೂಲ ಪುರುಷ ಹೇಗೆ ಪತನದ ಹಾದಿಯತ್ತ ಜರುಗಿದನು ಎಂಬುದನ್ನು ತಿಳಿಸುವುದು ಕವಿಯ ಉದ್ದೇಶವಾಗಿದ್ದು, ಅವುಗಳಿಗೆ ಹೆಚ್ಚಿನ ಮಹತ್ವ ನೀಡಲು ಬಯಸಿದನು. ಆದರೆ ಕವಿ ಬಯಸಿದ್ದೇ ಒಂದು; ಕೃತಿಯಲ್ಲಿ ನಡೆದ ಮಾರ್ಪಾಟೇ ಬೇರೊಂದು ತೆರನಾದುದು. ಈ ದೃಷ್ಟಿಯಿಂದ ಪ್ಯಾರಾಡೈಸ್ ಲಾಸ್ಟ್‌ನಲ್ಲಿ ಕೃತಿ ಗೆದ್ದು ಕವಿ ಸೋತಿದ್ದಾನೆ.

ಪ್ಯಾರಡೈಸ್ ಲಾಸ್ಟ್‌ನಲ್ಲಿ ಚಿತ್ರಿತನಾಗಿರುವ ಸೇಟನ್‌ನ ಪಾತ್ರ ಕೃತಿ ಬೆಳೆದಂತೆಲ್ಲಾ ಹೆಚ್ಚು ಹೆಚ್ಚು ಗಟ್ಟಿಗೊಳುತ್ತಾ ಹೋಗುತ್ತದೆ. ದೇವತೆಗಳಿಂದ ಪರಾಜಿತರಾಗಿ ತಮೋಕೂಪದಲ್ಲಿ ಅಗ್ನಿಜ್ವಾಲೆ ಉಗುಳುತ್ತಿರುವ ಕತ್ತಲಿನ ನರಕದಲ್ಲಿ ಬಿದ್ದಿರುವ ಪತಿತ ದೇವತೆಗಳ ನಾಯಕ ಸೈತಾನನು ದೇವರ ವಿರುದ್ಧ ದಂಗೆ ಎದ್ದವನು. ಸ್ವರ್ಗದಲ್ಲಿ ತನಗಿದ್ದ ಉಚ್ಚ ಅಧಿಕಾರವನ್ನು ಕಡೆಗಣಿಸಿ ಆಸುರೀ ಆಕಾಂಕ್ಷೆಯಿಂದ 'ದೇವರ' ಸ್ಥಾನವನ್ನು ಕಸಿದುಕೊಳ್ಳಲು ಹಾತೊರೆದು ಯತ್ನಿಸಿದ ಸೇಟನ್‌ನನ್ನು ಎಲ್ಲ ಕೆಟ್ಟಶಕ್ತಿಗಳ ಸಂಕೇತವನ್ನಾಗಿ ಚಿತ್ರಿಸಿದ್ದರೂ ಸಹ ಮನುಷ್ಯ ಸಹಜವಾದ ಎಲ್ಲಾ ಮಾನವೀಯ ಗುಣಗಳು ಸೇಟನನಲ್ಲಿವೆ. ಸೇಟನನ ದೌರ್ಬಲ್ಯಗಳು ನಮ್ಮಲ್ಲಿ ಅಂಶ ಮಾತ್ರವಾದರೂ ಇರುವುದರಿಂದ ಅವನ ಬಗ್ಗೆ ಸಹಜವಾಗಿಯೇ ಓದುಗರಲ್ಲಿ ಮೆಚ್ಚುಗೆ ಹೊರಸೂಸುತ್ತದೆ.

ಸೇಟನನನ್ನು ಕಾವ್ಯದಲ್ಲಿ ಬರುವ ಮಿಕ್ಕುಳಿದ ಪಾತ್ರಗಳೊಂದಿಗೆ ಹೋಲಿಸಿ ನೋಡಿದಲ್ಲಿ ಅವರೆಲ್ಲರಿಗಿಂತ ಭಿನ್ನವಾದ ನೆಲೆಯಲ್ಲಿ ನಿಲ್ಲುವ ಸೇಟನ್ ಭವ್ಯಾಕಾರನಾಗಿ ಕಾಣುತ್ತಾನೆ. ಸಹಜವಾಗಿ ಆ್ಯಡಂ ಮತ್ತು ಈವ್‌ರನ್ನು ಸೇಟನನೊಂದಿಗೆ ಸಮೀಕರಿಸಿ ನೋಡಿದಾಗ. ಆ್ಯಡಂ ಮತ್ತು ಈವ್‌ರಲ್ಲಿ ಕೇವಲ ನಿಷ್ಠೆ, ವಿಧೇಯತೆಗಳಿದ್ದು, ದೇವರ ಕಟ್ಟುಪಾಡುಗಳಿಗೊಳಗಾಗಿ ನಡೆಯುತ್ತಾರೆ. ಆದರೆ ನಿಷ್ಠೆ, ವಿಧೇಯತೆ ಎಂಬುದು ಸೇಟನನ ಜಾಯಮಾನಕ್ಕೇ ಬಂದದ್ದಲ್ಲ. 'ದೇವರ' ನ್ನು ಸೇಟನ್ ದೊಡ್ಡವನೆಂದು ಒಪ್ಪಿಕೊಳ್ಳಲು ಸಿದ್ಧವಿಲ್ಲ. ದೇವರು ಎನಿಸಿಕೊಂಡಿರುವ ಆ ದೊಡ್ಡವನು ಅಸ್ತ್ರಬಲದ ಮೇಲೆ ತನ್ನ ದೊಡ್ಡಸ್ತಿಕೆಯನ್ನು ಸ್ಥಾಪಿಸಿದ್ದಾನೆಯೇ ಹೊರತು ಆತ್ಮಬಲದಿಂದಲ್ಲ ಎಂಬುದು ಸೇಟನನ ವಾದ. ಹೀಗಾಗಿ ಆತ್ಮಪರಿವೀಕ್ಷಣೆ. ಸ್ವಯಂ ಪರಾಮರ್ಶೆ ಹಾಗೂ ತನ್ನ ಕೆಲಸಕಾರ್ಯಗಳ ಬಗೆಗೆ ವಸ್ತುನಿಷ್ಠವಾಗಿ ವಿಮರ್ಶಿಸಿ, ಸಮರ್ಥಿಸಿಕೊಳ್ಳಬಹುದಾದ ಶಕ್ತಿ ಸೇಟನನಿಗಿದೆ. ದೇವರಿಂದ ಪರಾಜಯಗೊಂಡು ಶಿಕ್ಷಿತರಾಗಿ ನರಕದಲ್ಲಿ ಬಿದ್ದದ್ದರೂ ಸಹ ಅವನ ಸ್ಥೈರ್ಯ ಅಡಗಿರುವುದಿಲ್ಲ. ತನ್ನ ಅನುಯಾಯಿಗಳನ್ನು ಕುರಿತು "ಪತಿತ ದೇವತೆಗಳೆ, ಹೆದರಬೇಡಿ. ಮತ್ತೆ ಮೇಲೇಳುತ್ತೇವೆ, ಬಲಾಢ್ಯರಾಗಿ ಚೇತರಿಸಿಕೊಳ್ಳುತ್ತೇವೆ, ಅನಂತವಾಗಿ 'ಕೆಡಕು'ಗಳನ್ನು ಸೃಷ್ಟಿಸುವುದೇ ನಮ್ಮ ಧ್ಯೇಯ. ದೇವರ ವಿರುದ್ಧ ದಂಗೆ ಎದ್ದು, ಅವನ ಅಪೇಕ್ಷೆಗೆ ವಿರುದ್ಧವಾದ ಕೇಡನ್ನು ಪೋಷಿಸುತ್ತಾ ಬೆಳೆಸಿಕೊಂಡು ಹೋಗುವದರಿಂದ ನಮಗೆ ಹೆಚ್ಚಿನ ಶಕ್ತಿ ಲಭಿಸುತ್ತದೆ. ಒಳ್ಳೆಯವರ ಹೃದಯವನ್ನು ಹೊಕ್ಕು ಕೆಟ್ಟದನ್ನು ಪೋಷಿಸುವುದೇ

ನಮ್ಮ ಗುರಿ" ಎನ್ನುವ ಅವನ ಮಾತುಗಳಲ್ಲಿ ಕೆಚ್ಚು-ರೊಚ್ಚುಗಳಿವೆ ಆತ್ಮಶಕ್ತಿ-ಧೀಶಕ್ತಿಗಳಿವೆ.

ವಾಸ್ತವವಾಗಿ ಸೇಟನ್ ಕೆಡುಕ ನಿಜ. ಆದರೆ ಅವನಲ್ಲಿರುವ ತನ್ನ ಅನುಯಾಯಿಗಳನ್ನು ಕೈಬಿಡದ ಗುಣ ಹಾಗೂ ತನ್ನ ಗುರಿಯನ್ನು ಸಾಧಿಸಲೇಬೇಕೆನ್ನುವ ಛಲ ಈ ಎರಡೂ ಅವನನ್ನು ಧೀರೋದಾತ್ತ ನಾಯಕರ ಗುಂಪಿಗೆ ಸೇರಿಸುತ್ತವೆ. ತವೋಕೂಪದಲ್ಲಿ ಭೀತ್ಜ್‌ಬಬ್‌ಗೂ, ಸೇಟನನಿಗೂ ನಡೆಯುವ ಸಂಭಾಷಣೆಯನ್ನು ಗಮನಿಸಿದಾಗ ಸೇಟನನ ಸಾವು ಎಷ್ಟು ಅರ್ಥವಂತಿಕೆಯಿಂದ ಕೂಡಿದುದೆಂಬುದು ಓದುಗರಿಗೆ ನಿಚ್ಚಳವಾಗಿ ಅರಿವಾಗುತ್ತದೆ. "ಯುದ್ಧದಲ್ಲಿ ಸೋತಿರಬಹುದು. ಆದರೆ ನನ್ನ ಇಚ್ಛಾಶಕ್ತಿಗೆ ಎಂದೂ ಸೋಲಿಲ್ಲ. ಅಮರವಾದ ಶತ್ರುತ್ವ ನನ್ನದು. ಸ್ವರ್ಗದಲ್ಲಿನ ದಾಸ್ಯಕ್ಕಿಂತ ನರಕದ ಸ್ವಾತಂತ್ರ್ಯ ಮೇಲು" ಎನ್ನುವಲ್ಲಿ ನಮ್ಮವರೆನಿಸಿದ ದುರ್ಯೋಧನ, ರಾವಣರು ನೆನಪಿಗೆ ಬರುತ್ತಾರೆ. ಎಷ್ಟೇ ಕಷ್ಟ ಬಂದರೂ ಎಂತಹ ಸ್ಥಿತಿಯಲ್ಲೂ ಶರಣಾಗುವುದಿಲ್ಲ ಎನ್ನುವ ಧೃಡತೆ, ಕೆಚ್ಚನ್ನು ಹೊಂದಿರುವ ಸೇಟನ್ ನಿಜವಾಗಿಯೂ ಧೀರೋದಾತ್ತ ನಾಯಕನೇ ಸರಿ.

ಕಾವ್ಯಾರಂಭದಲ್ಲಿ ಗಮನಿಸಿದರೆ ಸೇಟನ್ ಒಳ್ಳೆಯವನೆಂದು ಚಿತ್ರಿಸುವುದು ಮಿಲ್ಟನ್‌ನ ಉದ್ದೇಶವೇ ಅಲ್ಲ. ಸರ್ವಶಕ್ತನಾದ ದೇವರ ವ್ಯಕ್ತಿನಿಷ್ಠ ನಿಲುವಿನ ಮುಂದೆ ತೀರಾ ಕುಬ್ಜನಾದ ಸೇಟನ್, ದೇವರ ಸರ್ವಾಧಿಕಾರವನ್ನೇ ವಿರೋಧಿಸಿ ಲಗ್ಗೆ ಹೂಡಿದಾಗ ಅವನಿಗೂ ಅವನ ಅನುಚರರಿಗೂ ತಕ್ಕ ಶಾಸ್ತಿಯಾಗಿ ಸ್ವರ್ಗಭ್ರಷ್ಟರಾಗಿ ನರಕಕ್ಕೆ ಬೀಳಬೇಕಾದರೆ ಕಾರಣ ದೇವರು ಅವನಿಗೆ ನೀಡಿದ್ದ ಸ್ವಾತಂತ್ರ್ಯದ ದುರುಪಯೋಗವೆ. ಆದುದರಿಂದ ಅವನ ಅವನತಿಯ ಹೊಣೆ ಸಂಪೂರ್ಣವಾಗಿ ಸ್ವಯಂಕೃತಾಪರಾಧವೇ ಹೊರತು ದೇವರದಲ್ಲ ಎಂಬುದು ಮಿಲ್ಟನ್‌ನ ಕಾವ್ಯೋದ್ದೇಶವಾಗಿದ್ದರೂ ಸೇಟನನನ್ನು ಎಲ್ಲ ಶೂರಗುಣಗಳಿಂದೊಡಗೂಡಿಸಿ ಶ್ರೇಷ್ಠತೆಗೇರಿಸಿದ್ದಾನೆ. ಹೀಗಾಗಿ ಕಾವ್ಯದ ಗುಣಮಟ್ಟ ಸೇಟನನ ಪಾತ್ರದಲ್ಲಿದೆಯೇ ವಿನಹ ದೇವರ ಪಾತ್ರದಲ್ಲಿಲ್ಲ. ದಬ್ಬಾಳಿಕೆಯ ವಿರುದ್ಧ ಅದಮ್ಯ ದಂಗೆಕೋರನಾದ ಸೇಟನನನ್ನು ಕೊಕ್ಕುವುದರಲ್ಲಿ ಮಿಲ್ಟನ್ ವಿಜಯಿಯಾಗಿದ್ದಾನೆ. ಇದನ್ನು ಪರೀಕ್ಷಿಸಿಯೇ "Satan the Hero of the Epic" ಎಂದು ಹೇಳುತ್ತಾನೆ.

ಭಯಂಕರವಾದ ಘೋರ ನರಕಕ್ಕೆ ತಳ್ಳಿದಾಗಲೂ ಸಹ ಸೇಟನ್ ವಿಚಲಿತನಾಗಲಿಲ್ಲ ಎಂಬುದು ಮುಖ್ಯ ಎನಿಸುತ್ತದೆ. ಏಕೆಂದರೆ ಸೇಟನ್, ಆ್ಯಡಂ, ಈವ್‌ರಂತೆ ವಾತಾವರಣದ ಶಿಶುಗಳಾಗಲಿ ಅಥವಾ ದೈವ ನಿರ್ದೇಶಿತ ಗೊಂಬೆಗಳಾಗಲಿ ಅಲ್ಲ. ಅವನಲ್ಲಿ ಅದಮ್ಯ ಆತ್ಮವಿಶ್ವಾಸ, ವ್ಯಕ್ತಿತ್ವ ರೂಪಣೆ ಇದೆ. ಯುದ್ಧದಲ್ಲಿ ಹಿಮ್ಮೆಟ್ಟಿ ಉತ್ಸಾಹಹೀನರಾಗಿದ್ದ ತನ್ನವರನ್ನು ಕೂಗಿ ಎಚ್ಚರಿಸುತ್ತಾನೆ. "ಬೇಗ ಎಚ್ಚೆತ್ತುಕೊಳ್ಳಿ. ಇಲ್ಲವೆ ನಿರಂತರ ಪತನ ನಿಮ್ಮದಾಗುತ್ತದೆ" ಎಂದು ಹೇಳುವಲ್ಲಿ

ಹಾಗೂ ಉತ್ಸಾಹಹೀನ ಯೋಧರನ್ನು ಮಗುದೊಮ್ಮೆ ಯುದ್ಧಕ್ಕೆ ಅಣಿಮಾಡುವಲ್ಲಿ ಉತ್ತಮ ನಾಯಕನಲ್ಲಿರಬಹುದಾದ ಜಾಣ್ಮೆ ಸೇಟನನಲ್ಲಿ ಕಂಡುಬರುತ್ತದೆ.

ತಮೋಲೋಕದಿಂದ ಹೊರಬಿದ್ದ ಸೇಟನ್ ಅಂಧಕಾರದ ಆಸುರೀ ಶಕ್ತಿಯ ಸಂಕೇತ. ಅವನು ಹೊರಟದ್ದು ದೇವರ ಮೇಲಿನ ದ್ವೇಷದಿಂದ, ದೇವರು ಸೃಷ್ಟಿಸಿದ ಹೊಸ ಸೃಷ್ಟಿಯನ್ನು ನಾಶಪಡಿಸಲು. ಆದರೆ ಈ ಸಂದರ್ಭದಲ್ಲಿ ಅವನ ಮಾನಸಿಕ ಒಳತೋಟಿಯನ್ನು ಗಮನಿಸಿದಾಗ ನಿಜಕ್ಕೂ ಸೇಟನ್ ಉನ್ನತನಾಗುತ್ತಾನೆ. ಅವನ ಗುಣ ಸ್ವಭಾವಗಳ ದೃಷ್ಟಿಯಿಂದ ಸ್ವಾತ್ಮವಿಮರ್ಶೆ ಸೇಟನನ ಮುಖ್ಯ ಗುಣಗಳಲ್ಲಿ ಒಂದು. ದೇವರ ಮೇಲಿನ– ದ್ವೇಷದಿಂದ ನವಸೃಷ್ಟಿಯನ್ನು ನಾಶಿಸಿ ಸೇಡು ತೀರಿಸಿಕೊಳ್ಳಲು ಹೊರಟ ಸೇಟನ್ ತನ್ನನ್ನು ತಾನೇ ವಿಮರ್ಶಿಸಿಕೊಳ್ಳುತ್ತಾನೆ. ಅಂತರಂಗವನ್ನು ಹೊಕ್ಕು ಶೋಧಿಸುತ್ತಾನೆ. ತಾನೇನು ಮಾಡುತ್ತಿರುವೆ ಎಂಬುದರ ಅರಿವು, ಪ್ರಜ್ಞೆ ಅವನಿಗಿದೆ. ಅಕಾರಣವಾಗಿ ದೇವರ ವಿರುದ್ಧ ದಂಗೆ ಎದ್ದಿದ್ದಕ್ಕೆ ಆದ ಶಿಕ್ಷೆ ಸರಿಯಾದ ಶಾಸ್ತಿ ಎಂಬ ಭಾವ ಅವನಿಗೆ ತಿಳಿದಿದೆಯಾದರೂ ಮುಳುಗಿದುದಾಯಿತು. ಇನ್ನು ಚಳಿ ಏನು, ಮಳಿ ಏನು ? ದ್ವೇಷದ ಕತ್ತಿಗೆ ತಲೆ ಒಡ್ಡಿದುದಾಗಿದೆ, ಎಂಬ ಅಂತಿಮ ತೀರ್ಮಾನಕ್ಕೆ ಬರುವ ಸೇಟನ್ ಮೇಲುನೋಟಕ್ಕೆ ದುಷ್ಟಶಕ್ತಿಯಾಗಿ ಗೋಚರಿಸಬಹುದು. ಆದರೆ ಅವನು ದುಷ್ಟಶಕ್ತಿಯಲ್ಲ : ಅವನಿಗೊಂದು ಔನ್ನತ್ಯವಿದೆ. ಅವನಲ್ಲಿಯೂ ಮಾನವೀಯ ನೆಲೆ : ಸೆಲೆಗಳಿವೆ. ಅವನ ವ್ಯಕ್ತಿತ್ವ ಕಣ್ಣಿಗೆ, ಹಿರಿದಾದ ಆಲೋಚನೆಗಳು, ಉದ್ದೇಶಗಳು ಓದುಗರ ಮನಸ್ಸಿಗೆ ತಟ್ಟುತ್ತವೆ. ಈ ದೃಷ್ಟಿಯಿಂದ ತುಂಬಾ **human** ಆಗಿ ಕಂಡುಬರುತ್ತವಾದರೂ ಈ ಎಲ್ಲ ಭಾವನೆಗಳು ತತ್ಕಾಲವಾದುವುಗಳಾದಾಗ ಸೇಟನ್ ದುರಂತ ನಾಯಕನಾಗಿ ಕಂಗೊಳಿಸಿಬಿಡುತ್ತಾನೆ.

ಆ್ಯಡಂ ಮತ್ತೆ ಈವರಂತೆ ನಿರ್ಗುಣ, ಜಡವಾದ ವ್ಯಕ್ತಿತ್ವವಲ್ಲ ಸೇಟನನದು : ಅವನದು ಜೀವಂತ ಪಾತ್ರ. ಅದರಲ್ಲಿ ಗಟ್ಟಿತನವಿದೆ, ರಂಜಕತೆಯಿದೆ. ಮನುಷ್ಯನ ರಾಗದ್ವೇಷಗಳೆಲ್ಲಾ ಸೇಟನನಲ್ಲಿಯೇ ಅಡಕವಾಗಿದೆ. ಒಳಿತು ಕೆಡುಕುಗಳೆರಡೂ ಇವನಲ್ಲಿಯೇ ಅಡಗಿರುವುದರಿಂದ ಮಾರ್ಮಿಕವಾದ ಚಿತ್ರಣ ಇವನದಾಗಿದೆ. ವೈಯಕ್ತಿಕ ಸ್ವಾತಂತ್ರ್ಯ-ವಿಚಾರಶಕ್ತಿ ಸೇಟನನದಾಗಿದೆ. ಆ್ಯಡಂ ಮತ್ತೆ ಈವರು ನಿಷ್ಕ್ರಿಯವಾದ, ವಿಧೇಯವಾದ, ಗಡಿದಾಟದ ಹಸುಗೂಸುಗಳಾದರೆ ಸೇಟನ್ ಹಾಗಲ್ಲ. ಜೀವಂತ ಜ್ವಾಲಾಮುಖಿ. ಅದಮ್ಯ ಸ್ವಾತಂತ್ರ್ಯ ಪ್ರವೃತ್ತಿ, ಸರ್ವಾಧಿಕಾರವನ್ನೆದುರಿಸಿ ನಿಲ್ಲುವ ತೆರನು ಸೇಟನನದು. ಈ ಎಲ್ಲ ಗುಣಗಳು ಸೇಟನನಲ್ಲಿರುವುದರಿಂದಲೇ ಕೆಲವರು ಮಿಲ್ಟನನೇ ಸೇಟನನಲ್ಲಿ ಆವಿರ್ಭವಿಸಿದ್ದಾನೆ ಎಂದು ವಿಮರ್ಶಿಸುತ್ತಾರೆ. ಒಂದರ್ಥದಲ್ಲಿ ಈ ಹೇಳಿಕೆ ಸರಿ ಇದ್ದಿರಬಹುದು. ಏಕೆಂದರೆ ಸೇಟನ್ ಕೃತಿಯಲ್ಲಿ ಏನನ್ನು ಕೈಗೊಂಡನೋ, ಅದನ್ನು ಬದುಕಿನಲ್ಲಿ ಕೈಗೊಂಡಿದ್ದವನು ಮಿಲ್ಟನ್.

ಅದಮ್ಯ ಸ್ವಾತಂತ್ರ್ಯಾಕಾಂಕ್ಷಿ. ಅರಸೊತ್ತಿಗೆಯನ್ನು ವಿರೋಧಿಸಿ ನಿಂತು ಭೂಗತವಾಗಿದ್ದು ಕಾರ್ಯಸಾಧಿಸಿದ ಕ್ರಾಂತಿಕಾರ. ಈ ಕಾರಣದಿಂದ ಪರೋಕ್ಷವಾಗಿ ಸೇಟನ್ ಮಿಲ್ಟನನೇ ಆಗಿದ್ದಿರಬಹುದಾದರೂ, ಕೃತಿಯ ಸಂದರ್ಭದಲ್ಲಿ ಮಿಲ್ಟನ್ ದ್ವಂದ್ವಕ್ಕೆ ಸಿಲುಕಿದ್ದಾನೆಂಬುದು ವಸ್ತು ಸತ್ಯ. ಬದುಕಿನಲ್ಲಿ ರಾಜಸತ್ತೆಯನ್ನು, ಏಕಚಕ್ರಾಧಿಪತ್ಯವನ್ನು ವಿರೋಧಿಸಿದ ಮಿಲ್ಟನ್ ಕೃತಿಯಲ್ಲಿ ಈ ಏಕಶಕ್ತಿಯನ್ನೇ ಪುರಸ್ಕರಿಸುತ್ತಾನೆ. ವಾಸ್ತವವಾಗಿ ಮಿಲ್ಟನ್ ತನ್ನ ಜೀವನದಲ್ಲಿ ಅನೇಕ ದ್ವಂದ್ವಗಳಿಗೆ ಸಿಲುಕಿದ್ದವನು. ಈ ದೃಷ್ಟಿಯಿಂದ ಮೇಲುನೋಟಕ್ಕೆ ಮಿಲ್ಟನ್ ಕೃತಿಯಲ್ಲಿ ಸೇಟನನ ವಿರೋಧಿಯೇ ಆಗಿದ್ದರೂ, ಆಳದಲ್ಲಿ ಸೇಟನನ ಪಕ್ಷಪಾತಿ ಎಂಬುದಂತೂ ಸ್ಪಷ್ಟ ಸತ್ಯ.

ಸೇಟನ್ ಧೀರೋದಾತ್ತ ನಾಯಕ. ಅವನಲ್ಲಿ ಉದಾತ್ತ ಗುಣಗಳಿವೆ ಎಂಬುದು ನಿಜವಾದರೂ ಅವನ ದುರಾಸೆಯ ಮುಂದೆ, ಕೇಡಿನ ಮುಂದೆ, ದ್ವೇಷದ ಪ್ರಖರ ಜ್ವಾಲೆಯ ಮುಂದೆ, ಒಂದು ಮಸಿ ಇಡೀ ಚಿತ್ತಾರವನ್ನೇ ನುಂಗಿತು ಎಂಬಂತೆ, ಅವನ ಉದಾತ್ತ ಗುಣಗಳೆಲ್ಲವೂ ಮಸುಳಿ ಹೋಗುತ್ತವೆ. ಸೇಟನನಿಗೆ ಅವನ ದೌರ್ಬಲ್ಯದ ಅರಿವಿದೆ. ವಾಸ್ತವ ಪ್ರಜ್ಞೆಯ ಆಳದಲ್ಲಿ ಚಿಂತಿಸಿದರೂ ಸಹ, ಅದಮ್ಯವಾದ ದುರಹಂಕಾರ ಎಂದು ಹೇಳುವದಕ್ಕಿಂತ ಧೀರೋದಾತ್ತ ಗುಣದಿಂದ ತುಂಬಿದ ಅವನ ಹೃದಯದಲ್ಲಿ ಪಶ್ಚಾತ್ತಾಪಕ್ಕೆ ಎಡೆಯಿಲ್ಲ. "Evil, Be Thou my good" ಎಂದು ಒಳ್ಳೆಯದಕ್ಕೆ ಶರಣು ಹೊಡೆದು ಕೇಡನ್ನೇ ಒಪ್ಪಿಕೊಳ್ಳುತ್ತಾನೆ. ಬಿದ್ದವರು ಮೇಲೇಳುವುದು ಸಹಜ. ಆದರೆ ಆ ಬೀಳುವಿಕೆಯಲ್ಲಿಯೇ ಪರಿಪೂರ್ಣತೆಯನ್ನು ಕಂಡುಕೊಂಡ ಸೇಟನನ ಪಾಡಾದದ್ದು ಜನ್ನನ ಅಮೃತಮತಿಯಂತೆ. ಟಿಲ್‌ಯಾರ್ಡ್ ಹೇಳುವಂತೆ ಸೇಟನ್ ಷೇಕ್ಸ್‌ಪಿಯರನ ಮ್ಯಾಕ್‌ಬೆತ್‌ನಂತೆ ಒಂದು ತಪ್ಪನ್ನು ಮುಚ್ಚಲು ಹೋಗಿ ಮತ್ತೊಂದು ದೊಡ್ಡ ತಪ್ಪನ್ನು ಮಾಡುವುದು ಸೇಟನನ ಪಾತ್ರದ ವೈಶಿಷ್ಟ್ಯ.

ಒಂದು ದೃಷ್ಟಿಕೋನದಲ್ಲಿ ಸೇಟನನನ್ನು ಮಿಲ್ಟನ್ ಅತ್ಯುಚ್ಚ ಶಿಖರಕ್ಕೇರಿಸಿದರೂ, ಮತ್ತೊಂದು ದೃಷ್ಟಿಕೋನದಿಂದ ಮಿಲ್ಟನ್‌ನ ದೇವರ ಬಗೆಗಿನ ನಿರೂಪಣೆಯನ್ನು ನೋಡಿದಲ್ಲಿ ಓದುಗರಿಗೆ ಆಶ್ಚರ್ಯ-ವಿಸ್ಮಯ ಎರಡೂ ಉಂಟಾಗುತ್ತವೆ. ಒಂದೆಡೆ ಸೇಟನನ ಅತ್ಯುನ್ನತಿಯ ವರ್ಣನೆ, ಮತ್ತೊಂದೆಡೆ ದೇವರ ನಿಷ್ಠುರ ನ್ಯಾಯ ನಿರೂಪಣೆ, ಇವೆರಡರಲ್ಲಿ ಯಾವುದು ಸರಿ ಎಂಬ ದ್ವಂದ್ವಕ್ಕೆ ಓದುಗರು ಗುರಿಯಾಗಬೇಕಾಗುತ್ತದೆ. ಸರ್ವಶಕ್ತನಾದ ದೇವರು ನವ ಸೃಷ್ಟಿಯ ನವಜೀವಿಗಳಿಗೆ ಸರ್ವಾನುಕೂಲತೆಗಳನ್ನು ಕಲ್ಪಿಸಿ ಸರ್ವವಿಧದ ಸ್ವಾತಂತ್ರ್ಯವನ್ನೂ ಕೊಟ್ಟಿರುತ್ತಾನೆ. ಅದೇ ರೀತಿ ದೇವಲೋಕದಲ್ಲಿ ಸೇಟನ್‌ಗೂ ಉಚ್ಚಸ್ಥಾನವನ್ನು ಕಲ್ಪಿಸಿರುತ್ತಾನೆ. ಇದು ದೇವರ ಕಾರುಣ್ಯತೆಯನ್ನು ಪ್ರದರ್ಶಿಸುತ್ತದೆ. ಆದರೆ ತನ್ನ ವಿರುದ್ಧ ಬಂಡೆದ್ದವರ ವಿರುದ್ಧ ದೇವರು ಕಠಿಣನಾಗಲೇಬೇಕಾಗುತ್ತದೆ. ಆದ್ದರಿಂದ ಮಿಲ್ಟನನ ಪ್ರಕಾರ

ದೇವರ ನಿಯಂತ್ರಣ ದಬ್ಬಾಳಿಕೆಯಿಂದ ಕೂಡಿದ್ದಲ್ಲ. ಅಲ್ಲಿ ಸರ್ವಸ್ವಾತಂತ್ರ್ಯವಿರುತ್ತದೆ. ಆದರೆ ಅದರ ದುರುಪಯೋಗವಾದಂಥ ಸಂದರ್ಭದಲ್ಲಿ ಮಾತ್ರ ದುರುಪಯೋಗಪಡಿಸಿಕೊಂಡವರಿಗೆ ತಕ್ಕ ಶಾಸ್ತಿಯಾಗುತ್ತದೆ. ಈ ದೃಷ್ಟಿಯಿಂದ ಮಿಲ್ಟನ್ ಹೇಳುವ ಹಾಗೆ ಸೇಟನನ ಅವನತಿಯ ಹೊಣೆ ಸಂಪೂರ್ಣವಾಗಿ ಅವನದೇ ಆಗಿದೆ.

ಒಟ್ಟಿನಲ್ಲಿ, ಒಳ್ಳೆಯುದರ ಹೃದಯವನ್ನು ಹೊಕ್ಕು ಕೆಟ್ಟುದನ್ನು ಸೃಷ್ಟಿಸುವುದನ್ನೇ ತನ್ನ ಗುರಿಯಾಗಿಟ್ಟುಕೊಂಡಿರುವ ಸೇಟನ್ ತನ್ನ ಅವನತಿಯಲ್ಲಿಯೂ ಪರಮೋಚ್ಚವಾದ ಗುಣಗಳನ್ನು ಪ್ರದರ್ಶಿಸುವುದರಿಂದಲೇ ಅವನು ಓದುಗರಿಗೆ, ಮಿಕ್ಕುಳಿದ ಪಾತ್ರಗಳಿಗಿಂತ ಹೆಚ್ಚು ಪ್ರಿಯವಾಗುತ್ತಾನೆ. ಜಡವಾದ ನಿರ್ಗುಣಗಳಿಂದ ಕೂಡಿದ ಪಾತ್ರಗಳು ಎಷ್ಟೇ ಉತ್ತಮವಾದವುಗಳಾಗಿದ್ದರೂ ರುಚಿಸಲಾರವು. ಕಾವ್ಯದ ತುಂಬಾ ಜೀವಂತಕೆಯಿಂದ ಹರಿದಾಡುವ ಸದಾ ಚಲನಶೀಲತೆಯಿಂದ ಕೂಡಿದ ಸೇಟನ್ ಹೆಚ್ಚು ಹತ್ತಿರವಾಗಲು ಅವನಲ್ಲಿನ ಉತ್ತಮಗುಣಗಳೇ ಸಾಕ್ಷಿ. ಒಟ್ಟಾರೆ ಹೇಳುವದಾದರೆ ಸೇಟನ್ ಪಾತ್ರ ಪ್ಯಾರಡೈಸ್ ಲಾಸ್ಟ್ ಕಾವ್ಯದಲ್ಲಿ ಉಳಿದೆಲ್ಲ ಪಾತ್ರಗಳಿಗಿಂತ ಭಿನ್ನವಾಗಿದ್ದು ಹೆಚ್ಚು ಮೆಚ್ಚುಗೆಯನ್ನು ಗಳಿಸುತ್ತದೆ. ಆದ ಕಾರಣ ಮಿಲ್ಟನನ ಸೇಟನ್ ಒಂದು ಲೋಕೋಜಿತ ಶ್ರೇಷ್ಟ ಸೃಷ್ಟಿ.

• •

ನಿಸಾರ್ ಅಹಮದ್ ಅವರ-"ಕುರಿಗಳು ಸಾರ್ ಕುರಿಗಳು" -ಒಂದು ವಿಶ್ಲೇಷಣೆ

ಸುಶೀಲಾ ಸೊಂಡೂರ

ಪ್ರಾಚೀನಕಾಲದಿಂದಲೂ ಅನುಭವ ಅಭಿವ್ಯಕ್ತಿಗನುಗುಣವಾಗಿ ಕನ್ನಡ ಸಾಹಿತ್ಯ ಬದಲಾಗುತ್ತಾ ಬಂದಿದೆ. ಒಂದು ಶತಮಾನದಿಂದ ಮತ್ತೊಂದು ಶತಮಾನವನ್ನು ಕಳೆಯುವುದರಲ್ಲಿ ಅಷ್ಟೇ ಏಕೆ, ಒಂದು ದಶಕದಿಂದ ಮತ್ತೊಂದು ದಶಕ ದಾಟುವದ ರಲ್ಲಿ ಸಾಹಿತ್ಯದ ವಿಷಯ, ಆಶಯ, ರೂಪ, ಶೈಲಿ, ತಂತ್ರ ಎಲ್ಲದರಲ್ಲೂ ವ್ಯಾಪಕ ವಾದ ಬದಲಾವಣೆಗಳು ಕಂಡುಬರುತ್ತಿವೆ. ಬದಲಾವಣೆಯೇ ಜೀವಂತಿಕೆಯ ಲಕ್ಷಣ; ಈ ಮೂರು ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಅನ್ವಯಿಸುತ್ತದೆಯಾದರೂ ಕನ್ನಡ ಕಾವ್ಯಪ್ರಕಾರಕ್ಕೆ ಹೆಚ್ಚು ಅರ್ಥಪೂರ್ಣವೆನಿಸುತ್ತದೆ. ಪ್ರಾಚೀನ ಕಾಲದಿಂದ ನವ್ಯ ಕಾಲದವರೆಗೆ ಕಾವ್ಯಪ್ರಕಾರದಲ್ಲಿ ಉಂಟಾಗಿರುವ ಸ್ಥಿತ್ಯಂತರಗಳು ಆದರ ಚುರುಕಿನ ಬದಲಾವಣೆಯನ್ನು ಎತ್ತಿ ತೋರಿಸುತ್ತಿದೆ. ಸಾಮಾನ್ಯ ಮನುಷ್ಯನನ್ನು ಕಾವ್ಯ ಮುಟ್ಟಬೇಕು ಎಂಬ ಕೂಗು ಬಹು ಹಿಂದಿನಿಂದಲೂ ಕೇಳಿಬರುತ್ತಿರುವಂತಹದಾಗಿದೆ. ಆದರೆ ಇಲ್ಲಿ ಸಾಮಾನ್ಯ ಎಂದರೆ ಯಾರು ? ಎಂಬ ಪ್ರಶ್ನೆ ಬರುತ್ತದೆ. ಓದುಬರಹ ಬಲ್ಲ ಸಾಹಿತ್ಯದಲ್ಲಿ ಆಸಕ್ತಿಉಳ್ಳ, ಕಾಳಜಿಯನ್ನು ಹೊಂದಿರುವ ಮಂದಿಯನ್ನೆ ನಾವು 'ಸಾಮಾನ್ಯರು' ಎಂಬುದಾಗಿ ನಿರ್ದೇಶಿಸಬೇಕಾಗುತ್ತದೆ. ಅಂತಹ ಅಲ್ಪಸಂಖ್ಯಾತ ರನ್ನೆ ಕಾವ್ಯಮುಟ್ಟಲು ಅಸಮರ್ಥವಾದರೆ ಅದು ಅಭಿವ್ಯಕ್ತಿಯಲ್ಲಿನ ದೋಷವೆಂದೇ ಹೇಳಬೇಕಾಗುತ್ತದೆ. ಸರಳವಾದ ನೈಜವಾದ ಅಭಿವ್ಯಕ್ತಿ ಎಂತಹವರನ್ನು ಮುಟ್ಟಿ ತಟ್ಟಿ ಎಬ್ಬಿಸಬಲ್ಲದು. ಸಂಕೀರ್ಣತೆಯ ಹೆಸರಿನಲ್ಲಿ ತೀರಾ ಗೋಜಲು ಗೋಜಲಾದ ಭಾವನೆಗಳು ಸಾಮಾನ್ಯನಿಗೂ ಅರ್ಥವಾಗದೆ ಹೋಗುವ ಅಪಾಯವಿದೆ.

ಒಬ್ಬ ಕವಿಯ ಕಾವ್ಯಸಿದ್ಧಿ ಆತನ ಭಾಷಾಪ್ರಯೋಗದ ಮೇಲೆ ಅವಲಂಬಿತ ವಾಗಿರುತ್ತದೆ. ನವ್ಯಕವಿಗಳು ಭಾಷೆಯ ಹಲವು ಸಾಧ್ಯತೆಗಳನ್ನು ಶೋಧಿಸಿದ್ದಾರೆ. ಅಭಿವ್ಯಕ್ತಿಯಲ್ಲಿ ಹೊಸ ಹೊಸ ತಂತ್ರಗಳನ್ನು ಬಳಸುತ್ತಿದ್ದಾರೆ. ಆದರೂ ಎಷ್ಟೋ ವೇಳೆ ನವ್ಯಕಾವ್ಯ ಸಾಮಾನ್ಯನಿಂದ ದೂರ ಸರಿಯುತ್ತಿರುವಂತೆ ಭಾಸವಾಗುತ್ತಿದೆ. ಆದರೆ "ಕಾವ್ಯ ಸಾಮಾನ್ಯ ಜನತೆಯಿಂದ ದೂರವಾಗಿದೆ ಎಂಬ ಆಕ್ಷೇಪಕ್ಕೆ ಉದ್ದಕ್ಕೂ ಅಪವಾದವಾಗಿ ಉಳಿದುಬಂದ ಕವಿಗಳಲ್ಲಿ ನಿಸಾರ್ ಅಹಮದ್ ಮುಖ್ಯರಾಗಿದ್ದಾರೆ.

......ಉದ್ದಕ್ಕೂ ರೂಪಕ ಸಿಂಚಿತವಾದ ಭಾಷೆಯನ್ನೆ ಬಳಸಿದರೂ ಜನ ಭಾಷೆಯ ದನಿಚಲನೆಗಳನ್ನು ಹಿಡಿದು ಅದರ ನಿರ್ದೇಶನದಲ್ಲೇ ಬೆಳೆಯುವುದರಿಂದ ನಿಸಾರರ ಮಾತಿನ ರೀತಿಗೆ ಒಂದು ಬಗೆಯ ಪ್ರಸನ್ನತೆ, ವ್ಯವಹಾರಮಾನ್ಯತೆ ಒದಗುತ್ತದೆ".[೧] ಬಹುಶಃ ನಿಸಾರರಂತೆ ಸಾಮಾನ್ಯವಾಚಕರನ್ನೂ ಮುಟ್ಟಿರುವ ಕವಿಗಳು ವಿರಳವೆಂದೇ ಹೇಳಬಹುದು. ಬುದ್ಧಿಭಾವಗಳ ಸಮ್ಮಿಲನದಿಂದ ಇವರ ಕವನಗಳು ಆಪ್ಯಾಯಮಾನವಾಗುತ್ತವೆ. ಅದರಲ್ಲೂ ವಿಡಂಬನಾತ್ಮಕ ಕವನಗಳು ಹೆಚ್ಚು ಮನಸೆಳೆಯುತ್ತವೆ. ಉತ್ತಮ ಕವಿ ಕವನದ ಅಂತರಾರ್ಥವನ್ನು ಮುಂದೆಮಾಡಿ ತಾನು ಹಿಂದೆ ನಿಂತು ಮಾತಾಡುತ್ತಾನೆ. ಯಾವುದೇ ನಿರ್ಣಯವನ್ನು ವಾಚ್ಯಮಾಡದೆ ಓದುಗರ ಊಹೆಗೆ ಬಿಡುವುದು ಉತ್ತಮ ಕವಿತೆಯ ಲಕ್ಷಣ. ಕವಿಯೇ ತನ್ನ ಕವನದ ಆಂತರ್ಯ ಇದು ಎಂದು ಬಹಿರಂಗಪಡಿಸಿದರೆ ಕವನ ಹಾಳಾಗಬಹುದು. ನಿಸಾರರು ಅಡಿಗರಿಗಿಂತ, ಲಂಕೇಶರಿಗಿಂತ ಭಿನ್ನರಾಗುವುದು; ಬುದ್ಧಿಭಾವಗಳನ್ನು ಒಂದುಗೂಡಿಸಿ ಕಾವ್ಯ ರಚಿಸಿರುವುದರಿಂದ, ಧ್ವನಿಪೂರ್ಣವಾದ ಹಲವು ಕವನಗಳನ್ನು ವಾಚಕರಿಗಿತ್ತಿರುವುದರಿಂದ. ಹೀಗೆಂದಾಗ ಅಡಿಗ, ಲಂಕೇಶರ ಕವನಗಳು ಉತ್ತಮವಲ್ಲ ಎಂದು ಅರ್ಥವಲ್ಲ. ಅಡಿಗರ ಕವಿತೆಗಳು ಬೌದ್ಧಿಕಸ್ತರದಲ್ಲೇ ವಿಹರಿಸುವ ಜಿಗುಟು ಕವನಗಳೆನಿಸುತ್ತವೆ. ಲಂಕೇಶರ ಕವನಗಳು ಹಲವು ವಾಚ್ಯತೆಯೆಡೆಗೆ ವಾಲಿ ಧ್ವನಿಶಕ್ತಿಯನ್ನು ಕಳೆದುಕೊಳ್ಳುತ್ತವೆ.

ಇಷ್ಟೆಲ್ಲ ದೀರ್ಘವಾದ ಪೀಠಿಕೆ ಅವರ ದೀರ್ಘಕವನ "ಕುರಿಗಳು ಸಾರ್ ಕುರಿಗಳು" ಗೆ ಅವಶ್ಯವಾಗಬಹುದು ಎಂಬ ದೃಷ್ಟಿಯಿಂದ ಕೊಡಲಾಗಿದೆ. ನಿಸಾರರ ಮೊದಮೊದಲಿನ ಕವನ ಇದು ಎನಿಸಿದರೂ ಶ್ರೇಷ್ಠವಾದ ವಿಡಂಬನಾತ್ಮಕ ಕವನವೆನಿಸಿದೆ. ಇವರ ಶಕ್ತಿಯುತವಾದ, ಹರಿತವಾದ ಭಾಷೆಯ ಆವಿಷ್ಕಾರ ಇದರಲ್ಲಿದೆ. ಈ ದೇಶದ ಜನರ ಅಜ್ಞಾನ, ಅಂಧಾನುಕರಣೆ ಹೇಯಕೃತ್ಯಗಳ ವಿಡಂಬನೆ ಒಂದೆಡೆಯಾದರೆ, ಅಧಿಕಾರ ಲಾಲಸೆಯ ರಾಜಕಾರಣಿಗಳ ಮನೋಧರ್ಮ, ಮರುಳಮಾತಿನಿಂದ ಮೋಸಗೊಳಿಸುತ್ತಾ ಸಾಗುವ ಅವರ ವೈಶಿಷ್ಟ್ಯ, ಅಮಾನುಷ ನಡೆತೆಗಳ ಖಂಡನೆ ಮತ್ತೊಂದೆಡೆ ಇದೆ. ಈ ಕವನ ಮೂಡಿಬಂದ ಸನ್ನಿವೇಶವಾದರೂ ಅಷ್ಟೇ ವಿಶಿಷ್ಟವಾಗಿದೆಯೆಂದು ಕವಿ ನಿಸಾರರೇ ನುಡಿಯುತ್ತಾ—"ಭಾರತದ ಮೇಲೆ ಚೀಣಿಯರ ಆಕ್ರಮಣ ಆಗ ತಾನೆ ನಡೆದಿತ್ತು. ಆಗ ದೇಶ ಅನುಭವಿಸಿದ ಸೋಲು ಅಪಮಾನಗಳಿಂದ ನನಗೆ ತುಂಬಾ ಕಸಿವಿಸಿಯಾಗಿತ್ತು. ಆಗಿನ ನಮ್ಮ ರಾಜಕೀಯ ಸಿದ್ಧಾಂತಗಳು ವ್ಯಕ್ತಿಗಳು ಇದಕ್ಕೆಲ್ಲಾ ಕಾರಣವೆಂಬ ಆಕ್ರೋಶ ನನ್ನಲ್ಲಿ ತುಂಬಿತ್ತು. ನಾನು ಒಂದು ಸಂಜೆ ಗಾಂಧಿಬಜಾರಿಗೆ ಹೊರಟೆ. ಕುರಿಮಂದೆಯೊಂದು ರಸ್ತೆದಾಟುವದನ್ನು ಅಷ್ಟೇನೂ ಲಕ್ಷ್ಯಕೊಡದೆ ತೀರಾ ಸಾಧಾರಣ ಸಂಗತಿಯೆಂಬಂತೆ ನೋಡಿದೆ.

೧. ಹೊರಳುದಾರಿಯಲ್ಲಿ ಕಾವ್ಯ—ಎಸ್. ಎಸ್. ಲಕ್ಷ್ಮೀನಾರಾಯಣಭಟ್ಟ. ಪುಟ ೧೦೭

ಇದಾದ ಎಷ್ಟೋಹೊತ್ತಿನ ತರುವಾಯ ಜನ ರಸ್ತೆ ದಾಟುವದನ್ನು ನೋಡುತ್ತಿದ್ದ ನನಗೆ ಕುರಿಗಳು ಸಾರ್ ಕುರಿಗಳು ಎಂಬ ಪಂಕ್ತಿಯೊಂದು ಮೂಡಿತು. ಅದೇ ಕಾವಿನಲ್ಲಿ ಮನೆಗೆ ಬಂದು ಬರೆದು ಮುಗಿಸಿದ ಪದ್ಯವೇ ಇದು"—೨ ಎಂದು ಈ ಕವನದ ಬಗೆಗೆ ಹೇಳಿಕೊಂಡಿದ್ದಾರೆ. ಒಂದು ಕವಿತೆ ರೂಪುಗೊಳ್ಳುವ ಕ್ರಿಯೆಯಲ್ಲಿ ಕವಿಯ ಒಳಗಣ್ಣು ಸದಾ ತೆರೆದೇ ಇರುತ್ತದೆ. ಇಲ್ಲಿ ನಿಸಾರರು ಒಂದು ಜನಾಂಗದ ಬದುಕನ್ನು ಒಳಹೊಕ್ಕು ಕಂಡು ವಿಡಂಬನೆಯ ಧಾಟಿಯ ಮೂಲಕ ಚಿತ್ರಿಸುತ್ತಾ ಹೋಗಿದ್ದಾರೆ. ಮಾನವನ ಯಾಂತ್ರಿಕವೂ, ಸಂಕುಚಿತವೂ. ಅರ್ಥಶೂನ್ಯವು ಆದ ಬದುಕಿನ ಸ್ಥಿತಿಗತಿಗಳನ್ನು; ತನ್ನ ಸುತ್ತಲಿನ ಪರಿಸರ ಪ್ರಭಾವಗಳ ಪರಿಣಾಮದಿಂದ ಆತನ ಸ್ಥಿತಿ ಯಾವ ದುಸ್ಥಿತಿಗಿಳಿಯುತ್ತದೆಂಬುದನ್ನು ಬಹು ರಮ್ಯವಾಗಿ ಧ್ವನಿಸುತ್ತಾ ಹೋಗುತ್ತಾರೆ. ಇಲ್ಲಿ ವ್ಯಂಗ್ಯಮಿಶ್ರಿತ ಹಾಸ್ಯ, ವಿಡಂಬನೆಯೇ ಹೆಚ್ಚಾಗಿ ಬಂದರೂ ಅದು ಬರಿ ವಿಡಂಬನೆ ಅಥವಾ ಟೀಕೆಯಾಗಿಯೇ ಉಳಿಯದೆ ಅದರಾಚೆ ಕವಿ ಏನನ್ನೋ ಹೇಳಲು ಹೊರಟಿರುವ ಅಂಶವು ಸಮರ್ಥವಾದ ಭಾಷೆ ಲಯದ ಅಭಿವ್ಯಕ್ತಿಯ ಮೂಲಕ ಸುವ್ಯಕ್ತಗೊಳ್ಳುತ್ತದೆ.

> 'ಕುರಿಗಳು ಸಾರ್ ಕುರಿಗಳು
> ಸಾಗಿದ್ದೇ ಗುರಿಗಳು'—

ಎಂದು ಪ್ರಾರಂಭವಾಗುವ ಸಾಲುಗಳಲ್ಲೇ ಸಮಕಾಲೀನ ಸಾಮೂಹಿಕ ಜೀವನದಲ್ಲಿ ಸ್ವತಂತ್ರ ಆಲೋಚನೆಯಿಲ್ಲದ, ಅಸ್ಪಷ್ಟ ನಿಲುವಿನ ಗೊತ್ತುಗುರಿಯಿಲ್ಲದೆ ಅಂಡಲೆಯುವ ಜನಗಳ ಕರುಣಾಜನಕವಾದ ಅಸಹಾಯಕ ಸ್ಥಿತಿಯನ್ನು 'ಕುರಿಗಳು' ಎಂಬ ಒಂದೇ ಪದ ಸಮರ್ಥವಾಗಿ ಧ್ವನಿಸುತ್ತದೆ, ಅದೇ ಪದದ ಪುನರಾವರ್ತನೆ ಮನುಷ್ಯನ ನಡೆನುಡಿಗಳ ಅಂಧಾನುಕರಣೆಯನ್ನು ಸೂಚಿಸಲು ಸಹಾಯಕವಾಗುತ್ತದೆ. ಮುಂದಿನ ಸಾಲುಗಳಲ್ಲಿ ಕುರಿಗಳು ಹೇಗೆ ಮಂದೆಯಲ್ಲಿ ಒಟ್ಟಾಗಿ ಒಂದರೊಳಗೊಂದು ಸೇರಿಕೊಂಡಿರುತ್ತವೆಂಬುದನ್ನು ಕವಿ ಹೇಳುತ್ತಾ—

> ಇದರ ಬಾಲ ಅದು ಮತ್ತೆ ಅದರ ಬಾಲ ಇದು ಮೂಸಿ
> ದನಿ ಕುಗ್ಗಿಸಿ ತಲೆತಗ್ಗಿಸಿ
> ಹುಡುಕಿ ಹುಲ್ಲು ಕಡ್ಡಿ ಮೇವು, ಅಂಡಲೆಯುವ ನಾವು ನೀವು
> ಕುರಿಗಳು ಸಾರ್ ಕುರಿಗಳು—

—ತಮ್ಮ ಸ್ವತಂತ್ರ ಮನೋಭಾವನೆಯನ್ನು ಕಳೆದುಕೊಂಡು ತಲೆಯನ್ನು ಮತ್ತೊಬ್ಬರಿಗೆ ಅಡ ಇಟ್ಟು ಹಿಡಿ ಕೂಳಿಗಾಗಿ. ಅವರಿವರ ಬೆನ್ನುಹಿಡಿದು. ಬಾಲಹೊಸೆದು ಹೇಗೋ ಬದುಕುವ ಜನರ ಸ್ಥಿತಿಯನ್ನು 'ದನಿ ಕುಗ್ಗಿಸಿ ತಲೆತಗ್ಗಿಸಿ'— ಎಂಬ ಪಂಕ್ತಿಯ ಮೂಲಕ ಬಹು ಮಾರ್ಮಿಕವಾಗಿ ಮನಗಾಣಿಸಿದ್ದಾರೆ. ಮನುಷ್ಯನ

---

೨. 'ಪ್ರಜಾಮತ' ಸಂದರ್ಶನ- ಎಂ. ನಾಗರಾಜರಾವ್—ಮೇ-೮-೧೯೭೭ ಸಂ. ೪೮ ಸಂ. ೩೯

ಗುಲಾಮಗಿರಿತನದ ಬಗ್ಗೆ, ಹೀನ ಸ್ಥಿತಿಯ ಬಗ್ಗೆ ಕವಿಯ ಮರುಕ ವ್ಯಕ್ತವಾಗುತ್ತದೆ.

'ಕುರಿಗಳು ಸಾರ್ ಕುರಿಗಳು'— ಈ ಪಲ್ಲವಿಯು ಪ್ರತಿ ಪಂಕ್ತಿಯ ಕೊನೆಯಲ್ಲೂ ಪುನರಾವರ್ತನೆಯಾಗುತ್ತಾ ಹೋಗುವುದರಿಂದ, ಅದು ಮತ್ತೆ ಮತ್ತೆ ಹೊಸ ರೂಪವನ್ನು ಹೊಸ ಅರ್ಥವನ್ನು ಪಡೆದುಕೊಳ್ಳುತ್ತಾ ಕವಿತೆಯು ಹೇಳಹೊರಟಿರುವ ವಿಷಯವನ್ನು ಸ್ಪಷ್ಟೀಕರಿಸುತ್ತದೆ. ಇಲ್ಲಿ ಕವಿ ಸಾಮಾಜಿಕ ಜೀವನದಿಂದ ಹೊರಗುಳಿದು ಮಾತನಾಡದೆ ತಾವೂ ಅವರಲ್ಲೊಬ್ಬರಾಗಿ "— ನಾವು ನೀವು ಕುರಿಗಳು ಸಾರ್ ಕುರಿಗಳು"— ಎಂದು ನಿರೂಪಿಸುತ್ತಿರುವುದರಿಂದ ಇಲ್ಲಿನ ಅನುಭವಗಳು ವಾಚಕನ ಮನದಾಳದಲ್ಲಿ ಬಹುಕಾಲ ನಿಲ್ಲುವಂತಾಗುತ್ತವೆ.

ಎಡ ದಿಕ್ಕಿಗೆ, ಬಲದಿಕ್ಕಿಗೆ–ಒಮ್ಮೆ ದಿಕ್ಕಾಪಾಲಾಗಿ
ಒಮ್ಮೆ ಅದೂ ಕಳೆದುಕೊಂಡು ತಾಟಸ್ಥ್ಯದಿ ದಿಕ್ಕೆಟ್ಟು—

—ಹೀಗೆ ಸಾಗುವ ಕವನದ ಮಧ್ಯೆ 'ತಾಟಸ್ಥ್ಯದಿ— ಎಂಬ ಮಾತು ತುಂಬಾ ಅರ್ಥಪೂರ್ಣವೆನಿಸುತ್ತದೆ. ಮನಸ್ಸಿನ ಅಸ್ಥಿರತೆಯಿಂದಾಗಿ ಏನೇನೋ ಆಲೋಚಿಸುತ್ತಾ ಒಮ್ಮೆ ಆ ದಿಕ್ಕು. ಒಮ್ಮೆ ಈ ದಿಕ್ಕು ಕೊನೆಕೊನೆಗೆ ಏನೂ ಇಲ್ಲ—ಎಂಬ ಅಂಶವನ್ನು ಇದು ಸ್ಪಷ್ಟಪಡಿಸುತ್ತದೆ. ಮನುಷ್ಯನ ಅಶಕ್ತತೆ, ನಿಸ್ಸಹಾಯಕತೆಗಳು ಎದ್ದುಕಾಣುತ್ತವೆ. 'ತಿನದಿದ್ದರು ತೇಗುತ್ತಿರುವ'— ಎಂಬುದು ಮನುಷ್ಯನ ಸಹಜ ಭಾವನೆಗಳೆಲ್ಲಾ ಗಾಳಿಗೆ ತೂರಿ, ಬರಿಯ ಬಂಡಾಯ ಪ್ರದರ್ಶನವಾಗಿ, ಕೈಯಲ್ಲಿ ಕಸುವಿಲ್ಲದ ಡಂಭಾಚಾರದ ಶೂರತ್ವವನ್ನು ಪ್ರದರ್ಶಿಸುವ ನಿರ್ವೀರ್ಯತೆಯನ್ನು ವ್ಯಕ್ತಗೊಳಿಸುತ್ತದೆ.

ಕವಿತೆಯ ಮುಂದಿನ ಭಾಗ ಸಮಾಜವಾದ ಹಾಗೂ ಪ್ರಜಾಪ್ರಭುತ್ವದ ಹೆಸರಿನಲ್ಲಿ ರಾಜಕಾರಣಿಗಳು ನಡೆಸುವ ಅವ್ಯವಹಾರ ಅನಾಚಾರಗಳನ್ನು ಕುರಿತು ನೇರವಾಗಿ ವಿಡಂಬಿಸುತ್ತದೆ. ಆದರೆ ಕವನದ ಈ ಭಾಗ ಆದಿ–ಅಂತ್ಯಗಳಷ್ಟು ವಿಶಿಷ್ಟತೆಯನ್ನು ಪಡೆದುಕೊಳ್ಳುವುದಿಲ್ಲ. ಕವಿಯ ಖಚಿತವಾದ ಧ್ವನಿ ಇಲ್ಲಿ ಹೊರಡುವುದಿಲ್ಲ. ಸರಳವಾದ ನಿರೂಪಣೆಯಿದ್ದು ಪರಿಣಾಮದಲ್ಲಿ ಅಷ್ಟೊಂದು ಮಟ್ಟದ್ದಾಗಿ ತೋರುವುದಿಲ್ಲ. ಆದರ್ಶ, ಸಮಾನತೆ, ಪ್ರಾಮಾಣಿಕತೆ ಇತ್ಯಾದಿ ಧೋರಣೆಗಳನ್ನು ವಿಡಂಬಿಸುತ್ತಾ ಹೋಗುವುದೇ ಇಲ್ಲಿನ ಉದ್ದೇಶ, ಇಲ್ಲಿ ಹೇಳುವಂತೆ—

ಮಂದೆಯಲ್ಲಿ ಎಲ್ಲವೊಂದೆ ಆದಾಗಲೆ ಸ್ವರ್ಗ ಮುಂದೆ
ಆದಕಿಲ್ಲವೆ ನಾವುತ್ತರ ?
ಮೆದುಳಿನಲ್ಲಿ ತಗ್ಗೆತ್ತರ
ಹಿರಿದು ಕಿರಿದು ಮಾಯಿಸಿ,

ಒಬ್ಬೊಬ್ಬರಿಗಿರುವ ಮೆದುಳ ಸ್ವಾರ್ಥದ ಉಪಯೋಗದಿಂದ
ಇಡಿ ಮಂದೆಗೆ ಹಾಯಿಸಿ......—

ಎಂದು ಮನುಷ್ಯನ ಬುದ್ಧಿಶಕ್ತಿ, ವೈಚಾರಿಕತೆ ಇವುಗಳನ್ನು ಪ್ರಶ್ನಿಸಿದರೂ ಆತ ಸಮಾಜದಲ್ಲಿ ಬೆರೆತು ಬಾಳಬೇಕಾದ ನೆಲೆಬೆಲೆಗಳ ಬಗ್ಗೆ ಏನನ್ನೂ ಹೇಳುವುದಿಲ್ಲ. 'ನಮ್ಮ ಮೆದುಳು ಶುದ್ಧಿಯಾಗಿ ಬುದ್ಧಿ ನಿರ್ಬುದ್ಧಿಯಾಗಿ' ಕೆಂಬಣ್ಣವನೊಂದೆ ಪೂಸಿ ಎನ್ನುವಲ್ಲಿ ಜೀವನದ ರಜೋಮಯತೆಯನ್ನು ಸೂಚಿಸುತ್ತಾ ಪಾಪ-ಪುಣ್ಯ, ಸಿರಿತನ-ಬಡತನ, ಧರ್ಮ-ಅಧರ್ಮ, ಇವಾವುಗಳಿಗೂ ಅರ್ಥವೇ ಇಲ್ಲ, ಬದುಕಿನ ಮೌಲ್ಯಗಳಿಗೆ ಬೆಲೆಯೇ ಇಲ್ಲ ಎಂಬ ಪರಿಸ್ಥಿತಿಯನ್ನು ಸೂಚಿಸುತ್ತಾರೆ.

ಹೀಗೆಯೇ ಸಾಗುತ್ತಾ ಬಂದ ಕವಿತೆಯ ಮುಂದಿನ ಭಾಗ ಬೇರೆಯೇ ಆಗಿ ಕವಲೊಡೆಯುತ್ತದೆ. ಮೊದಲೇ ಸೂಚಿಸಿದಂತೆ ಈಗ ಮನುಷ್ಯನನ್ನೂ ಆಳುವ ಕುರುಬರ ವ್ಯಕ್ತಿತ್ವವನ್ನು ಚಿತ್ರಿಸುವಲ್ಲಿ ಪರಿಣಾಮಕಾರಿಯಾಗಿ ಸಾಗುತ್ತದೆ—

ನಮ್ಮ ಕಾಯ್ವ ಕುರುಬರು
ಪುಟಗೋಸಿಯ ಮೊನ್ನೆ ತಾನೆ ಕಿತ್ತು ಪಂಚೆಯುಟ್ಟವರು.
....
....
ಬಿರಿಯಾನಿಯ ಮೆಹರುಬಾನಿ ಮಾಡಿ ಕೈಯ ಜೋಡಿಸುತ್ತ
ಕಿಸೆಗೆ ಹಸಿರುನೋಟು ತುರುಕಿ ನುಡಿಗೆ ಬೆಣ್ಣೆ ಹಚ್ಚುವವರು.

—ಈ ಕುರುಬ ಮಂದಿ ಜನರನ್ನು ಆಳುವ ನೆಪದಲ್ಲಿ ತಮ್ಮ ಹಿತಾಸಕ್ತಿಯನ್ನು ಮಾತ್ರ ನೋಡಿಕೊಂಡು, ತಮಗೆ ಯಾವ ಕಷ್ಟಕಾರ್ಪಣ್ಯಗಳೂ ಬಾರದಂತೆ ಜಾಗರೂಕರಾಗಿದ್ದು ನೋವನ್ನು, ಅಳಲನ್ನು ಜನತೆಗೆ ಹಂಚುವವರು. ಈ ಮಾತುಗಳಿಗೆ ಮುಂದಿನ ಸಾಲುಗಳ ಮುಖಾಂತರ ಇನ್ನೂ ಸ್ಪಷ್ಟತೆ ಒದಗಿ ಬರುತ್ತದೆ—

ಬಿಸಿಲಿನಲ್ಲಿ ನಮ್ಮ ದೂಡಿ, ಮರದಡಿಯಲಿ ತಾವು ಕೂತು
ಮಾತು, ಮಾತು, ಮಾತು, ಮಾತು
ಮಾತಿನ ಗೈರತ್ತಿನಲ್ಲೆ ಕರಾಮತ್ತು ನಡೆಸುವವರು.

ಹಿಂದೂಸ್ಥಾನೀ ಪದಗಳನ್ನು ಚಮತ್ಕಾರಯುತವಾಗಿ ಬಳಸಿ ವಿಶಿಷ್ಟತೆಯನ್ನು ಮೆರೆದಿದ್ದಾರೆ. ಜನತೆಯ ಕಷ್ಟನಷ್ಟಗಳಿಗೆ ಪರಿಹಾರ ಸೂಚಿಸುವ ಹಿನ್ನೆಲೆಯಲ್ಲಿ ಯೋಜನೆಗಳ ಸರಮಾಲೆಗಳನ್ನು ಸೃಷ್ಟಿ-ಕೊಂಡು ದರ್ಪ, ಕ್ರೌರ್ಯ, ಅಹಂಕಾರಗಳಿಂದ ಮೆರೆಯುತ್ತಾ ಸುಖಪಡುವ ನಾಯಕರು, ಮಾತಿನಲ್ಲೇ ಮಹಡಿಯ ಕಟ್ಟುವವರು. ಎಂಬ ಅಂಶವು 'ಮಾತು' ಎಂಬ ಪದದ ಪುನರ್‌ಬಳಕೆಯೊಂದಿಗೆ ಹೆಚ್ಚಿನ ತೀವ್ರತೆಯನ್ನು ಕಂಡುಕೊಳ್ಳುತ್ತದೆ. ಇಂತಹ ನಾಯಕರು ಆಡಳಿತದಲ್ಲಿ ಬಾಯಿದ್ದೂ ಮೂಕ

ರಂತೆ, ಶಕ್ತಿಯಿದ್ದೂ ಅಶಕ್ತರಂತೆ, ಜೀವನ ಸಾಗಿಸುವ ಜನತೆಯ ಮೂಕ ನೆಮ್ಮದಿಯ ಬದುಕನ್ನು ತುಂಬಾ ಜಾಣ್ಮೆಯಿಂದ ವಿಡಂಬಿಸುತ್ತಾ–

ಬೆಟ್ಟದಾಟಿ ಕಿರುಬನುಗ್ಗಿ ನಮ್ಮೊಳಿಬ್ಬರನ್ನು ಮುಗಿಸಿ
ನಾವು ಬ್ಯಾ ಬ್ಯಾ ಎಂದು ಬಾಯಿ ಬಾಯಿ ಬಡಿದುಕೊಂಡು
ಬೊಬ್ಬೆ ಹಾಕುತ್ತಿದ್ದರೂ
ಚಕ್ಕಭಾರ ಆಟದಲ್ಲೆ ಮಗ್ನರು ಇವರೆಲ್ಲರು
ನಮ್ಮ ಕಾಯ್ವ ಗೊಲ್ಲರು
ದೊಡ್ಡಿಯಲ್ಲಿ ಕೂಡಿಹಾಕಿ ನಿಲ್ಲಲಿಲ್ಲ ಕೂರಲಿಲ್ಲ
ಎದ್ದರೆ ಸರಿದಾಡಲಿಲ್ಲ, ಬಿದ್ದರೆ ಹರಿದಾಡಲಿಲ್ಲ–

ಎಷ್ಟೇ ಕಷ್ಟನಷ್ಟಗಳಿಗೆ ಸಿಕ್ಕಿ ಪರಿತಪಿಸುತ್ತಿದ್ದರೂ ಕಂಡೂ ಕಾಣದಂತೆ, ತಮ್ಮ ಷ್ಟಕ್ಕೆ ತಾವು ಸುಖ ಸಂತೋಷದಲ್ಲಿ, ಭೋಗಾಸಕ್ತಿಯಲ್ಲಿ ಮಗ್ನರಾಗಿರುವ ಧುರೀಣರ ಅಮಾನುಷ ವ್ಯಕ್ತಿತ್ವವನ್ನು, ಸ್ವಾರ್ಥಾಭಿಲಾಷೆಯನ್ನು ಅತ್ಯಂತ ಪರಿಣಾಮಕಾರಿ ಯಾಗಿ ಪ್ರತಿಮೆಗಳ ಮೂಲಕ ಪಡಿಮೂಡಿಸಿದ್ದಾರೆ. ಅಧಿಕಾರಿಗಳ ಕೈಗೊಂಬೆಗಳಾದ ಜನರ ಸ್ಥಿತಿಗತಿಗಳ ವಿಷಮತೆಯನ್ನು ಮತ್ತು ಹೆಜ್ಜೆ ಹೆಜ್ಜೆಗೆ ಐಕಮತ್ಯದ ಉಪ ದೇಶ ಮಾಡುತ್ತಾ ಮೆರೆವ, ಆಳುವವರ ಸ್ವಭಾವವನ್ನು ಚುಚ್ಚಿ ನುಡಿದಿದ್ದಾರೆ. ಅಜ್ಞಾನದ ಅಂಧಕಾರ ಕವಿದ ಜನರ ಬದುಕಿನಲ್ಲಿ ಬೆಳಕಿನ ಮಾರ್ಗವಾದರೂ ಎಲ್ಲಿದೆ ? ಆ ವಿಷ ವರ್ತುಲದಿಂದ ಪಾರಾಗಬಯಸುವ ಸಾಧ್ಯತೆಗಳಾದರೂ ಹೇಗೆ ? ಅದನ್ನು 'ಎದ್ದರೆ ಸರಿದಾಡಲಿಲ್ಲ, ಬಿದ್ದರೆ ಹರಿದಾಡಲಿಲ್ಲ' ಎಂಬ ಸಾಲು ಸಮರ್ಥವಾಗಿ ನಿರ್ವಹಿಸುತ್ತದೆ.

ಇನ್ನು ಮುಂದುವರಿದಂತೆ ಕವನ ತನ್ನ ಆಶಯವನ್ನು ಬೇರೊಂದೆಡೆಗೆ ಕೊಂಡೊ ಯ್ಯುತ್ತದೆ–

ಇದರ ಉಸಿರು ಅದು, ಅದರ ಉಸಿರು ಇದು ಮೂಸಿ
ಹೇಸಿದರು ನಿಭಾಯಿಸಿ ತಾಳ್ಮೆಯನೆ ದಬಾಯಿಸಿ–

ಎಂದು ಹೇಳುವಲ್ಲಿ ಕವನದ ದಿಕ್ಕು ಜನಸಮೂಹದ ಕಡೆಗೆ ಚಾಚಿಕೊಳ್ಳುತ್ತದೆ. ಬಲಿತ ಶಕ್ತಿಗಳೆದುರು ಹೋರಾಡಲಾಗದ, ತನ್ನ ಜೀವಕ್ಕೆ ತಾನೇ ಜಿಗುಪ್ಸೆ ತಾಳುವ ಮನುಷ್ಯನ ಎಡಬಿಡಂಗಿತನ ತನ್ನ ಮನಸ್ಸಿನಲ್ಲಿ ತಾನೇ ಬಯ್ದುಕೊಳ್ಳುವುದರಲ್ಲಿ ಪರ್ಯ ವಸಾನವಾಗುತ್ತದೆ. ಬಾಯಿಬಿಟ್ಟು ಆಡಲಾರ ಅನುಭವಿಸಲಾರ ಎಂಬಂತಾಗುತ್ತದೆ.

ಜೀವನದ ವಿವಿಧ ರಂಗಗಳಲ್ಲಿ ಅಧಿಕಾರ ಅಂತಸ್ತು ಹೆಚ್ಚುತ್ತಾ ಹೋದಂತೆ, ಸ್ವಾರ್ಥತೆ, ಸಂಕುಚಿತತೆ, ಬುದ್ಧಿವಿವಶತೆ, ಅಮಾನವೀಯತೆ ಹೆಚ್ಚುತ್ತಾ ಹೋಗು ತ್ತದೆ.

ಕಣ್ಣುಕುಕ್ಕಿ ಸೊಕ್ಕಿರುವ, ಹೋಗಿ ಹೋಗಿ ನೆಕ್ಕಿರುವ,
ಕತ್ತನದಕೆ ತಿಕ್ಕಿರುವ,
ನಾವು, ನೀವು, ಅವರು, ಇವರು
ಕುರಿಗಳು ಸಾರ್ ಕುರಿಗಳು !

ಕುರುಬ ಯಜಮಾನನು ಹಿಡಿದ ಮಚ್ಚಿನ ಹೊಳಪಿಗೆ ಬೆರಗಾಗಿ ಮುಗ್ಧತೆಯಿಂದ ತನ್ನ ಕೊರಳನ್ನು ಅದಕ್ಕೆ ಒಪ್ಪಿಸಿಕೊಳ್ಳುವ ಪರಿಸ್ಥಿತಿಯೇ ಮನುಷ್ಯನದು ಕೂಡ. ಇಲ್ಲಿ ಬಳಸಿರುವ ಒಂದೊಂದು ಶಬ್ದವೂ ಧ್ವನಿಪೂರ್ಣವಾಗಿವೆ. ಹೊಳಪು, ರಥುಳಪು, ಕುಕ್ಕು- ಈ ಮೊದಲಾದ ವಿಶೇಷಣಗಳು ಕವನದ ಧೋರಣೆಗೆ ಮತ್ತಷ್ಟು ಪುಷ್ಠಿಯನ್ನು ಕೊಡುತ್ತವೆ; ಮಾನವನ 'ಕುರಿತನ' ವನ್ನು, ಜೀವನಮಾರ್ಗದ ದುರಂತತೆಯನ್ನು ದರ್ಶಿಸುವಲ್ಲಿ ನೆರವಾಗುತ್ತವೆ.

ಒಟ್ಟಿನಲ್ಲಿ ಕವನದ ಬಂಧ ಪ್ರಾರಂಭದಲ್ಲಿ ಸಮರ್ಥ ಪ್ರತಿಮೆಯ ಅಳವಡಿಕೆಯಿಂದ ರೂಪುಗೊಂಡಿದ್ದರೂ ವಿಡಂಬನೆ, ಟೀಕೆಗಳು ಹೆಚ್ಚಾಗಿ ಬರುವದರಿಂದ ಧ್ವನಿಗಿಂತ ವಾಚ್ಯವೇ ಮೇಲುಗೈ ಪಡೆದು ಕವನ ಸರಳೀಕೃತವಾಗುವಂತಹ ಸಂದರ್ಭಗಳೇ ಹೆಚ್ಚಾದಂತೆ ತೋರುತ್ತದೆ. ಆದರೆ ಮುಂದೆ ಕ್ರಮಿಸುತ್ತಾ ಕವನದ ಧಾಟಿ, ಧೋರಣೆ, ವಸ್ತು, ವಿಧಾನ, ವಿಶಾಲವಾದ ಅರ್ಥವ್ಯಾಪ್ತಿ ಪಡೆಯುತ್ತಾ ಸಾಗುತ್ತದೆ. ಮೊದಲಿಗೆ ಜೀವನದ ಗತಿಯ ವಿಡಂಬನೆ ಮಾತ್ರ ತೋರಿದುದು ಕೊನೆಯಲ್ಲಿ ಭವಿಷ್ಯ ಮಾರ್ಗದ ದುರಂತತೆಯನ್ನು ಚೇತೋಹಾರಿಯಾಗಿ ಚಿತ್ರಿಸುತ್ತದೆ. ಇದರಿಂದಾಗಿ ಕವನದಲ್ಲಿ ಏಕತಾನತೆ ಅಥವಾ ಏಕಬಂಧ ತಪ್ಪಿ ಪರಿಣಾಮದ ದೃಷ್ಟಿಯಲ್ಲಿ ತೀವ್ರತೆ ಇಲ್ಲದಿದ್ದರೂ ಒಟ್ಟು ದೃಷ್ಟಿ ಮಹತ್ವದ್ದೆನಿಸುತ್ತದೆ. ಭಾಷೆಯನ್ನು ದುಡಿಸಿಕೊಳ್ಳುವ ಗತ್ತು; ಪ್ರತಿಮೆ, ಸಂಕೇತಗಳನ್ನು ರೂಪಿಸಿಕೊಳ್ಳುವ ಗಮ್ಮತ್ತು–ಮುಂತಾದ ವಿಷಯಗಳನ್ನು ನೋಡಿದರೆ ಕವಿತೆ ಸಮಕಾಲೀನ ಸಂದರ್ಭದಲ್ಲಿ ಮೇಲ್ದರ್ಜೆಯಲ್ಲಿ ನಿಲ್ಲುತ್ತದೆ.

• •

ಧೃತಿ

ದೊಡ್ಡ ರಂಗೇಗೌಡ

ಅಡಿಗಡಿಗೆ ಸಂಗ ತುಂಗೆ ಸಲಿಲವಾಗಿ
ಹರಿದಿದೆ; ತಿಳಿತುಕೊಳ್ಳುತ್ತ ಪಾತ್ರವೆಲ್ಲ ಶುಭ್ರವಾಗಿ
ಗುರಿಯ ಕಡೆಗೆ ಓಟ ಕಂಡಿದೆ; ನದಿಯ ಹಾದಿಯುದ್ದಕ್ಕೂ–
ಹೊಸತನದ ಸುಗ್ಗಿ ಒದಗಿದೆ; ಚಿಂತನೆ ಸಾಗಿ
ಒಳತೋಟಿ ವಿಚಾರದತ್ತ ಮುನ್ನುಗ್ಗಿದೆ–
ತಾಳ್ಮೆ ಹೊಳಪು ಹೊಸ ವರ್ಚಸ್ಸು ಬೀರಿ ಹರ್ಷದಲ್ಲಿ ಹಿಗ್ಗಿದೆ.

ಒಳಗಿನ ಅನ್ನಿಸಿಕೆ ಹಕ್ಕಿ ರೆಕ್ಕೆ ಮೂಡಿಸಿಕೊಂಡು
ಆಲೋಚನೆ ರಭುರಿಯ ಮೇಲೇ ಹಾರಿದೆ ಉತ್ಸಾಹಗೊಂಡು;

ಈ ಕಡೆಯಿಂದ ಆ ಕಡೆಗೆ ತೇಲುವಲ್ಲಿ
ಕಲ್ಪನೆ ಚೆಲ್ಲಿ ಅರಳಿದೆ ಕಲೆ
ಇರುವೊಂದೆ ಧ್ಯೇಯ ನೆಲದ ಮೇಲೆ ಬಾಳುವಲ್ಲಿ
ಅದರ ಕಣಕಣದಲ್ಲಿ ಹೆಸರ ನೆಟ್ಟು ಹೋಗುವ ಬಯಕೆ–
ಬಿರಿದು ಉತ್ಸಾಹ ಸೆಲೆಯಾಗಿದೆ
ಒಂದೊಂದೂ ಕ್ಷಣ ಸ್ವರ್ಣ ಅಲೆಯೆಬ್ಬಿಸಿ ಹೊಂದಿಕೆ
ನಡೆದು ಮಾತಿನಲ್ಲಿ ಸಾರ್ಥಕತೆ ಸೊಗಡಿಣುಕಿದೆ.

ಪ್ರಸ್ತುತದ ಬೇವು ಬೆಂಬತ್ತಿ ಕಾಡಿದರೂ
ಕಹಿಯ ವರ್ತುಲವೇ ಆವರ್ತನ ಹಣಿಸಿದರೂ
ನಡು ನೀರಿನಲ್ಲಿ ಪ್ರಜ್ಞೆ ಕುಸಿದು ಆಕಸ್ಮಿಕ ನಿಂತರೂ
ಭಯವಿಲ್ಲ ನನಗೆ—
ಅನುಭವ ನಿದಿಗೊಂದು ಮತ್ತೊಂದು ಬಂದು ಸೇರಿದ ಹಾಗೆ.
ಹಗುರವಾಗಿ ಪರಿಗಣಿಸುತ್ತೇನೆ— ವಿಶಾಲ ನೋಟಕ್ಕಾಗಿ
ಶಾಶ್ವತ ಮೌಲ್ಯಗಳ ಉದ್ಧಾರಕ್ಕಾಗಿ
ಇರುವಿಕೆಯ ಪರಿ ಪರಿಯನ್ನೂ ಧ್ವನಿಸುವ ಮಿಡಿತಕ್ಕಾಗಿ...
ಅಂತೂ ಹೀಗೆ ನಡೆದಿದೆ ಹಠಬಿಡದ ಹೋರಾಟ

ಕುಸಿತ ಅಲ್ಲಲ್ಲಿ ಆಸೆಗೆ ಕಿಚ್ಚು ಹಚ್ಚಿದರೂ
ಮುಕ್ತ ಕನಸಿಗಾಗಿ ಅರಿವಿನ ಜಿಗಿತವೇ ಇಷ್ಟವಾಗಿದೆ;

ಬದಲಾದ ಗೀತ ಕೇಳುವ ಎಚ್ಚರವಿದೆ ಸೂಕ್ಷ್ಮ ಕಿವಿಗಳಿಗೆ
ಬಂಡಾಯ ತೋರುವ ಹುರುಪಿನ ತೇಜಸ್ಸಿದೆ ನಯನಗಳಿಗೆ--

ಭ್ರಾಂತಿಗೆ ಬೀಳದೆ ಆಪಾಯದೆಚ್ಚರಿಕೆಗಳ ಸೂಚನೆಗಳನ್ನು—
ಮುನ್ನವೇ ಕಂಡು ಹೆದರದೆ
ಧೃತಿಯ ಹೆಜ್ಜೆಗಳು ಸ್ಪಷ್ಟ ಮೆಟ್ಟುತ್ತಿವೆ ಮುಗಿಯದ ಪಥವನ್ನು.

ಮುಂದುವರೆದ ಹಾಗೆ
ನದಿಯು ಹಕ್ಕಿಯಾದ
ಹಕ್ಕಿ ಸ್ವಪ್ನವಾದ–ಬಾಳಿಗೆ
ಕೂಡಿದೆ ಅಂತರಂಗದೊಳಗೆ ಚೈತನ್ಯ ಲಗ್ನ.

ಹೆಕ್ಕಿಕೊಂಡ ವಿಚಾರದೆಳೆ ಎಳೆ ಹಂದರವಾಗಿ
ಬಾಂದಳದಪಾರ ವಿಸ್ತಾರವಾಗಿ
ಕುಬ್ಜತನ ಕರಗಿದೆ ಕೀಳರಿಮೆ ಕರಗಿ.
ಧೃತಿಯೊಳಗೆ ಹೊಸ ವಿಶ್ವಾಸ ಮೂಡಿದೆ
ಹೊತ್ತ ನೆಲಕ್ಕೆ ಹೊಣೆಯಾಗದೆ ಬದುಕುವ ಛಲ ದಕ್ಕಿದೆ.

• •

ಬೆನ್ನು ತುರಿಕೆ

ಮಾದೇವಮಿತ್ರ

ಕಡಲ ತಡಿಯೊಳು
ಭುವನ ಮಡಿಲೊಳು
ವಾಯು ನಿದ್ರೆಯೊಳಿರುತಿರೆ
ಎಂತೊ ಒಮ್ಮೆಗೆ
ಅದರ ಬೆನ್ನಿಗೆ
ತುರಿಕೆ ಬಿಟ್ಟಿತು ಅರೆರೆರೆ ! ೧

ತನ್ನ ಬೆನ್ನನು
ತಾನು ತುರಿಯದೆ
ಅದಕೆ ಯಾತನೆ ಹೆಚ್ಚಿತು
ಸುತ್ತು ತೊನೆಯಿತು
ಎದ್ದು ಓಡಿತು
ನವೆಯು ಹದ್ದನೆ ಮೀರಿತು ೨

ಮಾರ್ಗದಲ್ಲಿಯ
ಆಲ ವೃಕ್ಷವು
ಅನಿಲದಾತುರ ಕಂಡಿತು
"ಏಕೆ ತವಕವು
ಎಲ್ಲಿ ಪಯಣವು ?
ಅನಿಲರಾಜನೆ" ಎಂದಿತು ೩

'ಏನು ಹೇಳಲಿ
ತುರಿಕೆ ಬೆನ್ನಲಿ
ಉಜ್ಜಿಕೊಳ್ಳಲು ಬಾರದು
ಜೀವಕೆಲ್ಲಿದೆ
ಸೊಗಸು ನೆಮ್ಮದಿ
ಹೇಗೆ ಮಾಡಲಿ ತೋಚದು' ೪

‘ಎಂಥ ಪೆದ್ದನು
ನಿನ್ನ ಬೆನ್ನನು
ತಿಕ್ಕು ನನ್ನಯ ಅಂಗಕೆ
ರೆಂಬೆಕೊಂಬೆಗೆ
ಹರಿತ ದೇಟಿಗೆ
ತುರಿಕೆ ಅಳಿಯದೆ ನೋಡಿಕೋ !’ ೫

ಮರುತವಾಗಲೆ
ಗಿಡವ ಸುತ್ತಲು
ನುಣಪು ಹತ್ತಿತು ತನುವಿಗೆ
‘ಇಲ್ಲಿ ನಿಲ್ಲೆನು
ತುರಿಕೆ ತಾಳೆನು
ಹಾಯುವೆನಿಸದು ಮನಸಿಗೆ ೬

ಅವನತಿ ದೂರದಿ
ಬಿದಿರ ಪೊದೆಗಳು
ಕರೆದು ಹೇಳಿದುವಾಗಲೆ
‘ಏತಕೋಡುವೆ
ತುರಿಕೆ ಕಳೆಯುವೆ
ಸೇರು ನನ್ನಯ ವನದಲಿ’ ೭

ಬಿದಿರ ಜಾಳಿಗೆ
ಹೆಣೆದ ರೆಂಬೆಗೆ
ದೇಹಕಾಯಿತು ಕಚಗುಳಿ
ತುರಿಕೆ ತಳಮಳ
ಬದಲು ಕಚಗುಳಿ
ತೀರ ಹೆಚ್ಚಿತು ಕಳವಳ ! ೮

ಅಲ್ಲಿ ಹೊಸವನ
ಹಲವು ಹಲಸಿನ
ವೃಕ್ಷವಿದ್ದುವು ನಗುತಲಿ
‘ಮರುತರಾಜನೆ
ಉಜ್ಜು ಮೆಲ್ಲನೆ
ವ್ಯಥೆಯ ಕಳೆಯುವೆನೀಗಲೆ !’ ೯

ಬ್ರಸ್ಸಿನಂತಹ
ಮೊನಚದಾಗಿಹ
ಫಲಕೆ ಬೆನ್ನನು ತಿಕ್ಕಿತು
ತುರಿಕೆ ತಕ್ಷಣ
ನಿಂತಿತಾಕ್ಷಣ
ಗಾಳಿ ಹರುಷದಿ ನಕ್ಕಿತು ೧೦

ಒಡನೆ ಮೆಲ್ಲಗೆ
ನಡೆಯಿತಲ್ಲಿಗೆ
ನಿಬಿಡ ಮಾವಿನ ತೋಪಿಗೆ
ತಂಪು ನೆರಳಿಗೆ
ನಿದ್ರೆ ಸುಳಿದಿರೆ
ದಣಿದು ಮಲಗಿತು ತೆಪ್ಪಗೆ ೧೧

ಎರಡು ಮಿನಿಗವನಗಳು

ಪ್ರಭುರಾಜ ಅರಣಕಲ್

೧ ಶೋಷಣೆ

ನಾನು—
ನನಗಿಂತ ಹೀನರಿಗೆ
ಒಂದಿಲ್ಲೊಂದು ರೀತಿಯಲ್ಲಿ
ಶೋಷಕ. ಮತ್ತೆ ನನ್ನ
ಎತ್ತರದಲ್ಲಿರುವವರ ಎಲ್ಲ
ಬಗೆಗಳಿಂದಲೂ ಶೋಷಿತ.
ಹೀಗೆ, ಮೇಲಿನಿಂದ ಕೆಳಗೆ
ಹಿಂದಿನಿಂದ ಮುಂದಕ್ಕೆ ಶೋಷಣೆ–
ಹೊಳೆಯಾಗಿ ಹರಿಯುತ್ತಿರುತ್ತದೆ.

೨ ರೂಢಿ

ದ್ವೇಷಕ್ಕೆ ಯಾವಾಗಲೂ
ಸಹನೆಯ ಮೇಲೆ ಕಣ್ಣು
ದ್ವೇಷ–ಸರ್ಪವಾಗಿ
ಸಹನೆಯನ್ನು ಕಚ್ಚಲೆಂದರೆ
ಸಹನೆಯು ಹಾಲಾಗಿ
ಹಾವಿನ ಹೊಟ್ಟೆ ಸೇರಿ
ತಂಪೆರೆಯುತ್ತದೆ.

• •

ಈ ಸಂಚಿಕೆಯ ಲೇಖಕರು

೧. ಡಾ. ಎಂ. ಬಿ. ಕೊಟ್ರಶೆಟ್ಟಿ
ಕನ್ನಡ ಅಧ್ಯಯನ ಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨. ಪ್ರೊ. ಬಸವರಾಜ ನಾಯ್ಕರ
ಇಂಗ್ಲೀಷ ವಿಭಾಗ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

೩. ಪ್ರೊ. ಬಿ. ಬಿ. ಮಹೀಶವಾಡಿ
ಕನ್ನಡ ಅಧ್ಯಯನ ಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೪. ಶ್ರೀ ಎ. ವ್ಹಿ. ಪಾಟೀಲ
ಕನ್ನಡ ಅಧ್ಯಯನ ಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೫. ಶ್ರೀ ವೀರಣ್ಣಾ ರಾಜೂರ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೬. ಶ್ರೀ ಅರವಿಂದ ಮಾಲಗತ್ತಿ
ಕನ್ನಡ ಅಧ್ಯಯನ ಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೭. ಶ್ರೀ ಬಿ. ಎ. ಸನದಿ
ಆಕಾಶವಾಣಿ, ಮುಂಬಯಿ—೪೦೦ ೦೨೦

೮. ಶ್ರೀ ಎಸ್. ಸೂರ್ಯನಾರಾಯಣ ಅಯ್ಯರ
ಸಾಂಖ್ಯಿಕ ಸಹಾಯಕ (ಅಂಕಿ ಸಂಖ್ಯಾ ಇಲಾಖೆ)
ಬ್ಲಾಕ್ ನಂ : ೩೬, ಅಯ್ಯರ ಬೀದಿ
ತ್ಯಾಗರಾಜ ನಗರ, ಬೆಂಗಳೂರು — ೫೬೦ ೦೨೮

೯. ಶ್ರೀ ಬಿ. ಆರ್. ಹಿರೇಮಠ
ಕನ್ನಡ ಅಧ್ಯಯನ ಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೦. ಡಾ. ವ್ಹಿ. ಎಸ್. ಕಂಬಿ
ಕನ್ನಡ ಅಧ್ಯಯನ ಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೧. ಶ್ರೀ ಯು. ಎಸ್. ಶ್ರೀಧರ ಆರಾಧ್ಯ
ಕನ್ನಡ ಉಪನ್ಯಾಸಕ
ಕಿತ್ತೂರ ಚೆನ್ನಮ್ಮ ಕಿರಿಯ ಮಹಾವಿದ್ಯಾಲಯ
ಮಾದಾಪೂರ (ಉತ್ತರ ಕೊಡಗು) – ೫೭೧ ೨೫೧

೧೨. ಶ್ರೀ ಚಕ್ಕೆರೆ ಶಿವಶಂಕರ್
ಶ್ರೀ ಕುವೆಂಪು ವಿದ್ಯಾ ಪ್ರಸಾರಕ ಟ್ರಸ್ಟ
ಜಯಲಕ್ಷ್ಮೀಪುರಂ, ಮೈಸೂರು – ೧೨

೧೩. ಶ್ರೀಮತಿ ಸುಶೀಲಾ ಸೊಂಡೂರು
ಕನ್ನಡ ವಿಭಾಗ
ಭದ್ರಾ ಪ್ರೊಜೆಕ್ಟ್, ಶಿವಮೊಗ್ಗ

೧೪. ಶ್ರೀ ದೊಡ್ಡರಂಗೇಗೌಡ
ಬೆಂಗಳೂರು

೧೫. ಶ್ರೀ ಮಹಾದೇವ ಮಿತ್ರ
ಅಂಚೆ : ಸಂಖ, ತಾಲೂಕ : ಜತ್ತ
ಜಿಲ್ಲೆ : ಸಾಂಗ್ಲಿ (ಮಹಾರಾಷ್ಟ್ರ)

೧೬. ಶ್ರೀ ಪ್ರಭುರಾಜ ಅರಣಕಲ್
ಅಂಚೆ : ಅಡಕಿ ತಾಲೂಕ : ಶೇಡಂ
ಜಿಲ್ಲೆ : ಕಲಬುರ್ಗಿ – ೫೮೫ ೨೨೨

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಆಜೀವ ಸದಸ್ಯತ್ವ : ಯಾವುದೇ ವ್ಯಕ್ತಿ ಅಥವಾ ಸಂಘ ಸಂಸ್ಥೆಗಳು ರೂ. ೧೦೦-೦೦(ಒಂದು ನೂರು ರೂಪಾಯಿಗಳು) ಕಳಿಸಿ ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ "ಕರ್ನಾಟಕ ಭಾರತಿ"ಯ ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳಿಸುವ ವ್ಯವಸ್ಥೆ ಮಾಡಲಾಗುವದು.

ವಿವರಗಳಿಗೆ ಬರೆಯಿರಿ :

ನಿರ್ದೇಶಕರು

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - ೫೮೦ ೦೦೩